ಭಾನುವಾರ, ಸೆಪ್ಟೆಂಬರ್ 26, 2021 | ₹ 6.00

ಪ್ರಜಾವಾ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬಂದ್ ಯಶಸ್ಸಿಗೆ ರೈತರ ಸಜ್ಜು

ಸೋಮವಾರ ಸಂಜೆ 6 ರವರೆಗೆ ಬಸ್ ಸಂಚಾರಕ್ಕೆ ತಡೆ: ಕೋಡಿಹಳ್ಳಿ ಚಂದ್ರಶೇಖರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷಿ ಕಾಯ್ದೆಗಳಿಗೆ ಕೇಂದ್ರ ಸರ್ಕಾರ ತಂದಿರುವ ತಿದ್ದುಪಡಿ ವಿರೋಧಿಸಿ ಸಂಯುಕ್ತ ಕಿಸಾನ್ ಮೋರ್ಚಾ ಕರೆ ನೀಡಿರುವ ಬಂದ್‌ಅನ್ನು ಕರ್ನಾಟಕದಲ್ಲೂ ಯಶಸ್ವಿಗೊಳಿಸಲು ರೈತ ಸಂಘಟನೆಗಳು ಸಜ್ಜಾಗಿವೆ.

ಬೆಂಗಳೂರಿನಲ್ಲಿ ಪ್ರಯಾಣಕ್ಕಾಗಲಿ, ನಿತ್ಯದ ವಹಿವಾಟಿಗಾಗಲಿ ಬಂದ್‌ನಿಂದ ತೊಂದರೆಯಾಗಲಿಕ್ಕಿಲ್ಲ. ಆದರೆ, ರೈತ ಸಂಘಟನೆಗಳು ಪ್ರಬಲವಾಗಿರುವ ಜಿಲ್ಲೆ ಮತ್ತು ನಗರ ಪ್ರದೇಶಗಳಲ್ಲಿ ವಾಹನ ಸಂಚಾರಕ್ಕೆ ಹಾಗೂ ವ್ಯಾಪಾರ ಚಟುವಟಿಕೆಗೆ ಅಡಚಣೆಯಾಗಬಹುದು ಎಂದು ಹೇಳಲಾಗುತ್ತಿದೆ.

‘ಸೋಮವಾರ ಬೆಳಿಗ್ಗೆ 6ರಿಂದ ಸಂಜೆ 6 ಗಂಟೆಯವರೆಗೆ ಬಂದ್ ನಡೆಯಲಿದ್ದು, ಬಸ್, ರೈಲು ಸಂಚಾರ ತಡೆಯಲಾಗುವುದು. ಹೆದ್ದಾರಿಗಳನ್ನೂ ಬಂದ್ ಮಾಡಲಾಗುವುದು’ ಎಂದು ರೈತ ಮುಖಂಡ ಕೋಡಿಹಳ್ಳಿ ಚಂದ್ರಶೇಖರ್ ತಿಳಿಸಿದರು.

‘ರಾಜ್ಯ ವ್ಯಾಪಿ ರೈತ ಸಂಘಟನೆಗಳು, ಕಾರ್ಮಿಕ, ದಲಿತ ಮತ್ತು ವಿದ್ಯಾರ್ಥಿ ಸಂಘಟನೆಗಳು, ವರ್ತಕರು, ಕನ್ನಡ ಸಂಘಟನೆಗಳು, ಆಟೋರಿಕ್ಷಾ, ಟ್ಯಾಕ್ಸಿ ಚಾಲಕರ ಸಂಘಗಳು ಬೆಂಬಲ ನೀಡಿವೆ. ಇನ್ನೂ ಹಲವು ಸಂಘಟನೆಗಳ ಜೊತೆ ಭಾನುವಾರ ಮಾತುಕತೆ ನಡೆಸಲಾಗುವುದು’ ಎಂದು ಅವರು ಹೇಳಿದರು.

‘ರಾಜ್ಯದಾದ್ಯಂತ ಪ್ರವಾಸ ಮಾಡಿ ಬಂದ್ ಬಗ್ಗೆ ಮನವರಿಕೆ ಮಾಡಲಾಗಿದೆ. ರೈತ ಸಂಘಟನೆಗಳು ಭಾರತ್ ಬಂದ್ ಯಶಸ್ವಿಗೊಳಿಸಲಿವೆ’ ಎಂದು ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ತಿಳಿಸಿದರು.

‘ಬಂದ್‌ಗೆ ಎಲ್ಲಾ ಸಂಘಟನೆಗಳು ಬೆಂಬಲ ನೀಡಬೇಕು’ ಎಂದು ಸೆಂಟರ್ ಆಫ್ ಆಲ್ ಇಂಡಿಯಾ ಟ್ರೇಡ್ ಯೂನಿಯನ್(ಸಿಐಟಿಯು) ಅಧ್ಯಕ್ಷೆ ವರಲಕ್ಷ್ಮಿ ಮನವಿ ಮಾಡಿದರು.

ಬಂದ್ ಕರೆ ಸರಿಯಲ್ಲ: ಬೊಮ್ಮಾಯಿ

ಹುಬ್ಬಳ್ಳಿ: ‘ಕೋವಿಡ್ ಸಂಕಷ್ಟದಿಂದ ಈಗಷ್ಟೇ ಜನರು ಚೇತರಿಸಿಕೊಳ್ಳುತ್ತಿದ್ದಾರೆ. ಈ ಸಂದರ್ಭದಲ್ಲಿ ರೈತ ಸಂಘಟನೆಗಳು ಭಾರತ್ ಬಂದ್‌ಗೆ ಕರೆ ನೀಡಿರುವುದು ಸರಿಯಲ್ಲ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಸುದ್ದಿಗಾರರೊಂದಿಗೆ ಶನಿವಾರ ಮಾತನಾಡಿದ ಅವರು, ‘ಕೋವಿಡ್‌ನಿಂದಾಗಿ ಎಲ್ಲ ಕ್ಷೇತ್ರಗಳ ಕಾರ್ಯಚಟುವಟಿಕೆಗಳು ಕುಂಠಿತಗೊಂಡಿದ್ದವು. ಸದ್ಯ ಕೊರೊನಾ ಸೋಂಕು ಪ್ರಮಾಣ ಇಳಿಮುಖವಾಗುತ್ತಿದ್ದು, ಮಾರುಕಟ್ಟೆಯಲ್ಲಿ ವ್ಯಾಪಾರ, ವಹಿವಾಟು ಪುನರಾರಂಭವಾಗುತ್ತಿವೆ. ಈ ಸಂದರ್ಭದಲ್ಲಿ ಪ್ರತಿಭಟನೆ, ಬಂದ್ ನಡೆಸಿದರೆ ಜನಜೀವನದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿದೆ. ರೈತ ಸಂಘಟನೆಗಳು ಬಂದ್ ನಡೆಸದೆ ಸಹಕಾರ ನೀಡಬೇಕು’ ಎಂದು ವಿನಂತಿಸಿದರು.

ನೈತಿಕ ಬೆಂಬಲ ಮಾತ್ರ

‘ಬಂದ್‌ಗೆ ನೈತಿಕ ಬೆಂಬಲ ನೀಡಲಾಗುವುದು, ಆದರೆ ವಾಹನ ಸಂಚಾರ ಸ್ಥಗಿತಗೊಳಿಸುವುದು ಕಷ್ಟ’ ಎಂದು ಸಾರಿಗೆ ಸಂಸ್ಥೆಗಳ ನೌಕರರ ಕೂಟ, ಲಾರಿ ಮಾಲೀಕರ ಸಂಘಗಳ ಒಕ್ಕೂಟ, ಟ್ಯಾಕ್ಸಿ ಚಾಲಕರ ಸಂಘಗಳು ತಿಳಿಸಿವೆ.

‘ಬಂದ್‌ಗೆ ನಮ್ಮ ಸಂಪೂರ್ಣ ಬೆಂಬಲ ಇದೆ. ಸಂಚಾರ ಸ್ಥಗಿತಗೊಳಿಸಲು ತಿಳಿಸಲಾಗಿದೆ’ ಎಂದು ಆಟೋರಿಕ್ಷಾ ಚಾಲಕರ ಸಂಘದ ಅಧ್ಯಕ್ಷ ರಾಮಮೂರ್ತಿ ಹೇಳಿದರು.

‘ಶಾಲಾ-ಕಾಲೇಜುಗಳನ್ನು ಮುಚ್ಚುವುದಿಲ್ಲ. ಹಸಿರು ಬಟ್ಟೆ ಅಥವಾ ಹಸಿರು ಪಟ್ಟಿ ಧರಿಸಿ ನೈತಿಕ ಬೆಂಬಲ ಸೂಚಿಸಲಾಗುವುದು’ ಎಂದು ಖಾಸಗಿ ಶಾಲಾ ಸಂಘಟನೆಗಳ ಒಕ್ಕೂಟದ(ಕ್ಯಾಮ್ಸ್) ಕಾರ್ಯದರ್ಶಿ ಶಶಿಕುಮಾರ್ ತಿಳಿಸಿದ್ದಾರೆ.

‘2 ವರ್ಷದಿಂದ ಬಸ್‌ಗಳನ್ನು ನಿಲ್ಲಿಸಿ ವಹಿವಾಟಿಲ್ಲದೆ ತೊಂದರೆ ಅನುಭವಿಸಿದ್ದೇವೆ. ಬಂದ್‌ಗೆ ನಮ್ಮ ಬೆಂಬಲ ಇಲ್ಲ. ನಮ್ಮ ವಾಹನಗಳಿಗೆ ಹಾನಿಯಾದರೆ ಬಂದ್ ಕರೆ ನೀಡಿದವರೇ ಜವಾಬ್ದಾರರು’ ಎಂದು ಕರ್ನಾಟಕ ರಾಜ್ಯ ಖಾಸಗಿ ಬಸ್ ಮಾಲೀಕರ ಸಂಘಗಳ ಒಕ್ಕೂಟದ ಅಧ್ಯಕ್ಷ ಸುರೇಶ್ ನಾಯ್ಕ ತಿಳಿಸಿದರು.

ಬಸ್‌ಗಳಿಗೆ ಭದ್ರತೆ ಕೋರಿಕೆ

‘ಸಾರಿಗೆ ಸಂಸ್ಥೆ ಬಸ್‌ಗಳು ಎಂದಿನಂತೆ ಸಂಚರಿಸಲಿವೆ. ಬಸ್ ಮತ್ತು ಸಂಸ್ಥೆಯ ಆಸ್ತಿಗೆ ಯಾವುದೇ ಹಾನಿಯಾಗದಂತೆ ಭದ್ರತೆ ಒದಗಿಸಬೇಕು’ ಎಂದು ಪೊಲೀಸ್ ಇಲಾಖೆಯನ್ನು ಕೋರಲಾಗಿದೆ ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಶಿವಯೋಗಿ ಸಿ. ಕಳಸದ ತಿಳಿಸಿದರು.

‘ಬಿಎಂಟಿಸಿ ಬಸ್‌ಗಳ ಸಂಚಾರದಲ್ಲಿ ವ್ಯತ್ಯಾಸ ಆಗುವುದಿಲ್ಲ. ಭದ್ರತೆ ಕೋರಿ ಪತ್ರ ಬರೆಯಲಾಗಿದೆ’ ಎಂದು ಬಿಎಂಟಿಸಿ ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದರು.

‘ಮೆಟ್ರೊ ರೈಲು ಸಂಚಾರವೂ ಎಂದಿನಂತೆ ಇರಲಿದೆ. ಹೆಚ್ಚಿನ ಭದ್ರತೆ ಒದಗಿಸುವಂತೆ ಪೊಲೀಸ್ ಇಲಾಖೆಯನ್ನು ಕೋರಲಿದ್ದೇವೆ’ ಎಂದು ಬೆಂಗಳೂರು ಮೆಟ್ರೊ ರೈಲು ನಿಗಮದ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್ ತಿಳಿಸಿದರು.

ಬಂದ್‌ಗೆ ಸಾಹಿತಿಗಳು, ಕಲಾವಿದರ ಬೆಂಬಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸ ಕೃಷಿ ಕಾಯ್ದೆಗಳನ್ನು ವಿರೋಧಿಸಿ ಸೋಮವಾರ ಕರೆ ನೀಡಿರುವ ಭಾರತ ಬಂದ್‌ಗೆ ಸಾಹಿತಿಗಳು, ಕಲಾವಿದರು ಬೆಂಬಲ ವ್ಯಕ್ತಪಡಿಸಿದ್ದಾರೆ.

‘ಇದು ಕೇವಲ ರೈತರ ಬೇಡಿಕೆ ಅಲ್ಲ. ಬದಲಿಗೆ ದೇಶದ ಎಲ್ಲ ಜನರ ಅನ್ನದ ಬಟ್ಟಲಿಗೆ ಕನ್ನ ಹಾಕುವ ಪ್ರಯತ್ನದ ವಿರುದ್ಧದ ಹೋರಾಟ’ ಎಂದು ಹೇಳಿದ್ದಾರೆ.

‘ಕೃಷಿ ಕಾಯ್ದೆಗಳ ಜತೆಯೇ ಎಪಿಎಂಸಿ, ವಿದ್ಯುತ್, ಕಾರ್ಮಿಕ ಕಾಯ್ದೆಗಳು, ನೂತನ ರಾಷ್ಟ್ರೀಯ ಶಿಕ್ಷಣ ನೀತಿಗಳೆಲ್ಲವೂ ಖಾಸಗಿ ಉದ್ಯಮಪತಿಗಳನ್ನು ಬಲಗೊಳಿಸಿ ಸಾಮಾನ್ಯ ಜನರನ್ನು ದುರ್ಬಲಗೊಳಿಸುವ ಭಾರತ ಸರ್ಕಾರದ ನೀತಿಯ ಸ್ಪಷ್ಟ ಉದಾಹರಣೆಗಳು. ಇನ್ನೊಂದೆಡೆ, ದುಡಿಮೆ ಮೂಲದ ಶ್ರಮಿಕ ಜನರನ್ನು ಸಂಕಷ್ಟಕ್ಕೆ ತಳ್ಳುವ ಪ್ರಯತ್ನ ಮಾಡಲಾಗುತ್ತಿದೆ’ ಎಂದು ಅವರು ದೂರಿದ್ದಾರೆ.

‘ಹೀಗಾಗಿ, ಸಂಯುಕ್ತ ಕಿಸಾನ್ ಮೋರ್ಚಾ ಕರೆ ನೀಡಿರುವ ಭಾರತ ಬಂದ್ ಅನ್ನು ಬೆಂಬಲಿಸುತ್ತೇವೆ’ ಎಂದು ಎಂ.ಎಸ್. ಸತ್ಯು, ಡಾ.ಕೆ.ಮರುಳಸಿದ್ದಪ್ಪ, ವಿಜಯಾ, ಡಾ.ಎಸ್.ಜಿ.ಸಿದ್ದರಾಮಯ್ಯ, ಡಾ.ಪುರುಷೋತ್ತಮ ಬಿಳಿಮಲೆ, ಡಾ.ರಾಜೇಂದ್ರ ಚೆನ್ನಿ, ಡಾ.ಗಣೇಶ್ ದೇವಿ, ದೇವನೂರ ಮಹಾದೇವ, ಬೊಳುವಾರು ಮಹ್ಮದ್ ಕುಂಞಿ, ಅಗ್ರಹಾರ ಕೃಷ್ಣಮೂರ್ತಿ ಹಾಗೂ ಇತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಮಹಾತ್ಮರ ಚರಿತಾಮೃತ’ ಗ್ರಂಥ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಸಿ.ಎಂ

‘ಹುಲ್ಲಲ್ಲ ಹೂವನ್ನು ತರುತ್ತೇನೆ’

ಪ್ರಜಾವಾಣಿ ವಾರ್ತೆ



ಕಾರ್ಯಕ್ರಮದಲ್ಲಿ ಪ್ರಭುಚನ್ನಬಸವ ಸ್ವಾಮೀಜಿ (ಬಲದಿಂದ ಕೊನೆಯವರು) ಅವರು ರಚಿಸಿದ ‘ಮಹಾತ್ಮರ ಚರಿತಾಮೃತ’ ಗ್ರಂಥವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಲೋಕಾರ್ಪಣೆ ಮಾಡಿದರು. (ಎಡದಿಂದ) ಸುತ್ತೂರು ಸಂಸ್ಥಾನ ಮಠದ ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ (ಎಡದಿಂದ ಮೊದಲಿನವರು) ಮತ್ತು ತೋಂಟದಾರ್ಯ ಸಂಸ್ಥಾನ ಮಠದ ತೋಂಟದ ಸಿದ್ಧರಾಮ ಸ್ವಾಮೀಜಿ ಇದ್ದಾರೆ – ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಮಠಾಧೀಶರು ಇಟ್ಟಿರುವ ವಿಶ್ವಾಸ, ನಂಬಿಕೆಗೆ ಕಿಂಚಿತ್ತೂ ವ್ಯತ್ಯಾಸ ಆಗದಂತೆ ಕೆಲಸ ಮಾಡುತ್ತೇನೆ. ನಿಮ್ಮ ಮನೆಗೆ ಹೂವನ್ನು ತರುತ್ತೇನೆಯೇ ಹೊರತು ಹುಲ್ಲನ್ನಲ್ಲ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸ್ವಾಮೀಜಿಗಳಿಗೆ ಭರವಸೆ ನೀಡಿದರು.

ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರದ ಸಹಯೋಗದಲ್ಲಿ ಗ್ರಂಥ ಲೋಕಾರ್ಪಣೆ ಸ್ವಾಗತ ಸಮಿತಿ ಮತ್ತು ಬಸವ ವೇದಿಕೆಯು ನಗರದಲ್ಲಿ ಶನಿವಾರ ಆಯೋಜಿಸಿದ ಕಾರ್ಯಕ್ರಮದಲ್ಲಿ ಪ್ರಭು ಚನ್ನಬಸವ ಸ್ವಾಮೀಜಿ (ಅಥಣೀಶ) ವಿರಚಿತ ‘ಮಹಾತ್ಮರ ಚರಿತಾಮೃತ’ ಗ್ರಂಥವನ್ನು ಲೋಕಾರ್ಪಣೆ ಮಾಡಿ ಅವರು ಮಾತನಾಡಿದರು.

‘ಕೋವಿಡ್ ಸೇರಿದಂತೆ ಇತರ ಸಂಕಷ್ಟಗಳನ್ನು ಸವಾಲಾಗಿ ಸ್ವೀಕರಿಸಿದ್ದೇನೆ. ಅವುಗಳನ್ನು ಮೆಟ್ಟಿ ನಿಲ್ಲುವ ಪ್ರಯತ್ನ ಮಾಡುತ್ತಿದ್ದೇನೆ. ರಾಜ್ಯದಲ್ಲಿ ಹೇರಳವಾದ ನೈಸರ್ಗಿಕ ಸಂಪತ್ತುಗಳಿವೆ. ಅವುಗಳು ಸದ್ಬಳಕೆಯಾಗುವಂತೆ ಕ್ರಮಕೈಗೊಳ್ಳುತ್ತೇನೆ. ಶಿಕ್ಷಣ, ಆರೋಗ್ಯ ಮತ್ತು ಉದ್ಯೋಗಕ್ಕೆ ಆದ್ಯತೆ ನೀಡಲಾಗುವುದು’ ಎಂದು ಅವರು ಹೇಳಿದರು.

‘ಕೋವಿಡ್ ಕಾಣಿಸಿಕೊಂಡ ಬಳಿಕ ಕರ್ಫ್ಯೂ ಸೇರಿದಂತೆ ವಿವಿಧ ಕ್ರಮಗಳಿಂದ ಬದುಕಿನಲ್ಲಿ ಸಾಕಷ್ಟು ವ್ಯತ್ಯಯಗಳಾಗಿವೆ. ಈ ಸಮಾಜದಲ್ಲಿ ಹೊರಗಡೆಯ ಬದುಕು ಏರುಪೇರಾಗಿಬಹುದು. ಆದರೆ, ಒಳಗಿನ ಬದುಕು ನಿರಂತರ ನಡೆಯುತ್ತಿದೆ. ಚಿಂತನೆಗೆ ಸ್ವಲ್ಪ ಸಮಯ ನೀಡಿದಲ್ಲಿ ಒಳ ಧ್ವನಿ ತಿಳಿಯುತ್ತದೆ. ಸಾವಿನ ನಂತರವೂ ಬದುಕುವ ಕಲೆಯನ್ನು ಮಹಾತ್ಮರು ತೋರಿಸಿಕೊಟ್ಟಿದ್ದಾರೆ. ಅವರ ಬದುಕನ್ನು ಇವತ್ತಿಗೂ ನೆನೆಪಿಸಿಕೊಳ್ಳುತ್ತೇವೆ. ಧನ-ಕನಕಗಳಿಲ್ಲದ ಭಾವಗಳ, ಸಂಬಂಧದ ಶ್ರೀಮಂತಿಕೆ ಬಿಟ್ಟು ಹೋಗಿದ್ದಾರೆ. ಮಹಾತ್ಮರು ಸಾಗಿದ ಬದುಕನ್ನು ಅನುಸರಿಸಿ ಹೆಜ್ಜೆ ಹಾಕಿದರೆ ಸಾರ್ಥಕತೆ ದೊರೆಯುತ್ತದೆ’ ಎಂದು ಹೇಳಿದರು.

ವಸತಿ ಸಚಿವ ವಿ. ಸೋಮಣ್ಣ, ‘ಕೋವಿಡ್ ಸಮಯದಲ್ಲಿ ತಮ್ಮ ಅನುಭವ ಮತ್ತು ತಪಸ್ಸಿನ ಫಲದಿಂದ ಮಹಾತ್ಮರ ಚರಿತ್ರೆಯನ್ನು ಪ್ರಭುಚನ್ನಬಸವ ಸ್ವಾಮೀಜಿ ಕಟ್ಟುಕೊಟ್ಟಿದ್ದಾರೆ. ಇದು ಸರ್ಕಾರದ ಎಲ್ಲ ಗ್ರಂಥಾಲಯಗಳನ್ನು ಸೇರಬೇಕು. ತಪಸ್ವಿಗಳ ಸಂದೇಶ ಪ್ರತಿಯೊಬ್ಬರನ್ನೂ ತಲುಪಬೇಕು’ ಎಂದು ಹೇಳಿದರು.

ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಸಿ. ಸೋಮಶೇಖರ್, ‘ಸಾವಿರ ಪುಟಗಳ ಬೃಹತ್ ಗ್ರಂಥದಲ್ಲಿ 216 ವಿಶ್ವವಿಭೂತಿಗಳ ಜೀವನ ಕಥನವನ್ನು ಕಟ್ಟಿಕೊಟ್ಟಿದ್ದಾರೆ. ಜಗತ್ತಿನ ಕಲ್ಯಾಣಕ್ಕಾಗಿ ತಾವು ದೀಪದಂತೆ ಉರಿದು, ಬೆಳಕು ನೀಡಿದ ಮಹಾನುಭಾವರ ದರ್ಶನವನ್ನು ಈ ಗ್ರಂಥದಲ್ಲಿ ಮಾಡಿಸಿದ್ದಾರೆ. ಚಿರಕಾಲ ಉಳಿಯುವಂತಹ ಮಹಾನ್ ಸಂಪುಟವನ್ನು ರಚಿಸಿರುವುದು ಒಂದು ಐತಿಹಾಸಿಕ ಸಾಧನೆ. ಒಬ್ಬೊಬ್ಬ ಮಹಾತ್ಮರ ಜೀವನವೂ ಒಂದೊಂದು ರೀತಿಯಲ್ಲಿ ವಿಶಿಷ್ಟವಾಗಿದೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

‘ಅನ್ಯ ಭಾಷೆಗೆ ಭಾಷಾಂತರಿಸಬೇಕು’

‘ಈ ಗ್ರಂಥವು ಸಮಾಜದಲ್ಲಿ ದೊಡ್ಡ ಪರಿಣಾಮ ಬೀರುವ ವಿಶ್ವಾಸವಿದೆ. ಯುವಕರು ಇಂತಹ ಪುಸ್ತಕಗಳನ್ನು ಓದಬೇಕು. ಆದರೆ, ಈ ಕಾಲದಲ್ಲಿ ದೊಡ್ಡ ದೊಡ್ಡ ಕೃತಿಗಳನ್ನು ಓದಲು ಸಮಯವಿಲ್ಲ. ಈ ಗ್ರಂಥವನ್ನು ವಿದ್ಯಾರ್ಥಿ ಆವೃತ್ತಿಯಲ್ಲಿ ಹೊರತಂದು, ವಿತರಿಸಿದರೆ ಶ್ರಮ ಸಾರ್ಥಕವಾಗುತ್ತದೆ. ಈ ಪುಸ್ತಕವು ಬೇರೆ ಬೇರೆ ಭಾಷೆಗಳಲ್ಲಿಯೂ ಭಾಷಾಂತರವಾಗಬೇಕು. ಕೆಲವನ್ನು ಪಠ್ಯಪುಸ್ತಕದಲ್ಲಿ ಅಳವಡಿಸಿಕೊಳ್ಳಬೇಕು. ಎಲ್ಲ ಪಂಚಾಯಿತಿ ಮಟ್ಟದ ಗ್ರಂಥಾಲಯವನ್ನೂ ತಲುಪಬೇಕು. ಈ ನಿಟ್ಟಿನಲ್ಲಿ ಸರ್ಕಾರ ಕ್ರಮಕೈಗೊಳ್ಳಬೇಕು’ ಎಂದು ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲ ಒತ್ತಾಯಿಸಿದರು.

‘ನೈತಿಕತೆ ಹಾಳಾಗಿದೆ, ಮೌಲ್ಯಗಳು ಕುಸಿಯುತ್ತಿದೆ. ಶಾಲೆಗಳಲ್ಲಿ ಮಕ್ಕಳಿಗೆ ಇಂತಹ ಕೃತಿಗಳನ್ನು ಒದಗಿಸಬೇಕು. ಪುಸ್ತಕಗಳಿಗೆ ಕ್ರಾಂತಿ ಮಾಡುವ ಶಕ್ತಿಯಿದೆ. ಜೀವನವು ಆದರ್ಶಕ್ಕೆ ಹೊರತೇ, ಆಡಂಬರಕ್ಕೆ ಅಲ್ಲ ಎನ್ನುವುದು ಮಹಾತ್ಮರ ಚರಿತಾಮೃತ ಸವಿದಾಗ ತಿಳಿಯಲಿದೆ’ ಎಂದರು.

ಪುಸ್ತಕ ಪರಿಚಯ

ಪುಸ್ತಕ: ‘ಮಹಾತ್ಮರ ಚರಿತಾಮೃತ’
ಲೇಖಕರು: ಪ್ರಭುಚನ್ನಬಸವ ಸ್ವಾಮೀಜಿ (ಅಥಣೀಶ)
ಪುಟಗಳು: 1,100
ಬೆಲೆ: ₹ **2,000**
ಪ್ರಕಾಶನ: ಗುರುಚನ್ನಬಸವೇಶ್ವರ ಗ್ರಂಥಮಾಲೆ, ಮೋಟಗಿಮಠ

ಮಹಿಳಾ ಕಾನ್‌ಸ್ಟೆಬಲ್ ಮೇಲೆ ಅತ್ಯಾಚಾರ: ಬಂಧನ

ನೀಮುಚ್, ಮಧ್ಯಪ್ರದೇಶ (ಪಿಟಿಐ): 30 ವರ್ಷದ ಮಹಿಳಾ ಕಾನ್‌ಸ್ಟೆಬಲ್ ಮೇಲೆ ಮೂವರು ಸಾಮೂಹಿಕ ಅತ್ಯಾಚಾರ ನಡೆಸಿದ್ದಾರೆ. ಪೊಲೀಸರು ಐವರ ವಿರುದ್ಧ ಪ್ರಕರಣ ದಾಖಲಿಸಿದ್ದು, ಇಬ್ಬರನ್ನು ಬಂಧಿಸಿದ್ದಾರೆ.

ಕೃತ್ಯ ತಿಂಗಳ ಆರಂಭದಲ್ಲಿ ನಡೆದಿದೆ. ಸಂತ್ರಸ್ತೆ ಸೆ.13ರಂದು ದೂರು ನೀಡಿದ್ದಾರೆ. ಮುಖ್ಯ ಆರೋಪಿ, ಆತನ ತಾಯಿಯನ್ನು ಬಂಧಿಸಲಾಗಿದೆ ಎಂದು ಮಹಿಳಾ ಠಾಣೆ ಅಧಿಕಾರಿ ಅನುರಾಧಾ ಗಿರ್ವಾಲ್ ತಿಳಿಸಿದ್ದಾರೆ.

ಆರೋಪಿಯು ಸಂತ್ರಸ್ತೆಗೆ ಫೇಸ್‌ಬುಕ್‌ನಲ್ಲಿ ಪರಿಚಯವಾಗಿದ್ದ. ಏಪ್ರಿಲ್ ತಿಂಗಳಿನಿಂದಲೂ ವಾಟ್ಸ್‌ಆ್ಯಪ್‌ನಲ್ಲಿ ಸಂವಹನ ನಡೆಸುತ್ತಿದ್ದ. ತಮ್ಮನ ಹುಟ್ಟು ಹಬ್ಬದ ಕಾರ್ಯಕ್ರಮಕ್ಕೆ ಸಂತ್ರಸ್ತೆಯನ್ನು ಆಹ್ವಾನಿಸಿದ್ದು, ಅಲ್ಲಿಯೇ ಮೂವರು ಅತ್ಯಾಚಾರ ಎಸಗಿದ್ದಾರೆ ಎಂದರು.

ಆರೋಪಿಗಳು ಕೃತ್ಯದ ವಿಡಿಯೊ ಮಾಡಿದ್ದು, ಸಂತ್ರಸ್ತೆಗೆ ಮುಖ್ಯ ಆರೋಪಿಯ ತಾಯಿಯು ಜೀವ ಬೆದರಿಕೆ ಒಡ್ಡಿದ್ದರು. ಅಲ್ಲದೆ, ಹಣ ಸುಲಿಗೆ ಮಾಡಲು ಯತ್ನಿಸಿದ್ದರು ಎಂದು ಪೊಲೀಸರು ವಿವರಿಸಿದ್ದಾರೆ.

ಶಾಸಕಾಂಗವೇ ಕಾನೂನು ವ್ಯವಸ್ಥೆ ಸುಧಾರಣೆಗೆ ಮುಂದಾಗಲಿ: ಸಿಜೆಐ

ಪ್ರಜಾವಾಣಿ ವಾರ್ತೆ



ನ್ಯಾ. ಎನ್‌.ವಿ.ರಮಣ



ನವದೆಹಲಿ: ‘ನ್ಯಾಯಾಂಗವೇ ಕಾಯ್ದೆ ರೂಪಿಸುವ ಪಾತ್ರ ನಿಭಾಯಿಸುವುದನ್ನು ತಡೆಯಲು, ಶಾಸಕಾಂಗವೇ ಆಯಾ ಕಾಲ ಮತ್ತು ಜನರ ಅಗತ್ಯವನ್ನು ಮನಗಂಡು ಕಾನೂನು ವ್ಯವಸ್ಥೆ ಸುಧಾರಣೆಗೆ ಮುಂದಾಗಬೇಕು’ ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಎನ್‌.ವಿ.ರಮಣ ಅವರು ಶನಿವಾರ ಅಭಿಪ್ರಾಯಪಟ್ಟರು.

ಒಡಿಶಾದ ಕಾನೂನು ಸೇವಾ ಪ್ರಾಧಿಕಾರದ ನೂತನ ಕಟ್ಟಡವನ್ನು ಕಟಕ್‌ನಲ್ಲಿ ಉದ್ಘಾಟಿಸಿ ಮಾತನಾಡಿದ ಅವರು, ‘ನ್ಯಾಯಾಂಗ ವ್ಯವಸ್ಥೆಯ ಭಾರತೀಯಕರಣ’ ಆಗಬೇಕಾಗಿದೆ ಎಂದು ಪ್ರತಿಪಾದಿಸಿದರು.

‘ಕಾಯ್ದೆಗಳು ಎಂದಿಗೂ ಸಮಕಾಲೀನ ಪರಿಸ್ಥಿತಿಗೆ ಪ್ರಾಯೋಗಿಕವಾಗಿ ಹೊಂದಬೇಕು. ಶಾಸಕಾಂಗ ಇದಕ್ಕೆ ಪೂರಕವಾಗಿ ಕಾಯ್ದೆಗಳನ್ನು ಸರಳೀಕರಣಗೊಳಿಸಬೇಕು. ಮುಖ್ಯವಾಗಿ ಕಾರ್ಯಾಂಗ, ಶಾಸಕಾಂಗಗಳು ಸಂವಿಧಾನದ ಆಶೋತ್ತರಗಳನ್ನು ಅರ್ಥಮಾಡಿಕೊಂಡು ಕಾರ್ಯನಿರ್ವಹಿಸಬೇಕು’ ಎಂದು ಸಲಹೆ ಮಾಡಿದರು.

ಅಂತಹ ಸಂದರ್ಭದಲ್ಲಿ ಕಾಯ್ದೆ ರೂಪಿಸುವ ಪಾತ್ರ ನಿಭಾಯಿಸಲು ನ್ಯಾಯಾಂಗ ಮುಂದಾಗುವುದಿಲ್ಲ. ಕಾಯ್ದೆಯನ್ನು ವ್ಯಾಖ್ಯಾನಿಸುವ, ಜಾರಿಗೆ ಪೂರಕವಾದ ಕಾರ್ಯಕ್ಷೇತ್ರಕ್ಕಷ್ಟೇ ಅದು ಸೀಮಿತವಾಗಲಿದೆ ಎಂದು ಸಿಜೆಐ ಹೇಳಿದರು.

ಶಿಷ್ಟಾಚಾರದ ಬದುಕು ಸಾಗಿಸುತ್ತಿರುವ ಸಾಂಪ್ರದಾಯಿಕ ಮತ್ತು ಕೃಷಿಕ ವರ್ಗವು ಸ್ವಾತಂತ್ರ್ಯ ಬಂದು 74 ವರ್ಷಗಳ ನಂತರವೂ ಕೋರ್ಟ್‌ನ ನೆರವು ಪಡೆಯಲು ಹಿಂಜರಿಕೆಯ ಮನಃಸ್ಥಿತಿ ಹೊಂದಿವೆ. ಕೋರ್ಟ್‌ನ ಪರಿಭಾಷೆ, ಪ್ರಕ್ರಿಯೆ, ಚಟುವಟಿಕೆ ಯಾವುವೂ ಅವರಿಗೆ ಹತ್ತಿರವಾಗಿಲ್ಲ. ನ್ಯಾಯಾಂಗದ ಸಂಕೀರ್ಣವಾದ ಭಾಷೆ ಮತ್ತು ಪ್ರಕ್ರಿಯೆಯ ಪರಿಣಾಮ ಜನಸಾಮಾನ್ಯರು ತಮ್ಮ ಸಮಸ್ಯೆಗಳ ಮೇಲಿನ ಹಿಡಿತ ಕಳೆದುಕೊಳ್ಳುತ್ತಿದ್ದಾರೆ. ನ್ಯಾಯ ಕೋರುವವರು ಈಗಲೂ ಈ ವ್ಯವಸ್ಥೆಯ ಆಚೆಗೇ ಉಳಿದಿದ್ದಾರೆ ಎಂದು ಸಿಜೆಐ ಅಭಿಪ್ರಾಯಪಟ್ಟರು.

ಮೂಲಸೌಕರ್ಯದ ಕೊರತೆಯಿಂದಾಗಿ ನ್ಯಾಯಾಂಗದ ಆಂತರಿಕ ಭಾಗವೇ ಆಗಿರುವ ಕಾನೂನು ಸೇವಾ ಪ್ರಾಧಿಕಾರಗಳ ಚಟುವಟಿಕೆಗಳು ಕುಂದಿವೆ ಎಂದು ಹೇಳಿದರು. ಬರುವ ದಿನಗಳಲ್ಲಿ ದೇಶದಾದ್ಯಂತ ಕಾನೂನು ಅರಿವು ಕಾರ್ಯಕ್ರಮಗಳಿಗೆ ಚಾಲನೆ ನೀಡಲಾಗುವುದು ಎಂದೂ ತಿಳಿಸಿದರು.

₹ 700 ಕೋಟಿ ಮೌಲ್ಯದ ಷೇರು ವಹಿವಾಟಿಗೆ ‘ಇ.ಡಿ’ ತಡೆ

ಕಾರ್ವಿ ಸ್ಟಾಕ್ ಬ್ರೋಕಿಂಗ್: ಹಣ ಅಕ್ರಮ ವರ್ಗಾವಣೆ ಪ್ರಕರಣ

ನವದೆಹಲಿ (ಪಿಟಿಐ): ಕಾರ್ವಿ ಸ್ಟಾಕ್ ಬ್ರೋಕಿಂಗ್ ಲಿಮಿಟೆಡ್‌ನ (ಕೆಎಸ್‌ಬಿಎಲ್) ಸಿಎಂಡಿ ಸಿ. ಪಾರ್ಥ ಸಾರಥಿ ಮತ್ತು ಇತರರ ವಿರುದ್ಧದ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ₹ 700 ಕೋಟಿ ಮೌಲ್ಯದ ಷೇರುಗಳನ್ನು ವಹಿವಾಟಿನಿಂದ ಸ್ಥಗಿತಗೊಳಿಸಿರುವುದಾಗಿ ಜಾರಿ ನಿರ್ದೇಶನಾಲಯವು (ಇ.ಡಿ) ಶನಿವಾರ ತಿಳಿಸಿದೆ.

ತೆಲಂಗಾಣ ಪೊಲೀಸರು ಪಾರ್ಥಸಾರಥಿ ಅವರನ್ನು ಕಳೆದ ತಿಂಗಳು ಬಂಧಿಸಿದ್ದು, ಪ್ರಸ್ತುತ ಹೈದರಾಬಾದ್‌ನ ಚಂಚಲಗುಡ ಜೈಲಿನಲ್ಲಿ ಇರಿಸಲಾಗಿದೆ.

ಹೈದರಾಬಾದ್‌ನ ಆರು ಕಡೆಗಳಲ್ಲಿ ಹಾಗೂ ಕಾರ್ವಿ ಸಮೂಹ ಕಂಪನಿಗಳಿಗೆ ಸೇರಿದ ವಿವಿಧ ಸ್ಥಳಗಳು ಹಾಗೂ ಪಾರ್ಥಸಾರಥಿ ಅವರ ನಿವಾಸದಲ್ಲಿ ‘ಇ.ಡಿ’ ಸೆಪ್ಟೆಂಬರ್ 22ರಂದು ಶೋಧ ಕಾರ್ಯ ನಡೆಸಿತ್ತು.

ಆಸ್ತಿ ದಾಖಲೆಗಳು, ವೈಯಕ್ತಿಕ ದಿನಚರಿಗಳು, ಎಲೆಕ್ಟ್ರಾನಿಕ್ ಸಾಧನಗಳು, ಅಪರಾಧದ ಸಾಕ್ಷ್ಯಗಳನ್ನು ವಶಪಡಿಸಿಕೊಳ್ಳಲಾಗಿದೆ ಮತ್ತು ಅವುಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ಅದು ಪ್ರಕಟಣೆಯಲ್ಲಿ ತಿಳಿಸಿದೆ.

ಅಪರಾಧವನ್ನು ಮರೆಮಾಚುವ ಉದ್ದೇಶದಿಂದ ಪಾರ್ಥಸಾರಥಿ ಅವರು ಕಾರ್ವಿ ಸಮೂಹ ಕಂಪನಿಗಳಲ್ಲಿ ಹೊಂದಿರುವ ಷೇರುಗಳನ್ನು ಖಾಸಗಿ ಕಂಪನಿಗಳ ಮೂಲಕ ಮಾರಾಟ ಮಾಡುವ ಪ್ರಯತ್ನ ನಡೆಸಿರುವುದಾಗಿ ವಿಶ್ವಾಸಾರ್ಹ ಮೂಲಗಳಿಂದ ತಿಳಿದುಬಂದಿದೆ. ಹೀಗಾಗಿ 2019–20ನೇ ಸಾಲಿನ ಮೌಲ್ಯಮಾಪನದ ಪ್ರಕಾರ ₹ 700 ಕೋಟಿ ಮೌಲ್ಯದ ಷೇರುಗಳನ್ನು ವಹಿವಾಟಿನಿಂದ ತಡೆಹಿಡಿಯುವಂತೆ ಆದೇಶ ನೀಡಿರುವುದಾಗಿ ‘ಇ.ಡಿ’ ಹೇಳಿದೆ.

ಪಾರ್ಥಸಾರಥಿ ಮತ್ತು ಅವರ ಮಕ್ಕಳಾದ ರಜತ್ ಪಾರ್ಥಸಾರಥಿ ಮತ್ತು ಅಧಿರಾಜ್ ಪಾರ್ಥಸಾರಥಿ ಹಾಗೂ ಅವರ ಕಂಪನಿಗಳು ನೇರ ಮತ್ತು ಪರೋಕ್ಷವಾಗಿ ಕಾರ್ವಿ ಸಮೂಹದ ಈ ಷೇರುಗಳನ್ನು ಹೊಂದಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಚೆನ್ನೈ: ₹ 300 ಕೋಟಿ ಕಪ್ಪುಹಣ ಪತ್ತೆ

ನವದೆಹಲಿ (ಪಿಟಿಐ): ‘ಚೆನ್ನೈನಲ್ಲಿರುವ ಎರಡು ಖಾಸಗಿ ಹಣಕಾಸು ಸಮೂಹಗಳ ಮೇಲೆ ಇತ್ತೀಚೆಗೆ ನಡೆಸಿದ ದಾಳಿ ಸಂದರ್ಭದಲ್ಲಿ ಲೆಕ್ಕಪತ್ರ ಇಲ್ಲದ ₹ 300 ಕೋಟಿ ಆದಾಯವನ್ನು ಪತ್ತೆ ಹಚ್ಚಲಾಗಿದೆ’ ಎಂದು ಆದಾಯ ತೆರಿಗೆ ಇಲಾಖೆ ಶನಿವಾರ ತಿಳಿಸಿದೆ.

ಚೆನ್ನೈನ 35 ಸ್ಥಳಗಳಲ್ಲಿ ಸೆ. 23ರಂದು ಶೋಧ ಕಾರ್ಯ ಕೈಗೊಳ್ಳಲಾಗಿತ್ತು. ಈ ದಾಳಿ ವೇಳೆ, ಲೆಕ್ಕಪತ್ರ ಇಲ್ಲದ ₹ 9 ಕೋಟಿ ನಗದು ಜಪ್ತಿ ಮಾಡಲಾಗಿದೆ ಎಂದು ಇಲಾಖೆ ಬಿಡುಗಡೆ ಮಾಡಿರುವ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

‘ಈ ಹಣಕಾಸು ಸಂಸ್ಥೆಗಳು ಉದ್ಯಮಿಗಳಿಗೆ ಹಾಗೂ ಕಾರ್ಪೊರೇಟ್ ಸಂಸ್ಥೆಗಳಿಗೆ ಅಪಾರ ಮೊತ್ತದ ಸಾಲ ನೀಡುತ್ತಿದ್ದವು. ಈ ಸಾಲಕ್ಕೆ ಅಧಿಕ ಬಡ್ಡಿದರ ವಿಧಿಸುತ್ತಿದ್ದ ಸಂಸ್ಥೆಗಳು, ಈ ವ್ಯವಹಾರಕ್ಕೆ ಸಂಬಂಧಿಸಿ ತೆರಿಗೆ ಪಾವತಿಸುತ್ತಿರಲಿಲ್ಲ ಎಂದು ಹೇಳಲಾಗಿದೆ.

ಬಂಗಾಳಕೊಲ್ಲಿಯಲ್ಲಿ ವಾಯುಭಾರ ಕುಸಿತ

ಆಂಧ್ರ, ಒಡಿಶಾದತ್ತ ಚಂಡಮಾರುತ: ಎಚ್ಚರಿಕೆ



ಭುವನೇಶ್ವರ (ಪಿಟಿಐ): ಬಂಗಾಳಕೊಲ್ಲಿಯ ಈಶಾನ್ಯ ಮತ್ತು ಪೂರ್ವ ಮಧ್ಯಭಾಗದಲ್ಲಿ ವಾಯುಭಾರ ಕುಸಿತ ಉಂಟಾಗಿದ್ದು, ಒಡಿಶಾ ಮತ್ತು ಆಂಧ್ರಪ್ರದೇಶದ ಕರಾವಳಿ ಭಾಗದಲ್ಲಿ ಚಂಡಮಾರುತ ಅಪ್ಪಳಿಸುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆಯು (ಐಎಂಡಿ) ಎಚ್ಚರಿಸಿದೆ.

ಗೋಪಾಲಪುರದ ಪೂರ್ವ–ಆಗ್ನೇಯ ದಿಕ್ಕಿನಲ್ಲಿ 510 ಕಿ.ಮೀ ಮತ್ತು ಆಂಧ್ರಪ್ರದೇಶದ ಕಳಿಂಗ ಪಟ್ಟಣದಿಂದ 590 ಕಿ.ಮೀ ದೂರದಲ್ಲಿ ಶನಿವಾರ ಬೆಳಿಗ್ಗೆ ವಾಯುಭಾರ ಕುಸಿತ ಉಂಟಾಗಿದೆ.

‘ಮುಂದಿನ 12 ಗಂಟೆಗಳಲ್ಲಿ ಚಂಡಮಾರುತ ತೀವ್ರಗೊಳ್ಳಬಹುದು. ಇದು, ಪಶ್ಚಿಮ ದಿಕ್ಕಿಗೆ ಚಲಿಸಿ, ಆಂಧ್ರಪ್ರದೇಶದ ಉತ್ತರ ಮತ್ತು ಒಡಿಶಾದ ದಕ್ಷಿಣ ಭಾಗದ ಕರಾವಳಿಯನ್ನು ದಾಟಬಹುದು. ಭಾನುವಾರ (ಸೆ.26) ವಿಶಾಖಪಟ್ಟಣ ಮತ್ತು ಗೋಪಾಲಪುರ ನಡುವೆ ಕಳಿಂಗ ಪಟ್ಟಣ ಸುತ್ತ ಚಂಡಮಾರುತದ ತೀವ್ರತೆ ಕಾಣಿಸಬಹುದು’ ಎಂದು ಇಲಾಖೆ ತಿಳಿಸಿದೆ.

ಚಂಡಮಾರುತದ ಪರಿಣಾಮ ಒಡಿಶಾ ಮತ್ತು ಆಂಧ್ರಪ್ರದೇಶದ ಕರಾವಳಿ ಭಾಗದಲ್ಲಿ ಧಾರಾಕಾರ ಮಳೆಯಾಗುವ ಸಂಭವವಿದೆ ಎಂದು ಎಚ್ಚರಿಸಲಾಗಿದೆ.

ಸೆ. 27ರಂದು ಒಡಿಶಾ, ತೆಲಂಗಾಣದ ಕೆಲವೆಡೆ ಹಾಗೂ ಪಶ್ಚಿಮ ಬಂಗಾಳದ ಕರಾವಳಿಯಲ್ಲಿ ಧಾರಾಕಾರ ಮಳೆ ಆಗುವ ಹಾಗೂ ಬಂಗಾಳ ಕೊಲ್ಲಿಯ ಪಶ್ಚಿಮ–ಮಧ್ಯ ಭಾಗಕ್ಕೆ ಹೊಂದಿಕೊಂಡಿರುವ ಭಾಗಗಳಲ್ಲಿ ಗಂಟೆಗೆ 50–60 ಕಿ.ಮೀ ವೇಗದಲ್ಲಿ ಗಾಳಿ ಬೀಸಲಿದ್ದು, ಗಂಟೆಗೆ 90 ಕಿ.ಮೀ ವೇಗವನ್ನು ಪಡೆಯಬಹುದು ಎಂದು ಐಎಂಡಿ ತಿಳಿಸಿದೆ.

ರಾಜ್ಯಕ್ಕೆ ಹಾನಿ ಇಲ್ಲ

ಬೆಂಗಳೂರು: ಚಂಡಮಾರುತದಿಂದ ರಾಜ್ಯದ ಮೇಲೆ ಯಾವುದೇ ಪರಿಣಾಮ ಉಂಟಾಗದು ಎಂದು ಹವಾಮಾನ ಇಲಾಖೆ ತಿಳಿಸಿದೆ.

‘ಕರಾವಳಿ ಭಾಗದಲ್ಲಿ ಸ್ವಲ್ಪ ಮಳೆಯಾಗಬಹುದು. ರಾಜ್ಯದ ಇತರೆಡೆಗೆ ಯಾವುದೇ ತೊಂದರೆ ಇಲ್ಲ. ಮೋಡ ಕವಿದ ವಾತಾವರಣ ಇರಲಿದೆಯಷ್ಟೆ’ ಎಂದು ಇಲಾಖೆ ಸ್ಪಷ್ಟಪಡಿಸಿದೆ.

ಭಾನುವಾರ, ಸೆಪ್ಟೆಂಬರ್ 26, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 268 | ಪುಟ 22
• www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ನೀರಿಲ್ಲದ ಊರಿನಲ್ಲಿ ಕೆರೆ ಮಾಡಿ ಗೆದ್ದು, ಸಂತೆಯ ಬಣ್ಣ ಬದಲಾಯಿಸಿದ ಕೊಪ್ಪಳ ಜಿಲ್ಲೆಯ ರಾಯನಕೆರೆಯ ಕೌತುಕ



ಸಾಲ ವಸೂಲಿಗಾಗಿ ರಾಜಕಾರಣಿಗಳಿಗೆ ನೋಟಿಸ್: ಸಚಿವ ಸೋಮಶೇಖರ್ 8
ಕಾನೂನು ಉಲ್ಲಂಘಿಸುವವರಿಗೆ ಕಠಿಣ ಶಿಕ್ಷೆಯ ಎಚ್ಚರಿಕೆ
ವಿಶ್ವಸಂಸ್ಥೆ: ಪಾಕ್ ಹೇಳಿಕೆಗೆ ಭಾರತ ತಿರುಗೇಟು 5
ಅಫ್ಗನ್: ಅಪಹರಣಕಾರರ ಶವ ನೇತುಹಾಕಿದ ತಾಲಿಬಾನಿಗಳು 8

ಆರೋಗ್ಯ ಸಿಬ್ಬಂದಿಗೆ ಭಾನುವಾರ ಬದಲು ಬೇರೆ ದಿನ ರಜೆ?

ಪ್ರಜಾವಾಣಿ ವಾರ್ತೆ

ತುಮಕೂರು: ‘ಆರೋಗ್ಯ ಇಲಾಖೆ ಸಿಬ್ಬಂದಿ ಭಾನುವಾರ ಕೆಲಸ ನಿರ್ವಹಿಸುವಂತೆ ಮಾಡಿ ಬೇರೆ ದಿನಗಳಲ್ಲಿ ರಜೆ ನೀಡುವ ಬಗ್ಗೆ ಚಿಂತನೆ ನಡೆದಿದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಭಾನುವಾರ ರಜೆ ಇರುವುದರಿಂದ ಚಿಕಿತ್ಸೆಗೆಂದು ಜನರು ಆಸ್ಪತ್ರೆಗಳಿಗೆ ಬರುತ್ತಾರೆ. ಆ ಸಮಯದಲ್ಲಿ ವೈದ್ಯರು ಸೇರಿದಂತೆ ಸಿಬ್ಬಂದಿ ರಜೆಯಲ್ಲಿದ್ದರೆ ಚಿಕಿತ್ಸೆ ಸಿಗುವುದು ಕಷ್ಟಕರವಾಗುತ್ತದೆ. ಹಾಗಾಗಿ, ರಜಾ ದಿನ ಬದಲಿಸಿ ಭಾನುವಾರದ ಬದಲು ಬೇರೆ ದಿನ ರಜೆ ನೀಡುವ ಬಗ್ಗೆ ಚಿಂತನೆ ಮಾಡಲಾಗಿದೆ’ ಎಂದರು.

‘ಚಾಣಕ್ಯ ವಿ.ವಿ.ಗೆ ಜಮೀನು ನೀಡಿರುವುದಕ್ಕೆ ಕಾಂಗ್ರೆಸ್‌ನವರು ವಿರೋಧ ವ್ಯಕ್ತಪಡಿಸುವುದು ಸರಿಯಲ್ಲ. ಅವರು ಅಧಿಕಾರದಲ್ಲಿ ಇದ್ದಾಗ ಎಷ್ಟು ಶಿಕ್ಷಣ ಸಂಸ್ಥೆಗಳಿಗೆ ಜಮೀನು ಕೊಟ್ಟಿದ್ದಾರೆ ಎಂಬುದು ಗೊತ್ತಿದೆ’ ಎಂದು ಹೇಳಿದರು.

ಬೇರೆಯವರು ಶಿಕ್ಷಣ ಸಂಸ್ಥೆ ತೆರೆದರೆ ಭೂಮಿ ನೀಡಲಾಗುವುದು ಎಂದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಮಕ್ಕಳ ಹಿತ ಮರೆಯಿತೇ?

• ಕೆ.ನರಸಿಂಹಮೂರ್ತಿ

ಒಳನೋಟ

ಆಶಯದಿಂದ ದೂರ

ಪ್ರತಿಕ್ರಿಯಿಸಿ: 9606038256
feedback@prajavani.co.in

ಮೈಸೂರು: ಲೈಂಗಿಕ ದೌರ್ಜನ್ಯ ಸೇರಿದಂತೆ ಹಲವು ಬಗೆಯ ಶೋಷಣೆಗೆ ಒಳಗಾದ ದಿಕ್ಕಿಲ್ಲದ ಮಕ್ಕಳಿಗೆ ಕಾನೂನು ಬಲ, ಆರ್ಥಿಕ ಸಹಾಯ, ಪುನರ್ವಸತಿ, ಆಪ್ತ ಸಮಾಲೋಚನೆ ನೀಡಿ ಮುಖ್ಯವಾಹಿನಿಗೆ ತರಬೇಕಾದ ಮಕ್ಕಳ ಕಲ್ಯಾಣ ಸಮಿತಿಗಳು ಮೂಲ ಉದ್ದೇಶವನ್ನೇ ಮರೆತಂತಿವೆ.

‘ಮಗುವಿನ ಹಿತಾಸಕ್ತಿ’ಗಿಂತ ಸಮಿತಿ ಸದಸ್ಯರ ನಿರ್ಲಕ್ಷ್ಯ, ಧೋರಣೆ, ಭಿನ್ನಾಭಿಪ್ರಾಯ, ಸ್ವಂತ ಹಿತಾಸಕ್ತಿಯೇ ಮುಖ್ಯವಾಗಿ, ಸಮರ್ಪಕ ನಿರ್ಧಾರ ಕೈಗೊಳ್ಳದ ಹಲವು ಪ್ರಕರಣಗಳು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಗಮನಕ್ಕೆ ಬಂದಿದ್ದರೂ, ಪ್ರಯೋಜನವಾಗಿಲ್ಲ.

ಏಕೆಂದರೆ, ಆಯೋಗಕ್ಕೆ ಕ್ರಮ ಕೈಗೊಳ್ಳುವ ಅಧಿಕಾರವೇ ಇಲ್ಲ. ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ ಶಿಫಾರಸು ಮಾಡುವ ಅಧಿಕಾರವಷ್ಟೇ ಇರುವುದರಿಂದ ಅದೂ ಅಸಹಾಯಕವಾಗಿದೆ. ಆಯೋಗ ಅಸ್ತಿತ್ವಕ್ಕೆ ಬಂದ 11 ವರ್ಷಗಳ ಅವಧಿಯಲ್ಲಿ ಈವರೆಗೆ ಎರಡು ಸಮಿತಿಗಳ ವಿರುದ್ಧವಷ್ಟೇ ಎಫ್‌ಐಆರ್ ದಾಖಲಾಗಿದೆ.

ಸಮಿತಿ ಸದಸ್ಯರು ಆಯೋಗಕ್ಕೆ ಪರಸ್ಪರ ದೂರು ಪತ್ರ ಬರೆಯುವುದು, ಪರಸ್ಪರ ದೂಷಿಸುವುದು, ಕಾಯ್ದೆಗಳ ಪಾಲನೆ-ಉಲ್ಲಂಘನೆ ವಿಚಾರದಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ನಿರ್ಭಿಡೆಯಿಂದ ವರ್ತಿಸದೇ ಇರುವುದು, ಸಮಿತಿ ಅಧ್ಯಕ್ಷರ ಸಂಬಂಧಿಕರು ತಾವು ಕೆಲಸ ಮಾಡುವ ಸ್ಥಳಗಳಲ್ಲಿ ಸಹೋದ್ಯೋಗಿಗಳ ವಿರುದ್ಧ ಸುಳ್ಳು ದೂರು ನೀಡುವುದು–ಇಂಥ ಅಸಮರ್ಪಕ ಕಾರ್ಯವೈಖರಿಯಿಂದಲೇ ಕಲ್ಯಾಣ ಸಮಿತಿ ರಚನೆಯ ಆಶಯವೂ ಮೂಲೆಗುಂಪಾಗಿದೆ.

ಉತ್ತರ ಕರ್ನಾಟಕದ ತಾಂಡಾವೊಂದರ ಬಾಲಕನಿಗೆ 12 ವರ್ಷವಿದ್ದಾಗ ತಂದೆ–ತಾಯಿ ತೀರಿಕೊಂಡರು. ಬಾಲಕ ಶಾಲೆ ಬಿಟ್ಟು ಭಿಕ್ಷೆ ಬೇಡುತ್ತಾ, ಅಲ್ಲಲ್ಲಿ ಕೆಲಸ ಮಾಡುತ್ತಿದ್ದ. ಈಗ ಅವನಿಗೆ 14 ವರ್ಷ ದಾಟಿದೆ. 12 ವರ್ಷದ ಆತನ ತಂಗಿ ಮಾನಸಿಕ ಅಸ್ವಸ್ಥೆ. ಅಜ್ಜಿಯ ಕೈ-ಕಾಲು ಸ್ವಾಧೀನವಿಲ್ಲ. ಇಬ್ಬರನ್ನೂ ಸಾಕುವುದಕ್ಕೆ ಹುಡುಗ ದುಡಿಮೆಗೆ ನಿಂತಿದ್ದಾನೆ. ಆ ಬಗ್ಗೆ ಪತ್ರಿಕೆಗಳಲ್ಲಿ ವರದಿ ಪ್ರಕಟವಾದರೂ ಕಲ್ಯಾಣ ಸಮಿತಿ, ರಕ್ಷಣಾ ಘಟಕದ ನೆರವು ಸಿಕ್ಕಿಲ್ಲ.

ದಕ್ಷಿಣ ಕರ್ನಾಟಕದ ಜಿಲ್ಲೆಯೊಂದರ ವ್ಯಕ್ತಿಗೆ ಬಾಲಕಿಯನ್ನು ದತ್ತು ಕೊಡುವ ಸಂದರ್ಭದಲ್ಲಿ ಸಮಿತಿಯು ಆ ವ್ಯಕ್ತಿಯ ಸಾಮಾಜಿಕ ತನಿಖಾ ವರದಿಯನ್ನೇ ಪಡೆದಿರಲಿಲ್ಲ. ಸಮಿತಿ ಸದಸ್ಯರೊಬ್ಬರೊಂದಿಗಿನ ಪರಿಚಯವನ್ನಷ್ಟೇ ಪರಿಗಣಿಸಿ ದತ್ತು ನೀಡಲಾಗಿತ್ತು ಎಂಬ ಆರೋಪಕ್ಕೆ ಗುರಿಯಾಗಿದೆ.

ಇನ್ನೊಂದು ಜಿಲ್ಲೆಯಲ್ಲಿ, ಬಾಲಮಂದಿರದಲ್ಲಿದ್ದ ಬಾಲಕಿಯೇ ಖಿನ್ನತೆಯಿಂದ ಆತ್ಮಹತ್ಯೆ ಮಾಡಿಕೊಂಡಳು. ‘ಕೊಲೆ ಆರೋಪದಲ್ಲಿ ಪೋಷಕರೆಲ್ಲರೂ ಜೈಲಿನಲ್ಲಿದ್ದಾಗ, ಒಂಟಿಯಾದ ಬಾಲಕಿಯನ್ನು ಬಾಲಮಂದಿರದಲ್ಲಿ ಇರಿಸಲಾಗಿತ್ತು. ಆಕೆ ಖಿನ್ನತೆಗೆ ಒಳಗಾಗದ ರೀತಿ ಆಪ್ತಸಮಾಲೋಚನೆ, ಚಿಕಿತ್ಸೆ ನೀಡಿ, ನಿಗಾ ಇರಿಸಿದ್ದಿದ್ದರೆ ಆತ್ಮಹತ್ಯೆ ಮಾಡಿಕೊಳ್ಳುತ್ತಿರಲಿಲ್ಲ. ಆದರೆ ಕಲ್ಯಾಣ ಸಮಿತಿಯಾಗಲೀ, ರಕ್ಷಣಾ ಘಟಕವಾಗಲೀ ಕಿಂಚಿತ್ತೂ ಗಮನಹರಿಸದೇ ಇದ್ದುದರಿಂದಲೇ ಆಯೋಗವು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿದೆ’ ಎಂದು ಆಯೋಗದ ಸದಸ್ಯ ಎಂ.ಎಲ್. ಪರಶುರಾಮ್ ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

ಎರಡು ಸಭೆಯ ಹೆಚ್ಚುವರಿ ಭತ್ಯೆಯ ಆಮಿಷಕ್ಕೆ ಒಳಗಾದ ಮಕ್ಕಳ ಕಲ್ಯಾಣ ಸಮಿತಿಯು, ಬಾಲನ್ಯಾಯ ಕಾಯ್ದೆಯ ಪ್ರಾಯೋಜಕತ್ವದ ಅಡಿ ಫಲಾನುಭವಿಗಳಾದ ನೂರಾರು ಮಕ್ಕಳ ಮಾಹಿತಿಯನ್ನೇ ನೋಡದೆ, ಮಕ್ಕಳ ರಕ್ಷಣಾ ಘಟಕದ ಕಡತಗಳಿಗೆ ಸಹಿ ಹಾಕಿದ ಘಟನೆಯೂ 2019ರಲ್ಲಿ ಮಂಡ್ಯದಲ್ಲಿ ನಡೆದಿದೆ. ಆಯೋಗವು ಅಲ್ಲಿ ನಡೆಸಿದ ಸಭೆಯಲ್ಲಿ ಈ ಪ್ರಕರಣವನ್ನು, ಸಹಿ ಹಾಕಿದವರೇ ಗಮನಕ್ಕೆ ತಂದಿದ್ದರು!

‘ಸಮಿತಿ ಸದಸ್ಯರು ಬಾಲನ್ಯಾಯ ಕಾಯ್ದೆ ಉಲ್ಲಂಘಿಸಿರುವುದರಿಂದ, ಘಟಕವು ಅನುದಾನ ದುರ್ಬಳಕೆ ಮಾಡಿರುವುದರಿಂದ ಕ್ರಮ ಕೈಗೊಳ್ಳಬೇಕು ಎಂದು ಮಂಡ್ಯ ಜಿಲ್ಲಾಧಿಕಾರಿಗೆ ಆಯೋಗದಿಂದ ಆದೇಶ ಪತ್ರ ಬರೆಯಲಾಗಿತ್ತು. ಆದರೆ ಎರಡು ವರ್ಷದ ಬಳಿಕ ಈಗ ಜಿಲ್ಲಾಡಳಿತ ಮಕ್ಕಳ ರಕ್ಷಣಾ ನಿರ್ದೇಶನಾಲಯಕ್ಕೆ ಪತ್ರ ಬರೆದು, ಕ್ರಮಕ್ಕೆ ಶಿಫಾರಸು ಮಾಡಿದೆ. ಹಲವು ಪ್ರಕರಣಗಳಲ್ಲಿ ಇಂಥ ನಿಧಾನಗತಿ ಕಾರ್ಯವೈಖರಿ ಮುಂದುವರಿಯುತ್ತಲೇ ಇದೆ’ ಎಂದು ಪರಶುರಾಂ ವಿಷಾದಿಸಿದರು.

‘ನ್ಯಾಯಾಂಗ ಮತ್ತು ಕಾರ್ಯಾಂಗದ ಜೊತೆ ಸಹಕಾರ– ಸಮನ್ವಯದೊಂದಿಗೆ ಕೆಲಸ ಮಾಡಬಲ್ಲ ಸಾಮರ್ಥ್ಯ, ಸಾಮಾಜಿಕ ಹಿನ್ನೆಲೆ ಹಾಗೂ ಕಾನೂನು ತಿಳಿವಳಿಕೆಯುಳ್ಳವರ ಆಯ್ಕೆ ನಡೆಯದೇ ಇರುವುದು ಸದ್ಯದ ಸ್ಥಿತಿಗೆ ಕಾರಣ’ ಎಂದು ಆಯೋಗದ ಇನ್ನಿಬ್ಬರು ಸದಸ್ಯರಾದ ಎಚ್‌.ಸಿ.ರಾಘವೇಂದ್ರ ಮತ್ತು ಡಿ.ಶಂಕರಪ್ಪ ಅಭಿಪ್ರಾಯಪಟ್ಟರು.





ಮಕ್ಕಳ ಕಲ್ಯಾಣ ಸಮಿತಿಗಳು ಉದ್ದೇಶಕ್ಕೆ ತಕ್ಕಂತೆ ಕಾರ್ಯ ನಿರ್ವಹಿಸುತ್ತಿಲ್ಲ ಎಂಬುದು, ಬೆಳಕಿಗೆ ಬಂದ ಪ್ರಕರಣಗಳಿಂದ ಗೊತ್ತಾಗಿದೆ
ಎಂ.ಎಲ್.ಪರಶುರಾಮ್, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ




ಮಕ್ಕಳ ಹಕ್ಕುಗಳ ಕ್ಷೇತ್ರದಲ್ಲಿ ವಿಶಿಷ್ಟ ಪರಿಶ್ರಮ ಉಳ್ಳವರು ಸಮಿತಿಗಳಲ್ಲಿ ಇಲ್ಲದಿರುವುದೂ ಕೂಡ ಮಕ್ಕಳಿಗೆ ಸಮಸ್ಯೆಯಾಗಿ ಮಾರ್ಪಟ್ಟಿದೆ
ಕೆ.ವಿ.ಸ್ಟ್ಯಾನ್ಲಿ
ಒಡನಾಡಿ ಸೇವಾ ಸಂಸ್ಥೆ, ಮೈಸೂರು

ಆರೋಪಗಳಿಗೆ ಸಮಿತಿಯು ಬಹಿರಂಗವಾಗಿ ಪ್ರತಿಕ್ರಿಯಿಸಲು ಆಗದು. ಆದರೆ, ಬಾಲನ್ಯಾಯ ಕಾಯ್ದೆ ಅನುಸಾರವಾಗಿಯೇ ಕಾರ್ಯನಿರ್ವಹಿಸುತ್ತಿದೆ
ಎಚ್‌.ಟಿ.ಕಮಲಾ, ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷೆ, ಮೈಸೂರು

ಇನ್ನಷ್ಟು ಸುದ್ದಿಗಳು 6

ವಿಶ್ವಸಂಸ್ಥೆಯ ಅಧಿವೇಶನದಲ್ಲಿ ಪ್ರಧಾನಿ ಭಾಷಣ

ಅಫ್ಗನ್ ಪರಿಸ್ಥಿತಿ ಲಾಭದ ಯತ್ನ ಬೇಡ: ಮೋದಿ



ಪ್ರಧಾನಿ ನರೇಂದ್ರ ಮೋದಿ ಅವರು ವಿಶ್ವಸಂಸ್ಥೆಯಲ್ಲಿ ಮಾತನಾಡಿದರು —ಎಎಫ್‌ಪಿ ಚಿತ್ರ

ವಿಶ್ವಸಂಸ್ಥೆ (ಪಿಟಿಐ): ಯಾವುದೇ ದೇಶವು ಅಫ್ಗಾನಿಸ್ತಾನದಲ್ಲಿನ ಪ್ರಕ್ಷುಬ್ಧತೆಯನ್ನು ತನ್ನ ಲಾಭಕ್ಕಾಗಿ ಬಳಸಿಕೊಳ್ಳಲು ಯತ್ನಿಸಬಾರದು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಹೇಳಿದರು.

ವಿಶ್ವಸಂಸ್ಥೆಯ 76ನೇ ಸಾಮಾನ್ಯ ಅಧಿವೇಶನವನ್ನು ಉದ್ದೇಶಿಸಿ ಅವರು ಮಾತನಾಡಿದರು. ತಾಲಿಬಾನ್ ಜೊತೆ ಕೆಲಸ ಮಾಡುವಂತೆ ಪಾಕಿಸ್ತಾನದ ಪ್ರಧಾನಿ ಇಮ್ರಾನ್ ಖಾನ್ ಅವರು ಇತರ ರಾಷ್ಟ್ರಗಳಿಗೆ ಮನವಿ ಮಾಡಿದ್ದ ಹಿನ್ನೆಲೆಯಲ್ಲಿ ಪ್ರಧಾನಿ ಅವರ ಮಾತು ಮಹತ್ವ ಪಡೆದಿದೆ.

ಯಾವುದೇ ದೇಶವು ಅಫ್ಗನ್ ಪರಿಸ್ಥಿತಿಯನ್ನು ತನ್ನ ಸ್ವಾರ್ಥಕ್ಕಾಗಿ ಬಳಸಿಕೊಳ್ಳಲು ಪ್ರಯತ್ನಿಸುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಬೇಕಿದೆ ಎಂದು ಪ್ರಧಾನಿ ಅಭಿಪ್ರಾಯಪಟ್ಟರು.

‘ಭಯೋತ್ಪಾದನೆ ಎಲ್ಲರ ಶತ್ರು’: ‘ಭಯೋತ್ಪಾದನೆಯು ಎಲ್ಲರ ಸಾಮಾನ್ಯ ಶತ್ರು’ ಎಂಬುದನ್ನು ಉಗ್ರವಾದವನ್ನು ರಾಜಕೀಯ ಅಸ್ತ್ರ ಮಾಡಿಕೊಂಡಿರುವ ದೇಶಗಳು ಅರ್ಥ ಮಾಡಿಕೊಳ್ಳಬೇಕು ಎಂದು ಹೇಳಿದರು. ಉಗ್ರರಿಗೆ ಪ್ರಶಸ್ತ ನೆಲೆ ಒದಗಿಸಿರುವ ಪಾಕಿಸ್ತಾನವನ್ನು ಅವರು ಪರೋಕ್ಷವಾಗಿ ತರಾಟೆಗೆ ತೆಗೆದುಕೊಂಡರು.

ಅಫ್ಗನ್ ನೆಲವು ಭಯೋತ್ಪಾದನೆ ಹರಡಲು ಮತ್ತು ಭಯೋತ್ಪಾದಕ ದಾಳಿಗಳಿಗೆ ಬಳಕೆಯಾದಂತೆ ನೋಡಿಕೊಳ್ಳುವುದು ಈಗಿನ ಅಗತ್ಯ ಎಂದು ಒತ್ತಿ ಹೇಳಿದರು.

ಅಮೆರಿಕ ಅಧ್ಯಕ್ಷ ಜೋ ಬೈಡನ್ ಹಾಗೂ ಆಸ್ಟ್ರೇಲಿಯಾ ಮತ್ತು ಜಪಾನ್‌ನ ನಾಯಕರ ಜೊತೆಗಿನ ಕ್ವಾಡ್ ಶೃಂಗಸಭೆಯಲ್ಲೂ ಪಾಕಿಸ್ತಾನದ ಬಗ್ಗೆ ಪ್ರಧಾನಿ ಕಳವಳ ವ್ಯಕ್ತಪಡಿಸಿದರು ಎಂದು ಭಾರತೀಯ ಅಧಿಕಾರಿಗಳು ತಿಳಿಸಿದ್ದಾರೆ.

ಪಾಕಿಸ್ತಾನ, ಅದರಲ್ಲೂ ಅದರ ಗುಪ್ತಚರ ಸಂಸ್ಥೆಗಳು, ಅಫ್ಗಾನಿಸ್ತಾನದ ಚುಕ್ಕಾಣಿ ಹಿಡಿದಿರುವ ತಾಲಿಬಾನ್ ಹಾಗೂ ಹಕ್ಕಾನಿ ಜಾಲದ ಜೊತೆ ನಿಕಟ ಸಂಬಂಧವನ್ನು ಹೊಂದಿವೆ.

ಭಾರತದಲ್ಲಿ ಲಸಿಕೆ ತಯಾರಿಸಲು ಆಹ್ವಾನ


ಇತರ ದೇಶಗಳ ಜನರಿಗೆ ಕೋವಿಡ್ ಲಸಿಕೆ ನೀಡಲು ಭಾರತದ ಬದ್ಧತೆಯನ್ನು ಪುನರುಚ್ಚರಿಸಿದ ಪ್ರಧಾನಿ ನರೇಂದ್ರ ಮೋದಿ, ಲಸಿಕೆ ತಯಾರಕರಿಗೆ ಭಾರತಕ್ಕೆ ಬರುವಂತೆ ಆಹ್ವಾನ ನೀಡಿದರು.

‘ಕಳೆದ ಒಂದೂವರೆ ವರ್ಷಗಳಲ್ಲಿ ಅತಿದೊಡ್ಡ ಸಾಂಕ್ರಾಮಿಕ ರೋಗವನ್ನು ಜಗತ್ತು ಎದುರಿಸಿದೆ. ಇಂತಹ ವಿಪತ್ತಿನಲ್ಲಿ ಪ್ರಾಣ ಕಳೆದುಕೊಂಡ ಎಲ್ಲರ ಕುಟುಂಬಗಳಿಗೂ ನಾನು ಸಾಂತ್ವನ ಹೇಳುತ್ತೇನೆ’ ಎಂದು ಸಾಮಾನ್ಯ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಭಾರತದ ಲಸಿಕೆ ವಿತರಣಾ ವೇದಿಕೆ ಕೋವಿನ್, ಒಂದೇ ದಿನದಲ್ಲಿ ಕೋಟ್ಯಂತರ ಡೋಸ್ ಲಸಿಕೆಗಳನ್ನು ನೀಡಲು ಡಿಜಿಟಲ್ ಬೆಂಬಲ ನೀಡಿದೆ ಎಂದು ಅವರು ಹೇಳಿದರು.

ಇದೇ ಏಪ್ರಿಲ್‌ನಲ್ಲಿ ಕೋವಿಡ್ ಎರಡನೇ ಅಲೆಯು ದೇಶವನ್ನು ತೀವ್ರವಾಗಿ ಬಾಧಿಸಿದ್ದರಿಂದ ಲಸಿಕೆ ರಫ್ತು ಮಾಡುವುದನ್ನು ಭಾರತ ಸ್ಥಗಿತಗೊಳಿಸಿತ್ತು. ಭಾರತವು ಹೆಚ್ಚುವರಿ ಕೋವಿಡ್ ಲಸಿಕೆಗಳ ರಫ್ತನ್ನು 2021ರ ನಾಲ್ಕನೇ ತ್ರೈಮಾಸಿಕದಲ್ಲಿ ‘ಲಸಿಕೆ ಮೈತ್ರಿ’ ಕಾರ್ಯಕ್ರಮದ ಅಡಿಯಲ್ಲಿ ಪುನರಾರಂಭಿಸುವುದಾಗಿ ಭಾರತ ತಿಳಿಸಿದೆ.

ಸಹ ಸಂಚಾಲಕರಾಗಿ ಬಿ.ಕೆ. ಹರಿಪ್ರಸಾದ್


ಹರಿಪ್ರಸಾದ್

ಬೆಂಗಳೂರು: ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ಕಾಂಗ್ರೆಸ್ ಪಕ್ಷದಿಂದ ವರ್ಷವಿಡೀ ಆಚರಿಸಲು ಯೋಜನೆ ರೂಪಿಸಲು ಮಾಜಿ ಪ್ರಧಾನಿ ಡಾ. ಮನಮೋಹನ್ ಸಿಂಗ್ ಅಧ್ಯಕ್ಷತೆಯಲ್ಲಿ ಎಐಸಿಸಿ ರಚಿಸಿರುವ ಸಮಿತಿಯ ಸಹ ಸಂಚಾಲಕರನ್ನಾಗಿ ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಅವರನ್ನು ನೇಮಕ ಮಾಡಲಾಗಿದೆ. ಹರಿಪ್ರಸಾದ್ ಅವರನ್ನು ನೇಮಿಸಿ ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ ಶುಕ್ರವಾರ ಆದೇಶ ಹೊರಡಿಸಿದ್ದಾರೆ. ಮನಮೋಹನ್ ಸಿಂಗ್ ನೇತೃತ್ವದಲ್ಲಿ 11 ಸದಸ್ಯರ ಸಮಿತಿಯನ್ನು ಕೆಲವು ದಿನಗಳ ಹಿಂದೆ ನೇಮಕ ಮಾಡಲಾಗಿತ್ತು.

ಕಾನೂನು ಸಮಸ್ಯೆ ಬಗೆಹರಿಸಿ: ಕನ್ನಡ ಅಭಿವೃದ್ಧಿ ಪ್ರಾಧಿಕಾರ ಆಗ್ರಹ


ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೆಲವು ಅಂಗಡಿಗಳು ಕಾನೂನು ಸಮಸ್ಯೆಗಳ ಕಾರಣ ನೀಡಿ, ಕನ್ನಡದ ಹೆಸರುಗಳ ಆಹಾರೊತ್ಪನ್ನಗಳ ಪೊಟ್ಟಣ ಖರೀದಿಗೆ ನಿರಾಕರಿಸುತ್ತಿವೆ. ಈ ಸಂಬಂಧ ಕಾನೂನು ಸಮಸ್ಯೆಯನ್ನು ಪರಿಹರಿಸಬೇಕು' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರವು ವಾಣಿಜ್ಯ ತೆರಿಗೆ ಆಯುಕ್ತರನ್ನು ಆಗ್ರಹಿಸಿದೆ.

ಈ ಬಗ್ಗೆ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಅವರು ವಾಣಿಜ್ಯ ತೆರಿಗೆಗಳ ಇಲಾಖೆಗೆ ಪತ್ರ ಬರೆದಿದ್ದಾರೆ.

'ಇಂದಿರಾ ಫುಡ್ಸ್ ಪ್ರೈವೇಟ್ ಲಿಮಿಟೆಡ್ ಹಲವು ವರ್ಷಗಳಿಂದ ರಾಗಿ, ಟೊಮೆಟೊ, ತರಕಾರಿ ಸೇರಿದಂತೆ ವಿವಿಧ ಸಾವಯವ ಉತ್ಪನ್ನಗಳನ್ನು ತಯಾರಿಸುತ್ತಿದೆ. ಎಲ್ಲ ಉತ್ಪನ್ನಗಳ ಹೆಸರನ್ನು ಕನ್ನಡದಲ್ಲಿ ಮಾತ್ರ ಮುದ್ರಿಸಿ, ಮಾರಾಟ ಮಾಡುತ್ತಿದೆ. ಆದರೆ, ಕೆಲವು ಖಾಸಗಿ ಸಂಸ್ಥೆಗಳು ಕನ್ನಡದಲ್ಲಿ ಮಾತ್ರ ಹೆಸರಿದ್ದರೆ ಮಾರಾಟ ಮಾಡಲು ಸಾಧ್ಯವಿಲ್ಲ ಎಂದು ಹಿಂಬರಹ ನೀಡುತ್ತಿವೆ' ಎಂದು ಪತ್ರದಲ್ಲಿ ತಿಳಿಸಿದ್ದಾರೆ.

'ಕನ್ನಡದಲ್ಲಿ ಮಾತ್ರ ಹೆಸರಿರುವ ಉತ್ಪನ್ನಗಳನ್ನು ಮಾರಾಟ ಮಾಡಲು ಕೆಲವು ಅಂಗಡಿಗಳು ಶಾಸನಬದ್ಧ ದಾಖಲೆಗಳನ್ನೂ ನೀಡುವಂತೆ ಕೇಳುತ್ತಿವೆ. ಹಾಗಾಗಿ, ಕಾನೂನು ಸಮಸ್ಯೆಗಳನ್ನು ನಿವಾರಿಸಿ, ಮಾರಾಟಕ್ಕೆ ಅವಕಾಶ ನೀಡಬೇಕು' ಎಂದು ಒತ್ತಾಯಿಸಿದ್ದಾರೆ.


ದೆಹಲಿಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿಯಾದ ಸಚಿವ ಎಸ್‌.ಟಿ. ಸೋಮಶೇಖರ್

'ರಾಷ್ಟ್ರೀಯ ಸಹಕಾರ ಅಭಿವೃದ್ಧಿ ಸಂಸ್ಥೆ ಸ್ಥಾಪಿಸಿ'

ಬೆಂಗಳೂರು: ಗ್ರಾಮೀಣ ಪ್ರದೇಶದಲ್ಲಿ ಸಹಕಾರ ತತ್ವ ಹಾಗೂ ಸಹಕಾರಿ ಸಂಘಟನೆಗಳು ಬಲಗೊಳ್ಳಬೇಕಾದರೆ ರಾಷ್ಟ್ರೀಯ ಸಹಕಾರ ಅಭಿವೃದ್ಧಿ ಸಂಸ್ಥೆ ಸ್ಥಾಪಿಸುವ ಅವಶ್ಯ ಇದೆ ಎಂದು ಸಹಕಾರ ಸಚಿವ ಎಸ್‌.ಟಿ. ಸೋಮಶೇಖರ್ ಅವರು ಕೇಂದ್ರ ಗೃಹ ಹಾಗೂ ಸಹಕಾರ ಸಚಿವ ಅಮಿತ್ ಶಾ ಅವರಿಗೆ ಮನವಿ ಮಾಡಿದ್ದಾರೆ.

ದೆಹಲಿಯಲ್ಲಿ ಶನಿವಾರ ನಡೆದ ರಾಷ್ಟ್ರೀಯ ಸಹಕಾರ ಸಮ್ಮೇಳನದಲ್ಲಿ ಅಮಿತ್ ಶಾ ಅವರನ್ನು ಭೇಟಿಯಾದ ಸೋಮಶೇಖರ್, ಈ ಕುರಿತು ಮನವಿ ಸಲ್ಲಿಸಿದ್ದಾರೆ. ಹೊಸ ಸಂಸ್ಥೆಯ ರಚನೆಯಿಂದ ಕಾನೂನು ಚೌಕಟ್ಟಿನಲ್ಲಿ ಕೆಲಸ ಮಾಡಲು ಮತ್ತು ರಾಜ್ಯಗಳೊಂದಿಗೆ ಸಮನ್ವಯ ಸಾಧಿಸಲು ಸಾಧ್ಯವಾಗಲಿದೆ ಎಂದು ಅವರು ವಿವರಿಸಿದ್ದಾರೆ.

ಇದೇ ವರ್ಷದ ನವೆಂಬರ್ ಅಥವಾ ಡಿಸೆಂಬರ್‌ನಲ್ಲಿ ರಾಜ್ಯ ಮಟ್ಟದ ಸಹಕಾರಿಗಳ ಸಮ್ಮೇಳನ ಹಮ್ಮಿಕೊಳ್ಳಲಿದ್ದು, ಅದರಲ್ಲಿ ಪಾಲ್ಗೊಳ್ಳುವಂತೆ ಕೋರಿದ್ದಾರೆ.

'ಪ್ರಾಥಮಿಕ ಕೃಷಿ ಮತ್ತು ಸಹಕಾರಿ ಬ್ಯಾಂಕ್ ಹಾಗೂ ಪೀಕಾರ್ಡ್ ಬ್ಯಾಂಕ್‌ಗಳಿಗೆ ಮಾತ್ರ 80 ಜಿ ಅಡಿ ಆದಾಯ ತೆರಿಗೆ ವಿನಾಯಿತಿ ಇದೆ. ಇದನ್ನು ಸಹಕಾರ ವಲಯದ ಎಲ್ಲ ಸಂಸ್ಥೆಗಳಿಗೆ ವಿಸ್ತರಿಸಬೇಕು. ಸಹಕಾರ ಸಂಸ್ಥೆಗಳಿಗೆ ಕಚ್ಚಾವಸ್ತುಗಳ ಸಂಗ್ರಹ ಮತ್ತು ಉತ್ಪನ್ನಗಳಿಗೆ ದರ ನಿಗದಿಪಡಿಸುವ ಹಾಗೂ ಅವುಗಳಿಗೆ ಮಾರುಕಟ್ಟೆ ಕಲ್ಪಿಸಬೇಕು.'

'ರಾಜ್ಯದಲ್ಲಿ 160 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳನ್ನು ಆಧುನೀಕರಣಗೊಳಿಸಲು, ರೈತರು ತಮ್ಮ ಉತ್ಪನ್ನಗಳನ್ನು ಮಾರುಕಟ್ಟೆಗೆ ತರಲು ಸುಸಜ್ಜಿತ ರಸ್ತೆಗಳು ಹಾಗೂ ದರ ಇಳಿಕೆಯಾದಾಗ ರೈತರು ತಮ್ಮ ಕೃಷಿ ಉತ್ಪನ್ನಗಳನ್ನು ದೀರ್ಘಕಾಲ ಕೆಡದಂತೆ ಸಂಗ್ರಹಿಸಲು ಜಿಲ್ಲಾ ಕೇಂದ್ರ ಮತ್ತು ಮಾರುಕಟ್ಟೆಗಳಲ್ಲಿ ಶೈತ್ಯಾಗಾರಗಳನ್ನು ನಿರ್ಮಿಸಲು ಕರ್ನಾಟಕಕ್ಕೆ ₹5 ಸಾವಿರ ಕೋಟಿ ಅನುದಾನ ಬಿಡುಗಡೆ ಮಾಡುವಂತೆ ಮನವಿ ಮಾಡಿದ್ದೇನೆ' ಎಂದು ಸೋಮಶೇಖರ್ ತಿಳಿಸಿದ್ದಾರೆ.

'ಸಹಕಾರ ಸಂಸ್ಥೆಗಳಲ್ಲಿ ಮಾಹಿತಿ ತಂತ್ರಜ್ಞಾನ ಅಳವಡಿಸಲು ಒಂದೇ ತಂತ್ರಾಂಶದ ಅಗತ್ಯವಿದ್ದು, ಇದಕ್ಕಾಗಿ ನೆರವು ನೀಡಬೇಕು' ಎಂದು ಕೋರಿದ್ದಾಗಿ ತಿಳಿಸಿದ್ದಾರೆ.

'ತೃತೀಯ ಲಿಂಗಿಗಳಿಗೂ ಸಮಾನತೆಯ ಹಕ್ಕು ದೊರೆಯಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಮಾಜವು ಇನ್ನೂ ಲೈಂಗಿಕ ಕಾರ್ಯಕರ್ತೆಯರು ಮತ್ತು ತೃತೀಯ ಲಿಂಗಿಗಳನ್ನು ದ್ವೇಷಿಸುತ್ತಿರುವುದು ವಿಷಾದಕರ. ಆದರೆ, ಪುರಾಣಗಳಲ್ಲಿ ವೇಶ್ಯೆ ದರ್ಶನಂ ಪುಣ್ಯ ಲಾಭಂ ಎಂಬ ಮಾತಿದೆ. ಇವರಿಗೂ ಸಮಾನತೆಯ ಹಕ್ಕು ದೊರೆಯಬೇಕು' ಎಂದು ಮೈಸೂರಿನ ಉರಿಲಿಂಗಪೆದ್ದಿ ಮಠದ ಜ್ಞಾನ ಪ್ರಕಾಶ ಸ್ವಾಮೀಜಿ ಅಭಿಪ್ರಾಯಪಟ್ಟರು.

ನಗರದಲ್ಲಿ 'ಅನೇಕ', 'ವಿಸ್ತಾರ್', 'ಲಶ್' ಸಹಯೋಗದಲ್ಲಿ ಆಯೋಜಿಸಿದ್ದ 'ಧರ್ಮ ಮತ್ತು ಲಿಂಗತ್ವ, ಲೈಂಗಿಕತೆ' ಕುರಿತ ವಿಚಾರ ಸಂಕಿರಣದಲ್ಲಿ ಅವರು ಶನಿವಾರ ಮಾತನಾಡಿದರು.

'ಸಂಕಷ್ಟದಲ್ಲಿರುವ ಜನರ ಕಣ್ಣೀರು ಒರೆಸಲು ಧರ್ಮವು ಜನರಿಗೆ ಮಾರ್ಗದರ್ಶನ ನೀಡಬೇಕು. ನೀವು ಉತ್ತಮ ಹಿಂದೂ, ಮುಸ್ಲಿಂ, ಕ್ರೈಸ್ತ ಎಂದು ಯಾವುದೇ ಧರ್ಮವು ಯಾವತ್ತೂ ಹೇಳುವುದಿಲ್ಲ. ಒಳ್ಳೆಯ ಮಾನವನಾಗು ಎನ್ನುವ ಸಂದೇಶ ಸಾರುತ್ತಿರುವ ನಮ್ಮ ಸಂವಿಧಾನವು ಸಮಾನತೆ, ಘನತೆ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕನ್ನು ನೀಡುತ್ತದೆ' ಎಂದು ಹೇಳಿದರು.

ಜಮಾಅತೆ ಇಸ್ಲಾಮಿ ಹಿಂದ್ ರಾಜ್ಯ ಕಾರ್ಯದರ್ಶಿ ಅಕ್ಬಲ್ ಅಲಿ, 'ಸಮಾಜ ಕಡೆಗಣಿಸಿರುವ ಸಮುದಾಯವನ್ನು ಪ್ರೀತಿ ಮತ್ತು ವಾತ್ಸಲ್ಯದ ಮೂಲಕ ಒಪ್ಪಿಕೊಳ್ಳುವ ಮನಸ್ಥಿತಿ ಮೂಡಿಸುವ ಪ್ರಯತ್ನಗಳು ನಡೆಯಬೇಕಾಗಿವೆ' ಎಂದು ಹೇಳಿದರು.

ಕ್ಯಾಥೊಲಿಕ್ ಪಾದ್ರಿ ಮತ್ತು ಸಾಮಾಜಿಕ ಕಾರ್ಯಕರ್ತ ಜಾರ್ಜ್ ಕಣ್ಣಂತನಂ, 'ಜಾತಿ ಮತ್ತು ವರ್ಗಗಳ ಆಧಾರದ ಮೇಲೆ ಸಮಾಜವು ವಿಭಜನೆಗೊಂಡಿದೆ. ವಿಭಜನೆಯು ದೇಶಕ್ಕೆ ಅಪಾಯಕಾರಿ ಪರಿಸ್ಥಿತಿ ತಂದೊಡ್ಡಲಿದೆ. ಆದ್ದರಿಂದ, ಎಲ್ಲರೂ ಸರಿಸಮಾನರು ಎಂಬ ಸಂದೇಶವನ್ನು ಸಾರುವ ಮತ್ತು ಅನುಷ್ಠಾನಗೊಳಿಸುವ ಪ್ರಯತ್ನಗಳು ನಿರಂತರವಾಗಿ ನಡೆಯಬೇಕಾಗಿದೆ' ಎಂದು ಪ್ರತಿಪಾದಿಸಿದರು.

'ಸಮುದಾಯದ ಸವಾಲುಗಳು ಮತ್ತು ಕಾನೂನುಗಳು' ಕುರಿತು ರಂಗ ಕಲಾವಿದೆ ಮತ್ತು ಸಾಮಾಜಿಕ ಹೋರಾಟಗಾರ್ತಿ ಎ.ರೇವತಿ ವಿವರಿಸಿದರು. ಕರ್ನಾಟಕ ಲೈಂಗಿಕ ಅಲ್ಪಸಂಖ್ಯಾತರ ವೇದಿಕೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ಸಿ. ಅಕ್ಷತಾ, ಕೆಎಸ್‌ಎಂಎಫ್‌ನ ರಾಜ್ಯ ಸಂಯೋಜಕ ಮಲ್ಲಪ್ಪ ಕಂಬಾರ ಇದ್ದರು.


ವಿಚಾರ ಸಂಕಿರಣದಲ್ಲಿ ಜಾರ್ಜ್ ಕಣ್ಣಂತನಂ ಮತ್ತು ಜ್ಞಾನ ಪ್ರಕಾಶ ಸ್ವಾಮೀಜಿ ಚರ್ಚಿಸಿದರು. ಜಮಾಅತೆ ಇಸ್ಲಾಮಿ ಹಿಂದ್ ರಾಜ್ಯ ಕಾರ್ಯದರ್ಶಿ ಅಕ್ಬಲ್ ಅಲಿ ಇದ್ದರು —ಪ್ರಜಾವಾಣಿ ಚಿತ್ರ

'ನಾಟಕಗಳಲ್ಲಿ ಮಾಹಿತಿ ಭಾರವಾಗದಿರಲಿ'

ಬೆಂಗಳೂರು: 'ಐತಿಹಾಸಿಕ ನಾಟಕಗಳಲ್ಲಿ ವ್ಯಕ್ತಿಗಿಂತ ಸನ್ನಿವೇಶಗಳಿಂದ ರೂಪುಗೊಳ್ಳುವ ಪಾತ್ರಗಳೇ ಮುಖ್ಯವಾಗುತ್ತಿವೆ' ಎಂದು ಕವಿ, ನಾಟಕಕಾರ ಎಚ್‌.ಎಸ್. ಶಿವಪ್ರಕಾಶ್ ಅಭಿಪ್ರಾಯಪಟ್ಟರು.

ನಗರದಲ್ಲಿ ಶನಿವಾರ ನಡೆದ ಜಯರಾಮ್ ರಾಯಪುರ ಅವರ 'ವಾರಸುದಾರಾ' ನಾಟಕ ಕೃತಿ ಬಿಡುಗಡೆ ಮಾಡಿ ಮಾತನಾಡಿದ ಅವರು, 'ಇತಿಹಾಸದ ಪ್ರಸಂಗಗಳನ್ನು ನಾಟಕ ಮಾಡುವ ಹೊತ್ತಿನಲ್ಲಿ ಕೃತಿಕಾರ ಬಹು ಎಚ್ಚರಿಕೆಯಿಂದ ಇರಬೇಕಾಗುತ್ತದೆ. ಇಂತಹ ನಾಟಕಗಳಲ್ಲಿ ಇತಿಹಾಸದ ಮಾಹಿತಿಗಳೇ ತುಂಬಿಕೊಂಡು ಭಾರವಾಗಬಾರದು. ಮಹಾಚೈತ್ರ ಹೊರತುಪಡಿಸಿ ಬಹುತೇಕ ಐತಿಹಾಸಿಕ ನಾಟಕಗಳು ವ್ಯಕ್ತಿ ಕೇಂದ್ರಿತವಾಗಿವೆ' ಎಂದು ಅಭಿಪ್ರಾಯಪಟ್ಟರು.

'ನಾಟಕಗಳ ಇತಿಹಾಸ ಸುದೀರ್ಘವಾಗಿದೆ. ಇವುಗಳಲ್ಲಿ ಇತಿಹಾಸದ ವಿಷಯವೇ ಪ್ರಮುಖವಾಗಿದೆ. ಕನ್ನಡದಲ್ಲೂ ಹಲವು ಐತಿಹಾಸಿಕ ನಾಟಕಗಳಿವೆ. ಐತಿಹಾಸಿಕ ನಾಟಕಗಳು ಸಂಘರ್ಷದ ಬಗ್ಗೆ ಅವಲೋಕನ ಮಾಡದಿದ್ದರೆ ನೀರಿನ ಮೇಲಿನ ಗುಳ್ಳೆಯಾಗುತ್ತವೆ. ಇತಿಹಾಸ ನಿಯಂತ್ರಿಸುವ ಶಕ್ತಿಗಳು ಕೆಲಸ ಮಾಡುತ್ತವೆ' ಎಂದು ವಿವರಿಸಿದರು.


ಸಂಸದ ಬಿ.ಎನ್. ಬಚ್ಚೇಗೌಡ, ನಿವೃತ್ತ ಐಎಎಸ್ ಅಧಿಕಾರಿ ವಿಠಲ ಮೂರ್ತಿ, ಜಯರಾಮ್ ರಾಯಪುರ ಇದ್ದರು. ನಿರ್ದೇಶಕ ಎಂ.ಎಸ್.ಸತ್ಯು ಅವರ ನಿರ್ದೇಶನದಲ್ಲಿ ಸಮುದಾಯ ತಂಡದವರಿಂದ 'ವಾರಸುದಾರಾ' ನಾಟಕವನ್ನು ಪ್ರದರ್ಶಿಸಲಾಯಿತು.


ನಗರದಲ್ಲಿ ಶನಿವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ 'ವಾರಸುದಾರಾ' ಪುಸ್ತಕ ಬಿಡುಗಡೆ ಮಾಡಿದ ಕವಿ, ನಾಟಕಕಾರ ಎಚ್‌.ಎಸ್. ಶಿವಪ್ರಕಾಶ್ ಅವರು ಸಂಸದ ಬಚ್ಚೇಗೌಡ ಅವರಿಗೆ ಪ್ರತಿಯನ್ನು ನೀಡಿದರು. ಕೃತಿಯ ಲೇಖಕ ಜಯರಾಮ್ ರಾಯಪುರ, ಐ.ಎಂ ವಿಠಲಮೂರ್ತಿ, ಎಂ.ಎಸ್ ಸತ್ಯು ಇದ್ದರು



ಕಾಯಂ ಹೆಚ್ಚುವರಿ ನ್ಯಾಯಮೂರ್ತಿಗಳಾಗಿ ಪ್ರಮಾಣವಚನ


ಪ್ರಜಾವಾಣಿ ವಾರ್ತೆ



ಬೆಂಗಳೂರು: ರಾಜ್ಯ ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಮೂರ್ತಿಗಳಾಗಿ ಕಾಯಂಗೊಂಡ 10 ನ್ಯಾಯಮೂರ್ತಿಗಳಿಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ರಾಜಭವನದ ಗಾಜಿನ ಮನೆಯಲ್ಲಿ ಶನಿವಾರ ಪ್ರಮಾಣ ವಚನ ಬೋಧಿಸಿದರು.

ಹೆಚ್ಚುವರಿ ನ್ಯಾಯಮೂರ್ತಿಗಳಾದ ಶಿವಶಂಕರ್ ಅಮರಣ್ಣವರ್, ಮಕ್ಕಿಮನೆ ಎಂ. ಗಣೇಶಯ್ಯ ಉಮಾ, ವೇದವ್ಯಾಸಚಾರ್ ಶ್ರೀಶಾನಂದ, ಹಂಚಟೆ ಸಂಜೀವಕುಮಾರ್, ಪದ್ಮರಾಜ್ ನೇಮಚಂದ್ರ ದೇಸಾಯಿ, ಪಿ. ಕೃಷ್ಣ ಭಟ್, ಮರಳೂರು ಇಂದ್ರಕುಮಾರ್ ಅರುಣ್, ಇಂಗಳಗುಪ್ಪೆ ಸೀತಾರಾಮಯ್ಯ ಇಂದಿರೇಶ್, ರವಿ ವೆಂಕಪ್ಪ ಹೊಸಮನಿ ಮತ್ತು ಸವಣೂರು ವಿಶ್ವಜೀತ್ ಶೆಟ್ಟಿ ಅವರು ಪ್ರಮಾಣ ವಚನ ಸ್ವೀಕರಿಸಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಹೈಕೋರ್ಟ್ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮಾ, ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್ ಉಪಸ್ಥಿತರಿದ್ದರು.



ವಂಡರ್‌ಲಾ: ಉಚಿತ ಪ್ರವೇಶ ಇಂದು

ರಾಮನಗರ: ಅಂತರರಾಷ್ಟ್ರೀಯ ಪುತ್ರಿಯರ ದಿನಾಚರಣೆ ಪ್ರಯುಕ್ತ ಇದೇ 26ರಂದು ಬಿಡದಿಯ ವಂಡರ್ ಲಾ ಅಮ್ಯೂಸ್‌ಮೆಂಟ್ ಪಾರ್ಕ್ ಎಲ್ಲ ಪುತ್ರಿಯರಿಗೆ ಉಚಿತ ಪ್ರವೇಶ ನೀಡಲಿದೆ.

ಪುತ್ರಿಯರು ತಮ್ಮ ಪೋಷಕರ ಜೊತೆ ಪಾರ್ಕ್‌ಗೆ ಭೇಟಿ ನೀಡಬೇಕು. ತಾವು ಅವರ ಪುತ್ರಿ ಎಂಬುದನ್ನು ಖಚಿತಪಡಿಸುವ ದಾಖಲೆ ದಾಖಲೆ ತೋರಿಸಬೇಕು. ಮಾಹಿತಿಗಾಗಿ ಸಂಸ್ಥೆಯ ವೆಬ್‌ಸೈಟ್ www.wonderla.com ಗೆ ಭೇಟಿ ನೀಡಬಹುದು ಎಂದು ಪ್ರಕಟಣೆ ತಿಳಿಸಿದೆ.

ಶ್ರೀ ಜಗದಂಬಾ ವಿದ್ಯಾವರ್ಧಕ ಸಂಘ, ತಾಂಬಾ

ದೇವರಹಿಪ್ಪರಗಿ ರೋಡ್ ತಾಂಬಾ –586215 ತಾ. ಇಂಡಿ ಜಿ. ವಿಜಯಪುರ ಮೊ: 9483549999

ಎಸ್‌ಜೆವಿವಿ/ಪಿಯುಸಿ/ಖಾ.ಹು.ತು.ಮರುಜಾಹೀರಾತು/2021–22 ದಿನಾಂಕ : 25.09.2021

ಬೇಕಾಗಿದ್ದಾರೆ (ಮರು ಜಾಹೀರಾತು)

ಮಾನ್ಯ ನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ ಬೆಂಗಳೂರು ಇವರ ಪತ್ರ ಸಂಖ್ಯೆ : ಪಪೂಶಿ/ಸಿ–3/ಇಇ087/ಉಹುತುಂಅನು/2017–18 ದಿನಾಂಕ : 05.08.2019ರ ಪ್ರಕಾರ ಸಂಸ್ಥೆಯ ಅಡಿಯಲ್ಲಿ ನಡೆಯುತಿರುವ ಅನುದಾನಿತ ಶ್ರೀ ಜಗದಂಬಾ ಸ್ವತಂತ್ರ ಪದವಿ ಪೂರ್ವ ಕಲಾ ವಾಣಿಜ್ಯ ಹಾಗೂ ವಿಜ್ಞಾನ ಕಾಲೇಜು ಹಿಟ್ಟಿನಹಳ್ಳಿ ತಾಂಡಾ ತಾಲೂಕ ದೇವರಹಿಪ್ಪರಗಿ ಜಿಲ್ಲೆ ವಿಜಯಪುರ ಇಲ್ಲಿ ವಯೋನಿವೃತ್ತಿ ಹಾಗೂ ನಿಧನ ದಿಂದ ಕನ್ನಡ ಭಾಷೆ ಉಪನ್ಯಾಸಕರು. ದೈಹಿಕ ಶಿಕ್ಷಣ ಉಪನ್ಯಾಸಕರು ತೆರವಾಗಿರುವ ಹುದ್ದೆಗಳನ್ನು ನೇಮಕಾತಿ ಮಾಡಿಕೊಳ್ಳಲು ಅನುಮತಿ ನೀಡಿದ್ದರ ಪ್ರಯುಕ್ತ ಸದರಿ ಹುದ್ದೆಗಳನ್ನು ನೇಮಕಾತಿ ಮಾಡಿಕೊಳ್ಳಲು ದಿನಾಂಕ : 23.03.2020 ಪತ್ರಿಕೆಯಲ್ಲಿ ಪ್ರಕಟಣೆ ನೀಡಲಾಗಿತ್ತು. ಕೋವಿಡ್–19 ದಿಂದ ಸದರಿ ಹುದ್ದೆಗಳನ್ನು ನೇಮಕಾತಿ ಮಾಡಿಕೊಳ್ಳುವುದು ವಿಳಂಬವಾಗಿರುತ್ತದೆ. ಮಾನ್ಯ ನಿರ್ದೇಶಕರು ಪ.ಪು.ಶಿ. ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ ಪಪೂಶಿ/ಸಿ/–3/ಇಇ087/ಯಹುಂಅನು/2017–18 ದಿನಾಂಕ 09.09.2021ರ ಪ್ರಕಾರ ಮರು ಜಾಹೀರಾತು ನೀಡಿ ನೇಮಕಾತಿ ಮಾಡಿಕೊಳ್ಳಲು ಅನುಮತಿ ನೀಡಿದ್ದರ ಪ್ರಯುಕ್ತ ಈ ಕೆಳಕಂಡ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅ. ನಂ	ಹುದ್ದೆ ಪದನಾಮ	ವಿಷಯ	ವಿದ್ಯಾರ್ಹತೆ	ಮಿಸಲಾತಿ ಗುಂಪು	ಮಿಸಲಾತಿ ಸೂಚ್ಯಾಂಕ	ಹುದ್ದೆಗಳ ಸಂಖ್ಯೆ	ಮಾಧ್ಯಮ
1)	ಕನ್ನಡ ಭಾಷಾ ಉಪನ್ಯಾಸಕರು	ಕನ್ನಡ	ಎಂ.ಎ.ಬಿ.ಎಡ ಶೇ.55%	ಪರಿಶಿಷ್ಟ ಪಂಗಡ (ಎಸ.ಟಿ)(ಬ್ಯಾಕಲಾಗ)	3	1	ಕನ್ನಡ
2)	ದೈಹಿಕ ಶಿಕ್ಷಣ ಉಪನ್ಯಾಸಕರು	ದೈಹಿಕ ಶಿಕ್ಷಣ	ಎಂ.ಪಿ.ಎಡ. ಪಿಎಚ್.ಡಿ ಕೆ.ಸೆಟ್/ನೆಟ್/ ಶೇ.55%	ದೈಹಿಕ ಶಿಕ್ಷಣ ಶಿಕ್ಷಕರ ಹುದ್ದೆಯ ಏಕ ವೃಂದ ಹುದ್ದೆಯಾಗಿದ್ದು ಮೀಸಲಾತಿ ನಿಯಮಗಳು ಅನ್ವಯವಾಗುವುದಿಲ್ಲ	–	1	ಕನ್ನಡ

ಅಭ್ಯರ್ಥಿಗಳು ಈ ಪ್ರಕಟಣೆಯಾದ 21 ದಿನದ ಒಳಗೆ ನಮ್ಮ ಎಲ್ಲಾ ವಿವರಗಳೊಂದಿಗೆ ರೂ.500/– ಪೋಸ್ಟಲ್ ಆರ್ಡರನ್ನು ಲಗತ್ತಿಸಿ ಅರ್ಜಿಗಳನ್ನು ಶ್ರೀ ಜಗದಂಬ ವಿದ್ಯಾವರ್ಧಕ ಸಂಘ, ತಾಂಬಾ ತಾಲೂಕು ಇಂಡಿ, ಜಿಲ್ಲಾ ವಿಜಯಪುರ ಈ ವಿಳಾಕ್ಕೆ ಸಲ್ಲಿಸಬೇಕು. ಅರ್ಜಿಯ ಒಂದು ಪ್ರತಿಯನ್ನು ಮಾನ್ಯ ಉಪನಿರ್ದೇಶಕರು. ಪ.ಪೂ.ಶಿ. ಇಲಾಖೆ ವಿಜಯಪುರ ಇವರಿಗೆ ಸಲ್ಲಿಸಬೇಕು. ಸದರಿ ನೇಮಕಾತಿಯ ಪದವಿ ಪೂರ್ವ ಶಿಕ್ಷಣ ಇಲಾಖೆಯು ನಿಗಡಿಪಡಿಸಿದ ನಿಯಮಕ್ಕೆ ಒಳಪಟ್ಟಿರುತ್ತದೆ. ಅರ್ಹ ಅಭ್ಯರ್ಥಿಳಿಗೆ ಸಂದರ್ಶನ ದಿನಾಂಕ ಮತ್ತು ಸ್ಥಳ ನಂತರ ತಿಳಿಸಲಾಗುವುದು.

ಸಹಿ/–
ಅಧ್ಯಕ್ಷರು, ಶ್ರೀ ಜಗದಂಬಾ ವಿದ್ಯಾವರ್ಧಕ ಸಂಘ
ತಾಂಬಾ ತಾ.ಇಂಡಿ. ಜಿ. ವಿಜಯಪುರ

ಸ್ಥಳ : ತಾಂಬಾ
ದಿನಾಂಕ: 25.09.2021

'ಸ್ವಂತ ಸೂರು' ಸಾಕಾರ ಮಾಡಿದ ಸೂರ್ಯ ಎಲಿಗೆನ್ಸ್

ವಸತಿ ಇಲಾಖೆ

ಕರ್ನಾಟಕ ಗೃಹ ಮಂಡಳಿ ಸಮುದಾಯ ನಿರ್ಮಾಣದತ್ತ

ಕರ್ನಾಟಕ ಗೃಹ ಮಂಡಳಿ



ಮಾನ್ಯ ವಸತಿ ಸಚಿವರು ಹಾಗೂ ಕರ್ನಾಟಕ ಗೃಹ ಮಂಡಳಿ ಅಧ್ಯಕ್ಷರಾದ ಶ್ರೀ ವಿ. ಸೋಮಣ್ಣ ರವರು ನಿವೇಶನಗಳ ಹಂಚಿಕೆ ಕಾರ್ಯಕ್ರಮದಲ್ಲಿ ಸಾರ್ವಜನಿಕರೊಂದಿಗೆ ಸಂವಾದದಲ್ಲಿ.

ಕರ್ನಾಟಕ ಗೃಹ ಮಂಡಳಿಯು ಸ್ವಂತ ಮನೆಯ ಆಕಾಂಕ್ಷಿಗಳಿಗೆ ಬಹುದೊಡ್ಡ ಆಶಾಕಿರಣ. ಮಂಡಳಿಯು ರಾಜ್ಯಾದ್ಯಂತ ಸಾರ್ವಜನಿಕರ ಅಭಿರುಚಿ ಮತ್ತು ಬೇಡಿಕೆಗೆ ತಕ್ಕಂತೆ ವಸತಿ ಸಮುಚ್ಚಯಗಳನ್ನು ನಿರ್ಮಿಸಿ ಅರ್ಹ ಅರ್ಜಿದಾರರಿಗೆ ಮನೆಗಳನ್ನು ಹಂಚಿಕೆ ಮಾಡುತ್ತಿದೆ.

ಪ್ರಸ್ತುತ 'ಸಾಫ್ಟ್‌ವೇರ್‌ಗಳ ಸ್ವರ್ಗ' ಬೆಂಗಳೂರು ಮಹಾನಗರದ ಸುಂದರ ತಾಣ, ಸ್ವಚ್ಛ ಪರಿಸರ ವಾತಾವರಣವುಳ್ಳ ಸೂರ್ಯನಗರ 1ನೇ ಹಂತದಲ್ಲಿ ನಿರ್ಮಿಸಿರುವ **"ಸೂರ್ಯ ಎಲಿಗೆನ್ಸ್"** ಬಹುಮಹಡಿ ವಸತಿ ಸಮುಚ್ಚಯವನ್ನು **ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿ** ಅವರು ಉದ್ಘಾಟಿಸಲಿದ್ದು, ಫ್ಲ್ಯಾಟ್‌ಗಳ ಹಂಚಿಕೆ ಪತ್ರಗಳನ್ನು **ಮಾನ್ಯ ವಸತಿ ಸಚಿವರಾದ ಶ್ರೀ ವಿ. ಸೋಮಣ್ಣ** ಅವರು ಹಸ್ತಾಂತರಿಸುವರು.


ಮಾಸ್ಕ್ ಧರಿಸಿ | ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ | ಸ್ವಯಂಪ್ರೇರಿತವಾಗಿ ಲಸಿಕೆ ಪಡೆಯಿರಿ

ಸೂರ್ಯನಗರ 1ನೇ ಹಂತದಲ್ಲಿ ನಿರ್ಮಿಸಲಾಗಿರುವ "ಸೂರ್ಯ ಎಲಿಗೆನ್ಸ್" ಬಹುಮಹಡಿ ವಸತಿ ಸಮುಚ್ಚಯದ

ಉದ್ಘಾಟನಾ ಸಮಾರಂಭ

ದಿನಾಂಕ: 26.09.2021, ಭಾನುವಾರ ಬೆಳಿಗ್ಗೆ 11.00 ಗಂಟೆಗೆ

ಸ್ಥಳ: 'ಸೂರ್ಯ ಎಲಿಗೆನ್ಸ್' ಆವರಣ, ಸೂರ್ಯನಗರ 1ನೇ ಹಂತ, ಆನೇಕಲ್ ಮುಖ್ಯರಸ್ತೆ, ಚಂದಾಪುರ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ.



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ವಸತಿ ಸಮುಚ್ಚಯದ ಉದ್ಘಾಟನೆ
ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ



ಘನ ಉಪಸ್ಥಿತಿ
ಶ್ರೀ ಎ. ನಾರಾಯಣಸ್ವಾಮಿ
ಮಾನ್ಯ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆ ರಾಜ್ಯ ಸಚಿವರು, ಭಾರತ ಸರ್ಕಾರ

ಹಂಚಿಕೆ ಪತ್ರಗಳ ಸಾಂಕೇತಿಕ ವಿತರಣೆ
ಶ್ರೀ ವಿ. ಸೋಮಣ್ಣ
ಮಾನ್ಯ ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು, ಕರ್ನಾಟಕ ಸರ್ಕಾರ
ಹಾಗೂ ಅಧ್ಯಕ್ಷರು, ಕರ್ನಾಟಕ ಗೃಹ ಮಂಡಳಿ

ಅಧ್ಯಕ್ಷತೆ
ಶ್ರೀ ಬಿ. ಶಿವಣ್ಣ
ಮಾನ್ಯ ಶಾಸಕರು
ಆನೇಕಲ್ ವಿಧಾನಸಭಾ ಕ್ಷೇತ್ರ

ಮುಖ್ಯ ಅತಿಥಿಗಳು

ಶ್ರೀ ಆರ್. ಅಶೋಕ
ಮಾನ್ಯ ಕಂದಾಯ ಸಚಿವರು
ಕರ್ನಾಟಕ ಸರ್ಕಾರ

ಶ್ರೀ ಡಿ.ಕೆ. ಸುರೇಶ್
ಮಾನ್ಯ ಸಂಸದರು
ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ

ಶ್ರೀ ಎಂ. ನಾರಾಯಣಸ್ವಾಮಿ
ಮಾನ್ಯ ಶಾಸಕರು (ವಿಧಾನಪರಿಷತ್)
ಹಾಗೂ ವಿರೋಧ ಪಕ್ಷದ ಮುಖ್ಯ ಸಚೇತಕರು

ಶ್ರೀ ಪುಟ್ಟಣ್ಣ
ಮಾನ್ಯ ಶಾಸಕರು (ವಿಧಾನಪರಿಷತ್)

ಶ್ರೀ ಅ. ದೇವೇಗೌಡ
ಮಾನ್ಯ ಶಾಸಕರು (ವಿಧಾನಪರಿಷತ್)

ಶ್ರೀ ಕೆ. ಜಯಣ್ಣ
ಮಾನ್ಯ ಅಧ್ಯಕ್ಷರು, ಆನೇಕಲ್ ಯೋಜನಾ ಪ್ರಾಧಿಕಾರ

ಕರ್ನಾಟಕ ಗೃಹ ಮಂಡಳಿಯ ಮಾನ್ಯ ಸದಸ್ಯರುಗಳು ಹಾಗೂ ಆನೇಕಲ್ ತಾಲ್ಲೂಕಿನ ಎಲ್ಲಾ ಚುನಾಯಿತ ಜನಪ್ರತಿನಿಧಿಗಳು.

ಸರ್ವರಿಗೂ ಆದರದ ಸ್ವಾಗತ

ಮನೋಜ್‌ಕುಮಾರ್ ಮೀನಾ, ಭಾಆಸೇ
ಸರ್ಕಾರದ ಕಾರ್ಯದರ್ಶಿಗಳು
ವಸತಿ ಇಲಾಖೆ, ಕರ್ನಾಟಕ ಸರ್ಕಾರ

ಡಿ.ಎಸ್. ರಮೇಶ್, ಭಾಆಸೇ
ಗೃಹ ಆಯುಕ್ತರು
ಕರ್ನಾಟಕ ಗೃಹ ಮಂಡಳಿ

ಕರ್ನಾಟಕ ಗೃಹ ಮಂಡಳಿ
3 ಮತ್ತು 4ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560009.

"ನಮ್ಮ ವೈವಿಧ್ಯಮಯ ಸಂಸ್ಕೃತಿಯ ಶ್ರೇಷ್ಠ ಪರಂಪರೆಯನ್ನು ಗೌರವಿಸುವುದು ಮತ್ತು ರಕ್ಷಿಸುವುದು"
– ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಕರ್ನಾಟಕ ಸರ್ಕಾರದ ರೇರಾ (RERA) ಸಂಖ್ಯೆ: PRM/KA/RERA/1251/308/PR/180208/001786, Dt: 31.08.2017 ಅಡಿಯಲ್ಲಿ ಮಂಡಳಿಯ ನಿವೇಶನಗಳು/ಮನೆಗಳನ್ನು ನೋಂದಾಯಿಸಲ್ಪಟ್ಟಿರುತ್ತದೆ.

ಈ ಯೋಜನೆಯಲ್ಲಿ ಹಂಚಿಕೆಗೆ ಲಭ್ಯವಿರುವ ನಿವೇಶನಗಳಿಗೆ ಅರ್ಜಿ ಸಲ್ಲಿಸುವ ವಿವರಗಳಿಗಾಗಿ ಕರ್ನಾಟಕ ಗೃಹ ಮಂಡಳಿಯ ಜಾಲತಾಣ www.khb.karnataka.gov.in ಸಂಪರ್ಕಿಸಿ.

ಯುಪಿಎಸ್‌ಸಿ: ಸಾಧನೆಗೈದ ಕನ್ನಡಿಗರು

ಬೆಂಗಳೂರು: ಕೇಂದ್ರ ಲೋಕಸೇವಾ ಆಯೋಗ ನಡೆಸಿದ ನಾಗರಿಕ ಸೇವಾ ಪರೀಕ್ಷೆಯಲ್ಲಿ 77ನೇ ರ‍್ಯಾಂಕ್ ಪಡೆದಿರುವ ಅಕ್ಷಯ್ ಸಿಂಹ ಕೆ.ಜೆ. ಮತ್ತು 252ನೇ ರ‍್ಯಾಂಕ್ ಪಡೆದಿರುವ ಅನಿರುದ್ಧ ಜಿ. ಗಂಗಾವರಂ 'ಪ್ರಜಾವಾಣಿ' ಶನಿವಾರ ನಡೆಸಿದ 'ಸೆಲೆಬ್ರಿಟಿ ಲೈವ್' ನೇರ ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ತಮ್ಮ ಅನುಭವಗಳನ್ನು ಹಂಚಿಕೊಂಡರು. ಇಬ್ಬರ ಮಾತಿನ ಸಂಕ್ಷಿಪ್ತ ರೂಪ ಇಲ್ಲಿದೆ.

ಸಂವಾದದ ವೀಕ್ಷಣೆಗೆ https://www.facebook.com/prajavani.net

ಪ್ರಜಾವಾಣಿ ಸಂವಾದ

ಗುಣಮಟ್ಟದ ಓದು, ಬರಹವೇ ಯಶಸ್ಸಿನ ಸಾಧನ



ನನ್ನ ತಂದೆ ಕಸ್ಟಮ್ಸ್‌ನಲ್ಲಿ ಸಹಾಯಕ ಆಯುಕ್ತರಾಗಿ ನಿವೃತ್ತರಾಗಿದ್ದಾರೆ. ಗೃಹಿಣಿಯಾಗಿರುವ ತಾಯಿ, ಅಣ್ಣ ಎಲ್ಲರ ನಿರಂತರ ಬೆಂಬಲ ಇತ್ತು. ದೊಡ್ಡಪ್ಪ ನಾಲ್ಕು ವರ್ಷಗಳಿಂದ ನನಗೆ ಮಾರ್ಗದರ್ಶನ ನೀಡಿದರು. ಮೊದಲ ಬಾರಿ ಅನುತ್ತೀರ್ಣನಾದರೂ ಎರಡನೇ ಪ್ರಯತ್ನದಲ್ಲಿ ಯಶಸ್ಸು ಲಭಿಸಿತು. ಕುಟುಂಬದಲ್ಲೇ ಅಧಿಕಾರಿಗಳಿದ್ದ ಕಾರಣ ಪದವಿ ಶಿಕ್ಷಣದ ಬಳಿಕ ನಾಗರಿಕ ಸೇವಾ ಪರೀಕ್ಷೆಯತ್ತ ಹೊರಳಿದೆ.

ಇನ್‌ಸೈಟ್ಸ್‌–ಐಎಎಸ್ ಸಂಸ್ಥೆಯ ವಿನಯಕುಮಾರ್ ಅವರ ತರಬೇತಿ ಮತ್ತು ಮಾರ್ಗದರ್ಶನ ನನ್ನ ಯಶಸ್ಸಿಗೆ ಮುಖ್ಯ ಕಾರಣ. ನಾನು ಕನ್ನಡವನ್ನು ಐಚ್ಛಿಕ ವಿಷಯವನ್ನಾಗಿ ಆಯ್ದುಕೊಂಡು ಪರೀಕ್ಷೆ ಬರೆದಿದ್ದೆ. ಮೊದಲು ವಾಸುದೇವ ನಾಡಿಗ್, ಜೈಸ್ ಅಕಾಡೆಮಿಯ ವೆಂಕಟೇಶಪ್ಪ ಅವರ ತರಬೇತಿಯೇ ಕನ್ನಡದಲ್ಲಿ ಗುರಿ ಮುಟ್ಟಲು ಮುಖ್ಯ ಕಾರಣ.

ಚಿಕ್ಕ ವಯಸ್ಸಿನಿಂದಲೂ ದಿನಪತ್ರಿಕೆ ಓದುವುದು ಮತ್ತು ಸುದ್ದಿವಾಹಿನಿಗಳ ವೀಕ್ಷಣೆಯಿಂದ ನಮ್ಮ ಯೋಚನಾ ವಿಧಾನವೇ ಬದಲಾಗುತ್ತದೆ. ಪದವಿ ಮುಗಿಯುವ ಹೊತ್ತಿಗೆ ನಾವು ಮಾನಸಿಕವಾಗಿ ಪರೀಕ್ಷೆಗೆ ಸಿದ್ಧವಾಗಿರುತ್ತೇವೆ. ಆಸಕ್ತಿ ಮುಖ್ಯ. ಪದವಿ ಹಂತದಲ್ಲಿ ಓದದ ವಿಷಯವನ್ನು ಆಯ್ಕೆ ಮಾಡಿದರೆ ತೊಂದರೆ ಆಗುತ್ತದೆ ಎನ್ನುವುದು ನಿಜವಲ್ಲ. ಹೆಚ್ಚು ಸಮಯ ಮೀಸಲಿಡುವುದಕ್ಕಿಂತಲೂ ಗುಣಮಟ್ಟದ ಓದು ಈ ವಿಷಯದಲ್ಲಿ ಪ್ರಯೋಜನಕಾರಿ.

ಓದುವುದರ ಜತೆಯಲ್ಲೇ ಬರೆಯುವುದನ್ನೂ ರೂಢಿಸಿಕೊಳ್ಳಬೇಕು. ನಾವು ಪರೀಕ್ಷೆ ಬರೆಯುವುದಕ್ಕಾಗಿ ಒಂದು ಭಾಷೆಯನ್ನು ಕಲಿತರೆ ಅನುಕೂಲವಾಗುವುದಿಲ್ಲ. ಸಹಜವಾಗಿ ನಮಗೆ ಹೆಚ್ಚು ಹಿಡಿತವಿರುವ ಮತ್ತು ಪ್ರಭಾವಶಾಲಿಯಾಗಿ ಅಭಿವ್ಯಕ್ತಿಸಲು ಸಾಧ್ಯವಿರುವ ಭಾಷೆಯಲ್ಲೇ ಪರೀಕ್ಷೆ ಬರೆಯುವುದು ಸೂಕ್ತ.

ದೆಹಲಿಯಲ್ಲೇ ತರಬೇತಿ ಪಡೆಯಬೇಕು ಎಂಬ ವಾದದಲ್ಲಿ ಹುರುಳಿಲ್ಲ. ಇನ್ನು ಕೆಲವು ವರ್ಷಗಳಲ್ಲಿ ಯಾವುದೇ ಭಾಗದಲ್ಲಿ ಕುಳಿತು ಬೇಕಿದ್ದರೂ ಪರೀಕ್ಷಾ ತಯಾರಿ ನಡೆಸಬಹುದು. ಸ್ವಂತ ಪರಿಶ್ರಮದಿಂದಲೇ ಪರೀಕ್ಷೆಯಲ್ಲಿ ಉತ್ತೀರ್ಣರಾದವರು ಇದ್ದಾರೆ. ಆದರೆ, ತರಬೇತಿ ಸಂಸ್ಥೆಯಲ್ಲಿ ಮಾರ್ಗದರ್ಶನ ಪಡೆದರೆ ಬೇಗ ಗುರಿ ತಲುಪಲು ಸಾಧ್ಯ ಎಂಬುದು ನನ್ನ ಅನುಭವ.

ಬೇರೆ ಬೇರೆ ದೇಶಗಳನ್ನು ಅರಿಯುವುದು ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತದ ಪ್ರತಿನಿಧಿಯಾಗಿ ಕೆಲಸ ಮಾಡುವ ಇಚ್ಛೆಯಿಂದ ವಿದೇಶಾಂಗ ಸೇವೆಯನ್ನು ಆಯ್ಕೆ ಮಾಡಿಕೊಂಡಿದ್ದೇನೆ. ಪಾರದರ್ಶಕವಾಗಿ, ಕಾನೂನು ಚೌಕಟ್ಟಿನಲ್ಲಿ ಕೆಲಸ ಮಾಡುವುದೇ ನಮ್ಮ ಮುಂದಿರುವ ಆದರ್ಶ.

ಯುಪಿಎಸ್‌ಸಿ ರೀತಿಯಲ್ಲಿ ಕೆಪಿಎಸ್‌ಸಿ ಕೂಡ ಆಗಬೇಕು. ಆಯೋಗಕ್ಕೆ ಶುದ್ಧಹಸ್ತರು ಮತ್ತು ತಜ್ಞರನ್ನು ನೇಮಿಸಿದರೆ ಕಳಂಕರಹಿತವಾಗಿ ನೇಮಕಾತಿ ನಡೆಯಲು ಸಾಧ್ಯ.

– **ಅಕ್ಷಯ್ ಸಿಂಹ ಕೆ.ಜೆ.**

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ
https://bit.ly/39Aem4f

ಉಳಿದೆಲ್ಲವನ್ನೂ ಮರೆತು ತಯಾರಿ ನಡೆಸಬೇಕು



ನಮ್ಮದು ಪುಸ್ತಕ ವ್ಯಾಪಾರದಲ್ಲಿ ತೊಡಗಿರುವ ಕುಟುಂಬ. ಈಗ ಅಮ್ಮ ಅಂಗಡಿ ನಡೆಸುತ್ತಿದ್ದು, ಬಿಬಿಎ ಮುಗಿದ ಬಳಿಕ ನಾನು ಸಹಾಯಕ್ಕೆ ನಿಂತಿದ್ದೆ. ನಮ್ಮ ಕುಟುಂಬದಲ್ಲಿ ಯಾರೂ ಅಧಿಕಾರಿಗಳಿಲ್ಲ. ಸರ್ಕಾರಿ ಸೇವೆಗೆ ಸೇರುತ್ತಿರುವವರಲ್ಲಿ ನಾನು ಮೊದಲಿಗ. ಎಂಟನೇ ತರಗತಿಯಿಂದಲೇ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿದ್ದೆ. ಪಿಯುಸಿ ಉಪನ್ಯಾಸಕಿ ವಾಣಿಶ್ರೀ ಅವರು ನನಗೆ ಯುಪಿಎಸ್‌ಸಿ ಪರೀಕ್ಷೆ ಬರೆಯುವಂತೆ ಸಲಹೆ ನೀಡಿದ್ದರು. ಅದೇ ಪ್ರೇರಣೆಯಿಂದ ತಯಾರಿ ನಡೆಸಿದೆ. ಅಮ್ಮ, ಕುಟುಂಬದವರು ಬೆಂಬಲವಾಗಿ ನಿಂತಿದ್ದರಿಂದ ಎರಡನೇ ಪ್ರಯತ್ನದಲ್ಲಿ ಯಶಸ್ಸು ಸಾಧ್ಯವಾಯಿತು.

ನಾನು ವಾಣಿಜ್ಯ ವಿಷಯ ಆಯ್ಕೆ ಮಾಡಿಕೊಂಡಿದ್ದೆ. ಇನ್‌ಸೈಟ್ಸ್‌–ಐಎಎಸ್‌ನಲ್ಲಿ ವಿನಯಕುಮಾರ್ ಮತ್ತು ಸುಧೀರ್ ಅವರ ತರಬೇತಿ, ಮಾರ್ಗದರ್ಶನದಿಂದ ಹೆಚ್ಚು ಅನುಕೂಲವಾಯಿತು. ವಾಣಿಜ್ಯ ವಿಷಯಕ್ಕೆ ಸೀಮಿತವಾಗಿ ದೆಹಲಿಯ ರ‍್ಯಾಂಕರ್ಸ್ ಕೋಚಿಂಗ್ ಸೆಂಟರ್‌ನಲ್ಲಿ ತರಬೇತಿ ಪಡೆದಿದ್ದೆ. ಇದರಿಂದ ಪರೀಕ್ಷೆಯನ್ನು ಸುಲಭವಾಗಿ ಎದುರಿಸಲು ಸಾಧ್ಯವಾಯಿತು.

ಶಾಲಾ ಶಿಕ್ಷಣದ ಹಂತದಿಂದಲೇ ದಿನಪತ್ರಿಕೆಗಳನ್ನು ಓದುವುದನ್ನು ಅಭ್ಯಾಸ ಮಾಡಿಕೊಳ್ಳಬೇಕು. ಚರ್ಚೆ, ಸಂವಾದ, ಸಮಕಾಲೀನ ವಿಚಾರಗಳ ಕುರಿತು ವಿಶ್ಲೇಷಣಾತ್ಮಕವಾಗಿ ಯೋಚಿಸುವುದರಿಂದ ನಾವು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಧೈರ್ಯದಿಂದ ಎದುರಿಸಲು ಸಾಧ್ಯ. ಪದವಿ ಶಿಕ್ಷಣದ ಹಂತದಲ್ಲಿನ ಓದು ಬಹಳ ಮುಖ್ಯ. ಗಂಭೀರವಾಗಿ ಓದುವುದು ಅಭ್ಯಾಸವಾದರೆ ಪರೀಕ್ಷೆ ಎದುರಿಸುವುದು ಸುಲಭ.

ನಮಗೆ ಹಿಡಿತವಿರುವ ಮತ್ತು ಸುಲಭವಾಗಿ ಬಳಕೆ ಮಾಡಲು ಸಾಧ್ಯವಿರುವ ಭಾಷೆಯಲ್ಲೇ ಯುಪಿಎಸ್‌ಸಿ ಪರೀಕ್ಷೆ ಬರೆಯಬೇಕು. ವಿಷಯಗಳ ಆಯ್ಕೆಯಲ್ಲೂ ಇದೇ ಮಾನದಂಡ ಆಗಬೇಕು. ಪದವಿಯಲ್ಲಿ ಓದಿದ ವಿಷಯಗಳೇ ಆಗಿದ್ದರೆ ಹೆಚ್ಚು ಅನುಕೂಲ ಆಗುತ್ತದೆ. ಒಮ್ಮೆ ಪರೀಕ್ಷೆಗೆ ತಯಾರಿ ಆರಂಭಿಸಿದರೆ ಉಳಿದ ಎಲ್ಲವನ್ನೂ ಮರೆತು ಅದರಲ್ಲೇ ಮುಂದುವರಿಯುವ ಏಕಾಗ್ರತೆಯನ್ನು ಸಾಧಿಸಿಕೊಳ್ಳುವುದರಿಂದ ಯಶಸ್ಸು ಲಭಿಸಲು ಸಾಧ್ಯ.

ನನ್ನ ರ‍್ಯಾಂಕಿಂಗ್ ಆಧಾರದಲ್ಲಿ ಭಾರತೀಯ ಕಂದಾಯ ಸೇವೆ ಅಡಿಯಲ್ಲಿ ಕಸ್ಟಮ್ಸ್ ಇಲಾಖೆಯಲ್ಲಿ ಹುದ್ದೆ ದೊರಕುವ ಸಾಧ್ಯತೆ ಇದೆ. ಕಸ್ಟಮ್ಸ್ ಇಲಾಖೆಯಲ್ಲಿ ದೇಶದ ಒಳಿತಿಗಾಗಿ ಕೆಲಸ ಮಾಡಲು ಸಾಕಷ್ಟು ಅವಕಾಶಗಳಿವೆ. ಕಾನೂನಿನ ಚೌಕಟ್ಟಿನಲ್ಲಿ ಜನರ ಜೀವನಮಟ್ಟ ಸುಧಾರಣೆಗೆ ಪೂರಕವಾಗಿ ಕೆಲಸ ಮಾಡುವುದೇ ನನ್ನ ಗುರಿ.

– **ಅನಿರುದ್ಧ ಜಿ. ಗಂಗಾವರಂ**

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ
https://bit.ly/3zGSIG8

ರೈತನ ಮಗನ ಸಾಧನೆ



ಚಾಮರಾಜನಗರ: ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ ಹಳ್ಳದಮಾದಹಳ್ಳಿಯ ರೈತ ದಂಪತಿ ರುದ್ರಾರಾಧ್ಯ ಹಾಗೂ ಮಮತಾಮಣಿ ಅವರ ಪುತ್ರ ಎಚ್‌.ಆರ್‌.ಪ್ರಮೋದ್ ಆರಾಧ್ಯ, ಯುಪಿಎಸ್‌ಸಿ ಪರೀಕ್ಷೆಯಲ್ಲಿ 601ನೇ ರ‍್ಯಾಂಕ್ ಪಡೆದಿದ್ದಾರೆ.

ಮೆಕ್ಯಾನಿಕಲ್ ಎಂಜಿನಿಯರಿಂಗ್ ಪದವೀಧರರಾಗಿರುವ ಅವರು ಮೂರನೇ ಪ್ರಯತ್ನದಲ್ಲಿ ಈ ಸಾಧನೆ ಮಾಡಿದ್ದಾರೆ.

'ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ದೊರಕಿದ ವಿದ್ಯಾರ್ಥಿ ವೇತನವು ದೆಹಲಿಯಲ್ಲಿ ತರಬೇತಿ ಪಡೆಯಲು ನೆರವಾಯಿತು. ಶೈಕ್ಷಣಿಕವಾಗಿ, ಆರ್ಥಿಕವಾಗಿ ಹಿಂದುಳಿದಿರುವ ಚಿಕ್ಕ ಜಿಲ್ಲೆಯಿಂದ ಯುಪಿಎಸ್‌ಸಿಗೆ ಆಯ್ಕೆಯಾಗಿರುವುದಕ್ಕೆ ಸಂತಸವಾಗಿದೆ. ಕೃಷಿಯಲ್ಲಿ ತೊಡಗಿರುವ ಪೋಷಕರು ಬೆಂಬಲ ನೀಡಿದರು. ಸ್ನೇಹಿತರು ಹಾಗೂ ಬೋಧಕರ ಮಾರ್ಗದರ್ಶನ, ಸಲಹೆಯಿಂದ ಈ ಸಾಧನೆ ಸಾಧ್ಯವಾಗಿದೆ' ಎಂದು ಪ್ರಮೋದ್ 'ಪ್ರಜಾವಾಣಿ'ಗೆ ತಿಳಿಸಿದರು.

ಬಿ.ವಿ.ಶ್ರೀದೇವಿಗೆ 573ನೇ ರ‍್ಯಾಂಕ್



ಹಗರಿಬೊಮ್ಮನಹಳ್ಳಿ: ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ)ದ ನಾಗರಿಕ ಸೇವೆಗಳ ನೇಮಕಾತಿ ಪರೀಕ್ಷೆಯಲ್ಲಿ ತಾಲ್ಲೂಕಿನ ಬನ್ನಿಕಲ್ಲು ಗ್ರಾಮದ ಬಿ.ವಿ.ಶ್ರೀದೇವಿ ಅವರು 573ನೇ ರ‍್ಯಾಂಕ್ ಪಡೆದಿದ್ದಾರೆ.

ಪಟ್ಟಣದ ವಕೀಲರಾದ ಬಿ.ವಿ.ಶಿವಯೋಗಿ ಮತ್ತು ಬಿ.ವಿ. ಇಂದಿರಾ ಅವರ ಪುತ್ರಿಯಾಗಿರುವ ಇವರು ಪಟ್ಟಣದ ರಾಷ್ಟ್ರೋತ್ಥಾನ ಪರಿಷತ್‌ನಲ್ಲಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣವನ್ನು ವಿದ್ಯಾಭ್ಯಾಸವನ್ನು, ಪದವಿ ಪೂರ್ವ ಶಿಕ್ಷಣವನ್ನು ಹುಬ್ಬಳ್ಳಿಯ ಚೇತನಾ ಕಾಲೇಜ್, ಮೈಸೂರಿನ ಜೆ.ಸಿ.ಇ ಕಾಲೇಜ್‌ನಲ್ಲಿ ಬಿ.ಇ(ಇ ಅಂಡ್ ಸಿ) ವಿದ್ಯಾಭ್ಯಾಸ ಮಾಡಿ ಸದ್ಯ ಗುಜರಾತ್‌ನ ಐಎಫ್‌ಎಸ್‌ಎ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಎರಡನೇ ಯತ್ನದಲ್ಲಿಯೇ ಅವರು ಪಾಸಾಗಿದ್ದಾರೆ.

115ನೇ ರ‍್ಯಾಂಕ್ ಪಡೆದ ಯತೀಶ್



ರಾಮನಗರ: ಕನಕಪುರದವರಾದ ಆರ್. ಯತೀಶ್ ಈ ಬಾರಿಯ ಯುಪಿಎಸ್‌ಸಿ ಪರೀಕ್ಷೆಯಲ್ಲಿ 115ನೇ ರ‍್ಯಾಂಕ್ ಪಡೆದಿದ್ದು, ರ‍್ಯಾಂಕ್ ಪಟ್ಟಿಯಲ್ಲಿ ರಾಜ್ಯಕ್ಕೆ ಎರಡನೇ ಸ್ಥಾನವನ್ನು ತಮ್ಮದಾಗಿಸಿಕೊಂಡಿದ್ದಾರೆ.

ಯತೀಶ್ 2017ರಿಂದ ಯುಪಿಎಸ್‌ಸಿ ಪರೀಕ್ಷೆ ಬರೆಯುತ್ತಿದ್ದು, 2019ರಲ್ಲಿ ತಮ್ಮ ಎರಡನೇ ಪ್ರಯತ್ನದಲ್ಲಿ ಐಪಿಎಸ್ ಹುದ್ದೆಗಳಿಸಿ ಅಸ್ಸಾಂ–ಮೇಘಾಲಯ ಕೇಡಾರ್ ಅಧಿಕಾರಿಯಾಗಿ ನೇಮಕಗೊಂಡಿದ್ದರು. ನಂತರ ಕರ್ತವ್ಯದಿಂದ ರಜೆ ಪಡೆದು, ಮೂರನೇ ಪ್ರಯತ್ನದಲ್ಲಿ ಐಎಎಸ್ ಅಧಿಕಾರಿಯಾಗುವ ಕನಸು ನನಸು ಮಾಡಿಕೊಂಡಿದ್ದಾರೆ.

ಕನಕಪುರದಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿ, ಮುಂದಿನ ಓದಿಗಾಗಿ ಬೆಂಗಳೂರಿನತ್ತ ಮುಖ ಮಾಡಿದರು. ಆರ್‌.ವಿ. ಎಂಜಿನಿಯರಿಂಗ್ ಕಾಲೇಜಿನಲ್ಲಿ ಎಲೆಕ್ಟ್ರಾನಿಕ್ ಮತ್ತು ಕಮ್ಯುನಿಕೇಶನ್ ವಿಭಾಗದಲ್ಲಿ ಪದವಿ ಪಡೆದಿದ್ದಾರೆ. ಅವರ ತಂದೆ ರಾಧಾಕೃಷ್ಣ ನಿವೃತ್ತ ಅಧಿಕಾರಿ ಹಾಗೂ ತಾಯಿ ರಜನಿ ಗೃಹಿಣಿ. 'ರ‍್ಯಾಂಕ್ ಆಧಾರದ ಮೇಲೆ ಈ ಬಾರಿ ಐಎಎಸ್ ಅಧಿಕಾರಿಯಾಗಿ ಆಯ್ಕೆ ಆಗುವ ಸಾಧ್ಯತೆ ಇದ್ದು, ಕರ್ನಾಟಕದಲ್ಲೇ ಸೇವೆ ಸಲ್ಲಿಸುವ ಹಂಬಲ ಇದೆ' ಎಂದರು.

'ಮನೋಬಲ ತುಂಬಲು 'ಇನ್‌ಸೈಟ್ಸ್ ಐಎಎಸ್' ವಿಭಿನ್ನ ಮಾರ್ಗ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಲೋಕಸೇವಾ ಆಯೋಗದ (ಯುಪಿಎಸ್‌ಸಿ) ನಾಗರಿಕ ಸೇವೆಗಳ ಪರೀಕ್ಷೆಗಳಿಗೆ ತರಬೇತಿಗೆ ಹೆಸರುವಾಸಿಯಾದ 'ಇನ್‌ಸೈಟ್ಸ್ ಐಎಎಸ್' ಸಂಸ್ಥೆಯಲ್ಲಿ ತರಬೇತಿ ಪಡೆದ ಅಭ್ಯರ್ಥಿಗಳು ಶುಕ್ರವಾರ ಪ್ರಕಟಗೊಂಡ 2020ನೇ ಸಾಲಿನ ಫಲಿತಾಂಶದಲ್ಲೂ ಅತ್ಯುತ್ತಮ ಸಾಧನೆ ಮಾಡಿದ್ದಾರೆ. ಈ ಬಾರಿ 77ನೇ ರ‍್ಯಾಂಕ್ ಗಳಿಸಿ ರಾಜ್ಯಕ್ಕೇ ಮೊದಲಿಗರಾಗಿರುವ ಕೆ.ಜೆ. ಅಕ್ಷಯ್ ಸಿಂಹ ಸೇರಿ ರಾಜ್ಯದ 30 ಅಭ್ಯರ್ಥಿಗಳು ಈ ಬಾರಿ ರ‍್ಯಾಂಕ್ ಪಟ್ಟಿಯಲ್ಲಿದ್ದಾರೆ.

ಸಂಸ್ಥೆಯಲ್ಲಿ ತರಬೇತಾದ ಅಭ್ಯರ್ಥಿಗಳ ಯಶಸ್ಸಿನ ಮಾತನಾಡಿದ ಸಂಸ್ಥಾಪಕ ಮತ್ತು ನಿರ್ದೇಶಕ ಜಿ.ಬಿ. ವಿನಯ್ ಕುಮಾರ್, '2014ರಲ್ಲಿ ಸಂಸ್ಥೆ ಆರಂಭಿಸಿದ್ದೆ. 'ಪರೀಕ್ಷೆ ಆಧರಿತ ಮಾರ್ಗ' ಪರಿಕಲ್ಪನೆಯಲ್ಲಿ ಹೊಸ ತರಬೇತಿ ಮಾದರಿ ಅಳವಡಿಸಿಕೊಂಡಿದ್ದೆ. ಈ ಮಾದರಿಯ ಯಶಸ್ಸಿನಿಂದ ಮೊದಲ ವರ್ಷವೇ ಎಂಟು ರ‍್ಯಾಂಕ್‌ಗಳು ಬಂದವು. 2016ರಲ್ಲಿ 40ರಿಂದ 50 ಅಭ್ಯರ್ಥಿಗಳ 'ಕೋರ್ ಬ್ಯಾಚ್' ಮಾಡಿಕೊಂಡು ತರಬೇತಿ ನೀಡುವ ಪದ್ಧತಿಗೆ ಒತ್ತು ನೀಡಿದೆ. ಆ ವರ್ಷವೇ ನಮ್ಮ ಸಂಸ್ಥೆಯಲ್ಲಿ ತರಬೇತಿ ಪಡೆದ ಅಭ್ಯರ್ಥಿಗೆ ದೇಶದಲ್ಲೇ ಮೊದಲ ರ‍್ಯಾಂಕ್ ಬಂತು. ತರಬೇತಿ, ಮಾರ್ಗದರ್ಶನಕ್ಕೆ ನೀಡಿದ ಆದ್ಯತೆ, ಅಳವಡಿಸಿಕೊಂಡ ವಿಭಿನ್ನ ಮಾರ್ಗ ಫಲ ನೀಡಿದೆ' ಎಂದರು.



ಜಿ.ಬಿ. ವಿನಯ್

'ಪರೀಕ್ಷೆಗೆ ತರಬೇತಿ ಅನಿವಾರ್ಯವೇನೂ ಅಲ್ಲ. ಆದರೆ, ಮಾರ್ಗದರ್ಶನ ಅತೀ ಅಗತ್ಯ. ಜೊತೆಗೆ, ಅಭ್ಯರ್ಥಿಗಳಲ್ಲಿನ ಮಾನಸಿಕ ದೃಢತೆ ನಿರ್ಣಾಯಕ ಪಾತ್ರ ವಹಿಸುತ್ತದೆ. ಈ ಕಾರಣದಿಂದಲೇ ನಮ್ಮ ಸಂಸ್ಥೆಯಲ್ಲಿ ತರಬೇತುದಾರರ ಜೊತೆ 'ಮೆಂಟರ್'ಗಳನ್ನೂ ನೇಮಿಸಿಕೊಂಡಿದ್ದೇವೆ. ಪರೀಕ್ಷೆ ಎದುರಿಸಲು ಅಗತ್ಯವಾದ ಮನೋಬಲವನ್ನು ಅವರು ತುಂಬುತ್ತಾರೆ. ನಾನು ಕೂಡಾ ತರಬೇತಿದಾರರು ಮತ್ತು ಮೆಂಟರ್‌ಗಳ ಜೊತೆ ಹಾಜರಿದ್ದು ಪ್ರೇರಣೆ ನೀಡುವ ಕೆಲಸವನ್ನು ಮಾಡುತ್ತೇನೆ. ಅಭ್ಯರ್ಥಿಗಳಿಗೆ ಮನೋಸ್ಥೈರ್ಯ ತುಂಬಲು ಮನೋವೈದ್ಯರನ್ನು ನಿಯೋಜಿಸಿದ್ದೇನೆ' ಎಂದರು.

'ಯುಪಿಎಸ್‌ಸಿ ಪರೀಕ್ಷೆಯಲ್ಲಿ ಮುಖ್ಯಪರೀಕ್ಷೆಯ ಅಂಕಗಳ ಜೊತೆಗೆ ವ್ಯಕ್ತಿತ್ವ ಪರೀಕ್ಷೆಯಲ್ಲಿ ಗಳಿಸುವ ಅಂಕವೂ ಮುಖ್ಯ. ಹೀಗಾಗಿ, ಸಂದರ್ಶನವನ್ನು ಎದುರಿಸಲು 'ವ್ಯಕ್ತಿತ್ವ'ವನ್ನು ಬೆಳೆಸಿಕೊಳ್ಳಬೇಕು. ಪ್ರಶ್ನೆಗಳಿಗೆ ನೇರ, ದಿಟ್ಟವಾಗಿ ಉತ್ತರಿಸಲು ಸ್ವಂತ ಚಿಂತನಾ ಕ್ರಮವನ್ನು ಬೆಳೆಸಿಕೊಳ್ಳಬೇಕು. ಇದಕ್ಕೂ ಮಾರ್ಗದರ್ಶನ ನೀಡುತ್ತೇವೆ' ಎಂದೂ ವಿವರಿಸಿದರು.

ಸಾಗರ ವಾಡಿಗೆ 385ನೇ ರ‍್ಯಾಂಕ್



ವಿಜಯಪುರ: ಜಿಲ್ಲೆಯ ಇಂಡಿ ತಾಲ್ಲೂಕಿನ ಹಿಂಗಣಿ ಗ್ರಾಮದ ಸಾಗರ್ ವಾಡಿ ಅವರಿಗೆ ಯುಪಿಎಸ್‌ಸಿಯಲ್ಲಿ 385ನೇ ರ‍್ಯಾಂಕ್ ಲಭಿಸಿದೆ. ಅವರು ಸದ್ಯ ಕೇಂದ್ರ ಸರ್ಕಾರದ ಇಂಧನ ಇಲಾಖೆಯಲ್ಲಿ ಡೆಪ್ಯುಟಿ ಮ್ಯಾನೇಜರ್ ಆಗಿ ಬೆಂಗಳೂರಿನಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

'ಐಎಎಸ್ ಅಧಿಕಾರಿಯಾಗಬೇಕೆನ್ನುವುದು ಕನಸಾಗಿತ್ತು. ತಂದೆ, ತಾಯಿ ಪ್ರೋತ್ಸಾಹದಿಂದ ನನಸಾಗಿದೆ. ಪ್ರತಿದಿನ 'ಪ್ರಜಾವಾಣಿ' ಓದುತ್ತಿದ್ದೆ, ಇದರಿಂದ ಪರೀಕ್ಷೆ ಪಾಸಾಗಲು ಸಹಾಯವಾಯಿತು' ಎಂದರು. ಇವರ ತಂದೆ ಅಮಗೊಂಡ ವಾಡಿ ಸರ್ಕಾರಿ ಪ್ರಾಥಮಿಕ ಕನ್ನಡ ಶಾಲೆಯ ಶಿಕ್ಷಕರಾಗಿದ್ದಾರೆ.

ಹೆದ್ದುರ್ಗದ ಅಮೃತ್‌ಗೆ 752ನೇ ರ‍್ಯಾಂಕ್



ಹಾಸನ: ಆಲೂರು ತಾಲ್ಲೂಕಿನ ಹೆದ್ದುರ್ಗದ ಎಚ್‌.ವಿ. ಅಮೃತ್ ಯುಪಿಎಸ್‌ಸಿ ಪರೀಕ್ಷೆಯಲ್ಲಿ 752ನೇ ರ‍್ಯಾಂಕ್ ಪಡೆದಿದ್ದಾರೆ.

ಕಾಫಿ ಬೆಳೆಗಾರ ವಿಶ್ವನಾಥ್ ಮತ್ತು ಲೇಖಕಿ ನಂದಿನಿ ಹೆದ್ದುರ್ಗ ದಂಪತಿ ಪುತ್ರ ಅಮೃತ್ ಬಿಇ ಪದವೀಧರ.

'ಪ್ರಿಲಿಮ್ಸ್‌ಗಾಗಿ ದಿನಕ್ಕೆ ಎಂಟು ತಾಸು ಓದುತ್ತಿದ್ದೆ. ಮುಖ್ಯ ಪರೀಕ್ಷೆಯಲ್ಲಿ 12–14 ತಾಸು ಅಧ್ಯಯನ ಮಾಡುತ್ತಿದ್ದೆ. 400 ರೊಳಗಿನ ರ‍್ಯಾಂಕ್ ನಿರೀಕ್ಷಿಸಿದ್ದೆ. ಕೆಲ ತಪ್ಪುಗಳಿಂದ ಅದು ಸಾಧ್ಯವಾಗಿಲ್ಲ' ಎಂದು ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಯುಪಿಎಸ್‌ಸಿಗಾಗಿ ಯಾವುದೇ ಕೋಚಿಂಗ್ ತೆಗೆದುಕೊಂಡಿಲ್ಲ. ಮಾನವಶಾಸ್ತ್ರ ವಿಷಯವನ್ನು ಆಯ್ಕೆ ಮಾಡಿಕೊಂಡು ವ್ಯಾಸಂಗ ಆರಂಭಿಸಿದೆ. ಮೊದಲ ಎರಡು ಪ್ರಯತ್ನದಲ್ಲಿ ಫಲ ದೊರೆಯಲಿಲ್ಲ. ಮೂರನೇ ವಯತ್ನದಲ್ಲಿ ಯಶಸ್ಸು ಸಿಕ್ಕಿದೆ. ಐಆರ್‌ಎಸ್ ಹುದ್ದೆ ದೊರೆಯುವ ನಿರೀಕ್ಷೆಯಿದೆ' ಎಂದರು.

ಚಿಂತಾಮಣಿಯ ಮೂವರ ಸಾಧನೆ

ಮೂರನೇ ಪ್ರಯತ್ನದಲ್ಲಿ ಯಶಸ್ಸು



ಚಿಂತಾಮಣಿ (ಚಿಕ್ಕಬಳ್ಳಾಪುರ ಜಿಲ್ಲೆ): ಜಿ.ಎಸ್. ಅರ್ಜುನ್ ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ಗಡಿಗವಾರಹಳ್ಳಿಯ ಜಿ.ವಿ. ಸುಬ್ಬಾರೆಡ್ಡಿ ಮತ್ತು ಕೆ.ಪಿ. ಶಾರದಮ್ಮ ದಂಪತಿಯ ಪುತ್ರ. ಅವರು ಬೆಂಗಳೂರಿನ ಪಿಇಎಸ್ ಕಾಲೇಜಿನಲ್ಲಿ ಎಂಜಿನಿಯರಿಂಗ್ ಪದವಿ ಪಡೆದಿದ್ದರು. ಕಳೆದ ನಾಲ್ಕು ವರ್ಷಗಳಿಂದ ಮುಂಬೈನಲ್ಲಿರುವ ನಬಾರ್ಡ್ ಸಂಸ್ಥೆಯ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದಾರೆ. 'ಕೃಷಿಕ ಕುಟುಂಬದಿಂದ ಬಂದಿದ್ದೇನೆ. ಸಮಾಜಕ್ಕೆ ಒಳ್ಳೆಯ ಕೊಡುಗೆ ನೀಡಬೇಕು ಎನ್ನುವುದು ನನ್ನ ಗುರಿ. ನಾಲ್ಕು ವರ್ಷಗಳ ಸತತ ಪ್ರಯತ್ನದ ಫಲವಾಗಿ 452ನೇ ರ‍್ಯಾಂಕ್ ಪಡೆದಿದ್ದೇನೆ. ಈ ಹಿಂದೆ ಎರಡು ಬಾರಿ ಯುಪಿಎಸ್‌ಸಿ ಪರೀಕ್ಷೆ ಬರೆದಿದ್ದೆ' ಎಂದು ತಿಳಿಸಿದರು.

ರೈತರ ಪುತ್ರಿಯ ಸಾಧನೆ



504ನೇ ರ‍್ಯಾಂಕ್ ಪಡೆದಿರುವ ಎಂ.ವಿ. ಮಾಲಾಶ್ರೀ ಚಿಂತಾಮಣಿ ತಾಲ್ಲೂಕಿನ ಮಿಂಡಿಗಲ್ ಗ್ರಾಮದ ಕೃಷಿಕ ಎಂ.ವೈ. ವೆಂಕಟೇಶ್ ಮತ್ತು ರಾಮಲಕ್ಷ್ಮಮ್ಮ ದಂಪತಿಯ ಪುತ್ರಿ. ಬೆಂಗಳೂರಿನ ಪಿಇಎಸ್ ಕಾಲೇಜಿನಲ್ಲಿ ಎಂಜಿನಿಯರಿಂಗ್ ಪದವಿ ಪಡೆದಿದ್ದಾರೆ.

'ತಂದೆ, ತಾಯಿ ಮತ್ತು ಸ್ನೇಹಿತರ ಪ್ರೋತ್ಸಾಹವೇ ಯುಪಿಎಸ್‌ಸಿ ಪರೀಕ್ಷೆ ಬರೆಯಲು ಪ್ರೇರಣೆ. ಗ್ರಾಮೀಣಾಭಿವೃದ್ಧಿ ಮತ್ತು ಕೃಷಿ ಕ್ಷೇತ್ರದಲ್ಲಿ ಸೇವೆ ಸಲ್ಲಿಸಬೇಕು. ಕೃಷಿಕರ ಹಾಗೂ ಗ್ರಾಮೀಣ ಜನರ ಬದುಕನ್ನು ಉತ್ತಮ ಪಡಿಸಲು ಕೆಲಸ ಮಾಡಬೇಕು ಎನ್ನುವುದು ನನ್ನ ಮಹದಾಸೆ. ರ‍್ಯಾಂಕಿಂಗ್ ಉತ್ತಮಪಡಿಸಿಕೊಳ್ಳಲು ಈ ವರ್ಷವೂ ಪರೀಕ್ಷೆ ತೆಗೆದುಕೊಳ್ಳುವೆ' ಎನ್ನುತ್ತಾರೆ ಮಾಲಾಶ್ರೀ.

'ಮತ್ತೆ ಪರೀಕ್ಷೆ ಬರೆಯುವೆ'




ಚಿಂತಾಮಣಿ ತಾಲ್ಲೂಕಿನ ಕೈವಾರ ಹೋಬಳಿಯ ಬನಹಳ್ಳಿಯ ನಿವೃತ್ತ ಪೊಲೀಸ್ ಅಧಿಕಾರಿ ಬಿ.ಎಂ. ನಾರಾಯಣಸ್ವಾಮಿ ಮತ್ತು ಸುಶೀಲಮ್ಮ ದಂಪತಿ ಪುತ್ರ ಬಿ.ಎನ್. ಅಭಿಷೇಕ್ 3ನೇ ಪ್ರಯತ್ನದಲ್ಲಿ 708ನೇ ರ‍್ಯಾಂಕ್ ಗಳಿಸಿದ್ದಾರೆ. ಅಭಿಷೇಕ್ ಎಂಜಿನಿಯರಿಂಗ್ ಪದವಿ ಪಡೆದಿದ್ದಾರೆ.

'ಮೊದಲ ಬಾರಿ ಪರೀಕ್ಷೆ ತೆಗೆದುಕೊಂಡಿದ್ದಾಗ ಹೆಚ್ಚಿನ ಅವಕಾಶ ಸಿಗಲಿಲ್ಲ. ಎರಡನೇ ಬಾರಿ ಉತ್ತೀರ್ಣನಾದರೂ ಕಡಿಮೆ ಅಂಕದ ಕಾರಣ ಸಂದರ್ಶನದ ಅವಕಾಶ ದೊರೆಯಲಿಲ್ಲ. 3ನೇ ಪ್ರಯತ್ನದಲ್ಲಿ ರ‍್ಯಾಂಕ್ ಪಡೆದಿದ್ದೇನೆ. ಈ ವರ್ಷವೂ ಪರೀಕ್ಷೆ ತೆಗೆದುಕೊಂಡು ರ‍್ಯಾಂಕ್ ಉತ್ತಮಪಡಿಸಿಕೊಳ್ಳುವೆ' ಎಂದು ಅಭಿಷೇಕ್ ತಿಳಿಸಿದರು.

'ಆಟ–ಪಾಠ ಸಮತೋಲನವಾಗಿ ನಿಭಾಯಿಸಿದ್ದೆ'

ಬೆಂಗಳೂರು: 'ಪ್ರತಿಭೆ, ಪರಿಶ್ರಮ ಮತ್ತು ಸಮರ್ಪಣಾ ಮನೋಭಾವ ಇದ್ದರೆ ಮಾತ್ರ ಯಶಸ್ಸು ಸಾಧ್ಯ' ಎಂದು ಯುಪಿಎಸ್‌ಸಿ ಪರೀಕ್ಷೆಯಲ್ಲಿ 204ನೇ ರ‍್ಯಾಂಕ್ ಗಳಿಸಿರುವ ಬೆಂಗಳೂರಿನ ಸಿರಿವೆನ್ನೆಲ ಅವರು ತಮ್ಮ ಯಶಸ್ಸಿನ ವಿವರ ಬಿಚ್ಚಿಟ್ಟಿದ್ದಾರೆ.



2017ರಲ್ಲೂ 560 ರ‍್ಯಾಂಕ್ ಪಡೆದಿದ್ದ ಸಿರಿವೆನ್ನೆಲ ಅವರು, ಪ್ರಸ್ತುತ ನಾಗಪುರದಲ್ಲಿರುವ ಇಂಡಿಯನ್ ಡಿಫೆನ್ಸ್ ಅಕೌಂಟ್ಸ್ ಸರ್ವಿಸ್‌ನಲ್ಲಿ (ಐಡಿಎಎಸ್) ಅಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಬಿ.ಎಸ್ಸಿ. (ಸಸ್ಯ ವಿಜ್ಞಾನ, ಪ್ರಾಣಿ ವಿಜ್ಞಾನ, ಮನೋವಿಜ್ಞಾನ) ಪದವಿ ಪಡೆದಿರುವ ಸಿರಿವೆನ್ನೆಲ ಅವರು, 2017ರಲ್ಲಿ ವಲಯ ಸಂರಕ್ಷಣಾಧಿಕಾರಿ (ಆರ್‌ಎಫ್‌ಒ) ಹುದ್ದೆಗೂ ಆಯ್ಕೆಯಾಗಿದ್ದರು.

'ಚಿಕ್ಕ ವಯಸ್ಸಿನಿಂದಲೇ ಯುಪಿಎಸ್‌ಸಿ ಪರೀಕ್ಷೆಯಲ್ಲಿ ಯಶಸ್ಸು ಗಳಿಸಬೇಕು ಎನ್ನುವ ಗುರಿ ಇತ್ತು. ಅದೇ ಛಲ ಇಟ್ಟುಕೊಂಡು ಬೆಂಗಳೂರಿನ ಎಂ.ವಿ.ಎಸ್. ಕಾಲೇಜಿನಲ್ಲಿ ಬಿ.ಎಸ್ಸಿ. ಪದವಿ ಮುಗಿದ ತಕ್ಷಣದಿಂದಲೇ ಅಧ್ಯಯನ ನಡೆಸಿದ್ದೆ. ನನಗೆ ಕ್ರಿಕೆಟ್ ಬಗ್ಗೆ ಹೆಚ್ಚು ಆಸಕ್ತಿ. ಕಾಲೇಜು ತಂಡದ ಉಪನಾಯಕನಾಗಿದ್ದೆ. ಜತೆಗೆ ವೈಎಂಸಿಎ ಕ್ಲಬ್ ಅನ್ನು ವಿಭಾಗೀಯ ಮಟ್ಟದಲ್ಲಿ ಪ್ರತಿನಿಧಿಸಿದ್ದೆ. ಆಟ ಮತ್ತು ಪಾಠ ಎರಡನ್ನೂ ಸಮತೋಲನವಾಗಿ ನಿಭಾಯಿಸಿದ್ದೆ' ಎಂದು ವಿವರಿಸಿದರು.

ಸಿರಿವೆನ್ನೆಲ ಅವರು ಕಥೆಗಾರ ಕೇಶವರೆಡ್ಡಿ ಹಂದ್ರಾಳ ಅವರ ಪುತ್ರ. ತಮ್ಮ ಪುತ್ರನ ಸಾಧನೆಯ ಬಗ್ಗೆ ಕೇಶವರೆಡ್ಡಿ ಅವರು ಹರ್ಷ ವ್ಯಕ್ತಪಡಿಸಿದ್ದಾರೆ.

'ಪಿಯು ಮುಗಿದ ನಂತರ ವೈದ್ಯಕೀಯ ಅಥವಾ ಎಂಜಿನಿಯರಿಂಗ್ ಸೀಟು ಸಿರಿವೆನ್ನೆಲಗೆ ಸಿಗುತ್ತಿತ್ತು. ಆದರೆ, ಆತನ ಆಸಕ್ತಿಯೇ ಬೇರೆಯಾಗಿತ್ತು. ಹೀಗಾಗಿ, ಅವರೆಡನ್ನೂ ಕೈಬಿಟ್ಟು ನಿರಂತರ ಅಧ್ಯಯನ ನಡೆಸಿದ' ಎಂದು ತಿಳಿಸಿದ್ದಾರೆ.

ಅಮೆರಿಕಾದಿಂದ ವಾಪಸ್ಸಾದ ಟೆಕ್ಕಿಗೆ 235ನೇ ರ‍್ಯಾಂಕ್



ಶ್ರೀನಿವಾಸ್ ಎಂ.ಪಿ.

ದಾವಣಗೆರೆ: ಅಮೆರಿಕಾದಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿದ್ದ ಮಲೇಬೆನ್ನೂರು ಮೂಲದ ಶ್ರೀನಿವಾಸ್ ಎಂ.ಪಿ. ಅವರು ಯುಪಿಎಸ್‌ಸಿ ಪರೀಕ್ಷೆಯಲ್ಲಿ 235ನೇ ರ‍್ಯಾಂಕ್ ಪಡೆದಿದ್ದಾರೆ.

ಬೆಂಗಳೂರಿನ ಆರ್‌.ವಿ. ಕಾಲೇಜಿನಲ್ಲಿ ಎಂಜಿನಿಯರಿಂಗ್ ಮುಗಿಸಿ ಸಿಯಾಟಲ್‌ನ ವಾಷಿಂಗ್ಟನ್ ಯೂನಿವರ್ಸಿಟಿಯಲ್ಲಿ ಸ್ನಾತಕೋತ್ತರ ಪದವಿ ಪಡೆದರು. ಕೆಲ ವರ್ಷಗಳ ಕಾಲ ಅಲ್ಲಿನ ರಸೆಲ್ ಇನ್‌ವೆಸ್ಟ್‌ಮೆಂಟ್‌ನಲ್ಲಿ ಕರ್ತವ್ಯ ನಿರ್ವಹಿಸಿ ಹುಬ್ಬಳ್ಳಿಯಲ್ಲಿ ನೆಲೆಸಿ 5ನೇ ಪ್ರಯತ್ನದಲ್ಲಿ ಯಶಸ್ಸು ಸಾಧಿಸಿದ್ದಾರೆ.

'ಪ್ರಜಾವಾಣಿ' ಅಚ್ಚುಮೆಚ್ಚು: 'ನಾನು ಮೊದಲಿನಿಂದಲೂ 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ಪತ್ರಿಕೆ ಓದುತ್ತಿದ್ದೇನೆ. ಸಾಹಿತ್ಯ ಪುರವಣಿಯಲ್ಲಿನ ಅನೇಕ ವಿಷಯಗಳು ಪರೀಕ್ಷೆಯಲ್ಲಿ ಅನುಕೂಲಕ್ಕೆ ಬಂದವು. ಸಂಪಾದಕೀಯ ಪುಟದಲ್ಲಿನ ಎಲ್ಲಾ ವಿಷಯಗಳನ್ನು ಅಭ್ಯಸಿಸಿದ್ದೇನೆ' ಎಂದು ಶ್ರೀನಿವಾಸ್ ಮೆಚ್ಚುಗೆ ವ್ಯಕ್ತಪಡಿಸಿದರು. ಸದ್ಯ ಅವರು ಹುಬ್ಬಳ್ಳಿಯಲ್ಲಿ ತಂದೆಯ ಜೊತೆಗೆ ನೆಲೆಸಿದ್ದಾರೆ.

ಮಮತಾಗೆ 707ನೇ ರ‍್ಯಾಂಕ್



ಜಿ. ಮಮತಾ

ಹೊಸದುರ್ಗ: ತಾಲ್ಲೂಕಿನ ದೇವಪುರ ಭೋವಿಹಟ್ಟಿ ಗ್ರಾಮದ ಗೋವಿಂದಪ್ಪ ಚಂದ್ರಮ್ಮ ಅವರ ಪುತ್ರಿ ಜಿ. ಮಮತಾ ಈ ಬಾರಿ ಯುಪಿಎಸ್‌ಸಿ ಪರೀಕ್ಷೆಯಲ್ಲಿ 707ನೇ ರ‍್ಯಾಂಕ್ ಪಡೆದಿದ್ದಾರೆ.

ಈ ಗ್ರಾಮಕ್ಕೆ ಇಂದಿಗೂ ಸಾರಿಗೆ ಸೌಲಭ್ಯವಿಲ್ಲ. ಬೆಂಗಳೂರಿನ ಆರ್‌.ವಿ. ಎಂಜಿನಿಯರಿಂಗ್ ಕಾಲೇಜಿನಲ್ಲಿ ಸಿವಿಲ್ ಎಂಜಿನಿಯರಿಂಗ್ ಪದವಿ ಪಡೆದಿರುವ ಇವರು ಬೆಂಗಳೂರಿನಲ್ಲಿ ಇದ್ದುಕೊಂಡೇ ಯುಪಿಎಸ್‌ಸಿ ಪರೀಕ್ಷೆಗೆ 10 ತಿಂಗಳು ತರಬೇತಿ ಪಡೆದು ಯಶಸ್ಸು ಕಂಡಿದ್ದಾರೆ.

'ನನಗೆ ಅಣ್ಣನೇ ಮಾರ್ಗದರ್ಶಕ'



ಬೀದರ್: 'ಅಣ್ಣ ಐಪಿಎಸ್ ಅಧಿಕಾರಿ ಫೈಜಾನ್ ಅಹಮ್ಮದ್ ಅವರ ಮಾರ್ಗದರ್ಶನದಲ್ಲಿ ಯುಪಿಎಸ್‌ಸಿ ಪರೀಕ್ಷೆ ಬರೆದು ಪಾಸಾದ ಖುಷಿ ನನಗಿದೆ. 2018ರಲ್ಲಿ ಬೆಂಗಳೂರಿನ ರಾಮಯ್ಯ ಎಂಜಿನಿಯರಿಂಗ್ ಕಾಲೇಜಿನಿಂದ ಪದವಿ ಪಡೆದು 2019ರಲ್ಲಿ ಯುಪಿಎಸ್‌ಸಿ ಪರೀಕ್ಷೆ ಬರೆದಿದ್ದೆ. ಮೊದಲ ಪ್ರಯತ್ನದಲ್ಲಿ ಯಶ ದೊರಕದಿದ್ದರೂ ಸಾಕಷ್ಟು ಅನುಭವ ಲಭಿಸಿತು. ಎರಡನೇ ಪ್ರಯತ್ನದಲ್ಲಿ ಯಶಸ್ಸು ದೊರೆಯಿತು. ಪೋಷಕರ ಬೆಂಬಲದಿಂದಲೇ ಯಶಸ್ಸು ಸಾಧಿಸಲು ಸಾಧ್ಯವಾಗಿದೆ' ಎಂದು ಯುಪಿಎಸ್‌ಸಿ ಪರೀಕ್ಷೆಯಲ್ಲಿ 270ನೇ ರ‍್ಯಾಂಕ್ ಪಡೆದ ಮಹಮ್ಮದ್ ಹಾರಿಸ್ ಸುಮೈರ್ ಹೇಳುತ್ತಾರೆ.

ಕೋವಿಡ್‌ನಿಂದ ಆದಾಯ ಕುಸಿತ: ಪ್ರವಾಸಿಗರ ಮೇಲೆ ಹೊರೆ

ಮೈಸೂರು: ಅರಮನೆ ಪ್ರವೇಶ ಶುಲ್ಕ ₹100ಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ



ಮೈಸೂರು ಅರಮನೆ

ಮೈಸೂರು: ನಾಡಹಬ್ಬ ದಸರೆಗೆ ಚಾಲನೆ ದೊರಕಲು ಕೇವಲ 12 ದಿನವಿರುವಾಗ ಮೈಸೂರು ಅರಮನೆ ಪ್ರವೇಶ ಶುಲ್ಕವನ್ನು ₹ 70ರಿಂದ 100ಕ್ಕೆ ಹೆಚ್ಚಿಸಲಾಗಿದೆ. ಒಂದೂವರೆ ವರ್ಷದಿಂದ ಕೋವಿಡ್ ಕಾರಣ ಆದಾಯ ಕುಸಿದಿದ್ದರಿಂದ ಅರಮನೆ ಮಂಡಳಿಯು ಈ ಕ್ರಮ ಕೈಗೊಂಡಿದ್ದು ಪ್ರವಾಸಿಗರ ಮೇಲೆ ಹೊರೆ ಬಿದ್ದಿದೆ.

ವಾರಾಂತ್ಯ, ಸರ್ಕಾರಿ ರಜೆ ದಿನಗಳಲ್ಲಿಯೂ ಪ್ರವೇಶ ಶುಲ್ಕ ₹ 100 ಇರಲಿದೆ. ವಿದೇಶೀಯರಿಗೂ ಇಷ್ಟೇ ದರ ನಿಗದಿಪಡಿಸಲಾಗಿದೆ. 18 ವರ್ಷದೊಳಗಿನ ಮಕ್ಕಳಿಗೆ ₹ 50 ಶುಲ್ಕ ವಿಧಿಸಲು ನಿರ್ಧರಿಸಿದೆ.

'ಪ್ರವೇಶ ಶುಲ್ಕದಿಂದಲೇ ನಿರ್ವಹಣೆ, ಸಿಬ್ಬಂದಿ ವೇತನ ಹಾಗೂ ಇತರೆ ಖರ್ಚು ಭರಿಸಲಾಗುತ್ತಿದೆ. ಕೋವಿಡ್‌ನಿಂದಾಗಿ ಪ್ರವಾಸಿಗರ ಸಂಖ್ಯೆ ಕುಸಿದಿದ್ದು, ಆದಾಯಕ್ಕೆ ದೊಡ್ಡ ಪೆಟ್ಟು ಬಿದ್ದಿದೆ. ನಿರ್ವಹಣೆಗೆ ಪ್ರತಿ ತಿಂಗಳು ₹ 30 ಲಕ್ಷ ವೆಚ್ಚವಾಗುತ್ತದೆ. ಹಾಗೆಯೇ, ಅರಮನೆ ದೀಪಾಲಂಕಾರ ಸೇರಿ ವಿದ್ಯುತ್ ಶುಲ್ಕವೇ ತಿಂಗಳಿಗೆ ₹ 10 ಲಕ್ಷವಾಗುತ್ತದೆ' ಎಂದು ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಮಣ್ಯ 'ಪ್ರಜಾವಾಣಿ'ಗೆ ತಿಳಿಸಿದರು.

ಅರಮನೆಯಲ್ಲಿ ಆಯೋಜಿಸುವ ಧ್ವನಿ ಮತ್ತು ಬೆಳಕು ಕಾರ್ಯಕ್ರಮ ವೀಕ್ಷಣೆಗೂ ಶುಲ್ಕ ಹೆಚ್ಚಿಸಲಾಗಿದೆ. ಕನ್ನಡದ ಕಾರ್ಯಕ್ರಮಕ್ಕೆ ವಯಸ್ಕರಿಗೆ ₹ 90, ಮಕ್ಕಳಿಗೆ ₹ 40 (ಸೋಮವಾರದಿಂದ ಬುಧವಾರ) ಇಂಗ್ಲಿಷ್ ಕಾರ್ಯಕ್ರಮಕ್ಕೆ ವಯಸ್ಕರಿಗೆ ₹ 120, ಮಕ್ಕಳಿಗೆ ₹ 50 (ಗುರುವಾರದಿಂದ ಶನಿವಾರ) ನಿಗದಿ ಮಾಡಲಾಗಿದೆ.

ಅರಮನೆ ಪ್ರವೇಶ ಶುಲ್ಕ (₹ ಗಳಲ್ಲಿ)

ಯಾರಿಗೆ	ಹೊಸ ದರ	ಹಳೆಯ ದರ
ವಯಸ್ಕರು	100	70
ವಿದೇಶಿಗರು	100	70
ವಾರಾಂತ್ಯ/ ಸರ್ಕಾರಿ ರಜೆ ದಿನ	100	90
ಮಕ್ಕಳು	50	30
ವಿದ್ಯಾರ್ಥಿಗಳು	30	20

ರಾಜ್ಯೋತ್ಸವ ಪ್ರಶಸ್ತಿ

ಆನ್‌ಲೈನ್‌ನಲ್ಲಿ ಹೆಸರು ಶಿಫಾರಸು ಮಾಡಿ: ಸಚಿವ ಸುನೀಲ್

ಪ್ರಜಾವಾಣಿ ವಾರ್ತೆ



ಸುನೀಲ್ ಕುಮಾರ್

ಬೆಂಗಳೂರು: 'ರಾಜ್ಯೋತ್ಸವ ಪ್ರಶಸ್ತಿಗೆ ಈ ಬಾರಿ ತೆರೆಮರೆಯ ಸಾಧಕರನ್ನೂ ಗುರುತಿಸಿ, ಪ್ರಶಸ್ತಿ ನೀಡಲಾಗುವುದು. ಸಾರ್ವಜನಿಕರು ಸಾಧಕರ ಹೆಸರನ್ನು ಆನ್‌ಲೈನ್ ಮೂಲಕ ಶಿಫಾರಸು ಮಾಡಬಹುದು' ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಸುನೀಲ್ ಕುಮಾರ್ ತಿಳಿಸಿದ್ದಾರೆ.

ರಾಜ್ಯೋತ್ಸವ ಪ್ರಶಸ್ತಿ ಬಗ್ಗೆ ಇಲ್ಲಿ ಶನಿವಾರ ಪ್ರತಿಕ್ರಿಯಿಸಿದ ಅವರು, 'ರಾಜ್ಯೋತ್ಸವ ಪ್ರಶಸ್ತಿಗೆ ತೆರೆಮರೆಯಲ್ಲಿ ಕೆಲಸ ಮಾಡುತ್ತಿರುವ ಸಾಧಕರನ್ನೂ ಗುರುತಿಸಬೇಕೆಂಬ ಅಭಿಲಾಷೆಯಿತ್ತು. ಹೀಗಾಗಿ, ಇದೇ ಮೊದಲ ಬಾರಿ ಅರ್ಜಿ ಸಲ್ಲಿಸದ ಸಾಧಕರನ್ನೂ ಪ್ರಶಸ್ತಿಗೆ ಪರಿಗಣಿಸಲಾಗುತ್ತದೆ. ಪ್ರಶಸ್ತಿ ಆಯ್ಕೆಗೆ ರಚನೆಯಾದ ಸಮಿತಿಗೆ ಜನರು ಸಾಧಕರ ಹೆಸರನ್ನು ಶಿಫಾರಸು ಮಾಡಬೇಕು' ಎಂದು ಮನವಿ ಮಾಡಿಕೊಂಡಿದ್ದಾರೆ.

'ಈ ವರ್ಷ 66 ಸಾಧಕರನ್ನು ಗುರುತಿಸಿ, ರಾಜ್ಯೋತ್ಸವ ಪ್ರಶಸ್ತಿ ನೀಡಲಾಗುತ್ತದೆ. ಸೇವಾ ಸಿಂಧು ಪೋರ್ಟಲ್ ಮೂಲಕ ಒಂದು ಅರ್ಜಿ ಪ್ರತಿಯಲ್ಲಿ ತಲಾ ಮೂವರು ಸಾಧಕರ ಹೆಸರುಗಳನ್ನು ಶಿಫಾರಸು ಮಾಡಬಹುದು. ಇದಕ್ಕಾಗಿ ವಿಶೇಷ ನಮೂನೆಯ ಅರ್ಜಿ ಪ್ರತಿಯನ್ನು ಸಿದ್ಧಪಡಿಸಲಾಗಿದ್ದು, ಸಾಧಕರ ವಿಳಾಸ ಸೇರಿದಂತೆ ವಿವಿಧ ಮಾಹಿತಿಯನ್ನು ಭರ್ತಿ ಮಾಡಲು ಅವಕಾಶವಿದೆ. ಶಿಫಾರಸಿನ ಅರ್ಜಿ ನಮೂನೆಗಳನ್ನು ತಜ್ಞರ ಸಮಿತಿಗೆ ನೀಡಲಾಗುತ್ತದೆ' ಎಂದು ಅವರು ತಿಳಿಸಿದ್ದಾರೆ.

'ಶಿಫಾರಸುಗಳನ್ನು ಸಮಿತಿಯ ಸದಸ್ಯರು ಪರಿಶೀಲಿಸಿ, ಪ್ರಶಸ್ತಿಗೆ ಆಯ್ಕೆ ಮಾಡುತ್ತಾರೆ. ಇದರಿಂದಾಗಿ ನೇರವಾಗಿ ಸಾರ್ವಜನಿಕರೇ ಸಾಧಕರನ್ನು ಆಯ್ಕೆ ಮಾಡಿದಂತಾಗುತ್ತದೆ. ಕ್ರೀಡೆ ಹೊರತುಪಡಿಸಿದರೆ ಉಳಿದ ಸಾಧಕರು ಕನಿಷ್ಠ 60 ವರ್ಷ ಮೇಲ್ಪಟ್ಟವರಾಗಿರಬೇಕು' ಎಂದು ಹೇಳಿದ್ದಾರೆ.

'ಸಾರ್ವಜನಿಕರು ತಮ್ಮ ಮೊಬೈಲ್ ಮೂಲಕವೂ ಸೇವಾ ಸಿಂಧು ಪೋರ್ಟಲ್ ಪ್ರವೇಶಿಸಿ, ತಾವು ಪ್ರಶಸ್ತಿಗೆ ಶಿಫಾರಸು ಮಾಡುವ ವ್ಯಕ್ತಿಗಳ ವಿವರವನ್ನು ಕಳುಹಿಸಬಹುದು. ಅ.15 ಶಿಫಾರಸು ಅರ್ಜಿ ಸಲ್ಲಿಕೆಗೆ ಕಡೆಯ ದಿನಾಂಕ' ಎಂದು ತಿಳಿಸಿದ್ದಾರೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು
ಕೆ ಆರ್ ಎಸ್*	124.80	113.86	5,110	7,727
ಹಾರಂಗಿ	2,859	2,858.30	862	1,500
ಕಬಿನಿ	2284.00	2,282.5	1,500	2,500
ಹೇಮಾವತಿ	2,922	2,915.16	2,475	5,172
ಲಿಂಗನಮಕ್ಕಿ	1,819	1,816	2,244	-
ಸೂಪಾ (ಮೀ)	564	557.0	3,057	4,396
ಮಾಣಿ	594	587.74	806	-
ತುಂಗಭದ್ರಾ	1,633	1,633	24,803	25,307
ಮಲಪ್ರಭಾ	2079.50	2,079.10	74	1,694
ಘಟಪ್ರಭಾ	2175	2,175	3,502	3,502
ಭದ್ರಾ	186	185.20	3,195	3,496
ಆಲಮಟ್ಟಿ (ಮೀ)	519.60	519.60	6,676	6,676
ನಾರಾಯಣಪುರ (ಮೀ)	492.25	492.20	8,500	8,500

* ನೆಲಮಟ್ಟದಿಂದ

ಗ್ರಾ.ಪಂ. ಮಟ್ಟದಲ್ಲಿಯೇ ಪ್ರಮಾಣಪತ್ರ

ಸಂಕೇಶ್ವರ: ಗ್ರಾಮಸ್ಥರಿಗೆ ಬೇಕಾಗುವ ಅತ್ಯವಶ್ಯಕ ಸರ್ಕಾರಿ ಸೇವೆಗಳನ್ನು ಮುಂದಿನ ಜ.26ರಿಂದ ಗ್ರಾಮ ಪಂಚಾಯಿತಿ ವತಿಯಿಂದಲೇ ಒದಗಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿದರು.

ಸಂಕೇಶ್ವರದಲ್ಲಿ ಶನಿವಾರ ಪುರಸಭೆಯ ನೂತನ ಕಾರ್ಯಾಲಯ, ರೈತ ಸಂಪರ್ಕ ಕೇಂದ್ರ, ಬಸ್ ನಿಲ್ದಾಣಗಳನ್ನು ಉದ್ಘಾಟಿಸಿ ಮಾತನಾಡಿದರು.

ಜಾತಿ ಪ್ರಮಾಣಪತ್ರ, ಆದಾಯ ಪ್ರಮಾಣಪತ್ರ ಹಾಗೂ ಇನ್ನಿತರ ಸರ್ಕಾರಿ ಸೇವೆಗಳನ್ನು ಪಂಚಾಯಿತಿ ಮಟ್ಟದಲ್ಲಿಯೇ ವಿತರಿಸಲಾಗುವುದು. ಇದನ್ನು ಪ್ರಾಯೋಗಿಕವಾಗಿ 5 ಜಿಲ್ಲೆಗಳಲ್ಲಿ ನಡೆಸಲಾಗುವುದು ಎಂದು ಹೇಳಿದರು.

ನಿಧನ ವಾರ್ತೆ

ಯತೀಶ್ವರ ಶಿವಾಚಾರ್ಯ ಸ್ವಾಮೀಜಿ



ಚಿಕ್ಕನಾಯಕನಹಳ್ಳಿ: ತಾಲ್ಲೂಕಿನ ಕುಪ್ಪೂರು ಗದ್ದುಗೆ ಮಠದ ಅಧ್ಯಕ್ಷ ಡಾ.ಯತೀಶ್ವರ ಶಿವಾಚಾರ್ಯ ಸ್ವಾಮೀಜಿ (47) ಶನಿವಾರ ಲಿಂಗೈಕ್ಯರಾದರು.

ಅವರ ಆರೋಗ್ಯದಲ್ಲಿ ಶುಕ್ರವಾರ ರಾತ್ರಿ ಏರುಪೇರಾದ ಕಾರಣ ತುಮಕೂರಿನ ಸಿದ್ಧಗಂಗಾ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಶನಿವಾರ ಬೆಳಿಗ್ಗೆ 11ಕ್ಕೆ ಹೃದಯಾಘಾತವಾಗಿದ್ದು, ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿಗೆ ಕರೆದೊಯ್ಯುವ ಮಾರ್ಗಮಧ್ಯೆ ನಿಧನರಾದರು.

ಭಾನುವಾರ ಮಧ್ಯಾಹ್ನ 12 ಗಂಟೆಗೆ ಮಠದ ಆವರಣದಲ್ಲಿ ಸ್ವಾಮೀಜಿ ಅವರ ಅಂತಿಮ ಸಂಸ್ಕಾರ ನೆರವೇರಲಿದೆ.

ತಾಲ್ಲೂಕಿನಲ್ಲಿ ನಡೆದ ನೀರಾವರಿ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದ ಅವರು, ಸಾಕಷ್ಟು ಸಾಮಾಜಿಕ ಹೋರಾಟದಲ್ಲಿ ಸಕ್ರಿಯರಾಗಿದ್ದರು. ಕುಪ್ಪೂರು ಗದ್ದುಗೆ ಮಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಅವರ ನಿಧನದ ನಂತರ ತಮ್ಮ 16ನೇ ವಯಸ್ಸಿನಲ್ಲಿ ಯತೀಶ್ವರ ಸ್ವಾಮೀಜಿ ಮಠದ ಉತ್ತರಾಧಿಕಾರಿಯಾದರು.

ಜಾತಿ ಗಣತಿಗೆ ಕೈಜೋಡಿಸುವಂತೆ ಒತ್ತಾಯ

'ಜಾತಿ ಗಣತಿಗೆ ಸಂಬಂಧಿಸಿದ ವಿಷಯದಲ್ಲಿ ನಾವೆಲ್ಲರೂ ಕೈಜೋಡಿಸಬೇಕು ಮತ್ತು ಈಗಿನ ಕೇಂದ್ರ ಸರ್ಕಾರವನ್ನು ಕಿತ್ತೊಗೆಯಬೇಕಿದೆ' –ಯಾದವ್

ಬಿಜೆಪಿಯೇತರ ನಾಯಕರಿಗೆ ತೇಜಸ್ವಿ ಯಾದವ್ ಪತ್ರ

ಪಟ್ನಾ (ಪಿಟಿಐ): ಹಿಂದುಳಿದ ವರ್ಗಗಳ ಜಾತಿ ಗಣತಿ ವಿಷಯದಲ್ಲಿ ಸಹಕಾರ ನೀಡುವಂತೆ ಒತ್ತಾಯಿಸಿ ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಬಿಜೆಪಿಯೇತರ ನಾಯಕರಿಗೆ ಶನಿವಾರ ಪತ್ರ ಬರೆದಿದ್ದಾರೆ.

ನಿತೀಶ್ ಕುಮಾರ್, ಸೋನಿಯಾ ಗಾಂಧಿ, ಶರದ್ ಪವಾರ್, ಮಮತಾ ಬ್ಯಾನರ್ಜಿ ಮತ್ತು ಅರವಿಂದ್ ಕೇಜ್ರಿವಾಲ್ ಸೇರಿದಂತೆ 33 ರಾಜಕೀಯ ನಾಯಕರಿಗೆ ಯಾದವ್ ಪತ್ರ ಬರೆದಿದ್ದು ಜಾತಿ ಗಣತಿಗೆ ಬೆಂಬಲ ನೀಡುವಂತೆ ಕೋರಿದ್ದಾರೆ.



ತೇಜಸ್ವಿ ಯಾದವ್

ಜಾತಿ ಗಣತಿಯು ಆಡಳಿತಾತ್ಮಕವಾಗಿ ತೊಡಕಾಗಿದೆ. ಇದರ ಗಣತಿಯನ್ನು ಕೈಬಿಟ್ಟಿರುವುದು ಒಂದು ಪ್ರಜ್ಞಾಪೂರ್ವಕವಾದ ನಿರ್ಧಾರವಾಗಿದೆ ಎಂದು ಎರಡು ದಿನಗಳ ಹಿಂದೆ ಕೇಂದ್ರ ಸರ್ಕಾರ ಸುಪ್ರೀಂಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿತ್ತು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಗಣತಿಗೆ ಕೇಂದ್ರ ಒಪ್ಪಿಗೆ ನೀಡಿದೆ. ಆದರೆ ಇದು ಬಿಹಾರ ಸೇರಿದಂತೆ ಇತರೆಡೆ ರಾಜಕೀಯದಲ್ಲಿ ಪ್ರಾಬಲ್ಯ ಹೊಂದಿರುವ ಇತರ ಹಿಂದುಳಿದ ವರ್ಗಗಳ (ಒಬಿಸಿ) ಅಸಮಾಧಾನಕ್ಕೆ ಕಾರಣವಾಗಿದೆ.

'ಯಾವುದೇ ವಿಳಂಬವಿಲ್ಲದೆ ಈ ವಿಷಯದಲ್ಲಿ ನಮ್ಮ ಕ್ರಿಯಾ ಯೋಜನೆಯನ್ನು ತಕ್ಷಣ ಸಿದ್ಧಗೊಳಿಸಬೇಕಿದೆ. ಇದಕ್ಕಾಗಿ ನೀವು ಮುಕ್ತವಾಗಿ ಸಲಹೆಗಳನ್ನು ನೀಡಬಹುದು' ಎಂದು ಯಾದವ್ ಅವರು ರಾಜಕೀಯ ನಾಯಕರಿಗೆ ಹೇಳಿದ್ದಾರೆ.

ನಿತೀಶ್ ಕುಮಾರ್ ನೇತೃತ್ವದ ನಿಯೋಗವೊಂದು ಇತ್ತೀಚೆಗೆ ಪ್ರಧಾನಿ ಮೋದಿ ಅವರನ್ನು ಭೇಟಿ ಮಾಡಿ ಜಾತಿ ಗಣತಿಗೆ ಬೇಡಿಕೆ ಇಟ್ಟಿತ್ತು. ತೇಜಸ್ವಿ ಯಾದವ್ ನಿಯೋಗದ ಭಾಗವಾಗಿದ್ದರು.

ಬಿಜೆಪಿಯೇತರ ಮುಖ್ಯಮಂತ್ರಿಗಳಾದ ಉದ್ಧವ್ ಠಾಕ್ರೆ, ಎಂ.ಕೆ.ಸ್ಟಾಲಿನ್, ನವೀನ್ ಪಟ್ನಾಯಕ್, ಕೆ.ಚಂದ್ರಶೇಖರ್ ರಾವ್, ಜಗನ್‌ಮೋಹನ ರೆಡ್ಡಿ, ಎನ್‌ಡಿಎ ಜೊತೆ ಗುರುತಿಸಿಕೊಳ್ಳದ ನಾಯಕರಾದ ಅಖಿಲೇಶ್ ಯಾದವ್, ಮಾಯಾವತಿ, ಸೀತಾರಾಂ ಯೆಚೂರಿ, ಫಾರೂಕ್ ಅಬ್ದುಲ್ಲಾ, ಮೆಹಬೂಬಾ ಮುಫ್ತಿ ಮತ್ತು ಪ್ರಕಾಶ್ ಸಿಂಗ್ ಬಾದಲ್ ಅವರಿಗೂ ಪತ್ರ ಬರೆದಿದ್ದಾರೆ.



ಲಾಠಿ ಏಟು... ಬಿಹಾರದ ಪಟ್ನಾದಲ್ಲಿ ಶನಿವಾರ ವಿಧಾನಸಭಾ ಚಲೋ ನಡೆಸಿದ ಎಸ್‌ಸಿ, ಎಸ್‌ಟಿ ವಿದ್ಯಾರ್ಥಿಗಳ ಮೇಲೆ ಪೊಲೀಸರು ಲಾಠಿ ಪ್ರಹಾರ ನಡೆಸಿದರು ಪಿಟಿಐ ಚಿತ್ರ

ಮತ್ತೆ ಕಾಶ್ಮೀರ ವಿಷಯ ಪ್ರಸ್ತಾಪಿಸಿದ್ದಕ್ಕೆ ಆಕ್ರೋಶ; ಇಮ್ರಾನ್ ಖಾನ್‌ಗೆ ಯುವ ಕಾರ್ಯದರ್ಶಿ ಸ್ನೇಹಾ ದುಬೆ ತರಾಟೆ

ವಿಶ್ವಸಂಸ್ಥೆ: ಪಾಕ್‌ಗೆ ಭಾರತ ತಿರುಗೇಟು

ವಿಶ್ವಸಂಸ್ಥೆ (ಪಿಟಿಐ): ಪಾಕಿಸ್ತಾನದ ಪ್ರಧಾನಿ ಇಮ್ರಾನ್ ಖಾನ್ ಅವರು ವಿಶ್ವಸಂಸ್ಥೆಯ ಸಾಮಾನ್ಯ ಅಧಿವೇಶನದ ತಮ್ಮ ಭಾಷಣದಲ್ಲಿ ಕಾಶ್ಮೀರ ವಿಷಯವನ್ನು ಪ್ರಸ್ತಾಪಿಸಿದ್ದಕ್ಕೆ, ಭಾರತ ತೀಕ್ಷ್ಣ ತಿರುಗೇಟು ನೀಡಿದೆ.

'ಉಗ್ರರಿಗೆ ಮುಕ್ತ ವಾತಾವರಣ ಕಲ್ಪಿಸಿರುವ ಪಾಕಿಸ್ತಾನವು ಅಗ್ನಿಶಾಮಕ ವೇಷ ಧರಿಸಿ, ಬೆಂಕಿ ಹಚ್ಚುವ ಕೆಲಸ ಮಾಡುತ್ತಿದೆ. ತನ್ನ ಹಿತ್ತಲಿನಲ್ಲಿ ಕುಖ್ಯಾತ ಭಯೋತ್ಪಾದಕ ಒಸಾಮಾ ಬಿನ್ ಲಾಡೆನ್‌ಗೆ ಆಶ್ರಯ ನೀಡುವ ಮೂಲಕ, ಇಡೀ ಜಗತ್ತು ತೊಂದರೆಗೆ ಸಿಲುಕುವಂತೆ ಮಾಡಿದೆ' ಎಂದು ಆರೋಪಿಸಿದೆ.

'ಪಾಕಿಸ್ತಾನದ ನಾಯಕರ ಮತ್ತದೇ ಆರೋಪಕ್ಕೆ ಉತ್ತರಿಸುವ ಹಕ್ಕನ್ನು ನಾವು ಚಲಾಯಿಸುತ್ತಿದ್ದೇವೆ. ದೇಶದ ಆಂತರಿಕ ವಿಷಯಗಳನ್ನು ಘನತೆಯಿರುವ ವಿಶ್ವ ವೇದಿಕೆಯಲ್ಲಿ ಪ್ರಸ್ತಾಪಿಸುವ ಮೂಲಕ ಸುಳ್ಳನ್ನು ಪ್ರಚುರಪಡಿಸಲಾಗುತ್ತಿದೆ' ಎಂದು ಭಾರತದ ಕಾರ್ಯದರ್ಶಿ ಸ್ನೇಹಾ ದುಬೆ ಅವರು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಹೇಳಿದ್ದಾರೆ.

'ಅಸತ್ಯವನ್ನು ಪದೇ ಪದೇ ಹೇಳುವ ವ್ಯಕ್ತಿಯ ಮನಸ್ಥಿತಿಗೆ ತಕ್ಕುದಾದ ಹೇಳಿಕೆಯನ್ನು ಅವರು ನೀಡಿದ್ದಾರೆ. ಅದನ್ನು ಸರಿಪಡಿಸಲು ನಾನು ಪ್ರಯತ್ನಿಸುತ್ತೇನೆ' ಎಂದು ಯುವ ರಾಜತಾಂತ್ರಿಕ ಅಧಿಕಾರಿ ಉತ್ತರಿಸಿದ್ದಾರೆ.

ಇಮ್ರಾನ್ ಖಾನ್ ಅವರು ತಮ್ಮ ವಿಡಿಯೊ ಭಾಷಣದಲ್ಲಿ ಕಾಶ್ಮೀರ ವಿಚಾರ ಪ್ರಸ್ತಾಪಿಸಿದ್ದರು. ಜಮ್ಮು–ಕಾಶ್ಮೀರದ ವಿಶೇಷಾಧಿಕಾರ ರದ್ದತಿ ಹಾಗೂ ಪ್ರತ್ಯೇಕತಾವಾದಿ ಮುಖಂಡ ಸಯ್ಯದ್ ಅಲಿ ಶಾ ಗಿಲಾನಿ ಅವರ ಸಾವಿನ ವಿಚಾರವನ್ನು ಇಮ್ರಾನ್ ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದ್ದರು. ಗಿಲಾನಿಯವರ ಸಮಾಧಿಯನ್ನು ಸೂಕ್ತವಾಗಿ ನಿರ್ಮಿಸಲು ಖಾನ್ ಒತ್ತಾಯಿಸಿದ್ದರು.

'ಪಾಕಿಸ್ತಾನವು 'ಭಯೋತ್ಪಾದನೆಯ ಬಲಿಪಶು' ಎಂಬ ಮಾತನ್ನು ನಾವು ಕೇಳುತ್ತಲೇ ಇರುತ್ತೇವೆ. ಆದರೆ, ವಾಸ್ತವವಾಗಿ ಅವರ ನೀತಿಗಳಿಂದಾಗಿ ಇಡೀ ವಿಶ್ವವೇ ಸಂಕಷ್ಟಕ್ಕೆ ಸಿಲುಕಿದೆ.



ಕಾರ್ಯದರ್ಶಿ ಸ್ನೇಹಾ ದುಬೆ ವಿಶ್ವಸಂಸ್ಥೆಯಲ್ಲಿ ಮಾತನಾಡಿದರು –ಪಿಟಿಐ ಚಿತ್ರ

> **ಪಾಕಿಸ್ತಾನವು ಕಾನೂನು ಬಾಹಿರವಾಗಿ ವಶಪಡಿಸಿ ಕೊಂಡಿರುವ ಭಾರತದ ಎಲ್ಲ ಪ್ರದೇಶಗಳನ್ನು ತಕ್ಷಣ ಖಾಲಿ ಮಾಡಬೇಕು**
> **ಸ್ನೇಹಾ ದುಬೆ,** ವಿಶ್ವಸಂಸ್ಥೆಯಲ್ಲಿ ಭಾರತದ ಕಾರ್ಯದರ್ಶಿ

ಮತ್ತೊಂದೆಡೆ, ಅವರು ತಮ್ಮ ದೇಶದಲ್ಲಿ ನಡೆಯುವ ಮತೀಯ ಹಿಂಸೆಯನ್ನು ಭಯೋತ್ಪಾದಕ ಕೃತ್ಯಗಳೆಂದು ಮುಚ್ಚಿಡಲು ಪ್ರಯತ್ನಿಸುತ್ತಿದ್ದಾರೆ' ಎಂದು ದುಬೆ ಹೇಳಿದರು.

'ಜಮ್ಮು ಮತ್ತು ಕಾಶ್ಮೀರ, ಲಡಾಖ್, ಕೇಂದ್ರಾಡಳಿತ ಪ್ರದೇಶಗಳು ಯಾವಾಗಲೂ ಭಾರತದ ಅವಿಭಾಜ್ಯ ಅಂಗ. ಇದು, ಪಾಕಿಸ್ತಾನವು ಅಕ್ರಮವಾಗಿ ಆಕ್ರಮಣ ಮಾಡಿಕೊಂಡಿರುವ ಪ್ರದೇಶಗಳನ್ನೂ ಒಳಗೊಂಡಿದೆ' ಎಂದರು.

ಪಾಕಿಸ್ತಾನದ ನಾಯಕರು ಮತ್ತು ರಾಜತಾಂತ್ರಿಕರು ಭಾರತದ ಆಂತರಿಕ ವಿಷಯಗಳನ್ನು ವಿಶ್ವಸಂಸ್ಥೆಯ ವೇದಿಕೆಗಳಲ್ಲಿ ನಿರಂತರವಾಗಿ ಪ್ರಸ್ತಾಪಿಸುತ್ತಾ ಬಂದಿದ್ದಾರೆ. ಕಾಶ್ಮೀರ ವಿಷಯವನ್ನು ಅಂತರರಾಷ್ಟ್ರೀಯಗೊಳಿಸುವ ಪಾಕಿಸ್ತಾನದ ಪ್ರಯತ್ನಗಳಿಗೆ ಅಂತರರಾಷ್ಟ್ರೀಯ ಸಮುದಾಯ ಮತ್ತು ಸದಸ್ಯ ರಾಷ್ಟ್ರಗಳಿಂದ ಯಾವುದೇ ಪ್ರತಿಕ್ರಿಯೆ ಸಿಕ್ಕಿಲ್ಲ.

'ಪಾಕಿಸ್ತಾನವು ಹೀಗೆ ಮಾಡುತ್ತಿರುವುದು ಇದೇ ಮೊದಲಲ್ಲ. ಅಂತರರಾಷ್ಟ್ರೀಯ ವೇದಿಕೆಗಳನ್ನು ಭಾರತದ ವಿರುದ್ಧ ಸುಳ್ಳು ಹೇಳುವ ತನ್ನ ಕಾರ್ಯಸೂಚಿಗೆ ಬಳಸಿಕೊಳ್ಳುತ್ತಿದೆ' ಎಂದು ದುಬೆ ತಿರುಗೇಟು ನೀಡಿದ್ದಾರೆ.

'ಅಮೆರಿಕದ ಮೇಲೆ ಭಯೋತ್ಪಾದಕ ದಾಳಿಯ 20ನೇ ವರ್ಷಾಚರಣೆ ನಡೆಯಿತು. ದಾಳಿಯ ಮುಖ್ಯ ಸಂಚುಕೋರ ಲಾಡೆನ್‌ಗೆ ಪಾಕಿಸ್ತಾನ ಆಶ್ರಯ ನೀಡಿದ್ದನ್ನು ಯಾರೂ ಮರೆತಿಲ್ಲ. ಆದರೆ ಈಗಲೂ ಸಹ ಲಾಡೆನ್‌ಗೆ ಪಾಕಿಸ್ತಾನವು ಹುತಾತ್ಮ ಗೌರವ ನೀಡುತ್ತಿದೆ' ಎಂದು ದೂರಿದರು.

'ಪಾಕಿಸ್ತಾನವು ಭಯೋತ್ಪಾದಕರಿಗೆ ಆಶ್ರಯ ನೀಡಿದ, ಸಹಾಯ ಮಾಡಿದ ಮತ್ತು ಸಕ್ರಿಯವಾಗಿ ಬೆಂಬಲಿಸಿದ ಇತಿಹಾಸವಿದೆ. ಪಾಕ್‌ನ ಈ ನೀತಿ ಸದಸ್ಯ ರಾಷ್ಟ್ರಗಳಿಗೆ ತಿಳಿದಿದೆ. ಭಯೋತ್ಪಾದಕರನ್ನು ಬಹಿರಂಗವಾಗಿ ಬೆಂಬಲಿಸುವ, ಅವರಿಗೆ ತರಬೇತಿ ಹಾಗೂ ಹಣಕಾಸು ಒದಗಿಸುವ, ಶಸ್ತ್ರಾಸ್ತ್ರ ನೀಡುವುದನ್ನು ತನ್ನ ರಾಷ್ಟ್ರೀಯ ನೀತಿ ಎಂಬುದಾಗಿ ಪಾಕಿಸ್ತಾನ ಪಾಲಿಸುತ್ತಿರುವುದು ಜಾಗತಿಕ ಸಮುದಾಯದ ಅರಿವಿನಲ್ಲಿದೆ. ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಿಂದ ನಿಷೇಧಿಸಲ್ಪಟ್ಟ ಬಹಳಷ್ಟು ಸಂಖ್ಯೆಯ ಸಂಘಟನೆಯ ಭಯೋತ್ಪಾದಕರಿಗೆ ಬೆಂಬಲ ನೀಡಿದ ದಾಖಲೆ ಪಾಕಿಸ್ತಾನಕ್ಕೆ ಇದೆ' ಎಂದು ದುಬೆ ಚಾಟಿ ಬೀಸಿದ್ದಾರೆ.

ಭದ್ರತಾಮಂಡಳಿ ಕಾಯಂ ಸ್ಥಾನ: ಅಮೆರಿಕ ಬೆಂಬಲ

ಪುನರ್ ರಚನೆಯಾಗುವ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಭಾರತಕ್ಕೆ ಕಾಯಂ ಸದಸ್ವತ್ವ ನೀಡುವುದನ್ನು ಬೆಂಬಲಿಸುವುದಾಗಿ ಅಮೆರಿಕ ಪುನರುಚ್ಚರಿಸಿದೆ. ಜೊತೆಗೆ ಪರಮಾಣು ಪೂರೈಕೆದಾರರ ಗುಂಪಿಗೆ (ಎನ್‌ಎಸ್‌ಜಿ) ಭಾರತವನ್ನು ಸೇರ್ಪಡೆ ಮಾಡಲೂ ಬೆಂಬಲ ಸೂಚಿಸಿದೆ.

ಶ್ವೇತಭವನದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ನಡೆದ ಮೊದಲ ಮುಖತಃ ಭೇಟಿಯಲ್ಲಿ ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು ಈ ಭರವಸೆ ನೀಡಿದ್ದಾರೆ. 2021ರ ಆಗಸ್ಟ್‌ನಲ್ಲಿ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಅಧ್ಯಕ್ಷಗಿರಿ ನಿರ್ವಹಿಸಿದ ಭಾರತದ ನಾಯಕತ್ವ ಗುಣವನ್ನು ಬೈಡನ್ ಪ್ರಶಂಸಿಸಿದ್ದಾರೆ.

ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ದೀರ್ಘಾವಧಿಯಿಂದ ಬಾಕಿಯಿರುವ ಸುಧಾರಣೆಗಳಿಗೆ ಭಾರತ ಒತ್ತಾಯಿಸುತ್ತಿದ್ದು, ಭಾರತದ ಈ ಯತ್ನಕ್ಕೆ ಬೈಡನ್ ಅವರ ಮಾತಿನಿಂದ ಉತ್ತೇಜನ ಸಿಕ್ಕಿದೆ. ಭದ್ರತಾ ಮಂಡಳಿಯಲ್ಲಿ ಕಾಯಂ ಸದಸ್ಯತ್ವ ಪಡೆಯುವ ಭಾರತದ ಯತ್ನವೂ ದೀರ್ಘಾವಧಿಯದ್ದು. ಕಾಯಂ ರಾಷ್ಟ್ರಗಳ ಸಂಖ್ಯೆ ಹೆಚ್ಚಿಸುವ ಒತ್ತಾಯ ಬಹಳ ಹಿಂದಿನಿಂದ ಇದೆ.

ಎನ್‌ಎಸ್‌ಜಿ 48 ಸದಸ್ಯರ ಗುಂಪಾಗಿದ್ದು, ಅದು ಜಾಗತಿಕ ಪರಮಾಣು ವ್ಯಾಪಾರವನ್ನು ನಿಯಂತ್ರಿಸುತ್ತದೆ. ಇದಕ್ಕೆ ಪ್ರವೇಶ ಕೊಡಿಸಲು ಭಾರತಕ್ಕೆ ಅಮೆರಿಕ ಬೆಂಬಲವಾಗಿ ನಿಂತಿದೆ.

2016ರಲ್ಲಿ ಭಾರತವು ಸದಸ್ಯತ್ವಕ್ಕೆ ಅರ್ಜಿ ಹಾಕಿದ್ದರೂ, ಚೀನಾದ ವಿರೋಧದಿಂದ ಇದು ನನೆಗುದಿಗೆ ಬಿದ್ದಿದೆ. ನಿಶ್ಯಸ್ತ್ರೀಕರಣ ಒಪ್ಪಂದಕ್ಕೆ (ಎನ್‌ಪಿಟಿ) ಸಹಿ ಹಾಕಿರುವವರು ಮಾತ್ರ ಈ ಸಂಘಟನೆ ಸೇರಲು ಅರ್ಹರು ಎಂಬುದು ಚೀನಾ ವಾದ. ಭಾರತದ ಬಳಿಕ ಪಾಕಿಸ್ತಾನವೂ ಇದಕ್ಕೆ ಅರ್ಜಿ ಹಾಕಿದೆ. ಎರಡೂ ದೇಶಗಳು ಎನ್‌ಪಿಟಿಗೆ ಸಹಿ ಹಾಕಿಲ್ಲ.

ಮುಂದಿನ ತಿಂಗಳು ಲಸಿಕೆ ಲಭ್ಯ: ಪ್ರಧಾನಿ ಮೋದಿ

ಕ್ವಾಡ್ ಲಸಿಕೆ ಪಾಲುದಾರಿಕೆ ಅಡಿಯಲ್ಲಿ ಜಾನ್ಸನ್ ಅಂಡ್ ಜಾನ್ಸನ್ ಕಂಪನಿ ಭಾರತದಲ್ಲಿ ಉತ್ಪಾದಿಸಿದ 10 ಲಕ್ಷ ಕೋವಿಡ್ ಲಸಿಕೆಗಳು ಮುಂದಿನ ತಿಂಗಳು ಇಂಡೋ-ಪೆಸಿಫಿಕ್ ರಾಷ್ಟ್ರಗಳಿಗೆ ಲಭ್ಯವಾಗಲಿವೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ವಾಷಿಂಗ್ಟನ್‌ನಲ್ಲಿ ನಡೆದ ಕ್ವಾಡ್ ಶೃಂಗಸಭೆಯ ಇತರ ಸದಸ್ಯ ರಾಷ್ಟ್ರಗಳ ಮೊದಲ ಮುಖತಃ ಸಭೆಯಲ್ಲಿ ಮೋದಿ ಮಾತನಾಡಿದರು.

ಈ ವರ್ಷದ ಮಾರ್ಚ್ 12ರಂದು ವರ್ಚುವಲ್ ಶೃಂಗಸಭೆಯಲ್ಲಿ ಕ್ವಾಡ್ ಲಸಿಕೆ ಪಾಲುದಾರಿಕೆ ಅನುಷ್ಠಾನ ಪ್ರಗತಿಯನ್ನು ಸಭೆಯಲ್ಲಿ ಪರಿಶೀಲಿಸಲಾಯಿತು. ಅಮೆರಿಕ ಅಭಿವೃದ್ಧಿ ಹಣಕಾಸು ನಿಗಮದ ಬೆಂಬಲಿತ ಬಯಾಲಾಜಿಕಲ್ ಇ ಲಿಮಿಟೆಡ್ ಆಫ್ ಇಂಡಿಯಾದ ಲಸಿಕೆ ಉತ್ಪಾದಿಸುವ ಸಾಮರ್ಥ್ಯವನ್ನು ಹೆಚ್ಚಿಸುವ ಕಾರ್ಯಕ್ರಮಕ್ಕೆ ಎಲ್ಲ ನಾಯಕರು ಬದ್ಧತೆ ವ್ಯಕ್ತಪಡಿಸಿದರು.

2022ರ ಅಂತ್ಯದ ವೇಳೆಗೆ ಜಾನ್ಸನ್ ಮತ್ತು ಜಾನ್ಸನ್ ಅಭಿವೃದ್ಧಿಪಡಿಸಿದ ಲಸಿಕೆಗಳು ಸೇರಿದಂತೆ 100 ಕೋಟಿ ಕೋವಿಡ್ ಲಸಿಕೆ ಡೋಸ್‌ಗಳನ್ನು ಮುಖ್ಯವಾಗಿ ಇಂಡೋ-ಪೆಸಿಫಿಕ್ ಪ್ರದೇಶಕ್ಕೆ ಪೂರೈಕೆಸುವುದು ಉದ್ದೇಶ.

ಭವಿಷ್ಯದ ಸಾಂಕ್ರಾಮಿಕ ರೋಗಗಳ ಅಪಾಯವನ್ನು ಕಡಿಮೆ ಮಾಡಲು ಸಾಂಕ್ರಾಮಿಕ ಸಿದ್ಧತೆ ಮತ್ತು ಬಯೋಮೆಡಿಕಲ್ ಸಂಶೋಧನೆ ಸೇರಿದಂತೆ ಜಾಗತಿಕ ಆರೋಗ್ಯದ ಮೇಲೆ ಪ್ರಭಾವ ಬೀರುವ ಪ್ರಮುಖ ಕ್ಷೇತ್ರಗಳ ಮೇಲೆ ದ್ವಿಪಕ್ಷೀಯ ಸಹಕಾರವನ್ನು ಬಲಪಡಿಸಲು ಬೈಡನ್ ಜೊತೆ ಮೋದಿ ಮಾತುಕತೆ ನಡೆಸಿದರು. ಕ್ವಾಡ್ ಸಭೆಗೂ ಮುನ್ನ ಅವರು ಮಾತನಾಡಿದರು.

ಉಪಗ್ರಹ ರಕ್ಷಣೆ, ಬಾಹ್ಯಾಕಾಶ ಕಣ್ಗಾವಲಿಗೆ ಒಪ್ಪಂದ

ನವದೆಹಲಿ: ಭಾರತ ಮತ್ತು ಅಮೆರಿಕದ ಉಪಗ್ರಹಗಳನ್ನು ಪ್ರಾಕೃತಿಕ ಮತ್ತು ಮಾನವ ನಿರ್ಮಿತ 'ಬೆದರಿಕೆ'ಯಿಂದ ರಕ್ಷಿಸಿಕೊಳ್ಳುವ ಸಂಬಂಧ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ಬೆಂಗಳೂರಿನಲ್ಲಿರುವ 'ನೇತ್ರ' ಮತ್ತು ಕ್ಯಾಲಿಫೋರ್ನಿಯಾದ ವಾಂಡೆನ್ಬರ್ಗ್ ವಾಯುಪಡೆ ನೆಲೆಯ ಜೊತೆ ಸಹಭಾಗಿತ್ವ ಹೊಂದಲಿದೆ.

ಭಾರತ ಮತ್ತು ಅಮೆರಿಕ ವರ್ಷಾಂತ್ಯದ ವೇಳೆಗೆ ಈ ಒಪ್ಪಂದಕ್ಕೆ ಸಹಿ ಹಾಕಲಿವೆ. ಇದು, ಬಾಹ್ಯಾಕಾಶ ಚಟುವಟಿಕೆ ದೀರ್ಘಾವಧಿಯಲ್ಲಿ ಸುಸ್ಥಿರವಾಗಿಸಲು ದತ್ತಾಂಶ ಮತ್ತು ಸೇವೆಯನ್ನು ಪರಸ್ಪರ ವಿನಿಮಯಕ್ಕೆ ನೆರವಾಗಲಿದೆ.

ಅಮೆರಿಕದ ಶ್ವೇತಭವನದಲ್ಲಿ ಅಧ್ಯಕ್ಷ ಜೋ ಬೈಡನ್ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರ ನಡುವಿನ ಸಭೆಯ ನಂತರ ಶನಿವಾರ ಈ ಕುರಿತು ಜಂಟಿ ಹೇಳಿಕೆ ಬಿಡುಗಡೆ ಮಾಡಲಾಗಿದೆ.

ಈ ಒಪ್ಪಂದರ ಅನುಸಾರ ಇಸ್ರೊದ, ಬೆಂಗಳೂರಿನಲ್ಲಿರುವ 'ನೇತ್ರ' ಸಂಸ್ಥೆಯು ವಾಂಡೆನ್ಬರ್ಗ್‌ನಲ್ಲಿನ ಸಂಯುಕ್ತ ಬಾಹ್ಯಾಕಾಶ ಕಾರ್ಯಾಚರಣೆ ಕೇಂದ್ರದಿಂದ (ಸಿಎಸ್‌ಪಿಒಸಿ) ಬಾಹ್ಯಾಕಾಶ ಕಕ್ಷೆಯಲ್ಲಿನ ಅಂಶಗಳು, ಹೊಸ ಉಪಗ್ರಹಗಳ ಉಡಾವಣೆಯ ವೇಳೆ ಎದುರಾಗಬಹುದಾದ ಸಂಭವನೀಯ ಬೆದರಿಕೆ ಕುರಿತು ಮಾಹಿತಿ ಪಡೆಯಲಿದೆ.

ಇಸ್ರೊ ಬೆಂಗಳೂರಿನ ಪೀಣ್ಯದಲ್ಲಿರುವ ತನ್ನ ಕ್ಯಾಂಪಸ್‌ನಲ್ಲಿ, ಬಾಹ್ಯಾಕಾಶ ಕಕ್ಷೆಯಲ್ಲಿರುವ ಮಾಹಿತಿಗಳ ಮಾಹಿತಿ ಸಂಗ್ರಹಕ್ಕಾಗಿ 'ನೇತ್ರ' (NETRA) ಸಂಸ್ಥೆಯನ್ನು ಸ್ಥಾಪಿಸಿದೆ.

ಅಮೆರಿಕದ ಜಂಟಿ ಬಾಹ್ಯಾಕಾಶ ಕಾರ್ಯಾಚರಣೆ ನಿರ್ವಹಣಾ ಕೇಂದ್ರವು (ಜೆಎಸ್‌ಪಿಒಸಿ), ಅಮೆರಿಕ ನೇತೃತ್ವದಲ್ಲಿ ಸಿಎಸ್‌ಪಿಒಸಿ ಸ್ಥಾಪಿಸಿದ್ದು, ಆಸ್ಟ್ರೇಲಿಯಾ, ಕೆನಡಾ, ಫ್ರಾನ್ಸ್, ಜರ್ಮನಿ, ನ್ಯೂಜಿಲ್ಯಾಂಡ್ ಸಹಭಾಗಿತ್ವ ಹೊಂದಿದೆ. ಬಾಹ್ಯಾಕಾಶ ಕಣ್ಗಾವಲು ನೆಟ್‌ವರ್ಕ್ ಮೂಲಕ ಸಂಗ್ರಹಿಸಲಾದ ಮಾಹಿತಿಗಳನ್ನು ವಿನಿಮಯ ಮಾಡಿಕೊಳ್ಳಲಿದೆ.

ಪ್ರಧಾನಿ ಮೋದಿ ಇದೇ ಸಂದರ್ಭದಲ್ಲಿ ಅಮೆರಿಕದ ರಾಷ್ಟ್ರೀಯ ಬಾಹ್ಯಾಕಾಶ ಮಂಡಳಿ ಮುಖ್ಯಸ್ಥರೂ ಆದ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಅವರೊಂದಿಗೆ ಉಭಯ ದೇಶಗಳ ನಡುವೆ ಬಾಹ್ಯಾಕಾಶ ಸಹಭಾಗಿತ್ವ ವಿಷಯ ಕುರಿತು ಚರ್ಚಿಸಿದರು.

ವ್ಯಾಪಾರ ನೀತಿ ಸಭೆ

ದ್ವಿಪಕ್ಷೀಯ ಸಂಬಂಧ ಹೆಚ್ಚಿಸುವ ಗುರಿಯೊಂದಿಗೆ 2021ರ ಅಂತ್ಯದಲ್ಲಿ ಭಾರತ–ಅಮೆರಿಕ ವ್ಯಾಪಾರ ನೀತಿ ವೇದಿಕೆ ಸಭೆ ಕರೆಯಲು ನಿರ್ಧರಿಸಲಾಗಿದೆ.

ವ್ಯಾಪಾರದ ಆತಂಕಗಳು, ಉತ್ತೇಜನ ಬಯಸುವ ಕ್ಷೇತ್ರಗಳು, ಭವಿಷ್ಯದ ವ್ಯಾಪಾರ ಸಂಬಂಧದಲ್ಲಿ ಸುಧಾರಣೆ ಕುರಿತಂತೆ ಈ ಸಭೆಯಲ್ಲಿ ಚರ್ಚೆ ನಡೆಸಲಾಗುತ್ತದೆ ಎಂದು ಜಂಟಿ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಖಾಸಗಿ ವಲಯದ ಪ್ರತಿಭೆಗಳನ್ನು ಸದುಪಯೋಗಪಡಿಸಿಕೊಳ್ಳುವ ಮೂಲಕ 2022ರ ಆರಂಭದಲ್ಲಿ ಅಮೆರಿಕ–ಭಾರತ ಸಿಇಒ ಫೋರಂ ಸಭೆ ಮತ್ತು ವಾಣಿಜ್ಯ ಸಂವಾದವನ್ನು ಆಯೋಜಿಸಲು ಉಭಯ ನಾಯಕರು ಎದುರು ನೋಡುತ್ತಿದ್ದಾರೆ ಎಂದು ಪ್ರಕಟಣೆಯಲ್ಲಿ ಉಲ್ಲೇಖಿಸಲಾಗಿದೆ.

ಅಭಿವೃದ್ಧಿ ಯೋಜನೆಗಳಲ್ಲಿ ಹೂಡಿಕೆ ಮಾಡಲು ನೆರವಾಗುವ ನಿಟ್ಟಿನಲ್ಲಿ ಈಗ ನಡೆಯುತ್ತಿರುವ ಹೂಡಿಕೆ ಉತ್ತೇಜನ ಒಪ್ಪಂದ ಮಾತುಕತೆ ಶೀಘ್ರವೇ ಅಂತಿಮ ಸ್ವರೂಪ ಪಡೆಯಲಿದೆ ಎಂಬುದನ್ನು ಉಭಯ ನಾಯಕರು ಉಲ್ಲೇಖಿಸಿದ್ದಾರೆ.

ಇಂಡೋ-ಪೆಸಿಫಿಕ್ ವಲಯದ ಉದ್ದಕ್ಕೂ ಆರ್ಥಿಕತೆಯನ್ನು ಮೇಲೆತ್ತುವ ಸುಸ್ಥಿರ ಮತ್ತು ಪಾರದರ್ಶಕ ನಿಯಮಗಳನ್ನು ರೂಪಿಸಲು ಅಮೆರಿಕ–ಭಾರತ ಹೇಗೆ ಒಟ್ಟಾಗಿ ಕೆಲಸ ಮಾಡಬೇಕು ಎಂಬ ಬಗ್ಗೆಯೂ ಮೋದಿ ಮತ್ತು ಬೈಡನ್ ಚರ್ಚಿಸಿದರು.

ವೆಬಿನಾರ್‌ನಲ್ಲಿ ಆರೆಸ್ಸೆಸ್ ಮುಖಂಡ ರಾಮ್ ಮಾಧವ್ ಅಭಿಪ್ರಾಯ

'ಪ್ರತ್ಯೇಕತೆ ಅಲ್ಲ; ರಾಷ್ಟ್ರೀಯವಾದ ಬೆಳೆಸಿ'

ನವದೆಹಲಿ (ಪಿಟಿಐ): 'ದೇಶ ವಿಭಜನೆ ಪ್ರಕ್ರಿಯೆಯು ಕೇವಲ ಭಯೋತ್ಪಾದಕರನ್ನಷ್ಟೇ ಪ್ರತ್ಯೇಕಗೊಳಿಸಲಿಲ್ಲ, ಭಾವನೆಗಳನ್ನೂ ಪ್ರತ್ಯೇಕವಾಗಿಸಿತು' ಎಂದು ಆರ್‌ಎಸ್‌ಎಸ್ ಮುಖಂಡ ರಾಮ್ ಮಾಧವ್ ಹೇಳಿದರು.

'ಪ್ರತ್ಯೇಕತಾವಾದದಲ್ಲಿ ನಂಬಿಕೆ ಹೊಂದಿರುವ ಶಕ್ತಿಗಳನ್ನು ಹತ್ತಿಕ್ಕುವುದರ ಜೊತೆಗೇ 'ಭಾವನೆಗಳನ್ನು ಬೆಸೆಯುವ' ಮಾರ್ಗಗಳನ್ನು ಹುಡುಕುವುದು ಈಗಿನ ಅಗತ್ಯವಾಗಿದೆ' ಎಂದೂ ಅವರು ಪ್ರತಿಪಾದಿಸಿದರು.

'ಭಾರತ: ವಿಭಜನೆ ಮತ್ತು ಆ ನಂತರ: ತಲ್ಲಣಗಳ ಸ್ಮರಣಾ ದಿನ' ಕುರಿತು ಜೆಎನ್‌ಯು ಶನಿವಾರ ಏರ್ಪಡಿಸಿದ್ದ ಅಂತರರಾಷ್ಟ್ರೀಯ ಮಟ್ಟದ ವೆಬಿನಾರ್‌ನಲ್ಲಿ ಅವರು ಮಾತನಾಡಿದರು.



ಸ್ವಾತಂತ್ರ್ಯ ಹೋರಾಟದ ಅವಧಿಯಲ್ಲಿ ಮಹಮ್ಮದ್ ಅಲಿ ಜಿನ್ನಾರನ್ನು ದೈತ್ಯವಾಗಿ ಬೆಳೆಯಲು ಬಿಡಲಾಯಿತು. ಇದೇ ವಿಭಜನೆಯ ದೃಢಸಂಕಲ್ಪಕ್ಕೆ ಕಾರಣವಾಯಿತು' ಎಂದರು.

ಮಹಮ್ಮದ್ ಅಲಿ ಜಿನ್ನಾ ಅವರು 20ನೇ ಶತಮಾನದ ಆರಂಭದಿಂದ, ಆಗಸ್ಟ್ 14,1947ರಲ್ಲಿ ಪಾಕಿಸ್ತಾನ ರಚನೆಯವರೆಗೂ ಆಲ್ ಇಂಡಿಯಾ ಮುಸ್ಲಿಂ ಲೀಗ್ ನಾಯಕರಾಗಿದ್ದರು. ಅಖಂಡ ಭಾರತದ ವಿಭಜನೆ ಎಂಬುದು ಆ ಕಾಲಘಟ್ಟದಲ್ಲಿ ಇತರೆ ದೇಶಗಳಲ್ಲಿ ಆದ ವಿಭಜನೆಯಂತೆ ಕೇವಲ ಗಡಿ ನಿಗದಿಪಡಿಸುವುದಷ್ಟೇ ಆಗಿರಲಿಲ್ಲ. ಆಚರಣೆಗಳು ಭಿನ್ನವಾಗಿದ್ದರೂ ಒಟ್ಟಿಗೇ ಬದುಕುತ್ತಿದ್ದ ಹಿಂದೂ, ಮುಸಲ್ಮಾನರ ಪ್ರತ್ಯೇಕ ದೇಶಗಳು ರಚನೆಯಾದವು. ಈ ವಿಭಜನೆಯು ಕೇವಲ ಭಯೋತ್ಪಾದಕರನ್ನಷ್ಟೇ ಪ್ರತ್ಯೇಕವಾಗಿಸಲಿಲ್ಲ. ಭಾವನೆಗಳನ್ನು ಪ್ರತ್ಯೇಕವಾಗಿಸಿತು. ಭಾವನೆಗಳ ಪ್ರತ್ಯೇಕತೆ ಎಂಬುದನ್ನು ಎಚ್ಚರಿಕೆ ಮತ್ತು ಗಂಭೀರವಾಗಿ ಪರಿಗಣಿಸಬೇಕು. ಈ ಕಾರಣದಿಂದ ಸಂಯುಕ್ತ ಭಾರತ ಸಮಾಜ ನಿರ್ಮಿಸಲು ಪ್ರತ್ಯೇಕತಾವಾದ ಮತ್ತು ಕೋಮುವಾದ ಚಿಂತನೆಗಳನ್ನು ಹತ್ತಿಕ್ಕಬೇಕು. ರಾಷ್ಟ್ರೀಯವಾದ ಚಿಂತನೆಗೆ ಉತ್ತೇಜನ ನೀಡಬೇಕು ಎಂದರು.

'ಅಖಂಡ ಭಾರತ'ದ ಕಲ್ಪನೆ ಎಂದರೆ ಕೇವಲ ಭೌಗೋಳಿಕ ಗಡಿಗಳನ್ನು ಸೇರಿಸುವುದಷ್ಟೇ ಅಲ್ಲ. ದೇಶ ವಿಭಜನೆಯ ಸಂದರ್ಭದಲ್ಲಿ ಮಾನಸಿಕವಾಗಿ ಮೂಡಿರುವ ಗಡಿಯನ್ನು, ಪ್ರತ್ಯೇಕತಾ ಭಾವನೆಯನ್ನು ತೆಗೆದು ಹಾಕುವ ದೃಷ್ಟಿಕೋನದಿಂದ ನೋಡಬೇಕಾಗುತ್ತದೆ ಎಂದು ಅವರು ಹೇಳಿದರು.

ರಾಷ್ಟ್ರೀಯ ಸ್ವಯಂಸೇವಕ ಸಂಘದ ರಾಷ್ಟ್ರೀಯ ಕಾರ್ಯಕಾರಿಣಿಯ ಸದಸ್ಯರೂ ಆದ ಮಾಧವ್, ದೇಶ ವಿಭಜನೆಯ ಬೆಳವಣಿಗೆಯನ್ನು 'ತಪ್ಪು ತೀರ್ಮಾನದ ಕಾರಣ ಉಂಟಾದ ಪ್ರಮಾದ' ಎಂದು ಬಣ್ಣಿಸಿದರು.

ಪ್ರಧಾನಿ ನರೇಂದ್ರ ಮೋದಿ ಅವರು ಈಚೆಗೆ ಆಗಸ್ಟ್ 14 ಅನ್ನು ದೇಶ ವಿಭಜನೆಯ ನೋವುಗಳ ಸ್ಮರಣಾ ದಿನವಾಗಿ ಆಚರಿಸಲಾಗುವುದು ಎಂದು ಪ್ರಕಟಿಸಿದ್ದರು. ಆಗ, ವಿಭಜನೆ ವೇಳೆ ಅಸಂಖ್ಯ ಜನರು ವಸತಿ ಕಳೆದುಕೊಂಡರೆ, ವಿಭಜನೆಯ ಹಿಂಸೆ, ದ್ವೇಷದಿಂದ ಅನೇಕರು ಜೀವ-ಜೀವನ ಕಳೆದುಕೊಂಡರು ಎಂದಿದ್ದರು.

ದೇಶಕ್ಕೆ ಇನ್ನೂ ಬೇಕು 600 ವೈದ್ಯಕೀಯ ಕಾಲೇಜು: ಗಡ್ಕರಿ

ಪ್ರಜಾವಾಣಿ ವಾರ್ತೆ

ಪುಣೆ: 'ದೇಶದಲ್ಲಿ ಇನ್ನೂ ಕನಿಷ್ಠ 600 ವೈದ್ಯಕೀಯ ಕಾಲೇಜುಗಳು, ಏಮ್ಸ್ ಮಾದರಿಯ 50 ಸಂಸ್ಥೆಗಳು ಮತ್ತು 200 ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳ ಅಗತ್ಯವಿದೆ' ಎಂದು ಕೇಂದ್ರ ಸಚಿವ



ನಿತಿನ್ ಗಡ್ಕರಿ ಅವರು ಅಭಿಪ್ರಾಯ ಪಟ್ಟಿದ್ದಾರೆ.

ಮಹಾರಾಷ್ಟ್ರದ ಸತಾರಾ ಜಿಲ್ಲೆಯ ಕರಾಡ್ ಪಟ್ಟಣದಲ್ಲಿ ಕೋವಿಡ್–19 ಸೇನಾನಿಗಳ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದರು.

'ಸಾರ್ವಜನಿಕ– ಖಾಸಗಿ ಸಹಭಾಗಿತ್ವದಲ್ಲಿ ಮೂಲಸೌಕರ್ಯಗಳ ಕ್ಷೇತ್ರಗಳಲ್ಲಿ ಹೂಡಿಕೆ ಮಾದರಿಯಲ್ಲೇ ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಗಳಲ್ಲೂ ಇಂಥ ಸಹಭಾಗಿತ್ವದ ಅಗತ್ಯವಿದೆ. ಈ ನಿಟ್ಟನಲ್ಲಿ ವೈದ್ಯಕೀಯ ಕ್ಷೇತ್ರದಲ್ಲಿ ಸೌಲಭ್ಯಗಳನ್ನು ಕಲ್ಪಿಸುವತ್ತ ಸಹಕಾರ ಕ್ಷೇತ್ರವು ಗಮನಹರಿಸಬೇಕಿದೆ' ಎಂದರು.

'ಸರ್ಕಾರ ಕೂಡ ವೈದ್ಯಕೀಯ–ಶಿಕ್ಷಣ ಕ್ಷೇತ್ರಗಳಲ್ಲಿ ಕೆಲಸ ಮಾಡುವ ಸಂಸ್ಥೆಗಳಿಗೆ ಸಹಾಯ ಮಾಡುವ ಚಿಂತನೆ ಹೊಂದಿದೆ' ಎಂದೂ ಅವರು ತಿಳಿಸಿದರು.

ಜಿಲ್ಲಾ ನ್ಯಾಯಾಲಯಗಳ ಆವರಣದಲ್ಲಿ ಸೂಕ್ತ ಭದ್ರತೆ

ಸರ್ಕಾರಗಳಿಗೆ ನಿರ್ದೇಶನ ಕೋರಿ 'ಸುಪ್ರೀಂ'ಗೆ ಅರ್ಜಿ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದಾದ್ಯಂತ ಇರುವ ಜಿಲ್ಲಾ ನ್ಯಾಯಾಲಯಗಳ ಆವರಣದಲ್ಲಿ ಭದ್ರತೆಯನ್ನು ಹೆಚ್ಚಿಸಲು ಕ್ರಮ ಕೈಗೊಳ್ಳುವಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ನಿರ್ದೇಶನ ನೀಡಬೇಕು ಎಂದು ಕೋರಿ ಸುಪ್ರೀಂ ಕೋರ್ಟ್ ಹಾಗೂ ದೆಹಲಿ ಹೈಕೋರ್ಟ್‌ನಲ್ಲಿ ಶನಿವಾರ ಪ್ರತ್ಯೇಕ ಅರ್ಜಿ ಸಲ್ಲಿಸಲಾಗಿದೆ.

ಇಲ್ಲಿನ ರೋಹಿಣಿಯ ಜಿಲ್ಲಾ ನ್ಯಾಯಾಲಯದಲ್ಲಿ ಶುಕ್ರವಾರ ವಿಚಾರಣೆಗೆ ಹಾಜರಾಗಿದ್ದ ರೌಡಿ ಜಿತೇಂದರ್ ಗೋಗಿಯ ಹತ್ಯೆ ಘಟನೆಯನ್ನು ಗಂಭೀರವಾಗಿ ಪರಿಗಣಿಸಿ, ನ್ಯಾಯಾಲಯಗಳ ಆವರಣದಲ್ಲಿ ತಕ್ಷಣವೇ ಭದ್ರತೆಗೆ ಆದ್ಯತೆ ನೀಡಲು ಸೂಚಿಸುವಂತೆ ಕೋರಿ ವಕೀಲರಾದ ರಾಬಿನ್ ರಾಜು, ಬ್ಲೆಸನ್ ಮ್ಯಾಥ್ಯೂ, ವಿಶಾಲ್ ತಿವಾರಿ, ದೀಪಾ ಜೋಸೆಫ್ ಮತ್ತಿತರರು ಅರ್ಜಿ ಸಲ್ಲಿಸಿದ್ದಾರೆ.



ವಕೀಲರು, ನ್ಯಾಯಾಲಯದ ಸಿಬ್ಬಂದಿ ಮತ್ತು ಕಕ್ಷಿದಾರರ ಭದ್ರತೆಯ ದೃಷ್ಟಿಯಿಂದ ರೌಡಿಗಳು ಹಾಗೂ ಗಂಭೀರ ಕೃತ್ಯ ಎಸಗುವ ಅಪರಾಧಿಗಳನ್ನು ಭೌತಿಕವಾಗಿ ನ್ಯಾಯಾಲಯಕ್ಕೆ ಹಾಜರುಪಡಿಸದೆ, ಕಾರಾಗೃಹದಲ್ಲೇ ಇರಿಸಿ, ವಿಡಿಯೊ ಕಾನ್ಫರೆನ್ಸ್ ಮೂಲಕ ಅವರ ವಿಚಾರಣೆಯನ್ನು ನಡೆಸಲು ಕ್ರಮ ಕೈಗೊಳ್ಳಬೇಕು ಎಂದೂ ಅರ್ಜಿಯಲ್ಲಿ ಮನವಿ ಮಾಡಲಾಗಿದೆ.

ನ್ಯಾಯಾಧೀಶರಿಗೆಭದ್ರತೆನೀಡಿದಂತೆಯೇ, ನ್ಯಾಯಾಲಯಗಳ ಆವರಣದಲ್ಲಿ ಉಗ್ರರು ಹಾಗೂ ರೌಡಿಗಳ ಸಂಭವನೀಯ ದಾಳಿಯನ್ನು ತಪ್ಪಿಸಲು ಆದ್ಯತೆ ನೀಡಬೇಕು. ನ್ಯಾಯಾಲಯಗಳ ಪ್ರವೇಶ ದ್ವಾರದಲ್ಲಿ ಭದ್ರತಾ ಸಿಬ್ಬಂದಿಯೊಂದಿಗೆ ಸಹಕಾರ ನೀಡಲು ತನ್ನ ಸದಸ್ಯರಿಗೆ ಸೂಚಿಸುವಂತೆ ಎಲ್ಲ ಜಿಲ್ಲಾ ವಕೀಲರ ಸಂಘಗಳಿಗೆ ಸಲಹೆ ನೀಡುವಂತೆಯೂ ಆಗ್ರಹಿಸಲಾಗಿದೆ.

ಇತ್ತೀಚಿನ ದಿನಗಳಲ್ಲಿ ನ್ಯಾಯಾಲಯಗಳ ಎದುರು ಅಧಿಕ ಜನಸಂದಣಿ ಕಂಡುಬರುತ್ತಿದ್ದು, ಭದ್ರತೆಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿಲ್ಲ. ಎಲ್ಲ ನ್ಯಾಯಾಲಯಗಳ ಆವರಣದಲ್ಲಿ ಸಿ.ಸಿ. ಟಿ.ವಿ ಕ್ಯಾಮೆರಾಗಳನ್ನು ಅಳವಡಿಸಬೇಕು. ಶಸ್ತ್ರಸಜ್ಜಿತ ಪೊಲೀಸರನ್ನು ನಿಯುಕ್ತಗೊಳಿಸುವಂತೆ ನಿರ್ದೇಶನ ನೀಡಬೇಕು ಎಂದು ಕೋರಲಾಗಿದೆ.

ರೋಹಿಣಿಯ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ಶುಕ್ರವಾರ ವಕೀಲರ ವೇಷದಲ್ಲಿ ಬಂದ ದುಷ್ಕರ್ಮಿಗಳಿಬ್ಬರು, ವಿಚಾರಣೆಗೆ ಹಾಜರಾಗಿದ್ದ ಕುಖ್ಯಾತ ರೌಡಿ ಜಿತೇಂದರ್ ಮಾನ್ ಗೋಗಿಯನ್ನು ಕೋರ್ಟ್ ಹಾಲ್‌ನಲ್ಲೇ ಗುಂಡಿಟ್ಟು ಹತ್ಯೆ ಮಾಡಿದ್ದರು. ನಂತರ ಪೊಲೀಸರು ನಡೆಸಿದ ಪ್ರತಿ ದಾಳಿಯಲ್ಲಿ ಸಾವಿಗೀಡಾಗಿದ್ದರು.

ಕಲಾಪ ಬಹಿಷ್ಕರಿಸಿದ ವಕೀಲರು: ಶುಕ್ರವಾರ ಗುಂಡಿನ ದಾಳಿ ಘಟನೆಯ ಹಿನ್ನೆಲೆಯಲ್ಲಿ ಶನಿವಾರ ದೆಹಲಿಯ ಬಹುತೇಕ ಜಿಲ್ಲಾ ನ್ಯಾಯಾಲಯಗಳಲ್ಲಿ ವಕೀಲರು ಕಲಾಪ ಬಹಿಷ್ಕರಿಸಿದರು.

ಇಲ್ಲಿನ ಎಲ್ಲ ಏಳು ಜಿಲ್ಲಾ ನ್ಯಾಯಾಲಯಗಳ ಆವರಣದಲ್ಲಿನ ಭದ್ರತಾ ವ್ಯವಸ್ಥೆಯನ್ನು ಪರಿಶೀಲಿಸಿ ಅಗತ್ಯ ಮಾರ್ಪಾಡು ಮಾಡುವಂತೆ ಕೋರಿ ಕಲಾಪ ಬಹಿಷ್ಕರಿಸಲಾಯಿತು.


ಕೆಲವು ತುರ್ತು ಪ್ರಕರಣಗಳನ್ನು ಹೊರತುಪಡಿಸಿ ಇತರ ಪ್ರಕರಣಗಳ ವಿಚಾರಣೆಯಿಂದ ವಕೀಲರು ದೂರ ಉಳಿದರು ಎಂದು ದೆಹಲಿಯ ಜಿಲ್ಲಾ ನ್ಯಾಯಾಲಯಗಳ ವಕೀಲರ ಸಂಘಗಳ ಸಮನ್ವಯ ಸಮಿತಿಯ ವಕ್ತಾರ ಎನ್. ಸಂಜೀವ್ ತಿಳಿಸಿದ್ದಾರೆ.

ದೀನ ದಯಾಳ್ ಉಪಾಧ್ಯಾಯ ಜನ್ಮದಿನಾಚರಣೆ

‘ಜನಸಂಘಕ್ಕೆ ಸೈದ್ಧಾಂತಿಕ ತಳಹದಿ ಹಾಕಿದ ನೇತಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಂಡಿತ್ ದೀನ ದಯಾಳ್ ಉಪಾಧ್ಯಾಯ ಅವರು ಭಾರತೀಯ ಜನಸಂಘಕ್ಕೆ ಸೈದ್ಧಾಂತಿಕ ತಳಹದಿ ಹಾಕಿದ ನೇತಾರ. ಅವರು ಹಾಕಿಕೊಟ್ಟ ತಳಹದಿಯ ಮೇಲೆಯೇ ಬಿಜೆಪಿ ಬಲವಾಗಿ ಬೆಳೆದುನಿಂತಿದೆ ಎಂದು ಬಿಜೆಪಿಯ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿಯೂ ಆಗಿರುವ ವಿಧಾನ ಪರಿಷತ್ ಸದಸ್ಯ ಎನ್. ರವಿಕುಮಾರ್ ಹೇಳಿದರು.



ಎನ್. ರವಿಕುಮಾರ್

ಬಿಜೆಪಿ ರಾಜ್ಯ ಘಟಕದ ಕಚೇರಿಯಲ್ಲಿ ಶನಿವಾರ ನಡೆದ ದೀನ ದಯಾಳ್ ಉಪಾಧ್ಯಾಯ ಅವರ ಜನ್ಮದಿನಾಚರಣೆಯಲ್ಲಿ ಮಾತನಾಡಿದ ಅವರು, ‘ಉಪಾಧ್ಯಾಯ ಅವರು ಭಾರತೀಯ ಜನಸಂಘದ ಮೊದಲ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿಯಾಗಿದ್ದರು. ಆಗ ಜನಸಂಘಕ್ಕೆ ಸೈದ್ಧಾಂತಿಕ ಸ್ಪಷ್ಟನೆ ನೀಡಿದ್ದರು. ಅದೇ ಸಿದ್ಧಾಂತದಲ್ಲಿ ಬಿಜೆಪಿ ಮುನ್ನಡೆಯುತ್ತಿದೆ’ ಎಂದರು.

ಕಾಶ್ಮೀರವು ಭಾರತದ ಅವಿಭಾಜ್ಯ ಅಂಗ ಎಂಬುದು ಉಪಾಧ್ಯಾಯರ ಪ್ರತಿಪಾದನೆ. ಅದನ್ನು ಸಾಕಾರಗೊಳಿಸುವುದಕ್ಕಾಗಿಯೇ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ ಸಂವಿಧಾನದ 370ನೇ ವಿಧಿಯನ್ನು ರದ್ದು ಮಾಡಿದೆ. ದೇಶದ ಏಕತೆಯನ್ನು ರಕ್ಷಿಸುವುದು ಮತ್ತು ಸ್ವದೇಶಿ ಆರ್ಥಿಕ ಚಿಂತನೆಯನ್ನು ಸಾಕಾರಗೊಳಿಸುವ ಪ್ರಯತ್ನದ ಹಿಂದೆಯೂ ಉಪಾಧ್ಯಾಯ ಅವರ ಸಿದ್ಧಾಂತಗಳ ಪ್ರಭಾವವಿದೆ ಎಂದು ಹೇಳಿದರು.

ಸಮಾಜದ ಕಟ್ಟಕಡೆಯ ವ್ಯಕ್ತಿಗೂ ನ್ಯಾಯ ದೊರಕಬೇಕು ಎಂಬುದು ಉಪಾಧ್ಯಾಯ ಅವರ ಆಶಯವಾಗಿತ್ತು. ಅದನ್ನು ಕಾರ್ಯರೂಪಕ್ಕೆ ತರುವ ಕೆಲಸವನ್ನು ಕೇಂದ್ರ ಸರ್ಕಾರ ಮಾಡುತ್ತಿದೆ. ಉಜ್ವಲ, ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್, ಜನ-ಧನ ಮತ್ತಿತರ ಯೋಜನೆಗಳು ಈ ಉದ್ದೇಶಕ್ಕಾಗಿಯೇ ಜಾರಿಗೆ ಬಂದಿವೆ ಎಂದರು.

ಬಿಜೆಪಿ ರಾಜ್ಯ ಕಚೇರಿ ಕಾರ್ಯದರ್ಶಿ ಲೋಕೇಶ್ ಅಂಬೆಕಲ್ಲು, ಕಾನೂನು ಪ್ರಕೋಷ್ಠದ ರಾಜ್ಯ ಸಂಚಾಲಕ ಎಸ್.ಎಸ್. ಮಿಟ್ಟಲ್‌ಕೋಡ್, ಪಕ್ಷದ ಮುಖಂಡರು, ಕಾರ್ಯಕರ್ತರು ಉಪಸ್ಥಿತರಿದ್ದರು.

‘ಯುಪಿಎಸ್‌ಸಿ ಪರೀಕ್ಷೆ: ಇಂಡಿಯಾ ಫಾರ್ ಐ.ಎ.ಎಸ್‌’ನ 21 ವಿದ್ಯಾರ್ಥಿಗಳು ತೇರ್ಗಡೆ’

ಬೆಂಗಳೂರು: ಕೇಂದ್ರ ಲೋಕಸೇವಾ ಆಯೋಗದ (ಯುಪಿಎಸ್‌ಸಿ) ನಡೆಸಿದ 2020ನೇ ಸಾಲಿನ ನಾಗರಿಕ ಸೇವೆಗಳ ನೇಮಕಾತಿ ಪರೀಕ್ಷೆಯಲ್ಲಿ ‘ಇಂಡಿಯಾ ಫಾರ್ ಐ.ಎ.ಎಸ್’ ಅಕಾಡೆಮಿಯ 21 ಅಭ್ಯರ್ಥಿಗಳು ತೇರ್ಗಡೆಯಾಗಿದ್ದಾರೆ.

ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಕಾಡೆಮಿ ಅಧ್ಯಕ್ಷ ಡಾ. ಸಿ.ಎಸ್. ಕೇದಾರ್, ‘ಪರೀಕ್ಷೆಯಲ್ಲಿ ರ‍್ಯಾಂಕ್ ಪಡೆದ ರಾಜ್ಯದ ಅಭ್ಯರ್ಥಿಗಳಲ್ಲಿ ಬಹುತೇಕರು ಕಿರಿಯ ವಯಸ್ಸಿನವರು. ಅವರಿಗೆ ಹೆಚ್ಚಿನ ಅವಧಿ ಸೇವೆ ಸಲ್ಲಿಸಲು ಅವಕಾಶ ಸಿಗಲಿದೆ. ಬಡ ಕುಟುಂಬದ ಅಭ್ಯರ್ಥಿಗಳಿಗೆ ದೂರದ ದೆಹಲಿಗೆ ತೆರಳಿ, ತರಬೇತಿ ಪಡೆಯಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಇಲ್ಲಿಯೇ ತರಬೇತಿ ಆರಂಭಿಸಲಾಯಿತು’ ಎಂದು ತಿಳಿಸಿದರು.



ಕೇಂದ್ರ ಲೋಕಸೇವಾ ಆಯೋಗದ ಪರೀಕ್ಷೆಯಲ್ಲಿ ರ‍್ಯಾಂಕ್ ಪಡೆದ ‘ಇಂಡಿಯಾ ಫಾರ್ ಐ.ಎ.ಎಸ್’ ಅಕಾಡೆಮಿಯ ಅಭ್ಯರ್ಥಿಗಳಾದ ಬಿಂದು,ಸಂದೀಪ್,ಸೂರಜ್ ಡಿ. ಮತ್ತು ಸಂತೋಷ್ ಅವರನ್ನು ಡಾ.ಸಿ.ಎಸ್.ಕೇದಾರ್ ಅಭಿನಂದಿಸಿದರು. ಅಕಾಡೆಮಿಯ ಸಂಸ್ಥಾಪಕ ಶ್ರೀನಿವಾಸ್, ನಿರ್ದೇಶಕ ಬಾಬು ಸಂದೀಪ್ ಇದ್ದರು

ನಗರದಲ್ಲಿ ರಾತ್ರಿ ಬಿರುಸಿನ ಮಳೆ

ಬೆಂಗಳೂರು: ನಗರದಲ್ಲಿ ಮೋಡ ಕವಿದ ವಾತಾವರಣ ಮುಂದುವರಿದಿದ್ದು, ಹಲವೆಡೆ ಶನಿವಾರ ರಾತ್ರಿ ಜೋರು ಮಳೆ ಸುರಿಯಿತು.

ಕೆಲ ಪ್ರದೇಶಗಳಲ್ಲಿ ಮಧ್ಯಾಹ್ನ ಹಾಗೂ ಸಂಜೆ ಕೆಲವೆಡೆ ಜಿಟಿ ಜಿಟಿ ಮಳೆಯಾಯಿತು. ರಾತ್ರಿ 10 ಗಂಟೆ ಸುಮಾರಿಗೆ ಮಳೆ ಅಬ್ಬರ ಜೋರಾಗಿತ್ತು. ತಡರಾತ್ರಿಯೂ ಮಳೆ ಮುಂದುವರಿದಿತ್ತು.

ರಾಜಾಜಿನಗರ, ಮಲ್ಲೇಶ್ವರ, ಮಹಾಲಕ್ಷ್ಮಿಲೇಔಟ್,ಬಸವೇಶ್ವರನಗರ, ವಿಜಯನಗರ, ಯಶವಂತಪುರ, ಆರ್.ಟಿ.ನಗರ, ಸಂಜಯನಗರ, ಪೀಣ್ಯ, ಹೆಬ್ಬಾಳ, ಕೋರಮಂಗಲ, ಎಂ.ಜಿ.ರಸ್ತೆ, ಅಶೋಕನಗರ, ಎಚ್‌ಎಎಲ್, ಹೆಣ್ಣೂರು, ಸುತ್ತಮುತ್ತ ಸ್ಥಳಗಳಲ್ಲಿ ಮಳೆ ಅಬ್ಬರವಿತ್ತು.

ನಗರದಲ್ಲಿ ಇಂದು

ಶ್ರೀ ನಾರಾಯಣ ಗುರು ವಿಚಾರ ವೇದಿಕೆಯ ಬೆಂಗಳೂರು ಮಹಾನಗರ ಘಟಕ ಉದ್ಘಾಟನೆ: ಅಧ್ಯಕ್ಷತೆ: ಸತ್ಯಜಿತ್ ಸುರತ್ಕಲ್, ಮುಖ್ಯ ಅತಿಥಿ: ರಾಜನಂದಿನಿ ಕಾಗೋಡು, ಪರಶುರಾಮ್, ರೀನಾ ಸುವರ್ಣ, ರಕ್ಷಿತ್ ಶಿವರಾಮ್, ಗೋವಿಂದಬಾಬು ಪೂಜಾರಿ, ವೇಣುಗೋಪಾಲ್, ನಕುಲ್ ಗೋವಿಂದ್, ದುನಿಯಾ ರಶ್ಮಿ, ಸ್ಥಳ: ಅಲುಮಿನಿ ಹಾಲ್, ಕೆ.ಆರ್. ವೃತ್ತ, ಬೆಳಿಗ್ಗೆ 9.30

ಸಮ್ಮೇಳನ: ‘ಯೋಗಕ್ಷೇಮಕ್ಕಾಗಿ ಸಮಗ್ರ ಚಿಕಿತ್ಸೆ’ ಒಂದು ಅಂತರ್ ಶಾಸ್ತ್ರೀಯ ಅನುಸಂಧಾನ ಸಮ್ಮೇಳನ, ದಿವ್ಯ ಸಾನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಉಪನ್ಯಾಸಕರು: ಡಾ.ಕಿರಣ್ ಎಂ. ಗೌಡ, ಡಾ.ಅಹಲ್ಯಾ ಶರ್ಮಾ, ಡಾ.ರಾಘವೇಂದ್ರ ರಾವ್, ಡಾ. ವರ್ತಿಕಾ ಸಕ್ಸೆನಾ, ಆಯೋಜನೆ: ಉನ್ನತಿ ಹೀಲಿಂಗ್ ಫೌಂಡೇಶನ್, ಸ್ಥಳ: ಕಾಲಭೈರವೇಶ್ವರಸ್ವಾಮಿ ಆಯುರ್ವೇದ ವೈದ್ಯಕೀಯ ಕಾಲೇಜು ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರ, ವಿಜಯನಗರ, ಬೆಳಿಗ್ಗೆ 9.15

ಕನ್ನಡ ಸ್ಪಷ್ಟ ಬರವಣಿಗೆ ಕಮ್ಮಟ: ಉದ್ಘಾಟನೆ: ನಿಡಸಾಲೆ ಪುಟ್ಟಸ್ವಾಮಯ್ಯ, ಕಮ್ಮಟದ ನಿರ್ದೇಶಕ: ಕೆ. ರಾಜಕುಮಾರ್, ಅಧ್ಯಕ್ಷತೆ: ಮಹೇಶ್, ಆಶಯ ಭಾಷಣ: ಎಂ. ಪ್ರಕಾಶಮೂರ್ತಿ, ಆಯೋಜನೆ: ಸದ್ಭಾವನಾ ಪ್ರತಿಷ್ಠಾನ, ಸ್ಥಳ: ಕೆಂಪೇಗೌಡ ನಿರ್ವಹಣಾ ಅಧ್ಯಯನ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ನಾಗರಬಾವಿ 2ನೇ ಹಂತ, ಹೊರವರ್ತುಲ ರಸ್ತೆ, ಬೆಳಿಗ್ಗೆ 9.30

‘ಬದುಕಿನಾನಂದ ಕಲೆ’ ಪುಸ್ತಕ ಬಿಡುಗಡೆ: ಮುಖ್ಯ ಅತಿಥಿ: ಡಿ.ಆರ್. ನಾಗರಾಜ್, ಗೋಪಿನಾಥ್ ಎಸ್.ಎನ್., ಕೃತಿ ಬಿಡುಗಡೆ: ಎಸ್.ಎನ್. ಮೂರ್ತಿ, ಕೃತಿ ಪರಿಚಯ: ಎಚ್. ಗೋಪಾಲಕೃಷ್ಣ, ಮಾಧುರಿ ಕೆ. ಶಿವಣಗಿ, ಆಯೋಜನೆ: ನಿರುತ ಪಬ್ಲಿಕೇಷನ್ಸ್, ಸ್ಥಳ: ಸುಚಿತ್ರ ಸಿನಿಮಾ ಆ್ಯಂಡ್ ಕಲ್ಚರಲ್ ಅಕಾಡೆಮಿ, ಬನಶಂಕರಿ 2ನೇ ಹಂತ, ಬೆಳಿಗ್ಗೆ 10

ನಲವತ್ತರ ನಲಿವು ಕಾರ್ಯಕ್ರಮ: ಉದ್ಘಾಟನೆ: ರವಿಸುಬ್ರಹ್ಮಣ್ಯ, ಮುಖ್ಯ ಅತಿಥಿ: ದೊಡ್ಡರಂಗೇಗೌಡ, ಬಿ.ಎಸ್. ಸತ್ಯನಾರಾಯಣ, ಗೌರವ ಉಪಸ್ಥಿತಿ: ಎಂ.ಎಚ್. ಕೃಷ್ಣಯ್ಯ, ಅಧ್ಯಕ್ಷತೆ: ಟಿ.ವಿ. ವೆಂಕಟಾಚಲ ಶಾಸ್ತ್ರಿ, ಆಯೋಜನೆ: ಬಿ.ಎಂ.ಶ್ರೀ. ಪ್ರತಿಷ್ಠಾನ, ಸ್ಥಳ: ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ. ಕಲಾಭವನ, ಎನ್.ಆರ್.ಕಾಲೊನಿ, ಬೆಳಿಗ್ಗೆ 10.30

‘ಸೂರ್ಯ ಎಲಿಗೆನ್ಸ್’ ಬಹುಮಹಡಿ ವಸತಿ ಸಮುಚ್ಚಯ ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಸಾಂಕೇತಿಕ ಪತ್ರಗಳ ವಿತರಣೆ: ವಿ. ಸೋಮಣ್ಣ, ಉಪಸ್ಥಿತಿ: ಎ. ನಾರಾಯಣಸ್ವಾಮಿ, ಅಧ್ಯಕ್ಷತೆ: ಬಿ. ಶಿವಣ್ಣ, ಆಯೋಜನೆ: ಕರ್ನಾಟಕ ಗೃಹ ಮಂಡಳಿ, ವಸತಿ ಇಲಾಖೆ, ಸ್ಥಳ: ‘ಸೂರ್ಯ ಎಲಿಗೆನ್ಸ್’ ಆವರಣ, ಸೂರ್ಯನಗರ 1ನೇ ಹಂತ, ಆನೇಕಲ್ ಮುಖ್ಯ ರಸ್ತೆ, ಚಂದಾಪುರ, ಬೆಳಿಗ್ಗೆ 11

‘ಫೀಸ್ ಇಳಿಸಿ, ಮಕ್ಕಳ ಭವಿಷ್ಯ ಉಳಿಸಿ’ ಚಿಂತನ ಮಂಥನ: ಶಾಸಕ ರಮೇಶ್ ಕುಮಾರ್, ಪೃಥ್ವಿ ರೆಡ್ಡಿ, ಆಯೋಜನೆ: ಆಮ್ ಆದ್ಮಿ ಪಕ್ಷ, ಸ್ಥಳ: ಸ್ವಾತಂತ್ರ್ಯ ಉದ್ಯಾನ, ಬೆಳಿಗ್ಗೆ 11

ಪುಸ್ತಕಗಳ ಬಿಡುಗಡೆ: ಕೆ.ಪಿ. ರಾವ್ ಅವರ ‘ವರ್ಣಕ’ ಕಾದಂಬರಿ, ವಸುಮತಿ ಉಡುಪ ಅವರ ‘ಬೊಗಸೆ ತುಂಬಾ ನಕ್ಷತ್ರಗಳು’ ಕೃತಿ, ಸು. ರುದ್ರಮೂರ್ತಿ ಶಾಸ್ತ್ರಿ ಅವರ ‘ಅಕ್ಕಮಹಾದೇವಿ’ ಕಾದಂಬರಿ, ಪುಸ್ತಕಗಳ ಬಿಡುಗಡೆ: ಜಯಂತ ಕಾಯ್ಕಿಣಿ, ಮುಖ್ಯ ಅತಿಥಿ: ಎಚ್. ಎಸ್. ಸತ್ಯನಾರಾಯಣ, ಆಯೋಜನೆ: ಅಂಕಿತ ಪುಸ್ತಕ, ಸಂಜೆ 5 (ಆನ್‌ಲೈನ್ ಕಾರ್ಯಕ್ರಮ)

ನಾಟಕ ಪ್ರದರ್ಶನ: ‘ವಾರಸುದಾರ’, ನಿರ್ದೇಶನ: ಎಂ.ಎಸ್. ಸತ್ಯು, ರಚನೆ: ಜಯರಾಮ್ ರಾಯಪುರ, ಸಹ ನಿರ್ದೇಶನ: ಎಂ.ಸಿ. ಆನಂದ್, ಸಂಗೀತ: ಸಮೀರ್ ಕುಲಕರ್ಣಿ, ನೃತ್ಯ ಸಂಯೋಜನೆ: ನಂದಿನಿ ಮೆಹ್ತಾ, ವಸ್ತ್ರ ವಿನ್ಯಾಸ: ಜಯಂತಿ ಮರುಳಸಿದ್ದಪ್ಪ, ಆಯೋಜನೆ: ಸಮುದಾಯ ಬೆಂಗಳೂರು, ಸ್ಥಳ: ಬೆಂಗಳೂರು ಇಂಟರ್ ನ್ಯಾಷನಲ್ ಸೆಂಟರ್ (ಬಿಐಸಿ), ದೊಮ್ಮಲೂರು, ಸಂಜೆ 6

‘ಚಿತ್ತಾರ ಸ್ಟಾರ್ ಅವಾರ್ಡ್ಸ್’: ಅತಿಥಿಗಳು: ತಾರಾ ಅನುರಾಧ, ಹೇಮಲತಾ ಗೋಪಾಲಯ್ಯ, ಪರಿಮಳಾ ಜಗ್ಗೇಶ್, ಕೀರ್ತಿ ವಿಷ್ಣುವರ್ಧನ್, ರೂಪಿಕಾ, ಮೋಕ್ಷಿತಾ, ದಿಯಾ ಖುಷಿ, ವಿಶೇಷ ಆಹ್ವಾನಿತ: ಬೇಳೂರು ರಾಘವೇಂದ್ರ ಶೆಟ್ಟಿ, ಆಯೋಜನೆ: ಚಿತ್ತಾರ, ಸ್ಥಳ: ಆರ್.ಜಿ. ಹೋಟೆಲ್, ರಾಜಾಜಿನಗರ, ಸಂಜೆ 7



‘ಪ್ರಾಜೆಕ್ಟ್ ನಗ್ನ’ ನಾಟಕದ ದೃಶ್ಯ

‘ಪ್ರಾಜೆಕ್ಟ್ ನಗ್ನ’ ನಾಟಕ ಪ್ರದರ್ಶನ ಕನ್ನಡ ರೂಪಾಂತರ: ಬಿ. ಸುರೇಶ್, ರಂಗವಿನ್ಯಾಸ: ಅರ್ಚನಾ ಶ್ಯಾಮ್, ಆಯೋಜನೆ: ಅಂತರಂಗ ತಂಡ, ಸ್ಥಳ: ರಂಗಶಂಕರ, ಜೆ.ಪಿ. ನಗರ, ಮಧ್ಯಾಹ್ನ 3.30

ಕೃಷಿ ಕಾಯ್ದೆ, ಬೆಲೆ ಏರಿಕೆ ವಿರುದ್ಧ ಪ್ರತಿಭಟನೆ

‘ಬಂದ್‌ಗೆ ಬೆಂಬಲ ನೀಡಿ ನಗರದಲ್ಲಿ ಪ್ರತಿಭಟನೆ ನಡೆಸಲು ಯಾವುದೇ ಸಂಘಟನೆ ಅನುಮತಿ ಪಡೆದಿಲ್ಲ’ ಎಂದೂ ಕಮಲ್ ಪಂತ್ ಸ್ಪಷ್ಟಪಡಿಸಿದರು.

ನಾಳೆ ಭಾರತ್ ಬಂದ್; ನಗರದಲ್ಲಿ ಖಾಕಿ ಕಾವಲು

ಬೆಂಗಳೂರು: ಕೇಂದ್ರ ಸರ್ಕಾರದ ಕೃಷಿ ಕಾಯ್ದೆ ಹಾಗೂ ಬೆಲೆ ಏರಿಕೆ ವಿರೋಧಿಸಿ ರೈತ ಸಂಘಟನೆಗಳು ಸೋಮವಾರ (ಸೆ. 27) ಭಾರತ್ ಬಂದ್‌ಗೆ ಕರೆ ನೀಡಿದ್ದು, ಅಂದು ನಗರದಲ್ಲಿ ಬಿಗಿ ಭದ್ರತೆ ಕೈಗೊಳ್ಳಲು ಪೊಲೀಸರು ಸಿದ್ಧತೆ ಮಾಡಿಕೊಂಡಿದ್ದಾರೆ.

ಎಲ್ಲ ವಿಭಾಗದ ಡಿಸಿಪಿಗಳಿಗೆ ಭದ್ರತೆ ಬಗ್ಗೆ ಕೆಲ ಸೂಚನೆ ನೀಡಿರುವ ಪೊಲೀಸ್ ಕಮಿಷನರ್ ಕಮಲ್ ಪಂತ್, ‘ಪ್ರತಿಯೊಂದು ಸ್ಥಳಗಳ ಮೇಲೆ ನಿಗಾ ವಹಿಸಿ. ಭದ್ರತೆಗೆ ಅಗತ್ಯ ಕ್ರಮ ಕೈಗೊಳ್ಳಿ’ ಎಂದಿದ್ದಾರೆ.


ಕಮಲ್ ಪಂತ್

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಕಮಲ್ ಪಂತ್, ‘ನಗರಕ್ಕೆ ಸಂಪರ್ಕ ಕಲ್ಪಿಸುವ ಎಲ್ಲ ರಸ್ತೆಗಳಲ್ಲಿ ಪೊಲೀಸ್ ಭದ್ರತೆ ಇರಲಿದೆ. ನಗರದ ಪ್ರತಿಯೊಂದು ಠಾಣೆ ವ್ಯಾಪ್ತಿಯಲ್ಲಿ ಗಸ್ತು ಹೆಚ್ಚಳ ಮಾಡಲಾಗಿದೆ. ಸೂಕ್ಷ್ಮ ಪ್ರದೇಶಗಳನ್ನು ಗುರುತಿಸಿ ಹೆಚ್ಚಿನ ಸಿಬ್ಬಂದಿಯನ್ನು ಭದ್ರತೆಗೆ ನಿಯೋಜಿಸಲಾಗುತ್ತಿದೆ’ ಎಂದರು.

ಗೋದಾಮು ಮಾಲೀಕರ ವಿರುದ್ಧ ಕ್ರಮ: ‘ಚಾಮರಾಜಪೇಟೆಯ ಸೀತಾಪತಿ ಅಗ್ರಹಾರದ ಗೋದಾಮಿನಲ್ಲಿ ಸಂಭವಿಸಿದ ಪಟಾಕಿ ಸ್ಫೋಟ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ನಗರದಲ್ಲಿರುವ ಅಕ್ರಮ ಗೋದಾಮುಗಳನ್ನು ಪತ್ತೆ ಮಾಡಲಾಗುತ್ತಿತ್ತು, ಅವರ ಮಾಲೀಕರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು’ ಎಂದು ಕಮಲ್ ಪಂತ್ ತಿಳಿಸಿದರು.

‘ಪ್ರತಿಯೊಂದು ಗೋದಾಮು ಪರಿಶೀಲಿಸುವಂತೆ ಪೊಲೀಸ್ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಆಕಸ್ಮಾತ್ ಪುನಃ ಅವಘಡಗಳು ಸಂಭವಿಸಿದರೆ, ಅಧಿಕಾರಿಗಳನ್ನೇ ಹೊಣೆ ಮಾಡಲಾಗುವುದು’ ಎಂದೂ ಅವರು ಎಚ್ಚರಿಸಿದರು.


ಸಂಚಾರ ನಿಯಮ ಉಲ್ಲಂಘನೆ; ಅಂಕಿ–ಅಂಶಗಳ ವರದಿ ಬಿಡುಗಡೆ ಮಾಡಿದ ಪೊಲೀಸರು

₹389.49 ಕೋಟಿ ದಂಡ ಸಂಗ್ರಹ ಬಾಕಿ

ಬೆಂಗಳೂರು ನಗರದಲ್ಲಿ ಸಂಭವಿಸಿರುವ ಅಪಘಾತಗಳು ಹಾಗೂ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳ ಅಂಕಿ–ಅಂಶ ಸಹಿತ ವರದಿಯನ್ನು ಸಂಚಾರ ಪೊಲೀಸರು ಶನಿವಾರ ಬಿಡುಗಡೆ ಮಾಡಿದ್ದಾರೆ. ‘ಸಂಚಾರ ನಿಯಮ ಉಲ್ಲಂಘನೆ ಬಗ್ಗೆ ದಾಖಲಾದ **1.01** ಕೋಟಿ ಪ್ರಕರಣಗಳಲ್ಲಿ ₹ **389.49** ಕೋಟಿ ದಂಡ ಸಂಗ್ರಹ ಬಾಕಿ ಇದೆ’ ಎಂಬುದಾಗಿ ವರದಿಯಲ್ಲಿ ಉಲ್ಲೇಖಿಸಿದ್ದಾರೆ. ಅಂಕಿ–ಅಂಶಗಳ ವಿವರವನ್ನು ಇಲ್ಲಿ ನೀಡಲಾಗಿದೆ.

1.75 ಲಕ್ಷ — 1985ರಲ್ಲಿದ್ದ ವಾಹನಗಳ ಸಂಖ್ಯೆ


94.59 ಲಕ್ಷ — 2020ರವರೆಗೆ ನೋಂದಣಿಯಾದ ವಾಹನಗಳ ಸಂಖ್ಯೆ





ನಗರದಲ್ಲಿ ಸಂಚಾರ ಪೊಲೀಸರು ವಾಹನ ಸವಾರರನ್ನು ತಡೆದು ದಂಡ ಸಂಗ್ರಹ ಮಾಡಿದರು

525 ಮೂರು ವರ್ಷಗಳಲ್ಲಿ ಮೃತಪಟ್ಟ ಪುರುಷರು

100 ಮೂರು ವರ್ಷಗಳಲ್ಲಿ ಅಪಘಾತದಲ್ಲಿ ಮೃತಪಟ್ಟ ಮಹಿಳೆಯರು





‘ದಾಖಲೆ ನವೀಕರಣ ವೇಳೆ ಬಾಕಿ ದಂಡ ವಸೂಲಿ’

‘ಬಾಕಿ ದಂಡ ಪಾವತಿಗಾಗಿ ವಾಹನಗಳ ಮಾಲೀಕರಿಗೆ ನಿರಂತರವಾಗಿ ನೋಟಿಸ್ ನೀಡಲಾಗುತ್ತಿದೆ. ಬಹುಪಾಲು ಚಾಲಕರು ಪ್ರತಿಕ್ರಿಯೆ ನೀಡುತ್ತಿಲ್ಲ’ ಎಂದು ಸಂಚಾರ ವಿಭಾಗದ ಜಂಟಿ ಕಮಿಷನರ್ ಬಿ.ಆರ್. ರವಿಕಾಂತೇಗೌಡ ಹೇಳಿದರು.

‘ವಾಹನಗಳ ಸದೃಢತೆ ಪ್ರಮಾಣಪತ್ರ, ರಹದಾರಿ ಪತ್ರ, ವಿಮೆ, ಮಾಲಿನ್ಯ ತಪಾಸಣಾ ಪತ್ರ ಸೇರಿದಂತೆ ಎಲ್ಲ ದಾಖಲೆಗಳನ್ನು ಮಾಲೀಕರು ನವೀಕರಣ ಮಾಡಿಸಿಕೊಳ್ಳುತ್ತಿದ್ದಾರೆ. ಆದರೆ, ಸಂಚಾರ ನಿಯಮ ಉಲ್ಲಂಘನೆ ದಂಡ ಪಾವತಿಸಲು ಹಿಂದೇಟು ಹಾಕುತ್ತಿದ್ದಾರೆ. ದಾಖಲೆಗಳ ನವೀಕರಣ ವೇಳೆಯಲ್ಲೇ ಬಾಕಿ ದಂಡ ವಸೂಲಿ ಮಾಡಲು ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ. ಈ ಬಗ್ಗೆ ಆರ್‌ಟಿಒ, ವಿಮಾ ಕಂಪನಿಗಳು ಹಾಗೂ ವಾಯು ಮಾಲಿನ್ಯ ತಪಾಸಣೆ ಕೇಂದ್ರಗಳ ಮಾಲೀಕರ ಜೊತೆಯೂ ಚರ್ಚಿಸಲಾಗಿದೆ’ ಎಂದೂ ತಿಳಿಸಿದರು.

‘ಪಾನಮತ್ತ ಚಾಲನೆ ವಿರುದ್ಧ ಕಾರ್ಯಾಚರಣೆ ಆರಂಭ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪಾನಮತ್ತ ಚಾಲನೆ ಪತ್ತೆಗಾಗಿ ನಗರದಲ್ಲಿ ಪೂರ್ಣ ಪ್ರಮಾಣದಲ್ಲಿ ಕಾರ್ಯಾಚರಣೆ ಆರಂಭಿಸಲಾಗಿದೆ’ ಎಂದು ಸಂಚಾರ ವಿಭಾಗದ ಜಂಟಿ ಕಮಿಷನರ್ ಬಿ.ಆರ್. ರವಿಕಾಂತೇಗೌಡ ಹೇಳಿದರು.


ಬಿ.ಆರ್. ರವಿಕಾಂತೇಗೌಡ

ನಗರದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕೋವಿಡ್ ಹೆಚ್ಚಾಗಿದ್ದರಿಂದ 2020ರ ಮಾರ್ಚ್‌ನಿಂದ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಲಾಗಿತ್ತು. ಆದರೆ, ಪಾನಮತ್ತ ಚಾಲನೆಯಿಂದ ಇತ್ತೀಚಿನ ದಿನಗಳಲ್ಲಿ ಅಪಘಾತಗಳು ಹೆಚ್ಚಾಗುತ್ತಿವೆ. ಹೀಗಾಗಿ, ವೈದ್ಯರ ಸಲಹೆ ಪಡೆದು ಶನಿವಾರ ರಾತ್ರಿಯಿಂದಲೇ ಕಾರ್ಯಾಚರಣೆಯನ್ನು ಪುನರಾರಂಭಿಸಲಾಗುತ್ತಿದೆ’ ಎಂದರು.

‘ಚಾಲಕರ ಬಾಯಿ ಪರೀಕ್ಷೆಗಾಗಿ 699 ಆಲ್ಕೋಮೀಟರ್‌ಗಳನ್ನು ಬಳಸಲಾಗುತ್ತಿದೆ. ಒಬ್ಬರಿಗೆ ಒಂದು ಆಲ್ಕೋಮೀಟರ್ ಬಳಸಿದರೆ, ಅದನ್ನು 48 ಗಂಟೆ ಕವರ್‌ನಲ್ಲಿ ಶೇಖರಿಸಿಡಲಾಗುವುದು. ನಂತರ, ಸ್ಯಾನಿಟೈಸ್ ಮಾಡಿ ಮರು ಬಳಕೆ ಮಾಡಲಾಗುವುದು’ ಎಂದು ಹೇಳಿದರು.

‘ವಾಹನ ಚಾಲಕರನ್ನು ತಡೆದು ಮೇಲ್ನೋಟಕ್ಕೆ ಪರೀಕ್ಷೆ ನಡೆಸಲಾಗುವುದು. ಮದ್ಯದ ವಾಸನೆ ಹೆಚ್ಚಿದ್ದರೆ, ಆಸ್ಪತ್ರೆಗೆ ಕರೆದೊಯ್ದು ಪರೀಕ್ಷೆ ಮಾಡಿಸಲಾಗುವುದು. ಅಗತ್ಯವಿದ್ದವರಿಗೆ ಮಾತ್ರ ಆಲ್ಕೋಮೀಟರ್‌ನಿಂದ ತಪಾಸಣೆ ನಡೆಸಲಾಗುವುದು’ ಎಂದರು.

‘ಕಾರ್ಯಾಚರಣೆ ವೇಳೆ ಸಾರ್ವಜನಿಕರು ಪೊಲೀಸರ ಜೊತೆ ಸಹಕರಿಸಬೇಕು. ಯಾರಾದರೂ ಕರ್ತವ್ಯಕ್ಕೆ ಅಡ್ಡಿಪಡಿಸಿದರೆ ಅವರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು. ಪ್ರಕರಣ ಗಂಭೀರವಾಗಿದ್ದರೆ, ರೌಡಿ ಪಟ್ಟಿಯಲ್ಲಿ ಹೆಸರು ಸೇರಿಸಲು ಕ್ರಮ ಕೈಗೊಳ್ಳಲಾಗುವುದು’ ಎಂದೂ ರವಿಕಾಂತೇಗೌಡ ಹೇಳಿದರು.

‘45 ಟೋಯಿಂಗ್ ಸಿಬ್ಬಂದಿ ಅಮಾನತು’

‘ಸಾರ್ವಜನಿಕರ ಜೊತೆ ಸೌಜನ್ಯದಿಂದ ವರ್ತಿಸದ ಹಾಗೂ ನಿಯಮಬಾಹಿರವಾಗಿ ವಾಹನಗಳ ಟೋಯಿಂಗ್ ಮಾಡಿದ್ದ ಆರೋಪದಡಿ ಟೈಗರ್ ವಾಹನಗಳ 45 ಸಿಬ್ಬಂದಿಯನ್ನು ಅಮಾನತು ಮಾಡಲಾಗಿದೆ. ಐದು ಟೋಯಿಂಗ್ ಏಜೆನ್ಸಿಗಳನ್ನು ಕಪ್ಪು ಪಟ್ಟಿಗೆ ಸೇರಿಸಲಾಗಿದೆ’ ಎಂದು ಬಿ.ಆರ್. ರವಿಕಾಂತೇಗೌಡ ಹೇಳಿದರು.

‘ಟೈಗರ್ ವಾಹನದಲ್ಲಿ ಎಎಸ್‌ಐ ಇರಬೇಕು. ನೋ ಪಾರ್ಕಿಂಗ್ ಜಾಗದಲ್ಲಿ ನಿಲ್ಲಿಸುವ ವಾಹನಗಳ ಫೋಟೊ ತೆಗೆದುಕೊಳ್ಳಬೇಕು. ಟೋಯಿಂಗ್ ಮಾಡುವ ಮುನ್ನ ಧ್ವನಿವರ್ಧಕದಲ್ಲಿ ಘೋಷಿಸಬೇಕು. ಟೋಯಿಂಗ್ ಮಾಡುವಾಗ ಮಾಲೀಕರು ಬಂದರೆ, ಸ್ಥಳದಲ್ಲೇ ದಂಡ ಕಟ್ಟಿಸಿಕೊಂಡು ವಾಹನ ನೀಡಬೇಕು. ಈ ಎಲ್ಲ ಸೂಚನೆಗಳನ್ನು ಸಿಬ್ಬಂದಿಗೆ ನೀಡಲಾಗಿದೆ’ ಎಂದರು.

ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ; ಆರೋಪಿ ಬಂಧನ

ಬೆಂಗಳೂರು: ಐದು ವರ್ಷಗಳ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ ಆರೋಪದಡಿ ರುದ್ರೇಶ್ ಎಂಬಾತನನ್ನು ಚಿಕ್ಕಜಾಲ ಪೊಲೀಸರು ಬಂಧಿಸಿದ್ದಾರೆ.

‘ಆರೋಪಿ ರುದ್ರೇಶ್, ತಿಂಗಳಿನಿಂದ ಬಾಲಕಿ ಮೇಲೆ ದೌರ್ಜನ್ಯ ಎಸಗುತ್ತಿದ್ದ ಎಂದು ಪೋಷಕರು ದೂರು ನೀಡಿದ್ದರು. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಅಫೀಮು ಮಾರಾಟ ಆರೋಪಿ ಬಂಧನ

ಬೆಂಗಳೂರು: ರಾಜಸ್ಥಾನದಿಂದ ಅಫೀಮು ತಂದು ನಗರದಲ್ಲಿ ಮಾರುತ್ತಿದ್ದ ಆರೋಪಿ ಬುದ್ಧರಾಮ್ (26) ಎಂಬಾತನನ್ನು ಹಲಸೂರು ಪೊಲೀಸರು ಬಂಧಿಸಿದ್ದಾರೆ.

‘ರಾಜಸ್ಥಾನದ ಆರೋಪಿ, ಕೆಲಸ ಹುಡುಕಿಕೊಂಡು ಹಲವು ವರ್ಷಗಳ ಹಿಂದೆಯೇ ನಗರಕ್ಕೆ ಬಂದಿದ್ದ. ನಗರ್ತಪೇಟೆಯಲ್ಲಿರುವ ಮದುವೆ ಆಮಂತ್ರಣ ಪತ್ರಿಕೆ ಮುದ್ರಣಾಲಯದಲ್ಲಿ ಕೆಲಸಕ್ಕೆ ಸೇರಿದ್ದ. ಲಾಕ್‌ಡೌನ್‌ನಿಂದಾಗಿ ಕೆಲಸ ಹೋಗಿತ್ತು. ಅಂದಿನಿಂದಲೇ ಅಫೀಮು ಮಾರಾಟಕ್ಕೆ ಇಳಿದಿದ್ದ’ ಎಂದು ಪೊಲೀಸರು ಹೇಳಿದರು.

ಲೋಕಸಭಾಧ್ಯಕ್ಷ ಓಂ ಬಿರ್ಲಾ ಅಭಿಪ್ರಾಯ

ಶಾಸಕಾಂಗದಲ್ಲಿ ಶಿಸ್ತು, ಸಭ್ಯತೆ ಕುಸಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶಾಸಕಾಂಗದಲ್ಲಿ ಶಿಸ್ತು ಮತ್ತು ಸಭ್ಯತೆಯ ಗುಣಮಟ್ಟ ಕಡಿಮೆ ಆಗುತ್ತಿರುವುದು ಚಿಂತೆಯ ವಿಷಯ’ ಎಂದು ಲೋಕಸಭಾಧ್ಯಕ್ಷ ಓಂ ಬಿರ್ಲಾ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ‘ಸದನದಲ್ಲಿ ಚರ್ಚೆ, ಜೋರು ಧ್ವನಿ ಎಲ್ಲವೂ ಇರಬೇಕು. ಅದು ಇದ್ದಾಗಲೇ ಉತ್ತಮ ನಿರ್ಣಯ ಸಾಧ್ಯ. ಆದರೆ, ಸದಸ್ಯರು ಶಿಸ್ತು ಮೀರಬಾರದು ಅಷ್ಟೆ’ ಎಂದು ಅಭಿಪ್ರಾಯಪಟ್ಟರು.

‘75 ವರ್ಷಗಳ ಪ್ರಜಾಪ್ರಭುತ್ವ ಪಯಣದ ನೆನಪಿಗಾಗಿ ನಾವು 75 ಕಾರ್ಯಕ್ರಮಗಳನ್ನು ದೇಶದಾದ್ಯಂತ ಸಂಘಟಿಸಲು ರಾಷ್ಟ್ರಮಟ್ಟದ ಪೀಠಾಧಿಪತಿಗಳ ಸಂಘದಿಂದ ಯೋಜನೆ ಹಾಕಿಕೊಂಡಿದ್ದೇವೆ. ಪಂಚಾಯತಿಯಿಂದ ಸಂಸತ್ತಿನವರೆಗೆ ಪ್ರಜಾಪ್ರಭುತ್ವದ ಎಲ್ಲ ಸಂಸ್ಥೆಗಳನ್ನು ಹೆಚ್ಚು ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಲು ಅನುಕೂಲವಾಗುವಂತೆ ಬಲವರ್ಧನೆಗಳಿಸುವುದು ಉದ್ದೇಶ’ ಎಂದರು.

‘ಶಾಸಕಾಂಗ ಉತ್ತಮ ಕಾನೂನುಗಳನ್ನು ರೂಪಿಸುವ ಮೂಲಕ ಕಾರ್ಯಾಂಗದ ಮೇಲೆ ಪರಿಣಾಮಕಾರಿ ನಿಗಾ ಇಡಬೇಕು. ಜನರ ನಿರೀಕ್ಷೆಗೆ ತಕ್ಕಂತೆ ಕಾನೂನುಗಳನ್ನು ನೀಡಬೇಕು. ಶಾಸಕಾಂಗಗಳು ಸಾರ್ವಜನಿಕರ ವಿಶ್ವಾಸಗಳಿಸುವುದರೊಂದಿಗೆ ಸಮರ್ಪಕವಾಗಿ ಕಾರ್ಯನಿರ್ವಹಿಸಬೇಕು’ ಎಂದು ಆಶಿಸಿದರು.

‘ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ಇದೇ ವರ್ಷ 100 ವರ್ಷಗಳು ಪೂರ್ಣಗೊಳ್ಳಲಿದ್ದು, ಶತಮಾನೋತ್ಸವವನ್ನು ಡಿ. 4 ಮತ್ತು 5ರಂದು ಆಯೋಜಿಸಲಾಗುವುದು. ಸಂಸದೀಯ ವಿಶಿಷ್ಟತೆ ಮತ್ತು ವಿಶ್ವಾಸಾರ್ಹತೆ ಸುಧಾರಿಸಲು ಸಮಗ್ರ ಕ್ರಿಯಾ ಯೋಜನೆ ರೂಪಿಸುವ ಸಂಬಂಧ ಚರ್ಚಿಸಲು ಶೀಘ್ರದಲ್ಲಿ ಎಲ್ಲ ರಾಜ್ಯಗಳ ಸಭಾಧ್ಯಕ್ಷರ ಸಮ್ಮೇಳನ ಸಂಘಟಿಸುತ್ತಿದ್ದು, ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳನ್ನು ಇದಕ್ಕೆ ಆಹ್ವಾನಿಸಲಾಗುವುದು’ ಎಂದರು.

ಲೋಕಸಭೆಯ ಕಾರ್ಯದರ್ಶಿ ಉತ್ಪಾಲ್ ಕುಮಾರ್ ಸಿಂಗ್ ಇದ್ದರು.


ಲೋಕಸಭಾಧ್ಯಕ್ಷ ಓಂ ಬಿರ್ಲಾ ಅವರು ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದರು. ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಇದ್ದಾರೆ. –ಪ್ರಜಾವಾಣಿ ಚಿತ್ರ

‘ಕೃಷ್ಣ ಅವಧಿಯಲ್ಲೂ ಸ್ಪೀಕರ್ ಭಾಷಣ’

‘ವಿಧಾನಸಭೆಯಲ್ಲಿ ಲೋಕಸಭಾಧ್ಯಕ್ಷರು ಮಾತನಾಡಿರುವುದು ಇದು ಮೊದಲೇನಲ್ಲ’ ಎಂದು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು.

ವಿಧಾನಮಂಡಲದ ಜಂಟಿ ಸದನ ಉದ್ದೇಶಿಸಿ ಲೋಕಸಭಾಧ್ಯಕ್ಷರು ಮಾಡಿದ ಭಾಷಣವನ್ನು ಕಾಂಗ್ರೆಸ್ ಬಹಿಷ್ಕರಿಸಿದ ಬಗ್ಗೆ ಪ್ರತಿಕ್ರಿಯಿಸಿದ ಅವರು,

‘ಇದೇ ವಿಧಾನಸಭೆಯಲ್ಲಿ 2002 ಜೂನ್ 24ರಂದು, ಅಂದಿನ ಲೋಕಸಭಾಧ್ಯಕ್ಷರಾಗಿದ್ದ ಮನೋಹರ್ ಜೋಶಿ ಭಾಷಣ ಮಾಡಿದ್ದರು. ಆಗ ಎಸ್.ಎಂ. ಕೃಷ್ಣ ಅವರು ರಾಜ್ಯದ ಮುಖ್ಯಮಂತ್ರಿ ಆಗಿದ್ದರು. ಬೇರೆ ರಾಜ್ಯಗಳ ವಿಧಾನಸಭೆಗಳಲ್ಲೂ ಲೋಕಸಭಾಧ್ಯಕ್ಷರು ಭಾಷಣ ಮಾಡಿದ್ದಾರೆ. ಭಾಗವಹಿಸಿದ್ದು ತಪ್ಪು ಎನ್ನುವವರಿಗೆ ಇದು ಅರ್ಥವಾಗಿಲ್ಲ’ ಎಂದರು.

ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್: ‘ಕಲಾತ್ಮಕ ಬ್ರ್ಯಾಂಡೆಡ್’ ಚಿನ್ನಾಭರಣ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್‌ನ ಮಾರತಹಳ್ಳಿಯಲ್ಲಿನ ಶೋ ರೂಮ್‌ನಲ್ಲಿ ‘ಕಲಾತ್ಮಕ ಬ್ರ್ಯಾಂಡೆಡ್’ ಆಭರಣಗಳ ವಿಶೇಷ ಪ್ರದರ್ಶನ ಆಯೋಜಿಸಲಾಗಿದೆ.

ಗ್ರಾಹಕರ ಸಮ್ಮುಖದಲ್ಲಿ ಚಿನ್ನ, ವಜ್ರ ಮತ್ತು ಅತ್ಯಮೂಲ್ಯ ಆಭರಣಗಳ ಪ್ರದರ್ಶನವನ್ನು ಶನಿವಾರ ಅನಾವರಣಗೊಳಿಸಲಾಯಿತು.

ಅಕ್ಟೋಬರ್ 3ರವರೆಗೆ ಈ ವಿಶೇಷ ಪ್ರದರ್ಶನ ನಡೆಯಲಿದೆ. ಇಲ್ಲಿನ ಆಭರಣಗಳು ಕಲಾ ಕೌಶಲಕ್ಕೆ ಮಾದರಿಯಾಗಿವೆ. ಪ್ರತಿ ಆಭರಣವು ವಿಶೇಷ ಪರಿಣತರಿಂದ ತಯಾರಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.


ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್ ಶೋ ರೂಮ್‌ನಲ್ಲಿ ರೂಪದರ್ಶಿಗಳು ಚಿನ್ನಾಭರಣಗಳನ್ನು ಪ್ರದರ್ಶಿಸಿದರು.

ಸಂಕ್ಷಿಪ್ತ ಸುದ್ದಿ

482 ಕ್ವಿಂಟಲ್ ಅಕ್ರಮ ಪಡಿತರ ವಶ

ರಾಮನಗರ: ನ್ಯಾಯಬೆಲೆ ಅಂಗಡಿಗಳಿಗೆ ಬಿಡುಗಡೆಯಾದ ಪಡಿತರ ಸಾಮಗ್ರಿಯನ್ನು ಅಕ್ರಮವಾಗಿ ಸಂಗ್ರಹಿಸಿ, ಕಾಳಸಂತೆಯಲ್ಲಿ ಮಾರಾಟ ಮಾಡಲು ಸಿದ್ಧತೆ ನಡೆಸುತ್ತಿದ್ದ ಗೋದಾಮಿನ ಮೇಲೆ ಅಧಿಕಾರಿಗಳು ದಾಳಿ ನಡೆಸಿದ್ದು, 482 ಕ್ವಿಂಟಲ್‌ನಷ್ಟು ಅಕ್ಕಿ, ಗೋಧಿ ಹಾಗೂ ರಾಗಿಯನ್ನು ವಶಕ್ಕೆ ಪಡೆದಿದ್ದಾರೆ.

ಬೆಂಗಳೂರು ಉತ್ತರ ತಾಲ್ಲೂಕಿನ ಕೊಡಿಗೆಹಳ್ಳಿ ಗ್ರಾ.ಪಂ. ವ್ಯಾಪ್ತಿಯ ಸೀಗೆಹಳ್ಳಿ ಗ್ರಾಮದ ಗೋದಾಮು ಒಂದರಲ್ಲಿ ಪಡಿತರ ದಾಸ್ತಾನು ಸಂಗ್ರಹಿಸಿ ಅಲ್ಲಿಂದ ಕಾಳಸಂತೆಗೆ ಸಾಗಿಸುತ್ತಿರುವ ಮಾಹಿತಿ ಮೇರೆಗೆ ಆಹಾರ, ನಾಗರಿಕ ಸರಬರಾಜು ಹಾಗೂ ಗ್ರಾಹಕ ವ್ಯವಹಾರಗಳ ಇಲಾಖೆಯ ಜಂಟಿ ನಿರ್ದೇಶಕ ಕೆ. ರಾಮೇಶ್ವರಪ್ಪ ನೇತೃತ್ವದ ತಂಡ ದಾಳಿ ನಡೆಸಿತು.

ಮಾರಕಾಸ್ತ್ರಗಳಿಂದ ಹೊಡೆದು ಕೊಲೆ

ಬೆಂಗಳೂರು: ಹೊರವಲಯದ ಆವಲಹಳ್ಳಿ ಬಳಿ ಕುಳ್ಳ ವೆಂಕಟೇಶ್ ಎಂಬುವರನ್ನು ಮಾರಕಾಸ್ತ್ರಗಳಿಂದ ಹೊಡೆದು ಕೊಲೆ ಮಾಡಲಾಗಿದ್ದು, ಪರಿಚಯಸ್ಥರೇ ಕೃತ್ಯ ಎಸಗಿರುವ ಅನುಮಾನ ವ್ಯಕ್ತವಾಗಿದೆ.

‘ಮೃತ ವೆಂಕಟೇಶ್, ರಾಮಮೂರ್ತಿನಗರದ ಬೋವಿ ಕಾಲೊನಿ ನಿವಾಸಿ. ಜಮೀನು ವ್ಯಾಜ್ಯದ ವಿಚಾರವಾಗಿ ಕೊಲೆ ನಡೆದಿರುವ ಅನುಮಾನವಿದೆ’ ಎಂದು ಆವಲಹಳ್ಳಿ ಪೊಲೀಸರು ಹೇಳಿದರು.

ನಗರದ ಕೋವಿಡ್ ಅಂಕಿ–ಅಂಶ

ಒಟ್ಟು ಪ್ರಕರಣಗಳು (12,44,959 ನಿನ್ನೆಯ ವಿವರ)	12,45,235 ▲
ಸಕ್ರಿಯ ಪ್ರಕರಣಗಳು	7,436 ▼
ಗುಣಮುಖರಾದವರು	12,21,669 ▲
ಒಟ್ಟು ಸಾವು	16,129 ▲
ದಿನದ ಏರಿಕೆ	
ಹೊಸ ಪ್ರಕರಣ	276 ▼
ಗುಣಮುಖ	279 ▲
ಸಾವು	04 ▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	23.21 ಕೋಟಿ ▲	3.36 ಕೋಟಿ
ಸಕ್ರಿಯ ಪ್ರಕರಣ	1.86 ಕೋಟಿ	2.96 ಲಕ್ಷ
ಗುಣಮುಖ	20.87 ಕೋಟಿ ▲	3.28 ಕೋಟಿ
ಸಾವು	47.54 ಲಕ್ಷ ▲	4.46 ಲಕ್ಷ
ದಿನದ ಮಾಹಿತಿ		
ಹೊಸ ಪ್ರಕರಣ	5.00 ಲಕ್ಷ ▼	28,143 ▼
ಗುಣಮುಖ	4.27 ಲಕ್ಷ ▼	25,984 ▼
ಸಾವು	8,490 ▼	258 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಅಮೆರಿಕ	ಟರ್ಕಿ	ಬ್ರಿಟನ್
1.31 ಲಕ್ಷ ▲	27,197	35,089 ▼

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	ಇರಾನ್	ಬ್ರಿಟನ್
98.50 ▲	4.92	13.32 ▲

(*ರಾತ್ರಿ 12 ಗಂಟೆಯವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು)

ಮಹಾರಾಷ್ಟ್ರ	1.38 ಲಕ್ಷ
ತಮಿಳುನಾಡು	35,476 ▲
ದೆಹಲಿ	25,085

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	65.41 ▲
ಕೇರಳ	46.13 ▲
ತಮಿಳುನಾಡು	26.55 ▲

ಪ್ರಜಾವಾಣಿ ಗ್ರಾಫಿಕ್ಸ್

ಬೆಂಗಳೂರಿನಲ್ಲಿ ಅಕ್ರಮ ಎಸಗಿದವರಿಗೆ ಶಿಕ್ಷೆಯೇ ಇಲ್ಲ: ರಾಮಸ್ವಾಮಿ

₹ 5 ಲಕ್ಷ ಕೋಟಿ ಮೌಲ್ಯದ ಸರ್ಕಾರಿ ಭೂಮಿ ಕಬಳಿಕೆ

ಪ್ರಜಾವಾಣಿ ವಾರ್ತೆ

ಪಿರಿಯಾಪಟ್ಟಣ: ‘ದುಷ್ಟ ದುರಾಸೆಯ ಜನ ನಕಲಿ ದಾಖಲೆ ಸೃಷ್ಟಿಸಿ ಸರ್ಕಾರಿ ಭೂಮಿ ಕಬಳಿಸಿ ಆನಂದದಿಂದ ಬದುಕುತ್ತಿದ್ದಾರೆ. ಬೆಂಗಳೂರಿನ ಸುತ್ತಮುತ್ತ ಅಂಥ ಭೂಮಿಯ ಅಂದಾಜು ಮೌಲ್ಯ ₹ 5 ಲಕ್ಷ ಕೋಟಿ’ ಎಂದು ಅರಕಲಗೂಡು ಶಾಸಕ ಎ. ಟಿ. ರಾಮಸ್ವಾಮಿ ತಿಳಿಸಿದರು.

ತಾಲ್ಲೂಕಿನ ಮಂಚದೇವನಹಳ್ಳಿ ಸಮೀಪ ಕರ್ನಾಟಕ ದಲಿತ ನವನಿರ್ಮಾಣ ವೇದಿಕೆಯು ಶನಿವಾರ ಏರ್ಪಡಿಸಿದ್ದ 'ನಮ್ಮ ಭೂಮಿ ನಮ್ಮದು' ಭೂಮಿ ಹಕ್ಕಿಗಾಗಿ ಹೋರಾಟ ಪೂರ್ವಸಿದ್ಧತಾ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿ, ‘ಅಕ್ರಮ ಎಸಗಿದವರ ವಿರುದ್ಧ ಗೂಂಡಾ ಕಾಯ್ದೆಯಡಿ ಪ್ರಕರಣ ದಾಖಲಿಸಬೇಕು ಎಂದು ಹಲವು ಬಾರಿ ಸದನದಲ್ಲಿ ಒತ್ತಾಯಿಸಿದರೂ, 39 ದಿನ ಪ್ರತಿಭಟಿಸಿದರೂ ಪ್ರಯೋಜನವಾಗಲಿಲ್ಲ. ಇಂಥ ಪ್ರಕರಣಗಳಲ್ಲಿ ಒಬ್ಬರಿಗೂ ಇದುವರೆಗೆ ಶಿಕ್ಷೆಯಾಗಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

‘ಹೋರಾಟವನ್ನು ನಡೆಸಲು ಎಷ್ಟರಮಟ್ಟಿಗೆ ಸಿದ್ಧತೆಯಾಗಿದೆ ಎಂಬ ಆತ್ಮಾವಲೋಕನವೂ ನಡೆಯಬೇಕು. ಕಾನೂನು ಉಳ್ಳವರ ಪಾಲಿಗೆ ಉದಾರವಾಗಿ, ಬಡವರ ಪಾಲಿಗೆ ಕಠಿಣವಾಗಿಯೂ ಮಾರ್ಪಾಡಾಗಿದೆ. ನಮ್ಮನ್ನು ಈ ಹಿಂದೆ ಈಸ್ಟ್ ಇಂಡಿಯಾ ಕಂಪನಿ ಆಳುತ್ತಿತ್ತು. ಈಗ ಈಟ್ ಇಂಡಿಯಾ ಕಂಪನಿ ಮನಸ್ಥಿತಿಯವರು ಆಳುತ್ತಿದ್ದಾರೆ’ ಎಂದು ವ್ಯಂಗ್ಯವಾಡಿದರು.

‘ಬೆಂಗಳೂರಿನ ಸುತ್ತಮುತ್ತ 5 ಸಾವಿರ ಅನಧಿಕೃತ ಬಡಾವಣೆಗಳಿವೆ. ಈ ವಿಷಯದಲ್ಲಿ ನ್ಯಾಯಾಲಯಗಳು ಪಾವಿತ್ರ್ಯವನ್ನು ಕಾಪಾಡಬೇಕು. ಆದರೆ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ನ 84 ನ್ಯಾಯಾಧೀಶರು ನಿವೇಶನ ಹಗರಣದಲ್ಲಿ ಸಿಲುಕಿಕೊಂಡಿದ್ದರು’ ವಿಷಾದಿಸಿದರು.

‘ಹೋರಾಟಗಳನ್ನು ಸಂಘಟಿಸುವರಲ್ಲೇ ಕೆಲವರು ಭೂ ಹಗರಣಗಳನ್ನು ನಡೆಸಿದವರ ಪರವಾಗಿ ನಿಲ್ಲುವ ನಿದರ್ಶನಗಳು ಇವೆ. ಹೋರಾಟವನ್ನು ಯಾರೂ ಸ್ವಾರ್ಥಕ್ಕೆ ಬಳಸಿಕೊಳ್ಳಬಾರದು. ಹೋರಾಟಗಾರರು ಹೋರಾಟದ ಆಶಯಕ್ಕೆ ವಿರುದ್ಧವಾದ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಬಾರದು’ ಎಂದು ಪ್ರತಿಪಾದಿಸಿದರು.

‘ಅರಣ್ಯ ಹಕ್ಕುಗಳ ಕಾಯ್ದೆಯ ಅಡಿ ಜೀವನ ನಿರ್ವಹಣೆಗೆ ಭೂಮಿಯನ್ನು ಹೊಂದುವ ಹಕ್ಕು ಮತ್ತು ಕಾಡಿನ ಸಂಪನ್ಮೂಲವನ್ನು ಸಂಗ್ರಹಿಸುವ ಹಕ್ಕನ್ನು ನಿರಾಕರಿಸಿರುವುದು ಅಮಾನವೀಯ. ಅದು ಮಾನವ ಹಕ್ಕುಗಳ ಉಲ್ಲಂಘನೆ ಹಾಗೂ ಸಂವಿಧಾನ ವಿರೋಧಿ. ಭೂಹೋರಾಟವು ಈ ಅಂಶವನ್ನೂ ಗಂಭೀರವಾಗಿ ಪರಿಗಣಿಸಬೇಕು’ ಎಂದು ಡೀಡ್ ಸಂಸ್ಥೆಯ ಶ್ರೀಕಾಂತ್ ಸಲಹೆ ನೀಡಿದರು.

ದಲಿತ ಮುಖಂಡರಾದ ಎಚ್. ಗೋವಿಂದಯ್ಯ, ಹರಿಹರ ಆನಂದ ಸ್ವಾಮಿ, ಟಿ. ಈರಯ್ಯ, ನಿವೃತ್ತ ಪಿಡಿಒ ಶಿವಯೋಗಿ ಮಾತನಾಡಿದರು.

ಸಂಘಟನೆ ಮುಖಂಡರಾದ ಪಿ.ಪಿ. ಮಹದೇವ್, ಸೀಗೂರು ವಿಜಯ ಕುಮಾರ್, ಎಚ್. ಡಿ.ರಮೇಶ್, ನೇರಳೆ ಕುಪ್ಪೆ ನವೀನ್, ಗಿರಿಜನ ಮುಖಂಡರಾದ ಎಚ್.ಟಿ.ರವಿ, ಕೃಷ್ಣಯ್ಯ, ಧರ್ಮಣ್ಣ, ಪುಟ್ಟಯ್ಯ, ನಾರಾಯಣಪ್ಪ, ಶಂಬಣ್ಣ, ಡಿ.ಎ.ನಾಗೇಂದ್ರ, ಶಿವಪ್ಪ ಹಾಜರಿದ್ದರು. ಪಿರಿಯಾಪಟ್ಟಣ ತಾಲ್ಲೂಕಿನ ವಿವಿಧ ಗ್ರಾಮಗಳ ನೂರಾರು ಮಂದಿ ಸಭೆಯಲ್ಲಿ ಪಾಲ್ಗೊಂಡಿದ್ದರು.

ಮುಖ್ಯಾಂಶಗಳು

- ಗೂಂಡಾ ಕಾಯ್ದೆ ಅಡಿ ಪ್ರಕರಣ ದಾಖಲಿಸದ ಸರ್ಕಾರ
- ಹೋರಾಟಗಾರರು ಸ್ವಾರ್ಥ ಪ್ರವೃತ್ತಿ ಬಿಡಬೇಕು

ಭೂಕಬಳಿಕೆ ಹಗರಣವನ್ನು ‘ಪ್ರಜಾವಾಣಿ’ಯು ನಿರ್ಭೀತಿಯಿಂದ ಹಲವು ಬಾರಿ ಪ್ರಕಟಿಸಿ ಜನಪರ ಕಾಳಜಿಯನ್ನು ತೋರಿದೆ.

–ಎ.ಟಿ.ರಾಮಸ್ವಾಮಿ, ಅರಕಲಗೂಡು ಶಾಸಕ



ಪಿರಿಯಾಪಟ್ಟಣದಲ್ಲಿ ಶನಿವಾರ ‘ನಮ್ಮ ಭೂಮಿ ನಮ್ಮದು’ ಭೂ ಹೋರಾಟದ ಪೂರ್ವಸಿದ್ಧತಾ ಸಭೆಯಲ್ಲಿ ಶಾಸಕ ಎ.ಟಿ.ರಾಮಸ್ವಾಮಿ ಮಾತನಾಡಿದರು. ಮುಖಂಡ ಎಚ್.ಗೋವಿಂದಯ್ಯ, ‘ಪ್ರಜಾವಾಣಿ’ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ಹರಿಹರ ಆನಂದಸ್ವಾಮಿ, ಶಿವಯೋಗಿ, ಶ್ರೀಕಾಂತ್ ಇದ್ದಾರೆ.

‘ಹೊಸ ಚಳವಳಿ ಕಟ್ಟಲು ಸಕಾಲ’

‘70ರಿಂದ 90ರ ದಶಕದವರೆಗೂ ನಡೆದಿರುವ ಹಲವು ಚಳವಳಿಗಳ ವೈಫಲ್ಯದ ಪಾಠಗಳ ಅರಿವಿನಲ್ಲೇ ಹೊಸ ಚಳವಳಿಗಳನ್ನು ಕಟ್ಟಲು ಇದು ಸಕಾಲ’ ಎಂದು ‘ಪ್ರಜಾವಾಣಿ’ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಪ್ರತಿಪಾದಿಸಿದರು.

‘ಎಪ್ಪತ್ತರ ದಶಕದಲ್ಲಿ ಪ್ರಾರಂಭವಾದ ದಲಿತ ಚಳವಳಿಗೆ ಪತ್ರಿಕೆಯು ಸಂಪೂರ್ಣ ಬೆಂಬಲವನ್ನು ನೀಡಿತ್ತು. ಈಗಲೂ ಭೂ ಹೋರಾಟಕ್ಕೆ ಬೆಂಬಲ ನೀಡಲು ಸಿದ್ಧ’ ಎಂದರು.

‘ಚಳವಳಿಗಳನ್ನು ಹೇಗೆಲ್ಲಾ ಸಂಘಟಿಸಬಾರದು ಎಂಬುದಕ್ಕೂ ರಾಜ್ಯದಲ್ಲಿ ನಿದರ್ಶನಗಳಿವೆ. ಭೂಹೋರಾಟವು ಮೈಸೂರು ಜಿಲ್ಲೆ ಮೀರಿ ರಾಜ್ಯದಾದ್ಯಂತ ವಿಸ್ತರಿಸಬೇಕು’ ಎಂದರು.

ವಂಚನೆ: ರೈತರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೋಳಿ ಸಾಕಾಣಿಕೆ ಮಾಡಿದ್ದ ಹಣ ನೀಡದೇ ‘ಗೋಲ್ಡನ್ ಗ್ರೂಪ್ಸ್’ ಕಂಪನಿ ಸತಾಯಿಸುತ್ತಿದೆ’ ಎಂದು ಆರೋಪಿಸಿ ದೊಡ್ಡಬಳ್ಳಾಪುರ ತಾಲ್ಲೂಕಿನ ರೈತರು ನಗರದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು.

ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ಹಾಗೂ ಅಖಿಲ ಕರ್ನಾಟಕ ಕೋಳಿ ಸಾಕಾಣಿಕೆ ರೈತರ ಕ್ಷೇಮಾಭಿವೃದ್ಧಿ ಸಂಘದ ನೇತೃತ್ವದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ಕ್ವೀನ್ಸ್ ರಸ್ತೆಯಲ್ಲಿರುವ 'ಗೋಲ್ಡನ್ ಗ್ರೂಪ್ಸ್' ಕಂಪನಿಯ ಪ್ರಧಾನ ಕಚೇರಿ ಎದುರು ಸೇರಿದ್ದ ರೈತರು, ಹಣ ಪಾವತಿಗೆ ಒತ್ತಾಯಿಸಿ ಘೋಷಣೆ ಕೂಗಿದರು.

‘ಗೋಲ್ಡನ್ ಗ್ರೂಪ್ಸ್ ಅಧೀನದ ‘ಗೋಲ್ಡನ್ ಫ್ರೆಶ್’ ಕಂಪನಿಯೂ ಕೋಳಿ ಸಾಕಾಣಿಕೆ ಸಂಬಂಧ ರೈತರ ಜೊತೆ ಒಪ್ಪಂದ ಮಾಡಿಕೊಟ್ಟಿತ್ತು. ಅದರಂತೆ ದೊಡ್ಡಬಳ್ಳಾಪುರದ 30ಕ್ಕೂ ಹೆಚ್ಚು ರೈತರು, ಕೋಳಿ ಸಾಕಾಣಿಕೆ ಮಾಡಿ ಕಂಪನಿಗೆ ವಾಪಸು ಕೊಟ್ಟಿದ್ದಾರೆ. ಎಂಟು ತಿಂಗಳಾದರೂ ಕೋಳಿ ಸಾಕಾಣಿಕೆ ಹಣವನ್ನು ಕಂಪನಿಯವರು ನೀಡಿಲ್ಲ’ ಎಂದು ಪ್ರತಿಭಟನಕಾರರು ದೂರಿದರು.

‘ರೈತರಿಗೆ ನೀಡಬೇಕಾದ ಹಣವನ್ನು ಕೂಡಲೇ ಬಿಡುಗಡೆ ಮಾಡಬೇಕು. ಇಲ್ಲದಿದ್ದರೆ, ಗಂಭೀರ ಸ್ವರೂಪದ ಹೋರಾಟ ನಡೆಸಲಾಗುವುದು’ ಎಂದೂ ಎಚ್ಚರಿಸಿದರು.

ಪತ್ನಿ ಕೊಂದು ಧರ್ಮಸ್ಥಳದಲ್ಲಿ ಮುಡಿ ಕೊಟ್ಟಿದ್ದವನ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನ್ನಪೂರ್ಣೇಶ್ವರಿನಗರ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ರೂಪಾ (34) ಎಂಬುವರ ಕೊಲೆ ಪ್ರಕರಣ ಸಂಬಂಧ, ಅವರ ಪತಿ ಕಾಂತರಾಜುನನ್ನು ಪೊಲೀಸರು ಬಂಧಿಸಿದ್ದಾರೆ.

‘ಆರೋಪಿ ಕಾಂತರಾಜು, ಫೈನಾನ್ಸ್ ದಲ್ಲಾಳಿಯಾಗಿ ಕೆಲಸ ಮಾಡುತ್ತಿದ್ದ. ಶೀಲ ಶಂಕಿಸಿ ರೂಪಾ ಅವರನ್ನು ಸೆ. 22ರಂದು ಕೊಲೆ ಮಾಡಿ ಪರಾರಿಯಾಗಿದ್ದ. ಧರ್ಮಸ್ಥಳಕ್ಕೆ ಹೋಗಿದ್ದ ಆರೋಪಿ, ಅಲ್ಲಿ ತನ್ನ ಮುಡಿ ಅರ್ಪಿಸಿದ್ದ. ನಂತರ, ಹಲವು ಪುಣ್ಯ ಕ್ಷೇತ್ರಗಳಿಗೆ ಸುತ್ತಾಡಿದ್ದ’ ಎಂದು ಪೊಲೀಸರು ಹೇಳಿದರು.

‘ಇತ್ತೀಚೆಗೆ ಸಂಬಂಧಿಕರ ಮನೆಗೆ ಆರೋಪಿ ಹೋಗಿದ್ದ. ಮಾಹಿತಿ ಸಿಗುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ಆತನನ್ನು ಬಂಧಿಸಲಾಗಿದೆ’ ಎಂದೂ ತಿಳಿಸಿದರು.

‘ರೂಪಾ ಮೊಬೈಲ್‌ನಲ್ಲಿ ಮಾತನಾಡುವಾಗ ಹಾಗೂ ಹೊರಗಡೆ ಹೋಗುವಾಗ ಆರೋಪಿ ಅನುಮಾನದಿಂದ ನೋಡುತ್ತಿದ್ದ. ಅದೇ ವಿಚಾರವಾಗಿ ಪತ್ನಿ ಜೊತೆ ಜಗಳ ಮಾಡುತ್ತಿದ್ದ. ಪತ್ನಿಯನ್ನು ಕೊಲೆ ಮಾಡಲು ತೀರ್ಮಾನಿಸಿದ್ದ ಆರೋಪಿ, ಎರಡು ಬಾರಿ ಸಂಚು ರೂಪಿಸಿದ್ದ.’

‘ಪ್ರವಾಸದ ನೆಪದಲ್ಲಿ ಕರಾವಳಿಗೆ ಕರೆದೊಯ್ದು, ಎತ್ತರದ ಪ್ರದೇಶದಿಂದ ಪತ್ನಿಯನ್ನು ತಳ್ಳಿ ಕೊಲೆ ಮಾಡಲು ಮುಂದಾಗಿದ್ದ. ಆದರೆ, ಅದು ಸಾಧ್ಯವಾಗಿರಲಿಲ್ಲ. ರಸ್ತೆಯಲ್ಲಿ ಕಾರು ಗುದ್ದಿಸಿ ಕೊಲೆ ಮಾಡುವ ಸಂಚು ಸಹ ವಿಫಲವಾಗಿತ್ತು. ಕೊನೆಯದಾಗಿ, ಸೆ. 22ರಂದು ಮನೆಯಲ್ಲೇ ಚಾಕುವಿನಿಂದ ಕತ್ತು ಕೊಯ್ದು ಪತ್ನಿಯನ್ನು ಕೊಂದಿದ್ದ’ ಎಂದೂ ಪೊಲೀಸರು ತಿಳಿಸಿದರು.

ಜೈಲಿಗೂ ಹೋಗಿ ಬಂದಿದ್ದ; ‘2005ರಲ್ಲಿ ವ್ಯಕ್ತಿ ಕೊಲೆ ಪ್ರಕರಣದಲ್ಲಿ ಕಾಂತರಾಜು, ಜೈಲಿಗೂ ಹೋಗಿ ಜಾಮೀನು ಪಡೆದು ಹೊರಬಂದಿದ್ದ. ಪತ್ನಿ ರೂಪಾ ಅವರನ್ನು ಕೊಂದ ನಂತರ, ಅವರ ತಂಗಿಯ ಗಂಡನನ್ನೂ ಕೊಲ್ಲಲು ಕಾಂತರಾಜು ಸಂಚು ರೂಪಿಸಿದ್ದ. ಅಷ್ಟರಲ್ಲೇ ಆತ ನಮಗೆ ಸಿಕ್ಕಿಬಿದ್ದ’ ಎಂದೂ ಪೊಲೀಸರು ಮಾಹಿತಿ ನೀಡಿದರು.

ಮಕ್ಕಳ ಹಕ್ಕುಗಳ ರಕ್ಷಣೆಗೆ ಇರುವ ಆಯೋಗವೇ ದುರ್ಬಲ • ₹4ಕೋಟಿಯಿಂದ ₹1ಕೋಟಿಗೆ ಇಳಿದ ಅನುದಾನ

ಮಕ್ಕಳ ಆಯೋಗಕ್ಕಿಲ್ಲ ಸರ್ಕಾರದ ಬಲ



• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಅನುದಾನ ಇಲ್ಲ, ಅನುಭವಿ ವಕೀಲರಿಲ್ಲ, ಪೂರ್ಣಪ್ರಮಾಣದಲ್ಲಿ ಸಿಬ್ಬಂದಿ ಇಲ್ಲ, ಅಧ್ಯಕ್ಷ–ಸದಸ್ಯರಿಗೆ ಸೂಕ್ತ ಸ್ಥಾನಮಾನಗಳಿಲ್ಲ...

ಹೀಗೆ, ಇಲ್ಲಗಳ ನಡುವೆ ಮಕ್ಕಳ ಹಕ್ಕುಗಳ ರಕ್ಷಣೆಗೆ ತಿಣುಕಾಡುತ್ತಿರುವ ಕರ್ನಾಟಕ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ದುಃಸ್ಥಿತಿ ಇದು.

ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು 2009ರಲ್ಲಿ ಅಸ್ತಿತ್ವಕ್ಕೆ ಬಂದಿದೆ. ಒಬ್ಬರು ಅಧ್ಯಕ್ಷರು ಮತ್ತು ಆರು ಸದಸ್ಯರನ್ನು ಒಳಗೊಂಡ ಈ ಆಯೋಗ, ಅರೆ ನ್ಯಾಯಿಕ ಅಧಿಕಾರ ಹೊಂದಿದೆ. ಮಕ್ಕಳ ಹಕ್ಕುಗಳ ಉಲ್ಲಂಘನೆ ಪ್ರಕರಣದಲ್ಲಿ ದೂರುಗಳನ್ನು ಪಡೆದು ಅಥವಾ ಸ್ವಯಂಪ್ರೇರಣೆಯಿಂದ ದೂರು ದಾಖಲಿಸಿಕೊಂಡು ವಿಚಾರಣೆ ನಡೆಸುವ ಅಧಿಕಾರ ಈ ಆಯೋಗಕ್ಕೆ ಇದೆ.

ಹಕ್ಕುಗಳ ರಕ್ಷಣಾ ಆಯೋಗ ಎಂಬುದನ್ನು ಹೆಸರಿನಲ್ಲೇ ಸೂಚಿಸಿರುವ ಏಕೈಕ ಆಯೋಗ ಇದು. ಶಿಕ್ಷಣ ಹಕ್ಕು ಕಾಯ್ದೆ(ಆರ್‌ಟಿಇ), ಬಾಲನ್ಯಾಯ(ಜೆಜೆ) ಕಾಯ್ದೆ, ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ (ಪೋಕ್ಸೊ) ಕಾಯ್ದೆಗಳ ಜಾರಿ ಮತ್ತು ಮೇಲುಸ್ತುವಾರಿ ನಡೆಸುವ ಅಧಿಕಾರ ಆಯೋಗಕ್ಕಿದೆ.

ವರ್ಷದಿಂದ ವರ್ಷಕ್ಕೆ ಸಂಸ್ಥೆಯನ್ನು ಸಬಲಗೊಳಿಸುವ ಬದಲು ಸರ್ಕಾರವೇ ದುರ್ಬಲಗೊಳಿಸುತ್ತಿದೆ. ‘ಮಕ್ಕಳಿರಲಿ, ಹಕ್ಕು ಕೇಳದಿರಲಿ’ ಎಂಬ ಧೋರಣೆಯಂತೆ ಸರ್ಕಾರ ನಡೆದುಕೊಳ್ಳುತ್ತಿದೆ ಎನ್ನುತ್ತಾರೆ ಮಕ್ಕಳ ಹಕ್ಕುಗಳ ತಜ್ಞರು.

ಇತ್ತೀಚಿನ ವರ್ಷಗಳಲ್ಲಿ ಈ ಸಂಸ್ಥೆಗೆ ನೀಡುತ್ತಿದ್ದ ಅನುದಾನವನ್ನು ಸರ್ಕಾರ ಕಡಿಮೆ ಮಾಡಿದೆ. ನಾಲ್ಕು ವರ್ಷಗಳ ಹಿಂದೆ ₹4 ಕೋಟಿ ತನಕ ನೀಡುತ್ತಿದ್ದ ಅನುದಾನವನ್ನು ಈಗ ₹1 ಕೋಟಿಗೆ ಇಳಿಸಿದೆ. ಈ ಅನುದಾನದಲ್ಲಿ ಬಹುತೇಕ ಹಣ ಸಿಬ್ಬಂದಿ ವೇತನ ಮತ್ತು ಆಡಳಿತ ನಿರ್ವಹಣೆಗೆ ವೆಚ್ಚವಾಗುತ್ತಿದೆ. ಆಯೋಗದ ನಿಯಮಗಳ ಪ್ರಕಾರ ಹಾಕಿಕೊಂಡಿರುವ ಚಟುವಟಿಕೆಗಳನ್ನು ಮುನ್ನಡೆಸಲು ಅನುದಾನ ಸಾಕಾಗುತ್ತಿಲ್ಲ ಎಂದು ಆಯೋಗ ಹಲವು ವರ್ಷಗಳಿಂದ ಹೇಳುತ್ತಲೇ ಇದೆ. ಬಜೆಟ್‌ನಲ್ಲಿ ನಿಗದಿ ಮಾಡಿದಷ್ಟು ಅನುದಾನವನ್ನೂ ನೀಡದೆ ಮಕ್ಕಳ ಮಕ್ಕಳ ಹಕ್ಕುಗಳ ರಕ್ಷಣೆ ವಿಷಯವನ್ನು ಸರ್ಕಾರ ಕಡೆಗಣಿಸಿದೆ ಎನ್ನುತ್ತಾರೆ ಮಕ್ಕಳ ಹಕ್ಕುಗಳ ಹೋರಾಟಗಾರರು.

ಆಯೋಗದಲ್ಲಿ ದಾಖಲಾಗಿರುವ ಪ್ರಕರಣಗಳು


ವಿಭಾಗ	2019-20	2020-21
ಆರ್‌ಟಿಇ	51	99
ದೈಹಿಕ ಶಿಕ್ಷೆ	30	2
ಕಿರುಕುಳ	25	0
ವರ್ಗಾವಣೆ ಪತ್ರ ಇತ್ಯಾದಿ	173	6
ಸುಪರ್ದಿ ಪ್ರಕರಣ	30	19
ಮರಣ	10	22
ಪೋಕ್ಸೊ	25	17
ಕಾಣೆಯಾದವರು	15	11
ಬಾಲ್ಯ ವಿವಾಹ	7	11
ವಿದ್ಯುತ್ ಅವಘಡ	85	1
ಬಾಲ ಕಾರ್ಮಿಕ	10	1
ಇತರೆ	0	99

ಮಕ್ಕಳ ಹಕ್ಕುಗಳ ಉಲ್ಲಂಘನೆಗೆ ಸಂಬಂಧಿಸಿದಂತೆ ಮೇಲ್ವಿಚಾರಣೆ ನಡೆಸುವ ಸಂವಿಧಾನ ಬದ್ಧ ಸಂಸ್ಥೆಯಲ್ಲಿ ಕೇವಲ 12 ಮಂಜೂರಾತಿ ಹುದ್ದೆಗಳಿವೆ. ಅದರಲ್ಲೂ ನಾಲ್ಕು ಹುದ್ದೆಗಳು ಖಾಲಿ ಇವೆ. ವಿಷಯ ತಜ್ಞರ ಕೊರತೆ ಇದ್ದು, ಸದ್ಯ ಕೆಲವರನ್ನು ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳಲಾಗಿದೆ. ಅತ್ಯಗತ್ಯವಾಗಿ ಬೇಕಾಗಿರುವ ನುರಿತ ವಕೀಲರ ಕೊರತೆ ಇದೆ. ಇಬ್ಬರು ಮಾತ್ರ ವಕೀಲರಿದ್ದು, ಅವರ ಸೇವೆಯನ್ನು ಹೊರಗುತ್ತಿಗೆ ಆಧಾರದಲ್ಲಿ ಪಡೆದುಕೊಳ್ಳಲಾಗುತ್ತಿದೆ.

ಶಾಲೆಗಳಲ್ಲಿ ಮಕ್ಕಳ ಹಕ್ಕುಗಳ ಉಲ್ಲಂಘನೆ ಕುರಿತ ದೂರುಗಳೇ ಹೆಚ್ಚಿನ ಸಂಖ್ಯೆಯಲ್ಲಿ ಆಯೋಗಕ್ಕೆ ಬರುತ್ತಿವೆ. ಕೋವಿಡ್ ನಂತರ ಹೊಸ, ಹೊಸ ರೀತಿಯ ಮಕ್ಕಳ ಹಕ್ಕುಗಳ ಉಲ್ಲಂಘನೆ ಪ್ರಕರಣಗಳು ದಾಖಲಾಗುತ್ತಿವೆ. ಅವುಗಳನ್ನು ನಿರ್ವಹಿಸಲು ವಿಷಯ ತಜ್ಞರು ಮತ್ತು ವಕೀಲರನ್ನು ಒಳಗೊಂಡು ಮಾನವ ಸಂಪನ್ಮೂಲ ಆಯೋಗದಲ್ಲಿ ಇಲ್ಲ.

‘ಅತ್ಯಂತ ಸೂಕ್ಷ್ಮ ಕಾಯ್ದೆಗಳ ಮೇಲುಸ್ತುವಾರಿಯನ್ನು ಆಯೋಗ ನೋಡಿಕೊಳ್ಳುತ್ತಿರುವ ಕಾರಣ ನುರಿತ ವಕೀಲರ ಅಗತ್ಯವಿದೆ’ ಎಂದು ಆಯೋಗದ ಮಾಜಿ ಸದಸ್ಯ ಮರಿಸ್ವಾಮಿ ಹೇಳಿದರು.

ಅಧ್ಯಕ್ಷ–ಸದಸ್ಯರ ಸೂಕ್ತ ಸ್ಥಾನಮಾನಗಳಲ್ಲಿ ಸದಸ್ಯರಿಗೆ ವೇತನ ಮತ್ತು ಸಾರಿಗೆ ವ್ಯವಸ್ಥೆ ಇಲ್ಲ. ಅನುದಾನ ಹೆಚ್ಚಳ, ಅಗತ್ಯ ಸಿಬ್ಬಂದಿ, ವಕೀಲರ ನೇಮಕ ಸೇರಿ ಆಯೋಗದ ಬಲ ಹೆಚ್ಚಿಸಿದರೆ ಮಕ್ಕಳ ಹಕ್ಕುಗಳ ರಕ್ಷಣೆಗೆ ಆಯೋಗ ಇನ್ನಷ್ಟು ಸಮರ್ಥವಾಗಿ ಕೆಲಸ ಮಾಡಲು ಮತ್ತು ಹಕ್ಕುಗಳ ಉಲ್ಲಂಘನೆ ತಡೆಯಲು ಜಾಗೃತಿ ಮೂಡಿಸಲು ಸಾಧ್ಯ’ ಎಂದು ಅವರು ಅಭಿಪ್ರಾಯಪಟ್ಟರು.



ವೈದ್ಯರ ಅಭಿಪ್ರಾಯ

‘ಅರ್ಥೈಸಿಕೊಳ್ಳುವವರು ಬೇಕು’



ವಿಭಿನ್ನ ಸಮಸ್ಯೆಯಿಂದ ಬಳಲುತ್ತಿರುವ ಮಕ್ಕಳು ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ದಾಖಲಾಗುತ್ತಾರೆ. ಅವರ ಸಮಸ್ಯೆಯನ್ನು ಅರಿತು ಸೂಕ್ತ ಪರಿಹಾರ ಸೂಚಿಸಲು ನಿರ್ದಿಷ್ಟ ಕ್ಷೇತ್ರದಲ್ಲಿ ತಿಳಿವಳಿಕೆ, ಅನುಭವವುಳ್ಳ ಆಪ್ತಸಮಾಲೋಚಕರನ್ನು ನೇಮಿಸಬೇಕು. ಲೈಂಗಿಕ ಶೋಷಣೆಗೆ ಒಳಗಾದ ಮಕ್ಕಳ ನೋವು, ಆತಂಕ, ದುಗುಡವನ್ನು ಅರ್ಥ ಮಾಡಿಕೊಳ್ಳುವವರು ಬೇಕು. ಬಾಲ ಕಾರ್ಮಿಕರಾಗಲು ಹಾಗೂ ಚಿಕ್ಕ ವಯಸ್ಸಿನಲ್ಲಿಯೇ ಕಳ್ಳತನಕ್ಕೆ ಇಳಿಯಲು ಕಾರಣವಾಗುವ ಅಂಶಗಳನ್ನು ಅರ್ಥೈಸಿಕೊಂಡು ಸಮಾಲೋಚನೆ ನಡೆಸುವವರು ಬೇಕು.

–**ಡಾ. ರಾಜನ್ ದೇಶಪಾಂಡೆ,** ಚಿಕ್ಕಮಕ್ಕಳ ತಜ್ಞ, ಧಾರವಾಡ

ಸಾಮಾನ್ಯ ತಜ್ಞರು ಬೇಡ



ಮಕ್ಕಳ ಆರೋಗ್ಯದ ವಿಷಯದಲ್ಲಿ ಜ್ಞಾನ ಹೊಂದಿರುವ, ತರಬೇತಿ ಹೊಂದಿರುವವರನ್ನೇ ಸಮಾಲೋಚಕರನ್ನಾಗಿ ಮಾಡಬೇಕು. ಸಾಮಾನ್ಯ ತಜ್ಞರಿಗಿಂತ ನಿರ್ದಿಷ್ಟ ಸಮಸ್ಯೆಗಳ ತಜ್ಞರನ್ನು ನೇಮಿಸುವುದು ಒಳಿತು. ಇಲ್ಲದಿದ್ದರೆ, ಅಂತಹವರಿಗೆ ನಿರ್ದಿಷ್ಟ ಸಮಸ್ಯೆಗಳ ಕುರಿತು ವಿಶೇಷ ತರಬೇತಿ ನೀಡಿ, ನೇಮಿಸಿಕೊಳ್ಳಬೇಕು.

ಡಾ.ಪ್ರಕಾಶ ಕೆ. ವಾರಿ, ಕಿಮ್ಸ್, ಚಿಕ್ಕಮಕ್ಕಳ ವಿಭಾಗದ ಮುಖ್ಯಸ್ಥರು

ಮಕ್ಕಳ ಹಕ್ಕಿನ ರಕ್ಷಣೆಗೆ ಭಾರವಾದ ‘ಪ್ರಭಾರ’

• ವಿನಾಯಕ ಭಟ್



ದಾವಣಗೆರೆ: ರಾಜ್ಯದಲ್ಲಿ ಮಕ್ಕಳ ರಕ್ಷಣಾ ನಿರ್ದೇಶನಾಲಯವನ್ನು ಪ್ರತ್ಯೇಕವಾಗಿ ರಚಿಸಿದ್ದರೂ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಹುದ್ದೆಗೆ ನೇರ ನೇಮಕಾತಿ ಮಾಡಿಕೊಳ್ಳಲು ಇನ್ನೂ ಅವಕಾಶ ಕಲ್ಪಿಸಿಲ್ಲ. ಹೀಗಾಗಿ, ಬಹುತೇಕ ಕಡೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳೇ ಈ ಹುದ್ದೆಯನ್ನೂ ನಿಭಾಯಿಸುತ್ತಿದ್ದಾರೆ.

ಮಹಿಳೆ ಮತ್ತು ಮಕ್ಕಳಿಗೆ ಸಂಬಂಧಿಸಿದ ಹಲವು ಯೋಜನೆಗಳನ್ನು ಅನುಷ್ಠಾನಗೊಳಿಸುವ ಕಾರ್ಯ‘ಭಾರ’ದ ನಡುವೆ, ಹೆಚ್ಚುವರಿಯಾಗಿ ‘ಪ್ರಭಾರ’ದ ಜವಾಬ್ದಾರಿಯನ್ನೂ ನಿರ್ವಹಿಸಬೇಕಾಗಿರುವುದರಿಂದ ಮಕ್ಕಳ ಹಕ್ಕುಗಳ ರಕ್ಷಣೆಗೆ ಸಂಪೂರ್ಣವಾಗಿ ನ್ಯಾಯ ಒದಗಿಸಲು ಸಾಧ್ಯವಾಗುತ್ತಿಲ್ಲ.

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಹುದ್ದೆಯು ಸಹಾಯಕ ನಿರ್ದೇಶಕರರಿಗೆ ಸಮಾನವಾದ ಹುದ್ದೆ. ನೇರ ನೇಮಕಾತಿಗೆ ಅವಕಾಶ ಇಲ್ಲದಿರುವುದರಿಂದ ಬಡ್ತಿ ಹೊಂದಿದವರನ್ನು ಮಾತ್ರ ಈ ಹುದ್ದೆಗೆ ನೇಮಿಸಬಹುದು. ಹೀಗಾಗಿ ಹಲವು ಜಿಲ್ಲೆಗಳಲ್ಲಿ ಖಾಲಿ ಇರುವ ಈ ಹುದ್ದೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರೇ ‘ಪ್ರಭಾರ’ ಮಕ್ಕಳ ರಕ್ಷಣಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಕೆಲವೆಡೆ ಮಹಿಳಾ ಸಂರಕ್ಷಣಾಧಿಕಾರಿ ಸೇರಿ ಇಲಾಖೆಯ ಹಿರಿಯ ಅಧಿಕಾರಿಗಳಿಗೆ ಜವಾಬ್ದಾರಿ ನೀಡಲಾಗುತ್ತಿದೆ. ಆದರೆ, ಮಕ್ಕಳ ವಿಚಾರ ಸೂಕ್ಷ್ಮವಾಗಿರುವುದರಿಂದ ಕೆಲವರು ‘ಪ್ರಭಾರ’ ವಹಿಸಿಕೊಳ್ಳಲು ಮುಂದೆ ಬರುತ್ತಿಲ್ಲ. ಆಗ ಅನಿವಾರ್ಯವಾಗಿ ಉಪನಿರ್ದೇಶಕರ ಹೆಗಲಿಗೇ ಈ ಜವಾಬ್ದಾರಿಯೂ ಬೀಳುತ್ತಿದೆ.

ಬಾಲ್ಯ ವಿವಾಹ, ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ, ಎಚ್‌ಐವಿ ಪೀಡಿತ ಮಕ್ಕಳ ಆರೈಕೆ ಸೇರಿ, ಮಕ್ಕಳ ಹಕ್ಕುಗಳ ರಕ್ಷಣೆಗೆ ಸಂಬಂಧಿಸಿದಂತೆ ತಳಮಟ್ಟದಲ್ಲಿ ಕಾರ್ಯನಿರ್ವಹಿಸಲು ಪ್ರಭಾರ ಮಕ್ಕಳ ರಕ್ಷಣಾಧಿಕಾರಿಗಳಿಗೆ ಸಾಧ್ಯವಾಗುವುದಿಲ್ಲ. ಈ ಹುದ್ದೆಯಲ್ಲಿ ಸ್ವತಂತ್ರವಾಗಿ ಕೆಲಸ ಮಾಡುವಂತಾದಾಗ ಸಂಪೂರ್ಣ ಸಮಯವನ್ನು ಮಕ್ಕಳ ಹಕ್ಕುಗಳ ರಕ್ಷಣೆಗಾಗಿಯೇ ಮೀಸಲಿಡಬಹುದಾಗಿದೆ ಎಂಬುದು ಮಕ್ಕಳ ಹಕ್ಕುಗಳ ರಕ್ಷಣೆ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವ ತಜ್ಞರ ಅಭಿಪ್ರಾಯ.


ಹಲವೆಡೆ ತಾಲ್ಲೂಕು ಮಟ್ಟದಲ್ಲಿ ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಅಥವಾ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳೇ ಮಕ್ಕಳ ರಕ್ಷಣಾಧಿಕಾರಿಗಳಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿಗಾಗಿ ಸರ್ಕಾರ ರೂಪಿಸಿರುವ ಹಲವು ಯೋಜನೆಗಳನ್ನು ಅನುಷ್ಠಾನಗೊಳಿಸುವ ಒತ್ತಡದ ನಡುವೆ ಮಕ್ಕಳ ಹಕ್ಕುಗಳ ರಕ್ಷಣೆಗೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವುದರಿಂದ ಸಕಾಲಕ್ಕೆ ಮಕ್ಕಳಿಗೆ ನ್ಯಾಯ ಒದಗಿಸಲು ಸಾಧ್ಯವಾಗುತ್ತಿಲ್ಲ. ಮಕ್ಕಳ ರಕ್ಷಣಾ ಘಟಕಗಳಿಗೆ ಪ್ರತ್ಯೇಕವಾಗಿ ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ನೇಮಕಾತಿ ಮಾಡಿಕೊಳ್ಳುವ ನಿಟ್ಟಿನಲ್ಲಿ ಸರ್ಕಾರ ನೀತಿಯನ್ನು ಬದಲಾಯಿಸಿಕೊಳ್ಳಬೇಕು ಎಂಬುದು ಅವರ ಸಲಹೆ.

ನಿವೃತ್ತ ಅಧಿಕಾರಿಗಳ ನೇಮಕ

ಮೂರ್ನಾಲ್ಕು ವರ್ಷಗಳ ಹಿಂದೆ ಬಹುತೇಕ ಜಿಲ್ಲೆಗಳಲ್ಲಿ ಇಲಾಖೆಯ ನಿವೃತ್ತ ಅಧಿಕಾರಿಗಳನ್ನು ಮಕ್ಕಳ ರಕ್ಷಣಾಧಿಕಾರಿಗಳನ್ನಾಗಿ ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಳ್ಳಲಾಗುತ್ತಿತ್ತು.

ಹಣಕಾಸಿನ ವಹಿವಾಟಿನ ಅಧಿಕಾರ ಅವರಿಗೆ ಇಲ್ಲದಿರುವುದರಿಂದ ಆ ಕೆಲಸವನ್ನು ಉಪನಿರ್ದೇಶಕರೇ ನಿರ್ವಹಿಸಬೇಕಾಗುತ್ತಿತ್ತು. ನಿವೃತ್ತರನ್ನು ನೇಮಿಸಿಕೊಳ್ಳುವುದರಿಂದ ಅವರು ಹೆಚ್ಚಿನ ಆಸಕ್ತಿಯಿಂದ ಕೆಲಸ ಮಾಡುತ್ತಿಲ್ಲ ಎಂಬ ದೂರುಗಳೂ ಕೇಳಿಬರುತ್ತಿದ್ದವು. ಹೀಗಾಗಿ, ಇದೀಗ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡುವುದನ್ನು ಕಡಿಮೆ ಮಾಡಲಾಗಿದೆ. ಸದ್ಯ ಬಳ್ಳಾರಿ ಹಾಗೂ ಮೈಸೂರು ಜಿಲ್ಲೆಗಳಲ್ಲಿ ಮಾತ್ರ ನಿವೃತ್ತ ಅಧಿಕಾರಿಗಳೇ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

‘ಪ್ರತ್ಯೇಕ ಆಪ್ತಸಮಾಲೋಚಕರ ಅಗತ್ಯವಿಲ್ಲ’



ಬಾಲ್ಯವಿವಾಹ, ಮಕ್ಕಳ ಮೇಲಿನ ದೌರ್ಜನ್ಯದಂತಹ ವಿವಿಧ ಪ್ರಕರಣಗಳಲ್ಲಿ ಮಕ್ಕಳಿಗೆ ಪ್ರತ್ಯೇಕ ಆಪ್ತಸಮಾಲೋಚಕರ ಅಗತ್ಯವಿಲ್ಲ. ಸದ್ಯ ಇರುವವರನ್ನೇ ಆಪ್ತಸಮಾಲೋಚನೆಗೆ ಬಳಸಿಕೊಳ್ಳಲಾಗುತ್ತಿದೆ. ಆಪ್ತಸಮಾಲೋಚಕರಿಗೆ ನಿರಂತರವಾಗಿ ತರಬೇತಿ ನೀಡಲಾಗುತ್ತಿದೆ.

ಡಾ.ಹರೀಶ್ ದೇಲಂತಬೆಟ್ಟು
ಸದಸ್ಯರು, ಬಾಲ ನ್ಯಾಯಮಂಡಳಿ, ಶಿವಮೊಗ್ಗ

ವಿದ್ಯಾರ್ಥಿನಿಯರಿಗೆ ಥಳಿಸಿದ ಮುಖ್ಯಶಿಕ್ಷಕ



ಕಾಲಿನಲ್ಲಿ ಬಾಸುಂಡೆ ಬಂದಿರುವುದನ್ನು ತೋರಿಸುತ್ತಿರುವ ವಿದ್ಯಾರ್ಥಿನಿಯರು

ಪ್ರಜಾವಾಣಿ ವಾರ್ತೆ

ರಾಮನಗರ: ಜಿಲ್ಲೆಯ ಮಾಗಡಿ ತಾಲ್ಲೂಕಿನ ಹುಲಿಕಟ್ಟೆಯ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯ ಪ್ರಭಾರ ಪ್ರಾಚಾರ್ಯ ಕೃಷ್ಣಮೂರ್ತಿ ತಮ್ಮನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ, ಥಳಿಸಿದ್ದಾಗಿ ಅಲ್ಲಿನ ವಿದ್ಯಾರ್ಥಿನಿಯರು ದೂರಿದ್ದಾರೆ.

ಈ ಆರೋಪದ ಬೆನ್ನಲ್ಲೇ ಪ್ರಾ-ಚಾರ್ಯರನ್ನು ಪ್ರಭಾರ ಹುದ್ದೆಯಿಂದ ಬಿಡುಗಡೆ ಮಾಡಲಾಗಿದೆ.

‘ಗುರುವಾರ ರಾತ್ರಿ ಊಟದ ಬಳಿಕ 8.30ರಿಂದ 10ಗಂಟೆಯವರೆಗೂ ಎಲ್ಲ ವಿದ್ಯಾರ್ಥಿನಿಯರನ್ನೂ ಸಾಲಾಗಿ ನಿಲ್ಲಿಸಿದ್ದರು. ಕಾಪಿ ರೈಟಿಂಗ್ ಮಾಡಿಲ್ಲ ಎಂಬ ಕಾರಣಕ್ಕೆ ಎಲ್ಲರಿಗೂ ಬಾಸುಂಡೆ ಬರುವಂತೆ ಥಳಿಸಿದ್ದಾರೆ. ತಲೆಕೂದಲು ಹಿಡಿದು ಬೆನ್ನಿಗೆ ಹೊಡೆಯುತ್ತಾರೆ. ಶಾಲೆಯಲ್ಲಿನ ಶಿಕ್ಷಕಿಯರನ್ನೂ ಏಕವ-ಚನದಲ್ಲಿ ಬಯ್ಯುತ್ತಾರೆ. ಹೀಗಾಗಿ ಅವರನ್ನು ಬದಲಾಯಿಸಬೇಕು’ ಎಂದು ವಸತಿ ಶಾಲೆಯ ವಿದ್ಯಾರ್ಥಿನಿಯರು ಶನಿವಾರ ಮಾಧ್ಯಮದವರು ಹಾಗೂ ಸಾರ್ವಜನಿಕರ ಮುಂದೆ ಅಳಲು ತೋಡಿಕೊಂಡರು.

ಮಾಗಡಿ ಶಾಸಕ ಎ. ಮಂಜುನಾಥ್ ಸಹ ಇಲಾಖೆ ಅಧಿಕಾರಿಗಳಿಗೆ ಪತ್ರ ಬರೆದು ಕ್ರಮಕ್ಕೆ ಆಗ್ರಹಿಸಿದ್ದರು.

ಭೇಟಿ: ವಿದ್ಯಾರ್ಥಿನಿಯರ ದೂರಿನ ಹಿನ್ನೆಲೆಯಲ್ಲಿ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು ವಸತಿ ಶಾಲೆಗೆ ಭೇಟಿ ನೀಡಿ ವಿಚಾರಣೆ ನಡೆಸಿದರು.

‘ವಿದ್ಯಾರ್ಥಿನಿಯರಿಗೆ ಹೊಡೆದದ್ದು ನಿಜ. ಆದರೆ ಅವಾಚ್ಯ ಶಬ್ದಗಳಿಂದ ನಿಂದಿಸಿಲ್ಲ. ಅವರೊಂದಿಗೆ ಅಸಭ್ಯವಾಗಿ ವರ್ತಿಸಿಲ್ಲ’ ಎಂದು ಕೃಷ್ಣಮೂರ್ತಿ ಅಧಿಕಾರಿಗಳ ಎದುರು ಒಪ್ಪಿಕೊಂಡರು ಎನ್ನಲಾಗಿದೆ. ಪ್ರಾಚಾರ್ಯರ ವಿರುದ್ಧ ಶಿಸ್ತುಕ್ರಮ ಸಂಬಂಧ ಜಿ.ಪಂ. ಸಿಇಒ ಅವರಿಗೆ ವರದಿ ನೀಡುವುದಾಗಿ ಅಧಿಕಾರಿಗಳು ಮಾಹಿತಿ ನೀಡಿದರು.

ಬಿಡುಗಡೆ: ಶಾಲೆಯ ಪ್ರಾಚಾರ್ಯರು ಬೇರೆಡೆಗೆ ವರ್ಗಾವಣೆಗೊಂಡ ಹಿನ್ನೆಲೆಯಲ್ಲಿ ಅದೇ ಗ್ರಾಮದಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಚಾರ್ಯ ಕೃಷ್ಣಮೂರ್ತಿ ಅವರಿಗೆ ಕಿತ್ತೂರು ರಾಣಿ ಚೆನ್ನಮ್ಮ ಶಾಲೆಯ ಉಸ್ತುವಾರಿಯನ್ನೂ ನೀಡಲಾಗಿತ್ತು. ಇದೀಗ ಅವರನ್ನು ಪ್ರಭಾರ ಹುದ್ದೆಯಿಂದ ಬಿಡುಗಡೆ ಮಾಡಿದ್ದು, ಮೂಲ ಹುದ್ದೆಯಲ್ಲಿ ಮುಂದುವರಿದಿದ್ದಾರೆ. ಶಾಲೆಗೆ ಸದ್ಯ ಬೇರೊಬ್ಬ ಪ್ರಾಚಾರ್ಯರನ್ನು ನೇಮಿಸಲಾಗಿದೆ.

ಜಿಗ್ನೇಶ್, ಕನ್ಹಯ್ಯ ಕಾಂಗ್ರೆಸ್ ಸೇರ್ಪಡೆ 28ರಂದು

ಅಹಮದಾಬಾದ್ (ಪಿಟಿಐ): ಗುಜರಾತ್‌ನ ಪಕ್ಷೇತರ ಶಾಸಕ, ದಲಿತ ಮುಖಂಡ ಜಿಗ್ನೇಶ್ ಮೇವಾನಿ ಅವರು, ಜೆಎನ್‌ಯುದ ವಿದ್ಯಾರ್ಥಿ ಸಂಘಟನೆಯ ಮಾಜಿ ನಾಯಕ ಕನ್ಹಯ್ಯ ಕುಮಾರ್ ಅವರೊಂದಿಗೆ ಸೆ.28ರಂದು ಕಾಂಗ್ರೆಸ್ ಪಕ್ಷ ಸೇರುವುದಾಗಿ ಘೋಷಿಸಿದ್ದಾರೆ.

ಬಿಜೆಪಿ ಆಡಳಿತವಿರುವ ಗುಜರಾತ್‌ನಲ್ಲಿ ಮುಂದಿನ ವರ್ಷ ವಿಧಾನಸಭೆ ಚುನಾವಣೆ ನಡೆಯಲಿದ್ದು, ಈ ಬೆಳವಣಿಗೆ ಮಹತ್ವ ಪಡೆದಿದೆ.

ಜಿಗ್ನೇಶ್ ಮೇವಾನಿ, 2017ರ ಗುಜರಾತ್ ವಿಧಾನಸಭೆ ಚುನಾವಣೆಯಲ್ಲಿ ಬನಸ್ಕಾಂತ ಜಿಲ್ಲೆಯ ವಡ್ಗಾಮ್ ವಿಧಾನಸಭೆ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ, ಕಾಂಗ್ರೆಸ್ ಬೆಂಬಲದೊಂದಿಗೆ ಗೆದ್ದಿದ್ದರು.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸಮ್ಮುಖದಲ್ಲಿ ಪಕ್ಷ ಸೇರುತ್ತಿದ್ದು, ಈ ಕಾರ್ಯಕ್ರಮದಲ್ಲಿ ಗುಜರಾತ್ ಕಾಂಗ್ರೆಸ್ ಕಾರ್ಯಾಧ್ಯಕ್ಷ ಹಾರ್ದಿಕ್ ಪಟೇಲ್ ಕೂಡ ಉಪಸ್ಥಿತರಿತ್ತಾರೆ ಎಂದು ಅವರು ಹೇಳಿದ್ದಾರೆ.

‘ಕಾಂಗ್ರೆಸ್ ಪಕ್ಷದ ಹಾಗೂ ಮಹಾತ್ಮ ಗಾಂಧಿ, ಜವಾಹರ್ ಲಾಲ್ ನೆಹರು, ಸರ್ದಾರ್ ಪಟೇಲ್ ಅವರ ಆದರ್ಶಗಳನ್ನು ಬಲಪಡಿಸುವವರನ್ನು ಮತ್ತು ದೇಶದ ಒಳಿತಿಗಾಗಿ ಕೆಲಸ ಮಾಡಲು ಬಯಸುವ ಎಲ್ಲಾ ಕ್ರಾಂತಿಕಾರಿ ಯುವಕರನ್ನು ನಾವು ಕಾಂಗ್ರೆಸ್‌ಗೆ ಸ್ವಾಗತಿಸುತ್ತೇವೆ’ ಎಂದು ಹಾರ್ದಿಕ್ ಪಟೇಲ್ ಪ್ರಕಟಣೆಯಲ್ಲಿ ಹೇಳಿದ್ದಾರೆ. ಜಿಗ್ನೇಶ್ ಅವರನ್ನು ಹಳೆಯ ಸ್ನೇಹಿತ ಎಂದು ಕರೆದಿರುವ ಅವರು, ‘ಜಿಗ್ನೇಶ್ ಸೇರ್ಪಡೆಯಿಂದ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಪಕ್ಷಕ್ಕೆ ಬಲ ಬರಲಿದೆ’ ಎಂದಿದ್ದಾರೆ.

‘ಕಾಂಗ್ರೆಸ್ ಕಾರ್ಯಕರ್ತರ ಸಹಾಯದಿಂದ 2017ರ ಚುನಾವಣೆಯಲ್ಲಿ ಜಿಗ್ನೇಶ್ ಗೆದ್ದಿದ್ದರು. ಜಿಗ್ನೇಶ್ ಸೇರ್ಪಡೆಯಿಂದ, ಬಿಜೆಪಿಯ ಭ್ರಷ್ಟ ನೀತಿಗಳ ವಿರುದ್ಧ ಹೋರಾಡಲು ಕಾಂಗ್ರೆಸ್‌ಗೆ ಮತ್ತಷ್ಟು ಬಲ ಬರಲಿದೆ. ಬಿಜೆಪಿಯ ಭ್ರಷ್ಟ ಹಾಗೂ ಜನವಿರೋಧಿ ನೀತಿಗಳ ವಿರುದ್ಧ ಯಾರು ಹೋರಾಡುತ್ತಾರೊ ಅವರನ್ನು ನಮ್ಮ ಪಕ್ಷ ಸ್ವಾಗತಿಸುತ್ತದೆ’ ಎಂದು ಗುಜರಾತ್ ಕಾಂಗ್ರೆಸ್ ವಕ್ತಾರ ಮನೀಶ್ ದೋಶಿ ಹೇಳಿದ್ದಾರೆ.

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 26-9-1996

• **ಬಂಗಾರಪ್ಪ ಮರಳಿ ಕಾಂಗ್ರೆಸ್‌ಗೆ: ಕೇಸರಿ ಜತೆ ಚರ್ಚೆ**

ನವದೆಹಲಿ, ಸೆ. 25– ನೂತನ ಕಾಂಗ್ರೆಸ್ ಅಧ್ಯಕ್ಷ ಸೀತಾರಾಂ ಕೇಸರಿ ಅವರನ್ನು ಭೇಟಿಯಾಗಿ ಇಂದು ಮಾತುಕತೆ ನಡೆಸಿದ ಕರ್ನಾಟಕ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಎಸ್. ಬಂಗಾರಪ್ಪ ಅವರು, ತಮ್ಮ ಪಕ್ಷವನ್ನು ವಿಲೀನಗೊಳಿಸುವ ಮೂಲಕ ಮತ್ತೆ ಕಾಂಗ್ರೆಸ್‌ಗೆ ಸೇರುವ ಸಾಧ್ಯತೆಗಳು ಹೆಚ್ಚಾಗಿವೆ.

ತಮ್ಮನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಯುವಂತೆ ಮಾಡಿದ ಪಿ.ವಿ. ನರಸಿಂಹರಾವ್ ವರ್ತನೆಯಿಂದ ಬೇಸರಗೊಂಡು ಕಾಂಗ್ರೆಸ್ ಬಿಟ್ಟು ಕರ್ನಾಟಕ ಕಾಂಗ್ರೆಸ್ ಪಕ್ಷವನ್ನು ಹುಟ್ಟುಹಾಕಿದ ಬಂಗಾರಪ್ಪ ಈಗ ಕಾಂಗ್ರೆಸ್‌ಗೆ ಮರಳಲು ಹಾದಿ ಸುಗಮವಾದಂತಾಗಿದೆ.

50 ವರ್ಷಗಳ ಹಿಂದೆ

ಭಾನುವಾರ, 26-9-1971

• **ನರಸಿಂಹ ರಾವ್ ಆಂಧ್ರದ ಹೊಸ ಮುಖ್ಯಮಂತ್ರಿ**

ಹೈದರಾಬಾದ್, ಸೆ. 25– ಶಿಕ್ಷಣ ಸಚಿವ ಪಿ.ವಿ. ನರಸಿಂಹರಾವ್ ಅವರು ಆಂಧ್ರಪ್ರದೇಶದ ಮುಖ್ಯಮಂತ್ರಿಗಳಾಗಿ ಇಂದು ಚುನಾಯಿತರಾದರು.

ಕಾಂಗ್ರೆಸ್ ಹೈಕಮಾಂಡ್ ಪ್ರತಿನಿಧಿಗಳಾದ ಸಿ. ಸುಬ್ರಹ್ಮಣ್ಯಂ ಮತ್ತು ಉಮಾಶಂಕರ ದೀಕ್ಷಿತ್ ಅವರು ಇಂದು ರಾತ್ರಿ ಇಲ್ಲಿ ಸಮಾವೇಶಗೊಂಡಿದ್ದ ಪಕ್ಷದ ಸಭೆಯಲ್ಲಿ ಕೆ. ಬ್ರಹ್ಮಾನಂದ ರೆಡ್ಡಿ ಅವರ ಉತ್ತರಾಧಿಕಾರಿಯ ಹೆಸರನ್ನು ಅಧಿಕೃತವಾಗಿ ಪ್ರಕಟಿಸಿದರು.

ಈ ನಿರ್ಧಾರಕ್ಕೆ ಪಕ್ಷದ ಶಾಸಕರೆಲ್ಲರ ಬೆಂಬಲ ಸಿಕ್ಕಿರುವುದಾಗಿ ತಿಳಿದುಬಂದಿದೆ.

ದಿನ ಭವಿಷ್ಯ

ಭಾನುವಾರ ಸೆಪ್ಟೆಂಬರ್ 26, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ವರ್ಷ ಋತು ಭಾದ್ರಪದ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಉತ್ತರ ಫಲ್ಗುಣಿ ಪಂಚಮೀ ಗಂ. 10-2 (ಹ. 10-16) ಭಾನುವಾರ ನಿತ್ಯ ನಕ್ಷತ್ರ ಕೃತ್ತಿಕಾ ಗಂ. 17-14(ಹ. 1-08) ವಜ್ರ ನಾಮ ಯೋಗ ಗಂ. 23-22 ತೈತಲ ಕರಣ ಗಂ. 10-2 ವಿಷಾಭಾವಃ ಅಮೃತ ಗಂ 10-54 : ರಾಹುಕಾಲ: ಮ. ಗಂ. 4-30 ರಿಂದ 6-00 ಗುಳಿಕ ಮ. ಕಾಲ ಗಂ 3-00ರಿಂದ 4-30 ಯಮಗಂಡ ಕಾಲ ಮ. ಗಂ 12-00 ರಿಂದ 1-30 : ಸೂರ್ಯೋದಯ: 6-12 ಸೂರ್ಯಾಸ್ತ: 6-10 ಅದೃಷ್ಟ ಸಂಖ್ಯೆ 3 5

ಮೇಷ: ಕೆಲವರೊಂದಿಗೆ ಅತಿಯಾದ ಸ್ನೇಹ ಸಂಬಂಧ ವೃದ್ಧಿಸುವ ಸಾಧ್ಯತೆ. ವ್ಯವಹಾರಗಳಲ್ಲಿ ಸಂಬಂಧ ಹಳಸದಂತೆ ಎಚ್ಚರಿಕೆ ಅಗತ್ಯ. ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನ. ಓದಿನಲ್ಲಿ ಯಶಸ್ಸು ನಿಮ್ಮದಾಗಲಿದೆ.

ವೃಷಭ: ನಿಮ್ಮ ಹೆಸರನ್ನು ದುರ್ಬಳಕೆ ಮಾಡಿಕೊಂಡು ಲಾಭ ಪಡೆಯುವವರ ವಿಷಯದಲ್ಲಿ ಎಚ್ಚರದಿಂದಿರುವುದು ಒಳಿತು. ಬಾಲಬಡುಕರನ್ನು ದಿನದಮಟ್ಟಿಗೆ ದೂರವಿಡಿ. ಹಿರಿಯರ ಆರೋಗ್ಯದ ಬಗ್ಗೆ ಗಮನವಿರಲಿ.

ಮಿಥುನ: ನಿಮ್ಮ ಇಂದಿನ ಅನಿವಾರ್ಯವಲ್ಲದ ಕೆಲಸ ಕಾರ್ಯಗಳನ್ನು ಮುಂದೂಡುವುದು ಉತ್ತಮ. ದೂರದ ಪ್ರಯಾಣ ಖಂಡಿತ ಬೇಡ. ಮಡದಿ ನಿಮ್ಮ ಚಿಂತೆಗಳನ್ನು ದೂರಮಾಡಲಿದ್ದಾಳೆ.

ಕರ್ಕಾಟಕ: ನಿಮ್ಮ ವಿರುದ್ಧ ಸಹೋದ್ಯೋಗಿಗಳಿಂದ ಸಣ್ಣ ಪಿತೂರಿಯೊಂದು ರೂಪುಗೊಳ್ಳುವ ಸಾಧ್ಯತೆಯಿದ್ದು, ಆ ಬಗ್ಗೆ ತಲೆಕೆಡಿಸಿಕೊಳ್ಳದೇ ಮುಗ್ಧತೆ ಕಾಪಾಡುವುದು ಒಳ್ಳೆಯದು. ಸಮಾಧಾನ ನಿಮ್ಮ ನೆರವಿಗೆ ಬರುವುದು.

ಸಿಂಹ: ಮನಸ್ಸಿನಲ್ಲಿ ಹರಿಯುತ್ತಿರುವ ಪ್ರೀತಿ ಪ್ರೇಮಗಳ ಹುಚ್ಚು ಹೋಳೆಗೆ ಲಗಾಮು ಹಾಕಿಕೊಳ್ಳಿ. ಸ್ನೇಹದ ವಿಷಯದಲ್ಲಿ ಎಡವಿ ಬೀಳುವ ಸಾಧ್ಯತೆ. ಅಪರಿಚಿತ ವ್ಯಕ್ತಿಗಳೊಡನೆ ವ್ಯವಹರಿಸುವಾಗ ಎಚ್ಚರವಿರಲಿ.

ಕನ್ಯಾ: ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸುವ ಸಾಧ್ಯತೆ. ಮನಸ್ಸಿಗೆ ನೆಮ್ಮದಿ ನೀಡುವ ಹೊಸ ಮಾರ್ಗವೊಂದು ಗೋಚರ. ವ್ಯಾಪಾರಸ್ಥರಿಗೆ ಗಣನೀಯ ಲಾಭ ದೊರಕುವುದು. ಮನೆಮಂದಿಯೊಂದಿಗೆ ಪ್ರವಾಸ.

ತುಲಾ: ಸಾಲಕೊಟ್ಟವರು ಎಡೆಬಿಡದೆ ಮರುಪಾವತಿಗಾಗಿ ತಗಾದೆ ಹೂಡಬಹುದು. ದ್ವೇಷಕ್ಕೆ ಮುಂದಾಗದೇ ಉಪಾಯದಿಂದ ಪಾರಾಗುವ ಬಗ್ಗೆ ಯೋಚಿಸಿ. ಸಂಗಾತಿಯೊಂದಿಗೆ ಸಮಾಲೋಚಿಸಿ ಉತ್ತಮ ನಿರ್ಣಯ ಕೈಗೊಳ್ಳಿ.

ವೃಶ್ಚಿಕ: ಗೆಳೆಯರೊಂದಿಗೆ ಸಮಾಲೋಚನೆ. ಕೆಲಸಕಾರ್ಯಗಳಲ್ಲಿ ನಿಮ್ಮ ಸ್ವಭಾವದಿಂದಾಗಿ ಹಿನ್ನಡೆ. ದೃಢನಿರ್ಧಾರದಿಂದ ವ್ಯವಹರಿಸಿ. ಹಿರಿಯರ ಬೆಂಬಲದಿಂದಾಗಿ ಯಶಸ್ಸನ್ನು ಕಾಣುವಿರಿ.

ಧನು: ಸತ್ಯವನ್ನು ಬಯಲುಗೊಳಿಸಲು ಹೋಗಿ ಅವಘಡಕ್ಕೆ ತುತ್ತಾಗುವ ಸಾಧ್ಯತೆ. ಅಂತಹ ಸಂದರ್ಭಗಳನ್ನು ಮುಂದೂಡುವುದೇ ಲೇಸು. ವಾಹನ ಖರೀದಿಯ ಯೋಗ. ಹಿತೈಷಿಗಳ ಸಲಹೆ ಪಡೆಯಿರಿ.

ಮಕರ: ಸಂಬಂಧವಿಲ್ಲದ ವಿಷಯಗಳು ನಿಮ್ಮನ್ನು ಗೊಂದಲಕ್ಕೆ ಸಿಕ್ಕಿಸುವ ಸಾಧ್ಯತೆ. ಅಂತಹ ವಿಷಯಗಳಲ್ಲಿ ಅತ್ಯುತ್ಸಾಹ ಸಲ್ಲ. ಮನೆಯವರೊಂದಿಗೆ ದೂರದ ಪ್ರಯಾಣ. ಆರೋಗ್ಯದಲ್ಲಿ ವೃದ್ಧಿಯಾಗಿ ಸಂತಸ ಮೂಡುವುದು.

ಕುಂಭ: ಗುಂಪುಗಾರಿಕೆಯಿಂದಾಗಿ ಧನ ಮಾನಗಳ ಹಾನಿ ಸಂಭವಿಸುವ ಸಾಧ್ಯತೆ. ಅನ್ಯರ ಮೇಲೆ ವಿನಾ ಸಂಶಯ ಒಳ್ಳೆಯದಲ್ಲ. ದೂರದಲ್ಲಿರುವ ಮಕ್ಕಳ ಆಗಮನ ಸಾಧ್ಯತೆ. ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗಿ.


ಮೀನ: ಬೇರೆಯವರ ಥಳುಕು ಬಳುಕಿನ ಮಾತಿಗೆ ಮರುಳಾಗಿ ಮೋಸಹೋಗುವ ಸಾಧ್ಯತೆ. ಹಿರಿಯರ ಹಿತನುಡಿಗಳನ್ನು ಮನ್ನಿಸಿ ಅವರ ಆರೋಗ್ಯದ ಕಡೆಗೆ ಗಮನ ವಹಿಸಿ. ದಿನದ ಮಟ್ಟಿಗೆ ದೂರದ ಪ್ರಯಾಣ ಬೇಡ.

ನಿಮ್ಮ ಜನ್ಮದಿನ 26-ಸೆಪ್ಟೆಂಬರ್ ಇಂದು ಅತ್ಯಂತ ಶುಭದಾಯಕವಾಗಿದ್ದು, ಮಾನಸಿಕ ಶಾಂತಿಗಾಗಿ ದೇವತಾರಾಧನೆಯಲ್ಲಿ ಆಸಕ್ತಿ ವಹಿಸಲಿದ್ದೀರಿ. ವಾಣಿಜ್ಯ ಬೆಳೆಗಳಿಂದಾಗಿ ರೈತಾಪಿ ಕೆಲಸಗಳಲ್ಲಿ ತೊಡಗಿ-ಕೊಂಡವರಿಗೆ ಉತ್ತಮ ಲಾಭ. ಧಾರ್ಮಿಕ ವೃತ್ತಿಯಲ್ಲಿರುವವರಿಗೆ ಉನ್ನತ ಸ್ಥಾನಮಾನಗಳು ಲಭ್ಯವಾಗಲಿದೆ. ಆಭರಣ ವ್ಯಾಪಾರದಲ್ಲಿ ಕುಂಠಿತವಾಗುವ ಸಂಭವ.

ಪದಬಂಧ 4730 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಉಸಿರನ್ನು ಹೊರಗೆ ಬಿಡುವಿಕೆ (3)
3.ದೂರವನ್ನು ಅಳೆಯುವ ಒಂದು ಪ್ರಮಾಣ (3)
5.ಅಭಿಪ್ರಾಯ ಭೇದವಿದು (5)
7.ತೀರಾ ನಿಕೃಷ್ಟವಾದುದು (3)
8.ಉದ್ದವಾಗಿ ಬಾಗಿರುವ ತುತ್ತೂರಿ (3)
9.ಸಮವಯಸ್ಕರನ್ನು ಹೀಗೆನ್ನಿ (3)
11.ಗರ ಬಡಿದಂತಿರುವ ಪತಿವ್ರತೆ (3)
13.ಕರೆಯುವಿಕೆಗೊಂದು ಪರ್ಯಾಯ ಪದ (3)
15.ಕಪ್ಪೆ ಚಿಪ್ಪು ಇಲ್ಲಿದೆ (3)
16.ಲೋಹದ ಹಕ್ಕಿಯಲ್ಲಿನ ಪಯಣ (5)
17.ಉತ್ಸವದಲ್ಲಿ ಎರಚುವ ಕೆಂಪುಬಣ್ಣದ ಪುಡಿ (3)
18. ಧಾನ್ಯದ ತೆನೆ (3)

ಮೇಲಿಂದ ಕೆಳಕ್ಕೆ
2.ಸಭೆಯಲ್ಲಿ ಕುಳಿತಿರುವವನು (3)
3.ಈತ ಹಾಡುಗಾರ (3)
6.ಭಿಕ್ಷೆ ಬೇಡುವವ ಇಲ್ಲಿದ್ದಾನೆ (3)
9.ವಾಚಕನನ್ನು ಆಡುಮಾತಲ್ಲಿ ಕರೆಯಿರಿ (3)
10.ಸ್ನೇಹಿತೆ ಇಲ್ಲಿದ್ದಾಳೆ (3)
12.ದ್ರವ ಒಸರುತ್ತಿರುವ ಜಿಹ್ವೆ (3)
14.ನಲಿಯುತ್ತಿರುವ ರಾಷ್ಟ್ರ ಪಕ್ಷಿ (3)
15.ನಾಯಿ ಇಲ್ಲಿಗೆ ಬಂದಿದೆಯಲ್ಲಾ? (3)



4729ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ
1.ಭರತಿ 6.ಬೇಜವಾಬ್ದಾರಿ
7.ವಲ್ಲರಿ 10.ಪ್ರಾಯೋಪವೇಶ
15.ನಿಸರ್ಗ 16.ಜಲತರಂಗ
17.ದಸರ

ಮೇಲಿಂದ ಕೆಳಕ್ಕೆ
1.ಭರವಸೆ 2.ತಗರಿ
3.ಸೋಂಬೇರಿ 4.ಸವಾಲು
5.ಕಾರಿರುಳು 8.ಪ್ರಯೋಗ
9.ಪ್ರವೇಶ 11.ಮೃಗಜಲ
12.ಮಾರ್ಗಶಿರ 13.ವೇತನ
14.ಮಗಳು 15.ನಿನಾದ

ಸುಡೊಕು 5116

1		9		2			8	
	6				9		5	2
	8			4	5			
2							6	
		4		3				1
5					2			
		5		9			7	6
7			2		6	8		
9	4			7			3	5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5115 ಸುಡೊಕು

9	4	1	5	6	7	2	3	8
6	7	8	2	3	9	1	4	5
5	3	2	4	1	8	9	6	7
2	8	5	1	9	6	4	7	3
1	6	4	7	5	3	8	2	9
3	9	7	8	2	4	6	5	1
4	1	3	9	7	2	5	8	6
8	5	6	3	4	1	7	9	2
7	2	9	6	8	5	3	1	4

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆರೋಪ

‘ಪುಟ್ಟರಂಗ ಶೆಟ್ಟರನ್ನು ಬೆದರಿಸಿದ್ದ ಎಚ್‌ಡಿಕೆ’

ಪ್ರಜಾವಾಣಿ ವಾರ್ತೆ


ಸಿದ್ದರಾಮಯ್ಯ

ಬೆಂಗಳೂರು: ಜೆಡಿಎಸ್–ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದಲ್ಲಿ ಮುಖ್ಯಮಂತ್ರಿಯಾಗಿದ್ದ ಎಚ್‌.ಡಿ. ಕುಮಾರಸ್ವಾಮಿ ಹಿಂದುಳಿದ ವರ್ಗಗಳ ಆಯೋಗದ ಜಾತಿವಾರು ಜನಗಣತಿ ವರದಿಯನ್ನು ಬಿಡುಗಡೆ ಮಾಡದಂತೆ ಆಗ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರಾಗಿದ್ದ ಪುಟ್ಟರಂಗ ಶೆಟ್ಟಿ ಅವರನ್ನು ಬೆದರಿಸಿದ್ದರು ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆರೋಪಿಸಿದರು.

ಕೋವಿಡ್‌ನಿಂದ ಮೃತರಾದವರ ಕುಟುಂಬಗಳಿಗೆ ನೆರವು ಮತ್ತು ದಿನಸಿ ಕಿಟ್ ವಿತರಿಸಲು ಕರ್ನಾಟಕ ರಾಜ್ಯ ಮಡಿವಾಳರ ಸಂಘ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ನಾನು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಹಿಂದುಳಿದ ವರ್ಗಗಳ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ (ಜಾತಿವಾರು ಜನಗಣತಿ) ಪೂರ್ಣಗೊಂಡಿರಲಿಲ್ಲ. ನಂತರ ಬಂದ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಮುಕ್ತಾಯವಾಯಿತು. ವರದಿ ಬಹಿರಂಗವಾಗದಂತೆ ಕುಮಾರಸ್ವಾಮಿ ತಡೆದರು’ ಎಂದರು.


ಜಾತಿವಾರು ಜನಗಣತಿಯ ವರದಿ ಸಿದ್ಧವಾಗಿರುವ ಕುರಿತು ಪುಟ್ಟರಂಗ ಶೆಟ್ಟಿ ಅವರು ಕುಮಾರಸ್ವಾಮಿ ಅವರಿಗೆ ಮಾಹಿತಿ ನೀಡಿದ್ದರು. ಆಗ, ಅಂದಿನ ಮುಖ್ಯಮಂತ್ರಿ ನೇರವಾಗಿ ವರದಿಯನ್ನು ವಿರೋಧಿಸಿದ್ದರು. ಕುಮಾರಸ್ವಾಮಿ ಅವರ ಬೆದರಿಕೆಗೆ ಹೆದರಿದ ಪುಟ್ಟರಂಗ ಶೆಟ್ಟಿ ವರದಿಯನ್ನು ಬಿಡುಗಡೆ ಮಾಡುವ ಗೋಜಿಗೆ ಹೋಗಲಿಲ್ಲ ಎಂದು ಹೇಳಿದರು.

‘ಸತ್ಯ ಹೇಳಿದರೆ ಕುಮಾರಸ್ವಾಮಿ ಅವರಿಗೆ ಕೋಪ ಬರುತ್ತದೆ. ಜಾತಿವಾರು ಜನಗಣತಿಯ ವರದಿಯನ್ನು ಸಿದ್ದರಾಮಯ್ಯ ಕುಳಿತು ಬರೆಸಿದ್ದಾರೆ ಎಂಬ ಆರೋಪ ಮಾಡುತ್ತಾರೆ. ಅದು ರಾಜ್ಯದಲ್ಲಿನ ಎಲ್ಲ ಜಾತಿ, ಧರ್ಮದ ಜನರ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಮತ್ತು ರಾಜಕೀಯ ಸ್ಥಿತಿಯ ವಾಸ್ತವ ಚಿತ್ರಣ ನೀಡುವ ವರದಿ. ಯಾರಿಗೂ ಅನ್ಯಾಯ ಮಾಡುವ ಉದ್ದೇಶ ವರದಿಯ ಹಿಂದಿಲ್ಲ. ಆದರೂ, ಅವರು ವರದಿಯನ್ನು ವಿರೋಧಿಸುತ್ತಾರೆ’ ಎಂದರು.

ತಮ್ಮ ಸರ್ಕಾರ ಇದ್ದಾಗ ರಾಜ್ಯದಲ್ಲಿ ಮಡಿವಾಳ ಸಮುದಾಯದ ಅಭಿವೃದ್ಧಿಗೆ ಹೆಚ್ಚು ಅನುದಾನ ನೀಡಲಾಗಿತ್ತು. ಮತ್ತೆ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರಲಿದೆ. ಆಗ ಮಡಿವಾಳ ಸಮುದಾಯಕ್ಕೆ ವಿಧಾನ ಪರಿಷತ್ ಸದಸ್ಯ ಸ್ಥಾನ ನೀಡಲಾಗುವುದು ಎಂದು ಅವರು ಭರವಸೆ ನೀಡಿದರು.

ರಾಜ್ಯ ಮಡಿವಾಳರ ಸಂಘದ ಅಧ್ಯಕ್ಷ ನಂಜಪ್ಪ, ಕರ್ನಾಟಕ ಲೋಕಸೇವಾ ಆಯೋಗದ ಸದಸ್ಯ ಡಾ. ರವಿಕುಮಾರ್, ಲೋಹಿಯಾ ವಿಚಾರ ವೇದಿಕೆ ಅಧ್ಯಕ್ಷ ಬಿ.ಎಸ್. ಶಿವಣ್ಣ ಮಳವಳ್ಳಿ, ಕಾಂಗ್ರೆಸ್ ಮುಖಂಡ ರಾಜು ತಲ್ಲೂರು ಉಪಸ್ಥಿತರಿದ್ದರು.

ಸುಳ್ಳಿನ ಜಪವೇ ಸಿದ್ದಕಲೆ: ಎಚ್‌.ಡಿ. ಕುಮಾರಸ್ವಾಮಿ


ಎಚ್‌.ಡಿ. ಕುಮಾರಸ್ವಾಮಿ

ಬೆಂಗಳೂರು: ‘ಸುಳ್ಳನ್ನು ಪದೇ ಪದೇ ಹೇಳುತ್ತಾ ಜನರನ್ನು ದಾರಿ ತಪ್ಪಿಸುವ ‘ಸಿದ್ದಕಲೆ’ ಅವರಿಗೆ ಚೆನ್ನಾಗಿ ಸಿದ್ಧಿಸಿದೆ. ಸುಳ್ಳಿನ ಜಪ ಮಾಡುವುದೇ ಅವರಿಗೆ ನಿತ್ಯದ ಕಾಯಕ. ಇದು ಶಾಂತ ಸಮಾಜವನ್ನು ಒಡೆಯುವ ಹುನ್ನಾರ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಅವರು ಸಿದ್ದರಾಮಯ್ಯ ಅವರಿಗೆ ತಿರುಗೇಟು ನೀಡಿದ್ದಾರೆ.

ಟ್ವಿಟರ್‌ನಲ್ಲಿ ಪ್ರತಿಕ್ರಿಯಿಸಿರುವ ಅವರು, ‘ಸಿದ್ದರಾಮಯ್ಯ ಸಮ್ಮಿಶ್ರ ಸರ್ಕಾರದ ಸಮನ್ವಯ ಸಮಿತಿ ಅಧ್ಯಕ್ಷರಾಗಿದ್ದರು. ಆಗ ಜಾತಿವಾರು ಜನಗಣತಿ ವರದಿಯ ಬಗ್ಗೆ ಅವರು ಪ್ರಸ್ತಾಪವನ್ನೇ ಮಾಡಲಿಲ್ಲ, ಚರ್ಚಿಸುವ ಧೈರ್ಯವನ್ನೂ ತೋರಲಿಲ್ಲ. ನನಗೇಕೆ ಕೋಪ ಬರುತ್ತದೆ’ ಎಂದು ಪ್ರಶ್ನಿಸಿದ್ದಾರೆ.

ವರದಿಗೆ ಕಾರ್ಯದರ್ಶಿಯ ಸಹಿಯೇ ಇರಲಿಲ್ಲ ಎಂದು ಆಯೋಗದ ಅಧ್ಯಕ್ಷರೇ ಸ್ವತಃ ಬಹಿರಂಗಪಡಿಸಿದ್ದಾರೆ. ಆಗ ಪ್ರತಿಪಕ್ಷ ನಾಯಕರಾಗಿರುವ ಸಿದ್ದರಾಮಯ್ಯ ಪಂಡಿತರಂತೆ ಹೇಳಿಕೆ ನೀಡುವ ಮುನ್ನ ಆ ಬಗ್ಗೆ ಕನಿಷ್ಠ ಸಾಮಾನ್ಯ ಪ್ರಜ್ಞೆ ಇರಬೇಕಾಗಿತ್ತು. ವರದಿಯ ಬಗ್ಗೆ ಇಷ್ಟೆಲ್ಲ ಪ್ರೀತಿ, ಕಾಳಜಿ ಇರುವವರು ವಿಧಾನಮಂಡಲ ಅಧಿವೇಶನದಲ್ಲಿ ಏಕೆ ಪ್ರಸ್ತಾಪಿಸಲಿಲ್ಲ ಎಂದು ಕೇಳಿದ್ದಾರೆ.

ತಮ್ಮ ಪಕ್ಷದಲ್ಲೇ ಬೀಳುತ್ತಿರುವ ಒಳ ಏಟುಗಳ ಹೊಡೆತ ತಾಳಲಾರದೆ, ಅದನ್ನು ಮುಚ್ಚಿಟ್ಟುಕೊಳ್ಳಲು ಬಹಿರಂಗವಾಗಿ ಬೊಬ್ಬೆ ಹೊಡೆಯುವುದು ಹತಾಶೆ ಮತ್ತು ರಾಜಕೀಯ ಅಪಕಾಲಾಪನ್ನವಾದದ ಸಂಕೇತ. ಇಂತಹ ಪ್ರಮುಖ ವರದಿಯನ್ನು ಮುಖ್ಯಮಂತ್ರಿ ಸಲ್ಲಿಸಬೇಕಿತ್ತು, ಸಚಿವರಿಗೆ ಅಲ್ಲ. ಸುದೀರ್ಘ ರಾಜಕೀಯ ಅನುಭವ, ಸಂಸದೀಯ ಚರಿತ್ರೆ ಇದ್ದರೂ ಸಾಲದು. ಸಾಮಾನ್ಯ ಜ್ಞಾನವೂ ಇರಲಿ. ಪದೇ ಪದೇ ‘ಸಿದ್ದಹಸ್ತಿಕೆ’ ತೋರುವ ಪ್ರಯತ್ನ ಬೇಡ ಎಂದು ಟೀಕಿಸಿದ್ದಾರೆ.

‘ಯಾರೋ ಕಟ್ಟಿದ ಹುತ್ತಕ್ಕೆ ಹೊಕ್ಕು ರಾಜಕೀಯ ಮರುಜನ್ಮ ಪಡೆದು ಉಂಡ ಮನೆಗೆ ಕನ್ನ ಕೊರೆಯುವ ಮುನ್ನ ನಿಮ್ಮ ಹೇಳಿಕೆಗಳ ಬಗ್ಗೆ ಎಚ್ಚರವಿರಲಿ. ಸಮಾಜದ ಶಾಂತಿ ಕದಡುವ ದುಸ್ಸಾಹಸಕ್ಕೆ ಕೈ ಹಾಕಿದರೆ ಜನರೇ ಉತ್ತರ ಕೊಡುತ್ತಾರೆ. ಕಂಡವರ ಮಕ್ಕಳನ್ನು ಬಾವಿಗೆ ತಳ್ಳಿ ವಿಕೃತ ಆನಂದ ಅನುಭವಿಸುವುದು ಹೇಯ. ಮುಗ್ಧ ಜನರಲ್ಲಿ ರಾಜಕೀಯ ವಿಷ ಬೀಜ ಬಿತ್ತುವುದು ರಾಜಕೀಯ ನಿಕೃಷ್ಟತೆಯ ಪರಮಾವಧಿ’ ಎಂದು ವಾಗ್ದಾಳಿ ನಡೆಸಿದ್ದಾರೆ.

ಗೋವಾ: ಬಿರುಸಿನ ಪ್ರಚಾರ ಮಾಡಿ


ರಾಹುಲ್ ಗಾಂಧಿ

ಪಣಜಿ (ಪಿಟಿಐ): ಮುಂದಿನ ವರ್ಷ ಫೆಬ್ರುವರಿಯಲ್ಲಿ ಗೋವಾ ವಿಧಾನಸಭೆಗೆ ಚುನಾವಣೆ ನಡೆಯಲಿದ್ದು, ಆಡಳಿತಾರೂಢ ಬಿಜೆಪಿಯನ್ನು ಸೋಲಿಸಲು ಬಿರುಸಿನ ಪ್ರಚಾರ ಕೈಗೊಳ್ಳುವಂತೆ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರು ಪಕ್ಷದ ನಾಯಕರಿಗೆ ಸೂಚಿಸಿದ್ದಾರೆ.

‘ನವದೆಹಲಿಯಲ್ಲಿ ನಡೆದ ಸಭೆಯಲ್ಲಿ ರಾಹುಲ್ ಗಾಂಧಿ ಅವರು ಪಕ್ಷದ ನಾಯಕರಿಗೆ ಈ ಕುರಿತು ನಿರ್ದೇಶನ ನೀಡಿದ್ದಾರೆ’ ಎಂದು ಕಾಂಗ್ರೆಸ್‌ನ ಗೋವಾ ಉಸ್ತುವಾರಿ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ.

‘2022ರ ಫೆಬ್ರುವರಿಯಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸುವುದು ನಿಶ್ಚಿತ‘ ಎಂದೂ ಅವರು ತಿಳಿಸಿದ್ದಾರೆ.

ಚುನಾವಣಾ ವೀಕ್ಷಕ ಪಿ.ಚಿದಂಬರಂ, ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ.ವೇಣುಗೋಪಾಲ್, ಜಿಪಿಸಿಸಿ ಅಧ್ಯಕ್ಷ ಗಿರೀಶ್ ಚೋಡಾನಕರ್ ಮತ್ತು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ದಿಗಂಬರ್ ಕಾಮತ್ ಸಭೆಯಲ್ಲಿ ಭಾಗವಹಿಸಿದ್ದರು.

ಮಿಲಿಟರಿ ಸರಕು ಸಾಗಣೆ ವಿಮಾನ ಖರೀದಿ: ಸ್ಪೇನ್ ಕಂಪನಿ ಜತೆ ಒಪ್ಪಂದ

ನವದೆಹಲಿ (ಪಿಟಿಐ): ₹ 20,000 ಕೋಟಿ ವೆಚ್ಚದಲ್ಲಿ, ಮಿಲಿಟರಿ ಸರಕು ಸಾಗಣೆಯ 56 ವಿಮಾನಗಳ (ಸಿ–295) ಖರೀದಿಗಾಗಿ ರಕ್ಷಣಾ ಸಚಿವಾಲಯವು ಸ್ಪೇನ್ ಮೂಲದ ಕಂಪನಿ ಏರ್‌ಬಸ್ ಡಿಫೆನ್ಸ್ ಆ್ಯಂಡ್ ಸ್ಪೇಸ್ ಜೊತೆ ಶುಕ್ರವಾರ ಒಪ್ಪಂದಕ್ಕೆ ಸಹಿ ಹಾಕಿದೆ.

ಕೋವಿಡ್: ಮೃತರ ಸಂಖ್ಯೆ 37,717ಕ್ಕೆ ಏರಿಕೆ

ಬೆಂಗಳೂರು: ಕೋವಿಡ್ ಪೀಡಿತರಲ್ಲಿ 11 ಮಂದಿ ಮೃತಪಟ್ಟಿರುವುದು ಶನಿವಾರ ದೃಢಪಟ್ಟಿದೆ. ಈವರೆಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 37,717ಕ್ಕೆ ಏರಿಕೆಯಾಗಿದೆ.

ಹೊಸದಾಗಿ 787 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಸೋಂಕಿತರಾದವರ ಒಟ್ಟು ಸಂಖ್ಯೆ 29.72 ಲಕ್ಷ ದಾಟಿದೆ. ಒಂದು ದಿನದ ಅವಧಿಯಲ್ಲಿ 1.40 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣವು ಶೇ 0.55 ರಷ್ಟು ವರದಿಯಾಗಿದೆ. 11 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 12 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬಾಗಲಕೋಟೆ, ಬೀದರ್, ಗದಗ, ಕೊಪ್ಪಳ ಹಾಗೂ ವಿಜಯಪುರದಲ್ಲಿ ಹೊಸ ಪ್ರಕರಣ ವರದಿಯಾಗಿಲ್ಲ.

ಕೇರಳಕ್ಕೆ ಹೊಂದಿಕೊಂಡಿರುವ ಗಡಿ ಜಿಲ್ಲೆಗಳಾದ ದಕ್ಷಿಣ ಕನ್ನಡದಲ್ಲಿ 127, ಮೈಸೂರಿನಲ್ಲಿ 65 ಹಾಗೂ ಕೊಡಗಿನಲ್ಲಿ 25 ಪ್ರಕರಣಗಳು ಪತ್ತೆಯಾಗಿವೆ. ಬೆಂಗಳೂರಿನಲ್ಲಿ 276 ಹಾಗೂ ಉಡುಪಿಯಲ್ಲಿ 68 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 50ರ ಗಡಿಯೊಳಗೆ ಇವೆ.

ಸೋಂಕಿತರಲ್ಲಿ 775 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 29.21 ಲಕ್ಷ ದಾಟಿದೆ. ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ 13,307ಕ್ಕೆ ಏರಿಕೆಯಾಗಿದೆ.

6 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ. ಬೆಂಗಳೂರಿನಲ್ಲಿ 4, ಬೆಳಗಾವಿ ಹಾಗೂ ಚಿಕ್ಕಮಗಳೂರಿನಲ್ಲಿ ತಲಾ ಇಬ್ಬರು ಮೃತಪಟ್ಟಿದ್ದಾರೆ. ದಕ್ಷಿಣ ಕನ್ನಡ, ಶಿವಮೊಗ್ಗ ಹಾಗೂ ಉಡುಪಿಯಲ್ಲಿ ತಲಾ ಒಬ್ಬರು ಸಾವಿಗೀಡಾಗಿದ್ದಾರೆ. ಮರಣ ಪ್ರಮಾಣ ದರವು ಶೇ 1.39 ರಷ್ಟು ವರದಿಯಾಗಿದೆ.

ರಾಜ್ಯ ಕೋವಿಡ್ ಅಂಕಿ–ಅಂಶ

29,72,620 ▲	ಒಟ್ಟು ಸೋಂಕಿತರು (29,71,833 ನಿನ್ನೆಯ ವಿವರ)
13,307 ▲	ಸಕ್ರಿಯ ಪ್ರಕರಣಗಳು
29,21,567 ▲	ಗುಣಮುಖರಾದವರು
37,717 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	787	▼
ಗುಣಮುಖ	775	▼
ಸಾವು	11	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

2 ಲಕ್ಷ ಅಕ್ರಮ ವಿದ್ಯುತ್ ಸಂಪರ್ಕ ಸಕ್ರಮಕ್ಕೆ ಸರ್ಕಾರ ಚಿಂತನೆ

ಪ್ರಜಾವಾಣಿ ವಾರ್ತೆ


ಬೆಂಗಳೂರು: ಆರ್ಥಿಕವಾಗಿ ಹೊರೆಯಾದರೂ ರೈತರ 2 ಲಕ್ಷಕ್ಕೂ ಹೆಚ್ಚು ನೀರಾವರಿ ಪಂಪ್‌ಸೆಟ್‌ಗಳ ವಿದ್ಯುತ್ ಸಂಪರ್ಕವನ್ನು ಸಕ್ರಮಗೊಳಿಸಲು ರಾಜ್ಯ ಸರ್ಕಾರ ಚಿಂತನೆ ನಡೆಸಿದೆ.

ವಿಧಾನಸಭೆಯಲ್ಲಿ ಇಂಧನ ಸಚಿವ ವಿ. ಸುನೀಲ್‌ಕುಮಾರ್ ನೀಡಿರುವ ಮಾಹಿತಿ ಪ್ರಕಾರ, 2.57 ಲಕ್ಷ ಪಂಪ್‌ಸೆಟ್‌ಗಳ ವಿದ್ಯುತ್ ಸಂಪರ್ಕವನ್ನು ಸಕ್ರಮಗೊಳಿಸುವಂತೆ ಅರ್ಜಿ ಸಲ್ಲಿಕೆಯಾಗಿದ್ದು, ವಿಲೇವಾರಿಗೆ ಬಾಕಿ ಇವೆ. ಈ ವರ್ಷ 22,897 ಅಕ್ರಮ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ನೀಡಲಾಗಿದೆ.

‘ವಿವಿಧ ವಿದ್ಯುತ್ ಪೂರೈಕೆ ಕಂಪನಿಗಳ ವ್ಯಾಪ್ತಿಯಲ್ಲಿ 2018ರಿಂದ 2020ರ ಮಧ್ಯೆ 4.41 ಲಕ್ಷ ಅಕ್ರಮ ಸಂಪರ್ಕಗಳನ್ನು ಸಕ್ರಮಗೊಳಿಸಲಾಗಿದೆ. ಹೆಸ್ಕಾಂ ವ್ಯಾಪ್ತಿಯಲ್ಲಿ ಅತೀ ಹೆಚ್ಚು ಅಕ್ರಮ ಸಂಪರ್ಕಗಳನ್ನು ಸಕ್ರಮಗೊಳಿಸಲಾಗಿದೆ. ಅಕ್ರಮ ಸಂಪರ್ಕದಿಂದ ಭಾರಿ ನಷ್ಟವಾಗುತ್ತಿದೆ. ಹೀಗಾಗಿ, ಅವುಗಳನ್ನು ಸಕ್ರಮಗೊಳಿಸಲು ಚಿಂತನೆ ನಡೆದಿದೆ‘ ಎಂದು ಇಂಧನ ಇಲಾಖೆಯ ಮೂಲಗಳು ತಿಳಿಸಿವೆ.

ಬೊಮ್ಮಾಯಿ: ‘ಆರ್‌ಎಸ್‌ಎಸ್ ಗುಲಾಮಗಿರಿಯಿಂದ ಹೊರ ಬರಲಿ

ಪ್ರಜಾವಾಣಿ ವಾರ್ತೆ


ಮಹದೇವಪ್ಪ

ಬೆಂಗಳೂರು: ‘ಸಂವಿಧಾನದ ಬಲದಿಂದ ನೀವು ಮುಖ್ಯಮಂತ್ರಿ ಆಗಿದ್ದೀರಿ. ಆ ಅಂಶವನ್ನು ನೆನಪಿಟ್ಟುಕೊಂಡು ಆರೆಸ್ಸೆಸ್ ಗುಲಾಮಗಿರಿಯಿಂದ ಆದಷ್ಟು ಬೇಗ ಹೊರಗೆ ಬನ್ನಿ’ ಎಂದು ಬಸವರಾಜ ಬೊಮ್ಮಾಯಿ ಅವರಿಗೆ ಕಾಂಗ್ರೆಸ್ ಮುಖಂಡ ಎಚ್‌.ಸಿ. ಮಹದೇವಪ್ಪ ಸಲಹೆ ನೀಡಿದ್ದಾರೆ.

ರಾಷ್ಟ್ರೀಯ ಶಿಕ್ಷಣ ನೀತಿ ಕುರಿತು ವಿಧಾನಸಭೆಯಲ್ಲಿ ನಡೆದ ಚರ್ಚೆಯ ವೇಳೆ, ‘ಮಕ್ಕಳ ಭವಿಷ್ಯಕ್ಕೆ ಒಳ್ಳೆಯದಾಗುವುದಿದ್ದರೆ ಆರೆಸ್ಸೆಸ್ ವಿಚಾರವನ್ನು ಈ ನೀತಿಯಲ್ಲಿ ಅಳವಡಿಸಿದರೆ ತಪ್ಪೇನು’ ಎಂದು ಮುಖ್ಯಮಂತ್ರಿ ಹೇಳಿದ್ದರು. ಅದಕ್ಕೆ ಪ್ರತಿಕ್ರಿಯಿಸಿರುವ ಮಹದೇವಪ್ಪ, ‘ಇನ್ನೊಬ್ಬರನ್ನು ಗುಲಾಮಗಿರಿಗೆ ಹೋಲಿಸುವ ಮುನ್ನ ನಿಮ್ಮಂಥ ನೂರಾರು ಕೋಟಿ ಜನರಿಗೆ ಘನತೆಯ ಮತ್ತು ಸಮಾನತೆಯ ಬದುಕಿನ ವಾತಾವರಣವನ್ನು ನಿರ್ಮಿಸಿದ ಬಾಬಾ ಸಾಹೇಬರನ್ನು ನೆನೆಯಿರಿ’ ಎಂದಿದ್ದಾರೆ.

‘ಆರೆಸ್ಸೆಸ್ ಎಂದರೆ ರಾಷ್ಟ್ರೀಯತೆ. ಆರೆಸ್ಸೆಸ್‌ನಿಂದ ದೇಶಕ್ಕೆ ಒಳ್ಳೆಯದು ಆಗುತ್ತಿದೆ. ಕಾಂಗ್ರೆಸ್‌ಗೆ ಬೇಕಿರುವುದು ಮೆಕಾಲೆ ಶಿಕ್ಷಣ ಪದ್ಧತಿ, ಗುಲಾಮತನ’ ಎಂದು ಬಾಲಿಶವಾಗಿ ಮಾತನಾಡುತ್ತಾ ಸಿ.ಟಿ.ರವಿಯಂಥ ವ್ಯಕ್ತಿಯ ಮಟ್ಟಕ್ಕೆ ಬೊಮ್ಮಾಯಿ ಇಳಿದಿದ್ದಾರೆ. ಸದನದ ಚರ್ಚೆಯೇ ಇಲ್ಲದೆ, ತಜ್ಞರು ಮತ್ತು ಸಾರ್ವಜನಿಕರ ಅಭಿಪ್ರಾಯ ಪಡೆಯದೆ ಬಹುತ್ವದ ಆಶಯಗಳಿಗೆ ವಿರೋಧಿಯಾದ ಕಾಯ್ದೆಗಳನ್ನು ಏಕಾಏಕಿ ಜಾರಿ ಮಾಡಿದ್ದು ಯಾರ ಗುಲಾಮಗಿರಿಗೆ ಒಳಗಾಗಿ ಎಂಬುದನ್ನು ಬೊಮ್ಮಾಯಿ ಅವರೇ ಹೇಳಬೇಕು’ ಎಂದಿದ್ದಾರೆ.

ದೇವಾಲಯ ಪ್ರವೇಶಿಸಿದ ಪರಿಶಿಷ್ಟ ಜಾತಿಯ ಯುವಕನಿಗೆ ದಂಡ

ಪ್ರಜಾವಾಣಿ ವಾರ್ತೆ

ಕಾರಟಗಿ (ಕೊಪ್ಪಳ ಜಿಲ್ಲೆ): ಮಹಾಲಕ್ಷ್ಮಿ ದೇವಸ್ಥಾನಕ್ಕೆ ತೆರಳಿ ಪೂಜೆ ಸಲ್ಲಿಸಿದ್ದ ಪರಿಶಿಷ್ಟ ಜಾತಿಗೆ ಸೇರಿದ ಸಿಂಧೋಳ ಸಮುದಾಯದ ಯುವಕ ಮಾರೆಪ್ಪ ಅವರಿಗೆ, ದೇವಸ್ಥಾನದ ಆಡಳಿತ ಮಂಡಳಿ ₹11 ಸಾವಿರ ದಂಡ ವಿಧಿಸಿದ ಪ್ರಕರಣ ತಾಲ್ಲೂಕಿನ ನಾಗನಕಲ್ ಗ್ರಾಮದಲ್ಲಿ ನಡೆದಿದೆ.

‘ಸೆಪ್ಟೆಂಬರ್ 11ರಂದು ಈ ಘಟನೆ ನಡೆದಿದ್ದು, ಅರ್ಚಕ ಹಾಗೂ ಆಡಳಿತ ಮಂಡಳಿಯವರು ಸೇರಿ ಎಂಟು ಜನರ ವಿರುದ್ಧ ಜಾತಿ ನಿಂದನೆ ಪ್ರಕರಣವನ್ನು ಶನಿವಾರ ಸ್ವಯಂ ಪ್ರೇರಿತವಾಗಿ ದಾಖಲಿಸಿಕೊಂಡಿದ್ದೇವೆ’ ಎಂದು ಪೊಲೀಸರು ಹೇಳಿದ್ದಾರೆ.

‘ಕಾರಟಗಿಯ ಈ ಯುವಕ ಮಹಾಲಕ್ಷ್ಮಿ ದೇವಸ್ಥಾನಕ್ಕೆ ತೆರಳಿ ಪೂಜೆ ಸಲ್ಲಿಸಿ ಹೊರ ಬಂದಿದ್ದನ್ನು ಅರ್ಚಕ ನೋಡಿದ್ದರು. ಯುವಕನಿಗೆ ನಿಂದಿಸಿದ್ದ ಅವರು ದೇವಸ್ಥಾನದ ಆಡಳಿತ ಮಂಡಳಿ ಸದಸ್ಯರಿಗೆ ವಿಷಯ ಮುಟ್ಟಿಸಿದರು. ದೇವಸ್ಥಾನದ ಶುದ್ಧೀಕರಣಕ್ಕಾಗಿ ಯುವಕನಿಗೆ ₹ 11 ಸಾವಿರ ದಂಡ ವಿಧಿಸಲಾಗಿತ್ತು’ ಎಂದು ಪೊಲೀಸರು ತಿಳಿಸಿದ್ದಾರೆ.

ಅರ್ಚಕ ಬಸವರಾಜ ಶಂಕ್ರಪ್ಪ ಬಡಿಗೇರ, ರೇವಣಯ್ಯ ಸ್ವಾಮಿ ಶೇಖರಯ್ಯ, ಶೇಖರಪ್ಪ ಬಸಣ್ಣ ರೇವಣಕಿ, ಶರಣಪ್ಪ ವೀರಭದ್ರಪ್ಪ ಗುಂಜಳ್ಳಿ, ಪ್ರಶಾಂತ ರಾಯಪ್ಪ ತಮ್ಮಣ್ಣನವರ, ಬಸವರಾಜ ಹನುಮಂತಪ್ಪ ತಳವಾರ, ಕಾಡಪ್ಪ ನಾಯಕ ಮತ್ತು ದುರಗೇಶ ಅಂಬಣ್ಣ ಸಂಕನಾಳ ಎಂಬುವರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

‘ಪ್ರಕರಣಕ್ಕೆ ಸಂಬಂಧಿಸಿದಂತೆ ತಾಲ್ಲೂಕು ಆಡಳಿತ, ಪೊಲೀಸ್ ಅಧಿಕಾರಿಗಳು ಮಾಹಿತಿ ಸಂಗ್ರಹಿಸಲು ಪ್ರಯತ್ನಿಸಿದರು. ಆದರೆ, ಯುವಕ ಮತ್ತು ಸಂಬಂಧಿಕರು ದೂರು ನೀಡಲು ನಿರಾಕರಿಸಿದರು. ವಿಷಯದ ಗಾಂಭೀರ್ಯತೆ ಅರಿತು ಸ್ವಯಂ–ಪ್ರೇರಣೆಯಿಂದ ದೂರು ದಾಖಲಿಸಿಕೊಂಡಿದ್ದೇವೆ. ಆರೋಪಿಗಳ ಪತ್ತೆಗೆ ಕಾರ್ಯಾಚರಣೆ ನಡೆಸಿದ್ದೇವೆ’ ಎಂದು ಪ್ರಭಾರಿ ಸಬ್ ಇನ್‌ಸ್ಪೆಕ್ಟರ್ ಯಲ್ಲಪ್ಪ ‘ಪ್ರಜಾವಾಣಿ’ಗೆ ತಿಳಿಸಿದರು.

‘ಜೈಲುಗಳಲ್ಲಿ ಅಂತರ್ಜಾಲ ಲಭ್ಯತೆ ಖಚಿತಪಡಿಸಿಕೊಳ್ಳಿ: ‘ಸುಪ್ರೀಂ’

ಪ್ರಜಾವಾಣಿ ವಾರ್ತೆ

ನವದೆಹಲಿ: ಜಾಮೀನು ನೀಡಿದ ನಂತರವೂ ಸಂವಹನದ ವಿಳಂಬದಿಂದಾಗಿ ಜೈಲಿನಿಂದ ಕೈದಿಗಳ ಬಿಡುಗಡೆ ವಿಳಂಬವಾಗುವುದನ್ನು ತಡೆಯಲು ಕಾರಾಗೃಹಗಳಲ್ಲಿ ವೇಗದ ಅಂತರ್ಜಾಲ (ಇಂಟರ್‌ನೆಟ್) ಸೌಲಭ್ಯ ಲಭ್ಯವಿರುವುದನ್ನು ಖಚಿತಪಡಿಸಿಕೊಳ್ಳುವಂತೆ ಸುಪ್ರೀಂ ಕೋರ್ಟ್ ಎಲ್ಲಾ ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳಿಗೆ ಸೂಚನೆ ನೀಡಿದೆ.

‘ಈ ನ್ಯಾಯಾಲಯದ ಜಾಮೀನು ಆದೇಶಗಳ ಹೊರತಾಗಿಯೂ ಸಂವಹನದ ವಿಳಂಬದಿಂದಾಗಿ ಬಿಡುಗಡೆಯಾಗದೇ ಜೈಲಿನಲ್ಲಿರುವ ಕೈದಿಗಳ ಬಗ್ಗೆ ನಮಗೆ ಕಾಳಜಿ ಇದೆ. ನ್ಯಾಯಾಲಯಗಳ ಆದೇಶವನ್ನು ಪರಿಣಾಮಕಾರಿಯಾಗಿ ಪ್ರಸಾರ ಮಾಡಲು ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ಸಾಧನಗಳನ್ನು ಬಳಸಿಕೊಳ್ಳಲು ಇದು ಸಕಾಲವಾಗಿದೆ’ ಎಂದು ಮುಖ್ಯ ನ್ಯಾಯಮೂರ್ತಿ ಎನ್‌.ವಿ. ರಮಣ ನೇತೃತ್ವದ ನ್ಯಾಯಪೀಠವು ಗುರುವಾರ ನೀಡಿದ ಆದೇಶದಲ್ಲಿ ತಿಳಿಸಿದೆ.

ಇದಕ್ಕೆ ಸಂಬಂಧಿಸಿದಂತೆ ನ್ಯಾಯಾಲಯವು ಸ್ವಯಂಪ್ರೇರಿತ ದೂರಿನ ವಿಚಾರಣೆಯನ್ನು ನಡೆಸಿತು. ಜೈಲಿನಲ್ಲಿ ಅಂತರ್ಜಾಲದ ಲಭ್ಯತೆಯ ಕುರಿತು 10 ರಾಜ್ಯಗಳು ಸಲ್ಲಿಸಿರುವ ವರದಿಯನ್ನು ನ್ಯಾಯಾಲಯವು ಗಮನಿಸಿತು. ಅರುಣಾ ಚಲ ಪ್ರದೇಶ, ನಾಗಾಲ್ಯಾಂಡ್, ಅಸ್ಸಾಂ ಮತ್ತು ಮಿಜೋರಾಂ ರಾಜ್ಯಗಳು ಅಂತರ್ಜಾಲ ಸೌಲಭ್ಯ ಇಲ್ಲದಿರುವ ಕುರಿತು ನ್ಯಾಯಾಲಯಕ್ಕೆ ವರದಿ ಸಲ್ಲಿಸಿವೆ.

ಅಂತರ್ಜಾಲ ಲಭ್ಯವಿಲ್ಲದ ಜೈಲುಗಳಲ್ಲಿ ಸೌಲಭ್ಯ ಕಲ್ಪಿಸುವಂತೆ ರಾಜ್ಯಗಳಿಗೆ ಸುಪ್ರೀಂ ಕೋರ್ಟ್ ಆದೇಶ ನೀಡಿದೆ.



‘ಕರ್ತವ್ಯದಿಂದ ದೂರವಿರಲು ನಿರ್ದೇಶನ’

ಪಟ್ನಾ (ಪಿಟಿಐ): ‘ಗ್ರಾಮದ ಎಲ್ಲ ಮಹಿಳೆಯರ ಬಟ್ಟೆಗಳನ್ನು ಒಗೆದು, ಇಸ್ತ್ರಿ ಮಾಡುವ ಷರತ್ತು ವಿಧಿಸಿ ಆರೋಪಿಗೆ ಜಾಮೀನು ಮಂಜೂರು ಮಾಡಿ ಆದೇಶ ಹೊರಡಿಸಿದ್ದ ಸ್ಥಳೀಯ ಕೋರ್ಟ್‌ನ ನ್ಯಾಯಾಧೀಶರಿಗೆ, ಮುಂದಿನ ಆದೇಶದವರೆಗೂ ಕರ್ತವ್ಯದಿಂದ ದೂರ ಉಳಿಯಬೇಕು’ ಎಂದು ಪಟ್ನಾ ಹೈಕೋರ್ಟ್ ನಿರ್ದೇಶನ ನೀಡಿದೆ.

ಜಾಂಜರ್‌ಪುರ್ ಉಪವಿಭಾಗದ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಅವಿನಾಶ್ ಕುಮಾರ್, ಈಚೆಗೆ ಅತ್ಯಾಚಾರ ಯತ್ನ ಆರೋಪಿಗೆ ಜಾಮೀನು ನೀಡಿದ್ದ ಆದೇಶದಿಂದಾಗಿ ಸುದ್ದಿಗೆ ಗ್ರಾಸವಾಗಿದ್ದರು. ಕರ್ತವ್ಯದಿಂದ ದೂರವಿರಲು ಸೂಚಿಸಿ ಹೈಕೋರ್ಟ್ ಶುಕ್ರವಾರ ಆಡಳಿತಾತ್ಮಕ ಆದೇಶ ಹೊರಡಿಸಿದೆ ಎಂದು ಮೂಲಗಳು ತಿಳಿಸಿವೆ.


ಅಕ್ಟೋಬರ್ 3ರಿಂದಲೇ ಫ್ಲಿಪ್‌ಕಾರ್ಟ್ ಮಾರಾಟ ಮೇಳ

ನವದೆಹಲಿ (ಪಿಟಿಐ): ಫ್ಲಿಪ್‌ಕಾರ್ಟ್ ಕಂಪನಿಯು 'ಬಿಗ್ ಬಿಲಿಯನ್ ಡೇಸ್' ಮಾರಾಟ ಮೇಳದ ದಿನಾಂಕ ಬದಲಿಸಿದೆ. ಅ.ರ್ 3ರಿಂದ 10ರ ವರೆಗೆ ಮಾರಾಟ ನಡೆಸಲು ಮುಂದಾಗಿದೆ.

ಅಮೆಜಾನ್ ಅ. 4ರಿಂದ 'ಗ್ರೇಟ್ ಇಂಡಿಯನ್ ಫೆಸ್ಟಿವಲ್' ಆರಂಭಿಸುವುದಾಗಿ ಘೋಷಿಸಿದ ಬಳಿಕ ಫ್ಲಿಪ್‌ಕಾರ್ಟ್ ಈ ಬದಲಾವಣೆ ಮಾಡಿಕೊಂಡಿದೆ.

ಅ.7ರಿಂದ12ರವರೆಗೆಮೇಳನಡೆಸುವುದಾಗಿ ಕಂಪನಿ ಮಂಗಳವಾರ ಘೋಷಿಸಿತ್ತು. ಆದರೆ, ಫ್ಲಿಪ್‌ಕಾರ್ಟ್ ಸಮೂಹದ ಸಿಇಒ ಕಲ್ಯಾಣ್ ಕೃಷ್ಣಮೂರ್ತಿ ಅವರು ಉದ್ಯೋಗಿಗಳೊಂದಿಗೆ ನಡೆಸಿರುವ ಆಂತರಿಕ ಸಂವಹನದ ಪ್ರಕಾರ ಅ.3ರಿಂದ ಮಾರಾಟ ನಡೆಸಲಿದೆ. ಈ ಕುರಿತು ಕೇಳಿದ ಪ್ರಶ್ನೆಗಳಿಗೆ ಕಂಪನಿಯ ಕಡೆಯಿಂದ ಪ್ರತಿಕ್ರಿಯೆ ಬಂದಿಲ್ಲ ಎಂದು ಸುದ್ದಿಸಂಸ್ಥೆಯು ತಿಳಿಸಿದೆ.

ನಿಧನ



ಎ. ಗೋಪಾಲರೆಡ್ಡಿ

ಮಾಜಿ ನಗರಸಭಾ ಸದಸ್ಯರು, ಮಡಿವಾಳ, ಬೆಂ.
ನಂ. 213, 2ನೇ ಕ್ರಾಸ್, ಮಡಿವಾಳ, ಬೆಂಗಳೂರು
ಜನನ: 11.05.1935

ಇವರು ದಿನಾಂಕ: 25.09.2021ರ ಶನಿವಾರ, ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ಅಂತ್ಯಕ್ರಿಯೆಯನ್ನು ದಿನಾಂಕ: 26.09.2021ರಂದು ಭಾನುವಾರ, ಮಧ್ಯಾಹ್ನ 1.30ಕ್ಕೆ ಮಡಿವಾಳ ರುದ್ರಭೂಮಿಯಲ್ಲಿ ನಡೆಸಲಾಗುವುದು.

ದುಃಖತಪ್ತರು: ಪತ್ನಿ, ಮಕ್ಕಳು ಮತ್ತು ಕುಟುಂಬದವರು ಹಾಗೂ ಬಂಧುಗಳು

ಕೇಂದ್ರ ಸಹಕಾರ ಸಚಿವ ಅಮಿತ್ ಶಾ ಮಾಹಿತಿ

ಶೀಘ್ರವೇ ಹೊಸ ಸಹಕಾರ ನೀತಿ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಶೀಘ್ರದಲ್ಲೇ ಹೊಸ ಸಹಕಾರ ನೀತಿಯನ್ನು ಜಾರಿಗೆ ತರಲಿದೆ ಎಂದು ಕೇಂದ್ರ ಸಹಕಾರ ಸಚಿವ ಅಮಿತ್ ಶಾ ಅವರು ಶನಿವಾರ ಹೇಳಿದ್ದಾರೆ.

ಸಹಕಾರ ಚಳವಳಿ ಬಲಪಡಿಸಲು ಕೇಂದ್ರ ಸರ್ಕಾರವು ರಾಜ್ಯಗಳ ಜೊತೆಗೂಡಿ ಕೆಲಸ ಮಾಡಲಿದೆ ಎಂದೂ ಅವರು ತಿಳಿಸಿದ್ದಾರೆ. ಕೇಂದ್ರ ಸಚಿವ ಸಂಪುಟ ವಿಸ್ತರಣೆ ಸಂದರ್ಭದಲ್ಲಿ ಹೊಸದಾಗಿ ಸಹಕಾರ ಖಾತೆ ರಚಿಸಲಾಗಿದ್ದು, ಜುಲೈನಲ್ಲಿ ಸಹಕಾರ ಸಚಿವಾಲಯವು ಕಾರ್ಯಾರಂಭ ಮಾಡಿದೆ.

ಮೊದಲ ರಾಷ್ಟ್ರೀಯ ಸಹಕಾರ ಸಮಾವೇಶ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಹಕಾರವು ರಾಜ್ಯಗಳ ವಿಷಯ ಆಗಿರುವುದರಿಂದ ಕೇಂದ್ರವು ಈ ಹೊಸ ಸಚಿವಾಲಯವನ್ನು ಏಕೆ ಸೃಷ್ಟಿಸಿದೆ ಎನ್ನುವುದು ಹಲವರಿಗೆ ಅಚ್ಚರಿ ಮೂಡಿಸಿದೆ. ಈ ಕ್ಷೇತ್ರವನ್ನು ಬಲಪಡಿಸಲು ಮತ್ತು ಆಧುನೀಕರಣಗೊಳಿಸುವ ಉದ್ದೇಶದಿಂದ ಸಚಿವಾಲಯವನ್ನು ರೂಪಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.



ನವದೆಹಲಿಯ ಇಂದಿರಾ ಗಾಂಧಿ ಒಳಾಂಗಣ ಕ್ರೀಡಾಂಗಣದಲ್ಲಿ ಶನಿವಾರ ನಡೆದ ರಾಷ್ಟ್ರೀಯ ಸಹಕಾರ ಸಮಾವೇಶದಲ್ಲಿ ಸಚಿವ ಅಮಿತ್ ಶಾ ಅವರನ್ನು ಸನ್ಮಾನಿಸಲಾಯಿತು —ಪಿಟಿಐ ಚಿತ್ರ

ರಾಜ್ಯಗಳೊಂದಿಗೆ ಸಹಕರಿಸಲಾಗುವುದು. ಯಾವುದೇ ಸಂಘರ್ಷ ಇರುವುದಿಲ್ಲ ಎಂದು ಅಮಿತ್ ಶಾ ಸ್ಪಷ್ಟಪಡಿಸಿದ್ದಾರೆ.

ಸಹಕಾರ ಚಳವಳಿ ಹಿಂದೆಂದಿಗಿಂತಲೂ ಇಂದು ಹೆಚ್ಚು ಪ್ರಸ್ತುತವಾಗಿದೆ ಎಂದು ಹೇಳಿದ ಅವರು, ಸಹಕಾರಿ ಸಂಸ್ಥೆಗಳು ದೇಶದ ಅಭಿವೃದ್ಧಿಯಲ್ಲಿ ಸಾಕಷ್ಟು ಕೊಡುಗೆ ನೀಡಬಲ್ಲವು ಎಂದಿದ್ದಾರೆ.

ತೆರಿಗೆ ಮತ್ತು ಇತರೆ ವಿಷಯಗಳಿಗೆ ಸಂಬಂಧಿಸಿದಂತೆ ಸಹಕಾರಿ ಕ್ಷೇತ್ರವು ಎದುರಿಸುತ್ತಿರುವ ಸಮಸ್ಯೆಗಳನ್ನು ಉಲ್ಲೇಖಿಸಿದ ಅವರು, ಸಹಕಾರಿ ಕ್ಷೇತ್ರಕ್ಕೆ ಯಾವುದೇ ಅನ್ಯಾಯ ಆಗುವುದಿಲ್ಲ ಎನ್ನುವ ಭರವಸೆ ನೀಡಿದ್ದಾರೆ.

ಕೃಷಿ ಸಹಕಾರಿ ಸಂಘಗಳ ಡಿಜಿಟಲೀಕರಣ: ಡಿಜಿಟಲ್ ವ್ಯವಸ್ಥೆಯ ಮುಲಕ ಸಾಲ ನೀಡಲು ಅನುಕೂಲ ಆಗುವಂತೆ 98 ಸಾವಿರ ಪ್ರಾಥಮಿಕ ಕೃಷಿ ಸಹಕಾರ ಸಂಘಗಳನ್ನು ಡಿಜಿಟಲೀಕರಣ ಮತ್ತು ಆಧುನೀಕರಣಗೊಳಿಸುವ ಕಡೆಗೆ ಕೇಂದ್ರವು ಗಮನ ಹರಿಸಲಿದೆ ಎಂದು ಸಹಕಾರ ಸಚಿವಾಲಯದ ಕಾರ್ಯದರ್ಶಿ ದೇವೇಂದ್ರ ಕುಮಾರ್ ಸಿಂಗ್ ಹೇಳಿದ್ದಾರೆ.

ಸಹಕಾರ ಚಳವಳಿ ಮತ್ತು ಸಹಕಾರಿ ಸಂಸ್ಥೆಗಳಿಂದ ತಯಾರಾದ ಗುಣಮಟ್ಟದ ಉತ್ಪನ್ನಗಳನ್ನು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಜನಪ್ರಿಯಗೊಳಿಸಲು ಕೇಂದ್ರ ಸರ್ಕಾರವು ಕ್ರಮಗಳನ್ನು ತೆಗೆದುಕೊಳ್ಳಲಿದೆ ಎಂದು ತಿಳಿಸಿದ್ದಾರೆ.

'ಜಮ್ಮು–ಕಾಶ್ಮೀರ: 2022ರ ಆರಂಭದಲ್ಲಿ ಚುನಾವಣೆ'

ಜಮ್ಮು (ಪಿಟಿಐ): ಕ್ಷೇತ್ರಗಳ ಪುನರ್ ವಿಂಗಡಣೆ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಮುಂದಿನ ವರ್ಷದ ಆರಂಭದಲ್ಲಿ ಜಮ್ಮು ಮತ್ತು ಕಾಶ್ಮೀರದ ವಿಧಾನ ಸಭೆ ಚುನಾವಣೆ ನಡೆಯಲಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ರವಿಂದರ್ ರೈನಾ ಶನಿವಾರ ಹೇಳಿದ್ದಾರೆ.

ಭಾರತೀಯ ಜನಸಂಘದ ನಾಯಕ ಪಂಡಿತ್ ದೀನದಯಾಳ್ ಉಪಾಧ್ಯಾಯ ಅವರಿಗೆ ಗೌರವ ಸಲ್ಲಿಸಲು ಬಿಜೆಪಿ ಕಚೇರಿಯಲ್ಲಿ ಆಯೋಜಿಸಿದ್ದ ಸಮಾರಂಭದ ನಂತರ ಸುದ್ದಿಗಾರರಿಗೆ ಈ ಮಾಹಿತಿ ನೀಡಿದ್ದಾರೆ.

ಸಾಲ ವಸೂಲಿಗಾಗಿ ರಾಜಕಾರಣಿಗಳಿಗೆ ನೋಟಿಸ್: ಸಚಿವ ಸೋಮಶೇಖರ್

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜ್ಯದ ವಿವಿಧ ಸಹಕಾರ ಬ್ಯಾಂಕ್‌ಗಳಲ್ಲಿ ಪಡೆದ ಸಾಲವನ್ನು ಮರು ಪಾವತಿ ಮಾಡದ ರಾಜಕಾರಣಿಗಳ ಮನೆಗೆ ನೋಟೀಸ್ ಕಳುಹಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದರು.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ವಿವಿಧ ಪಕ್ಷಗಳ ಪ್ರಮುಖ ರಾಜಕಾರಣಿಗಳು ಸಹಕಾರ ಬ್ಯಾಂಕ್‌ಗಳಲ್ಲಿ ಪಡೆದಿರುವ ಸಾಲದ ಮೊತ್ತ ನೂರಾರು ಕೋಟಿಯಷ್ಟಿದೆ. ಅನೇಕರು ಬಡ್ಡಿ ಹಾಗೂ ಅಸಲನ್ನೇ ಪಾವತಿಸದೆ ನುಣುಚಿಕೊಳ್ಳಲು ಯತ್ನಿಸುತ್ತಿದ್ದು, ಸಾಲ ವಸೂಲಿಗೆ ಕ್ರಮ ಕೈಗೊಳ್ಳಲಾಗಿದೆ' ಎಂದರು.

₹ 400 ಕೋಟಿಗೂ ಅಧಿಕ ಮೊತ್ತದ ಹಣವನ್ನು ಸಾಲದ ರೂಪದಲ್ಲಿ ಪಡೆದಿರುವ ರಾಜಕಾರಣಿಗಳು ಕಠಿಣ ಕ್ರಮದ ಎಚ್ಚರಿಕೆ ನೀಡಿದ ನಂತರ ಬಡ್ಡಿ ಮಾತ್ರ ಪಾವತಿಸುತ್ತಿದ್ದಾರೆ. ಇನ್ನು ಕೆಲವರು ಬಡ್ಡಿ ಮತ್ತು ಅಸಲನ್ನು ಪಾವತಿಸದೇ ನಿರ್ಲಕ್ಷಿಸಿದ್ದಾರೆ. ಇದನ್ನು ಗಂಭೀರವಾಗಿ ಪರಿಗಣಿಸಿ, ನೋಟಿಸ್ ನೀಡಲು ಬ್ಯಾಂಕ್‌ಗಳಿಗೆ ಸೂಚಿಸಲಾಗಿದೆ ಎಂದು ಅವರು ಹೇಳಿದರು.

ಸಕ್ಕರೆ ಕಾರ್ಖಾನೆ ಮತ್ತು ಸಣ್ಣ ಉದ್ಯಮ ಸ್ಥಾಪನೆಗಾಗಿ ಅನೇಕ ರಾಜಕಾರಣಿಗಳು ಸಾಲ ಪಡೆದು ಸತಾಯಿಸುತ್ತಿರುವ ಪರಿಣಾಮ ಸಹಕಾರ ಬ್ಯಾಂಕ್‌ಗಳು ದಿವಾಳಿಯ ಅಂಚನ್ನು ತಲುಪಿವೆ. ಅಂಥವರಿಗೆ ಹೊರಡಿಸಲಾದ ನೋಟಿಸ್‌ಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಲೂ ನಿರ್ಧರಿಸಲಾಗಿದೆ ಎಂದರು.

ಸಾಲ ಪಡೆದ ಸಾಮಾನ್ಯ ಜನರಿಂದ ಬಡ್ಡಿ ಮತ್ತು ಅಸಲು ವಸೂಲಿಗೆ ಕ್ರಮ ಕೈಗೊಳ್ಳುವ ಮಾದರಿಯಲ್ಲೇ ಜನಪ್ರತಿನಿಧಿಗಳ ಸಾಲ ವಸೂಲಿಗೂ ಕ್ರಮ ಕೈಗೊಳ್ಳಲಾಗುತ್ತದೆ. ಎಲ್ಲ ಪಕ್ಷಗಳಲ್ಲೂ ಸಾಲಗಾರರು ಇದ್ದಾರೆ ಎಂದರು.

ಕಾನೂನು ಉಲ್ಲಂಘಿಸುವವರಿಗೆ ತ್ವರಿತ ಮತ್ತು ಕಠಿಣ ಶಿಕ್ಷೆಯ ಎಚ್ಚರಿಕೆ

ಅಫ್ಗನ್: ಅಪಹರಣಕಾರರ ಶವ ನೇತು ಹಾಕಿದ ತಾಲಿಬಾನಿಗಳು

ಕಾಬೂಲ್ (ಎಪಿ): 'ಪಶ್ಚಿಮ ಅಫ್ಗಾನಿಸ್ತಾನದ ಹೆರಾತ್ ನಗರದಲ್ಲಿ ತಾಲಿಬಾನ್ ಅಧಿಕಾರಿಗಳು ನಾಲ್ವರು ಅಪಹರಣಕಾರರನ್ನು ಹತ್ಯೆಗೈದು ಅವರ ಶವಗಳನ್ನು ಸಾರ್ವಜನಿಕವಾಗಿ ನೇತುಹಾಕಿದ್ದಾರೆ. ಇತರರು ಇಂಥ ಕೃತ್ಯ ಎಸಗದಂತೆ ತಡೆಯುವ ಸಲುವಾಗಿ ಈ ರೀತಿ ಮಾಡಲಾಗಿದೆ' ಎಂದು ಸ್ಥಳೀಯ ಸರ್ಕಾರಿ ಅಧಿಕಾರಿಯೊಬ್ಬರು ಶನಿವಾರ ತಿಳಿಸಿದ್ದಾರೆ.

'ಈ ನಾಲ್ವರು ಸ್ಥಳೀಯ ಉದ್ಯಮಿ ಮತ್ತು ಆತನ ಮಗನನ್ನು ಅಪಹರಿಸಿಕೊಂಡು ನಗರದಿಂದ ಹೊರಗೆ ಕರೆದೊಯ್ಯುತ್ತಿದ್ದರು. ನಗರದ ಸುತ್ತಮುತ್ತ ಅಳವಡಿಸಿರುವ ಚೆಕ್‌ಪೋಸ್ಟ್‌ಗಳಲ್ಲಿನ ಗಸ್ತುಪಡೆ ಅವರನ್ನು ಪತ್ತೆ ಹಚ್ಚಿದೆ. ಆಗ ನಡೆದ ಗುಂಡಿನ ಚಕಮಕಿಯಲ್ಲಿ ನಾಲ್ವರು ಅಪಹರಣಕಾರರು ಸಾವಿಗೀಡಾಗಿ, ಒಬ್ಬ ತಾಲಿಬಾನ್ ಸೈನಿಕ ಗಾಯಗೊಂಡಿದ್ದಾನೆ' ಎಂದು ಹೆರಾತ್ ಉಪ ಗವರ್ನರ್ ಶೇರ್ ಅಹ್ಮದ್ ಅಮ್ಮರ್ ವಿವರಿಸಿದ್ದಾರೆ.

'ಅಪಹರಣಕಾರರ ಮೃತದೇಹಗಳನ್ನು ನಗರದ ಮುಖ್ಯಚೌಕಕ್ಕೆ ತರಲಾಯಿತು. ಇತರ ಅಪಹರಣಕಾರರಿಗೆ ಪಾಠವಾಗಿ ಅವರ ಶವವನ್ನು ನೇತುಹಾಕಲಾಗಿದೆ. ಅಪರಹಣಕ್ಕೊಳಗಾಗಿದ್ದ ಇಬ್ಬರು ಸಂತ್ರಸ್ತರನ್ನು ಸುರಕ್ಷಿತವಾಗಿ ಬಿಡುಗಡೆ ಮಾಡಲಾಗಿದೆ' ಎಂದರು.



ಪಶ್ಚಿಮ ಅಫ್ಗಾನಿಸ್ತಾನದ ಹೆರಾತ್ ನಗರದಲ್ಲಿ ಶನಿವಾರ ಕ್ರೇನ್ ಒಂದಕ್ಕೆ ಅಪಹರಣಕಾರನ ಶವವನ್ನು ನೇತುಹಾಕಲಾಗಿತ್ತು —ಎಪಿ/ಪಿಟಿಐ ಚಿತ್ರ

ಹೆರಾತ್ ನಿವಾಸಿ ಮೊಹಮ್ಮದ್ ನಜೀರ್ ಅವರು ನಗರದ ಮೋಸ್ಟೊಫಿಯಟ್ ಸ್ಕ್ವೇರ್ ಬಳಿ ಶಾಪಿಂಗ್ ಮಾಡುತ್ತಿದ್ದಾಗ ಧ್ವನಿವರ್ಧಕದ ಘೋಷಣೆಯೊಂದು ಸುತ್ತಮುತ್ತಲಿನ ಜನರ ಗಮನ ಸೆಳೆಯಿತು.

'ನಾನು ಮುಂದೆ ಹೋಗಿ ನೋಡಿದಾಗ ಅವರು ಪಿಕಪ್ ಟ್ರಕ್‌ನಲ್ಲಿ ಮೃತದೇಹವನ್ನು ತಂದಿರುವುದನ್ನು ನೋಡಿದೆ. ನಂತರ ಅವರು ಆ ದೇಹವನ್ನು ಕ್ರೇನ್‌ನಲ್ಲಿ ನೇತುಹಾಕಿದರು' ಎಂದು ನಜೀರ್ ತಿಳಿಸಿದ್ದಾರೆ.

ಕ್ರೇನ್ ಮೇಲೆ ತೂಗಾಡುತ್ತಿರುವ ರಕ್ತಸಿಕ್ತ ಶವದ ತುಣುಕುಗಳ ಚಿತ್ರಣವು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೆಯಾಗಿವೆ. ಶವದ ಎದೆಯ ಮೇಲೊಂದು ಟಿಪ್ಪಣಿಯೊಂದನ್ನು ಪಿನ್ ಮಾಡಲಾಗಿದ್ದು, ಅದರದಲ್ಲಿ 'ಇದು ಅಪಹರಣಕ್ಕೆ ಶಿಕ್ಷೆ' ಎಂದು ಬರೆಯಲಾಗಿದೆ.

ಉಳಿದ ಮೂವರು ಅಪಹರಣಕಾರರ ದೇಹಗಳನ್ನು ನಗರದ ಇತರ ಭಾಗಗಳಲ್ಲಿ ನೇತುಹಾಕಲಾಗಿದೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಮಾಡಲಾಗಿರುವ ಹಲವು ಪೋಸ್ಟ್‌ಗಳು ತಿಳಿಸಿವೆ.

ಅಂಗಚ್ಛೇದನ, ಮರಣದಂಡನೆ ಪುನರ್ ಸ್ಥಾಪನೆ

'ಅಪರಾಧಿಗಳನ್ನು ತಡೆಯುವ ಸಲುವಾಗಿ ಗುಂಪು ಅಂಗಚ್ಛೇದನ ಮತ್ತು ಮರಣದಂಡನೆಯಂಥ ಶಿಕ್ಷೆಗಳನ್ನು ಅಫ್ಗಾನಿಸ್ತಾನದಲ್ಲಿ ಪುನರ್ ಸ್ಥಾಪಿಸಲಾಗುವುದು' ಎಂದು ತಾಲಿಬಾನ್ ಸಂಘಟನೆಯ ಹಿರಿಯ ಮುಖಂಡ ಮುಲ್ಲಾ ನೂರುದ್ದೀನ್ ತುರಾಬಿ 'ಎಪಿ'ಗೆ ನೀಡಿರುದ ಸಂದರ್ಶನವೊಂದರಲ್ಲಿ ತಿಳಿಸಿದ್ದಾರೆ.

'ಅಂತರರಾಷ್ಟ್ರೀಯ ಮಟ್ಟದಲ್ಲಿ ಖಂಡನೆಯ ಹೊರತಾಗಿಯೂ, ಅಫ್ಗಾನಿಸ್ತಾನದಲ್ಲಿ ವ್ಯಾಪಕವಾಗಿ ಹರಡಿರುವ ದರೋಡೆ, ಕೊಲೆ ಮತ್ತು ಅಪಹರಣದಂತಹ ಅಪರಾಧಗಳನ್ನು ನಿಲ್ಲಿಸಲು ಕಾನೂನು ಉಲ್ಲಂಘಿಸುವವರಿಗೆ ತ್ವರಿತ ಮತ್ತು ಕಠಿಣ ಶಿಕ್ಷೆಗಳನ್ನು ವಿಧಿಸುವುದನ್ನು ಮುಂದುವರಿಸಲಾಗುವುದು' ಎಂದು ತಾಲಿಬಾನ್ ಹೇಳಿದೆ.

ಅಕ್ರಮ ಗುಡಿಸಲು ತೆರವು ನಿಲ್ಲದು: ಬಿಸ್ವಾ ಶರ್ಮಾ

ಗುವಾಹಟಿ: ಸರ್ಕಾರಿ ಜಾಗವನ್ನು ಅತಿಕ್ರಮಿಸಿಕೊಂಡು ತಲೆ ಎತ್ತಿರುವ ಅಕ್ರಮ ಗುಡಿಸಲುಗಳನ್ನು ತೆರವುಗೊಳಿಸುವ ಕಾರ್ಯಾಚರಣೆ ಮುಂದುವರಿಯಲಿದೆ ಎಂದು ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಶನಿವಾರ ತಿಳಿಸಿದ್ದಾರೆ.

ಅಸ್ಸಾಂನ ದರಾಂಗ್ ಜಿಲ್ಲೆಯಲ್ಲಿ ಗುರುವಾರ ಒತ್ತುವರಿ ತೆರವುಗೊಳಿಸುವ ವೇಳೆ ಪೊಲೀಸರು ನಡೆಸಿದ ಗೋಲಿಬಾರ್‌ನಿಂದ ಇಬ್ಬರು ಮೃತಪಟ್ಟಿದ್ದು, ತೆರವು ಕಾರ್ಯಾಚರಣೆಗೆ ವಿರೋಧ ಪಕ್ಷಗಳು ತೀವ್ರ ವಿರೋಧ ವ್ಯಕ್ತಪಡಿಸುತ್ತಿರುವ ಬೆನ್ನಲ್ಲೇ ಶರ್ಮಾ ತಮ್ಮ ಸರ್ಕಾರದ ನಿಲುವನ್ನು ಪ್ರಕಟಿಸಿದ್ದಾರೆ.

'ಈ ಕಾರ್ಯಾಚರಣೆ ಮುಂದುವರಿಯುತ್ತದೆ. ಸರ್ಕಾರವು ಬಡ ಮತ್ತು ಭೂಹೀನ ಜನರ ಸಮಸ್ಯೆಗಳನ್ನು ಆಲಿಸಲಿದೆ. ಆದರೆ ಜನರು ಸರ್ಕಾರಿ ಭೂಮಿಯನ್ನು ಆಕ್ರಮಿಸಿಕೊಳ್ಳಲು ಅವಕಾಶ ನೀಡುವುದಿಲ್ಲ' ಎಂದು ಶರ್ಮಾ ಸುದ್ದಿಗಾರರಿಗೆ ತಿಳಿಸಿದರು.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹455
12 ಮೊಟ್ಟೆಗೆ	₹60

ಮೈಸೂರು

100 ಮೊಟ್ಟೆಗೆ	₹455

ಮುಂಬೈ ಧಾರಣೆ

ಶೇಂಗಾ

25-9-2021

ಜಾವಾ 70/80(ಹೊಸ)	10900-10950
ಜಾವಾ 80/90(ಹೊಸ)	10300-10350
ದಪ್ಪ ಮಧ್ಯಪ್ರದೇಶ(ಹೊಸ)	10700-10800
ದಪ್ಪ ಗುಜರಾತ್(ಹೊಸ)	9500-9600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1540 (1540)
ಒಂದು ವಾರದ ಡೆಲಿವರಿ	1535 (1535)
ಸೋಯಾ ಕಚ್ಚಾ	1290 (1290)
ಪಾಮ್ ವಾರದ ಡೆಲಿವರಿ	1213 (1206)
ಸೂರ್ಯಕಾಂತಿ ಎಣ್ಣೆ ಕಚ್ಚಾ	1300 (1300)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ 46,300 (46,050)
ಬೆಳ್ಳಿ ಕೆ.ಜಿ 60,500 (60,375)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ

ಕೂಳೆ	600-650
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400

ಕಾಳು ಮೆಣಸು	395
ರಾಮನಗರ ರೇಷ್ಮೆ	
ಮಿಶ್ರ ತಳಿ	278-459
ದ್ವಿತಳಿ	298-571

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13950	13000	13150	194.35 ಸೆಂಟ್ಸ್
ಎಸಿ	6300	4800	5200	
ಆರ್‌ಪಿ	6250	6200	6300	ಲಂಡನ್
ಆರ್‌ಸಿ	3590	3500	3675	2148 ಡಾಲರ್ಸ್



ಬಟ್ಟೆ ಮೇಲೆ ಭವ್ಯ ಇತಿಹಾಸ

12



ದೇವರ ಬಾವಿಯಲ್ಲಿ ಈಜಾಡುವ ಹುಡುಗರು

ತಾವರಗೇರಾದ ಭಗೀರಥರು

ನೀರಿಲ್ಲದ ಊರಿನ ದುಃಖ ಅನುಭವಿಸಿದ್ದವರು ಕೊನೆಗೆ ಕೆರೆ ಮಾಡಿ ಗೆದ್ದರು. ಇವರ ಖುಷಿಯ ಸೆಲೆಗಳನ್ನು ಸಂತೆ, ಹೊಲಗಳಲ್ಲಿ ಅಡ್ಡಾಡಿ ಕಂಡುಂಡು ಬರುವುದಕ್ಕಿಂತ ದೊಡ್ಡ ಸಂಭ್ರಮ ಬೇರೆ ಇದೆಯೇ? ಸರ್ಕಾರಿ ಅಂಕಿಸಂಖ್ಯೆಗಳಲ್ಲಿ ಸಿಗದ ನೀರಿನ ನೋಟಗಳನ್ನು ಗ್ರಾಮದ ಸಂತೆಗಳು ಎಷ್ಟು ಹೃದಯಸ್ಪರ್ಶಿಯಾಗಿ ಹೇಳುತ್ತವೆ. ಕಾಯಿಪಲ್ಲೆಯ ಚೆಂದದ ರಾಶಿಗಳಲ್ಲಿ, ಬಣ್ಣ ಬಣ್ಣದ ಓಡಾಟದ ಬೆರಗಿನಲ್ಲಿ ಕೊಪ್ಪಳ ಜಿಲ್ಲೆಯ ರಾಯನಕೆರೆಯ ಕೌತುಕಗಳಿವೆ.




ಎಕರೆಯಲ್ಲಿ 15-16 ಅಡಿ ನೀರು ಸಂಗ್ರಹ, ತೆಪ್ಪದಲ್ಲಿ ಖುಷಿ ವಿಹಾರ

ಚಿತ್ರ-ಲೇಖನ: ಶಿವಾನಂದ ಕಳವೆ

ಕೊಪ್ಪಳದ ತಾವರಗೇರಾ ಊರಿನ ಸಂತೆ ಬೀದಿಯಲ್ಲಿ ಶತಮಾನದ ದೈತ್ಯ ಆಲ, ಬಸರಿ, ಅರಳಿ ಮರಗಳಿವೆ. ಊರಿನ ಹೆಚ್ಚು ಬರಗಾಲ ಅನುಭವಿಸಿ ಅಳಿದುಳಿದ ಹಿರಿಯಜ್ಜಂದಿರಂತೆ ಇವು ಇವೆ. ಮರಗಳ ಬುಡದ ನೆರಳಲ್ಲಿ ಕುಳಿತವರ ದೇಹ ಭಾಷೆ ಗಮನಿಸುತ್ತಿದ್ದೆ. ಜಲವಿಲ್ಲದೇ ಕೃಷಿ ಸೊರಗಿ ಸೋತ ಸಂಕಷ್ಟದ ನೋಟಗಳು ಕಾಣುತ್ತಿದ್ದವು. ಭಕ್ತರನ್ನು ಕಾಯುವ ಪ್ರಸಿದ್ಧ ವೈದ್ಯನಾಥೇಶ್ವರ ದೇಗುಲದ ಬಾವಿಯ ಗಂಗೆಯೂ ಒಣಗಿ, ಕಟ್ಟಿದ ಕಲ್ಲು ಇಷ್ಟಗಲ ಬಾಯಿ ಕಿಸಿದು ಬರದಮ್ಮನ ಸಾಕ್ಷ್ಯಚಿತ್ರಕ್ಕೊಂದು ಭಯಾನಕ ಪೀಠಿಕೆಯಂತಿತ್ತು. ಚೆಂದದ ವಕ್ರಾಣಿಯೂ(ಕಲ್ಯಾಣಿ) ಕಸದ ತೊಟ್ಟಿಯಾಗಿ ಇಡೀ ಸೀಮೆಯ ಉತ್ಸಾಹ, ಉತ್ಸವಗಳೆಲ್ಲ ನೀರಿನಂತೆ ಮಾಯವಾಗಿದ್ದವು. ಇಷ್ಟು ವರ್ಷಗಳಲ್ಲಿ ಇಂಥ ನೀರಿನ ಸಂಕಷ್ಟ ನೋಡದವರು ಕಾಲಕ್ಕೆ ಕಂಗಾಲಾಗಿದ್ದರು.

ಬರದ ಗಾಯ ತೋರಿಸಲು ಒಂದಿಷ್ಟು ಹುಡುಗರು ಜತೆಗೂಡಿದ್ದರು. 'ವಕ್ರಾಣಿ ಸುತ್ತಾ ಎಂಟು ಬೋರು ಅದಾವ್ರೀ, ಯಾವುದ್ರಾಗೂ ನೀರಿಲ್ಲ ನೋಡ್ರೀ! ನಾವು ಸಾಲಿ ಓದೋವಾಗ ದೇವರ ಬಾವ್ಯಾಗ ಈಜೋಕೆ ದಿನಾ ಬರ್ತಾ ಇದ್ವಿ. ಈ ಖಾಜಾ ಖಾನ್ ನಮ್ಮನ್ನ ಬಾವಿಯಿಂದ ಎಬ್ಬಿಸಿ, ಹೆದರಿಸಿ, ಬೆದರಿಸಿ ಓಡಿಸ್ತಾ ಇದ್ದಾ' ಮಡಿಕೇರಿಯ ನಾರಾಯಣ ಗೌಡರು ನೆನಪಿನ ಪುಟದ ನೀರಿನ ಕಥೆ ಹೇಳುವಾಗ ದೊಡ್ಡ ಮರದಡಿ ನಿಂತ ಖಾನ್ ಸಾಹೇಬರು 'ಬಾವಿಯಾಗ ಈಜೋ ಹುಡುಗರ್ಥಂಗೆ ನೀರು ನಾಪತ್ತೆ ಆತಲ್ರೀ' ಎಂದು ಜಲ ದುಃಖದ ಧ್ವನಿ ಎತ್ತಿದರು.

ಕೊಪ್ಪಳ ಜಿಲ್ಲೆಯ ಕುಷ್ಟಗಿಯಿಂದ 25 ಕಿಲೊ ಮೀಟರ್ ದೂರದ ತಾವರಗೇರಾದಲ್ಲಿ ಜನಗಳ ಜೊತೆ ಜಲ ವರ್ತಮಾನ ಓದುತ್ತಾ ಅಲ್ಲಿನ ರಾಯನಕೆರೆಗೆ ಬಂದೆವು. 'ಸುಮಾರು 500 ವರ್ಷಗಳ ಹಿಂದಿನ ವಿಜಯನಗರ ಸಾಮ್ರಾಜ್ಯ ಕಾಲದಾಗ ಊರು ಕಟ್ಟೋದಕ್ಕೆ ಅಂತ ಕಟ್ಟಿದ್ ಕೆರಿ ಇದಂತ್ರಿ. ಇದು ರಾಯನಕೆರೆ ಅಂದ್ರೆ ರಾಜನಕೆರೆ. ಶ್ರೀಕೃಷ್ಣ ದೇವರಾಯನಿಗೆ ನಿತ್ಯ ಈ ಕೆರಿಯ ತಾವರಿ ಹೂ ಹೋಗ್ತಾ ಇತ್ತು ಅನ್ನೋದಕ್ಕ ನಮ್ಮೂರ್ಗೆ ತಾವರೆಕೆರೆ ಅಂತಿದ್ರಂತೆ! ಅದೀಗ ತಾವರಗೇರಾ ಆತ್ರೀ. ತಾವರಿ ಹೂವು ಹೋತು, ನೀರೂ ಹೋತ್ರೀ...' ಗ್ರಾಮದ ಐತಿಹ್ಯವನ್ನು ಚಂದ್ರಶೇಖರ್ ನಾಲತವಾಡ ನೆನಪಿಸಿಕೊಂಡರು.



ಜನಜಾಗೃತಿಯ ಶಕ್ತಿ ಕೊಪ್ಪಳ ಗವಿಮಠದ ಸ್ವಾಮೀಜಿ

ಜಲಕ್ಷಾಮದಿಂದ ಕುಡಿಯೋ ನೀರಿಗೂ ಟ್ಯಾಂಕರ್ ಓಡಿಸುವ ನಾಡಿನ ಹಳ್ಳಿಗಳ ಹೆಸರಿನ ಕೊನೆಯ ಪದಗಳಿಗೆ ನೀರ ನೆನಪುಗಳಿವೆ. ಅಡವಿಗೇರಾ, ಅಡವಿಬಾವಿ, ಬೆಟಗೇರಿ, ಹನುಮಸಾಗರ, ವಣಗೇರಿ ಹೀಗೆ ಬಾವಿ, ಕೆರೆ, ಸಾಗರಗಳಿವೆ. ಕೆರೆ ಕಳೆದುಹೋಗುತ್ತಾ ತಾವರಗೇರಾ ಹಳ್ಳಿ ಕೂಡಾ ನೀರಿಗಾಗಿ ಅಳುವ ಸ್ಥಿತಿ ಬಂದಿತ್ತು. ಒಮ್ಮೆ ಮಳೆ ಸುರಿದು ಕೆರೆಗೆ ನೀರು ಬಂದರೂ ಕೆರೆಯ ಕೋಡಿಯ ಎತ್ತರಕ್ಕೆ ಜಮೆಯಾದ ಹೂಳಿನಿಂದ ನೀರು ನಿಲ್ಲುತ್ತಿರಲಿಲ್ಲ.

ಹತ್ತಾರು ಲಕ್ಷ ಜನ ಸೇರುವ ಕೊಪ್ಪಳ ಜಾತ್ರೆ ತುಂಬಾ ಪ್ರಸಿದ್ಧಿ. ಬರದ ಹೊತ್ತಿನಲ್ಲಿ ಜನ ಸೋತ ಕಾಲಕ್ಕೆ ಪರಿಸರ ಸಂರಕ್ಷಣೆಯ ಘೋಷಣೆ ಮಾಡಿದವರು ಗವಿಸಿದ್ಧೇಶ್ವರ ಸ್ವಾಮೀಜಿ. ಮೂರು ವರ್ಷಗಳ ಹಿಂದೆ ಅವರು ನೆಲ, ಜಲ ಸಂರಕ್ಷಣೆಯ ಯಾತ್ರೆ ಆರಂಭಿಸಿದರು. 'ನಮ್ಮ ಶ್ರಮ ನಮ್ಮ ಕೆರೆ' ಎಂಬ ಧ್ಯೇಯ ಬಿತ್ತುತ್ತ ಜಿಲ್ಲೆಯಲ್ಲಿ ಜಾಗೃತಿಯ ಕೆಲಸಗಳು ಸ್ವಾಮೀಜಿ ನೇತೃತ್ವದಲ್ಲಿ ಶುರುವಾದವು. ಕುಷ್ಟಗಿಯ ನಿಡಸೇಸಿ ಕೆರೆ ಕಾಯಕ ಆರಂಭವಾಗಿ ಬಹುದೊಡ್ಡ ಸಂಚಲನವನ್ನು ಮೂಡಿಸಿತು. ಸುದ್ದಿ ಕೇಳಿ ತಾವರಗೇರಾ ಹಳ್ಳಿಗರು ಎಚ್ಚೆತ್ತರು. ಸ್ವಾಮೀಜಿ ಪ್ರೇರಣೆಯಿಂದ ಕೆರೆ ಕಾಯಕಕ್ಕೆ ಎದ್ದರು. ರಾಯನ ಕೆರೆ ಅಭಿವೃದ್ಧಿ ಸಮಿತಿ ರಚಿಸಿಕೊಂಡು ದಾನಿಗಳಿಂದ ನೆರವು ಪಡೆದು ಹೂಳೆತ್ತುವ ಕೆಲಸ ಯೋಜಿಸಿದರು. ತಾವರಗೇರಾ ಪೊಲೀಸ್ ಇನ್‌ಸ್ಪೆಕ್ಟರ್ ಮಹಾಂತೇಶ ಸಜ್ಜನ್ ಹಾಗೂ ಗ್ರಾಮದ ಸಾಗರ ಭೇರಿ ಸೇರಿದಂತೆ ಮತ್ತಿತರ ಸಮಾನಮನಸ್ಕರು ಹಲವರು ಒಂದಾದರು. ಸಂಸ್ಥೆಗಳೂ ಕೈಜೋಡಿಸಿದವು. 2019ರ ಫೆಬ್ರುವರಿ 27ರಂದು ಕೆರೆ ಹೂಳೆತ್ತುವ ಪವಿತ್ರ ಕೆಲಸಕ್ಕೆ ಸ್ವಾಮೀಜಿ ಚಾಲನೆ ನೀಡಿದರು.

32 ಎಕರೆಯ ವಿಶಾಲ ಕೆರೆ, ಸುಮಾರು ಏಳು ಕಿಲೊ ಮೀಟರ್ ದೂರದ ನವಲಿ ಹಳ್ಳದಿಂದ ಹರಿದು ಬರುವ ಮಳೆ ನೀರನ್ನು ಹಿಡಿಯುವ ಪಾರಂಪರಿಕ ರಚನೆಯ ಪುನರುಜ್ಜೀವನ ಕೆಲಸವಿದು. 25 ಸಾವಿರ ಜನಸಂಖ್ಯೆಯ ಹಳ್ಳಿ ಕೆರೆ ನಂಬಿದೆ, ಕೆರೆ ಕೆಲಸಕ್ಕೆ 20 ಲಕ್ಷ ರೂಪಾಯಿ ದೇಣಿಗೆ ಸಂಗ್ರಹವಾಯ್ತು, ಸರ್ಕಾರದ 'ಕೆರೆ ಸಂಜೀವಿನಿ'ಯ ಏಳು ಲಕ್ಷ ರೂಪಾಯಿ ನೆರವು ಕೂಡಾ ದೊರೆತು ತಿಂಗಳುಗಟ್ಟಲೆ ಸಮರೋಪಾದಿಯಲ್ಲಿ ಹೂಳೆತ್ತುವ ಕೆಲಸ ನಡೆಯಿತು. 'ಕೆರೆಯಲ್ಲಿ ನೀರು ಜಾಸ್ತಿ ನಿಲ್ಲುತ್ತಿಲ್ಲ, ಈಗಿರುವುದಕ್ಕಿಂತ 15-16 ಅಡಿ ಆಳ ಮಾಡಿದರೆ ಹೆಚ್ಚು ನೀರು ಶೇಖರಣೆ ಸಾಧ್ಯವೆಂದು ನಿರ್ಧರಿಸಿದೆವು. ಕೆರೆ ದಂಡೆ ಭದ್ರಪಡಿಸಿ, ಕಾಲುವೆ ಸರಿಪಡಿಸುವ ಯೋಜನೆ ಮಾಡಿದೆವು. ಕೆರೆ ಹೂಳನ್ನು ಒಯ್ಯಲು ರೈತರು ಮುಂದೆ ಬಂದಿದ್ದರಿಂದ ಮಣ್ಣು ಸಾಗಾಟ ವೆಚ್ಚ ಕಡಿಮೆಯಾಯ್ತು. ಸುಮಾರು 40 ಲಕ್ಷ ರೂಪಾಯಿಯಲ್ಲಿ ವಿವಿಧ ದಾನಿಗಳು, ಸರ್ಕಾರದ ಸಹಾಯದಿಂದ ಪೂಜ್ಯ ಗವಿಮಠದ ಶ್ರೀಗಳ ಪ್ರೇರಣೆಯಿಂದ 30 ಎಕರೆ ಕೆರೆ ಹೂಳು ತೆಗೆದೆವು' ಕೆರೆ ಅಭಿವೃದ್ಧಿ ಸಮಿತಿ ಅಧ್ಯಕ್ಷ ಚಂದ್ರಶೇಖರ ನಾಲತವಾಡ ಕಾಯಕ ಸಾಹಸ ನೆನಪಿಸಿಕೊಳ್ಳುತ್ತಾರೆ.


ವಾಡಿಕೆಯಲ್ಲಿ ವಾರ್ಷಿಕ 600-650 ಮಿಲಿ ಮೀಟರ್ ಮಳೆ ಸುರಿಯುವ ಈ ಪ್ರದೇಶದಲ್ಲಿ ಕೆಲವು ವರ್ಷ 300 ಮಿಲಿ ಮೀಟರ್ ಮಳೆಯೂ ಬರುವುದಿಲ್ಲ. ನೀರಿನ ಬಳಕೆ ಹೆಚ್ಚಿದ ಹೊತ್ತಿನಲ್ಲಿ ಕೆರೆಗಳು ಹಾಳಾಗಿದ್ದವು. ಕೃಷ್ಣಾ ನದಿಯಿಂದ ಕೆರೆಗಳಿಗೆ ನೀರು ತುಂಬಿಸುವ ಯೋಜನೆಯಲ್ಲಿ ಈ ಕೆರೆ ಗುರುತಿಸಲಾಗಿದ್ದರಿಂದ ಜಾಸ್ತಿ ನೀರು ಹಿಡಿಯಲು ಹೂಳು ತೆಗೆಯುವುದು ಅವಶ್ಯವೆಂದು ಜನಗಳು ಅರ್ಥಮಾಡಿಕೊಂಡರು. 'ಹೂಳೆತ್ತುವ ಒಳ್ಳೆಯ ಕೆಲಸ ನಾವು ಮಾಡಿದರೆ ನೀರು ಕಳಿಸುವ ಕೆಲಸ ದೇವರು ನೋಡ್ಕೋತಾನೆ' ಎಂಬ ಮಾತು ರಾಜ್ಯದ ಹಲವೆಡೆ ಸಾಬೀತಾದಂತೆ ಇಲ್ಲಿಯೂ ಅದು ಘಟಿಸಿದೆ. ಕೆರೆ ಕೆಲಸ ಪೂರೈಸಿ ಮುಂಗಾರು ಶುರುವಾದ ಹೊತ್ತಿಗೆ ಅತ್ಯುತ್ತಮವಾಗಿ ಮಳೆ ಸುರಿದು ಕೆರೆ ಭರ್ತಿಯಾಗಿ ಕೋಡಿಯೂ ಹರಿಯಿತು! ತೆಪ್ಪದಲ್ಲಿ ಕೂಡ್ರಿಸಿಕೊಂಡು ಅದೇ ಜಲಕ್ಷಾಮ ತೋರಿಸಿದ ಹುಡುಗರು ಈಗ ಕೆರೆ ದ್ವೀಪಕ್ಕೆ ಕರೆದೊಯ್ದರು. ಊರ ಎತ್ತರದ ಜಲರಾಶಿ. ದೇಗುಲದ ವಕ್ರಾಣಿ, ಬಾವಿಗಳಲ್ಲಿ ನೀರು ಉಕ್ಕಿ ಪುಟಾಣಿ ಮಕ್ಕಳು ಈಜಿನಲ್ಲಿ ಮೈಮರೆತಿದ್ದರು.

ಕೆರೆ ತಗ್ಗಿನ ಐದಾರು ಕಿಲೊ ಮೀಟರ್ ಹಾಗೂ ಮೇಲ್ಭಾಗದ ಎರಡು ಕಿಲೊ ಮೀಟರ್ ದೂರದ ರೈತರ ಹೊಲದ ಕೊಳವೆ ಬಾವಿಗಳಲ್ಲಿ ಇಂದು ಸಾಕಷ್ಟು ನೀರು ದೊರೆಯುತ್ತಿದೆ. ಹಳೆಯ ತೆರೆದ ಬಾವಿಗಳಲ್ಲಿ ಮತ್ತೆ ನೀರು ಕೆರೆ ಸಂರಕ್ಷಣೆಯ ಪ್ರೀತಿ, ನೀತಿಗಳು ಎಲ್ಲರಿಗೂ ಅರ್ಥವಾಗುತ್ತಿವೆ.

'ಸಣ್ಣ ಸಣ್ಣ ಕೆರೆ ಕೂಡಾ ಊರಿನ ಹಸಿರಾಗಬಹುದು, ಉಸಿರಾಗಬಹುದು' ಎಂಬ ನಿದರ್ಶನಗಳು ರಾಯನಕೆರೆಯಲ್ಲಿವೆ. ಶನಿವಾರ ತಾವರಗೇರಾ ವಾರದ ಸಂತೆ, ಸುಮಾರು 40 ಹಳ್ಳಿಗಳ ಸಾವಿರಾರು ಜನಗಳ ಪುಟ್ಟ ಜಾತ್ರೆ. ಬರಗಾಲದಲ್ಲಿ ಬಣ್ಣ ಕಳಕೊಂಡ ಸಂತೆ ಕೆರೆಯಿಂದ ಹೊಸ ಮೆರುಗು ಪಡೆದಿದೆ. ಇಲ್ಲಿ ಮಾರಾಟಕ್ಕೆ ಬರುವ ಅತ್ಯುತ್ತಮ ತರಕಾರಿ, ಸೊಪ್ಪು, ಹಣ್ಣುಗಳಲ್ಲಿ ಶೇಕಡಾ 75ರಷ್ಟು ಇಲ್ಲಿನ ಹೊಲದಿಂದ ಬೆಳೆದು ಬಂದಿದ್ದು ಎಂಬುದು ವಿಶೇಷ! ಸಂತೆಗೆ ಮೀನಿನ ಬಲೆ ಮಾರುವವರೂ ಹಾಜರಾಗುವುದು ನೀರ ನೆಮ್ಮದಿಯ ಸೋಜಿಗ. ಬೆಳೆಯುವವರ ಯಶಸ್ಸು, ಖರೀದಿಸುವ ತಾಕತ್ತು, ಮಿರ್ಚಿ ಮಂಡಕ್ಕಿ ಆಟೋಟಗಳಲ್ಲಿ ಸಂತೆಗೆ ಎಷ್ಟೊಂದು ಸಂಭ್ರಮವಿದೆ! ಜನ ಜಮಾವಣೆಗೆ ಮಹಾಮರಗಳು ಅಚ್ಚರಿಯಲ್ಲಿ ತಲೆದೂಗುತ್ತಿವೆ.



ಜಲಸಮೃದ್ಧಿಯಿಂದ ಸಂತೆಯ ಬಣ್ಣ ಬದಲಾಗಿದೆ



ರಾಯನಕೆರೆ ಹೂಳಿನಿಂದ ತುಂಬಿದ್ದಾಗ....

ಉಸ್ತಾದರ ಸ್ವರದಾಸರೆಯಲ್ಲಿ ಲಂಕೆಗೆ ಹಾರಿದ ರಾಮ

'ಶುದ್ ಬಾನಿ'ಯ ಪರಂಪರೆಯನ್ನು ಕೊರಳಿನಲ್ಲಿ ಭದ್ರವಾಗಿರಿಸಿದ ಉಸ್ತಾದರು ಪಾಕಿಸ್ತಾನಕ್ಕೆ ಹೋದರು. ಉಸ್ತಾದರ ಅಧಾಣ ರಾಗದ ವೀರರಸದ ಸಾದ್ರಾ ಕೇಳುತ್ತ ರಾಮ 'ಲಂಕಾ ಚಢೋ'ಗೆ ಸಜ್ಜಾದ. ಏನಿದರ ಮಜಕೂರ ಎಂದು ಕರಾಚಿಯಲ್ಲಿರುವ ಉಸ್ತಾದರ ಸ್ವರಲೋಕದ ಕದತಟ್ಟಿದಾಗ...

ಸುಮಂಗಲಾ

'ಏಕ್ ಕಹಾನಿ ಆಪ್ ಸುನೀ ಹೋಗಿ ರಾಮ್ ರಾಮಾಯಣ್... ಸೀತಾಕೀ. ಆ ಕಥೆಯೇನೋ ಭಾಳ ದೊಡ್ಡದು. ಆದರೆ ನಾನೀಗ ಹಾಡುವ ಈ ಸಾದ್ರಾ ಉಮ್ರಾವ್‌ಖಾನರು ರಚಿಸಿದ್ದು. ಉಸ್ ಜಮಾನೇ ಮೆ ಸಬ್ ಗಾಯಾ ಕರತೆ ತೇ, ಕೋಯಿ ಮಸಲಾ ನಹಿ ಥಾ...' ಹಾಡಲು ಕುಳಿತ ಉಸ್ತಾದರು ಹೇಳುತ್ತಿದ್ದಾರೆ.

'ಆಗಿನ ಕಾಲದಲ್ಲಿ ಎಲ್ಲರೂ ಹಾಡುತ್ತಿದ್ದರು, ಯಾರಿಗೂ ಏನೂ ಸಮಸ್ಯೆಯಿರಲಿಲ್ಲ...' ಅರೆ... ಯಾವ ಕಾಲದ ಮಾತನಾಡುತ್ತಿದ್ದಾರೆ ಇವರು? ಎಲ್ಲರೂ ಎಂದರೆ ಯಾರೆಲ್ಲ? ನಾವು ಮತ್ತು ಅವರು? ಯಾರಿಗೂ ಸಮಸ್ಯೆಯಿರಲಿಲ್ಲ ಎಂದರೆ ಈಗ ಯಾರಿಗೆ ಸಮಸ್ಯೆ?' ಹತ್ತಾರು ಪ್ರಶ್ನೆಗಳು ಮನದೊಳಗೆ ಗಿರಕಿ ಹೊಡೆಯುತ್ತಿದ್ದಂತೆ ಉಸ್ತಾದರ ದನಿ ಕೇಳುತ್ತದೆ. 'ರಿದನನನನೋನೋಂನೋಂ... ರಿದನನನನಾ ...'

ಈಗ ತಂದೆ, ಮಗ ಇಬ್ಬರೂ ಸರದಿಯಲ್ಲಿ 'ರಿದನನಾ' ಆಲಾಪಿಸುತ್ತಿದ್ದಾರೆ. ಆಲಾಪ ಕೊನೆಗೊಳ್ಳುತ್ತ 'ತೋತೋಂ...' ಎಂದು ಥಟ್ಟನೆ ವೀರದನಿಯಲ್ಲಿ ಶುರು...

'ಲಂಕಾ ಚಢೋ ರಾಮssssss ಲಂಕಾ ಚಢೋ...'

ಓಹ್...! ಇದೀಗ ರಾಮನು ಉಸ್ತಾದರ ಕೊರಳಿನ ಸ್ವರದಾಸರೆಯಲ್ಲಿ 'ಲಂಕಾ ಚಢೋ'ಗೆ ಸಜ್ಜಾಗುತ್ತಿದ್ದಾನೆ! ಅವರೊಂದಿಗೆ ಮಕ್ಕಳೂ 'ಜೀತ್ ಗಯೋ ಗಢ್ ಸಬನ್...' ಎಂದು ಚಪ್ಪಾಳೆ ತಟ್ಟಿ ಹುರಿದುಂಬಿಸುತ್ತಿದ್ದಾರೆ.

ರಾಮನಲ್ಲಿ ನವಉತ್ಸಾಹ ಮೂಡಿದೆ. ಗೆಲ್ಲಬೇಕು, ಎಲ್ಲ ಗಡಿಬೇಲಿಗಳ ದಾಟಿ ಹೃದಯಗಳ ಗೆಲ್ಲಬೇಕು!


ರಾಮನೀಗ ಹಾರುನಡಿಗೆಯಲ್ಲಿದ್ದಾನೆ.

ಮಧ್ಯೆ ಉಸ್ತಾದರು ತುಸು ಛೇಡಿಸುವ ದನಿಯಲ್ಲಿ ಹೇಳುತ್ತಾರೆ...

'ಕಭೀ ಕಭೀ ಹಮ್ ಲಯ್ ಸೆ ಹಟ್ ಕರ್ ಆತೆ ಹೈ ತೋ ವೊ ಲಯ ಕಾ ಮಕಾಮ್ ಕೆಹತೇ ಹೈ; ಬೇತಾಬ್ ನಹೀ ಹೋತೆ ಹಮ್. ಲಯ್ ಕಾ ಏಕ್ ಮಕಾಮ್ ಹೈ. ಮಾತ್ರೆ ಸೆ ಐಸೆ ಯ್ಯೂಂ ಆತೇ ಹೈ...'

ರಾಮನೀಗ ಅರೆಕ್ಷಣ ನಿಲ್ಲುತ್ತಾನೆ. ಹೀಗೆ 'ಮಾತ್ರೆ'ಯಿಂದ ತುಸುವೇ ಅತ್ತ, ಇತ್ತ ಸರಿದರೂ ಲಯದ ವ್ಯಾಪ್ತಿಯೊಳಗೇ ಇರುತ್ತೇವೆಂದು ಕೂತಲ್ಲಿಯೇ ಬಾಗಿ ಬಳುಕಿ ಹಾವಭಾವದೊಡನೆ ಹೇಳುತ್ತಿರುವ ಉಸ್ತಾದರನ್ನು ನೋಡುತ್ತ ವಿಸ್ಮಯಗೊಂಡಿದ್ದಾನೆ! ಅರೆ... ಈ 'ಲಯ್ ಕಾ ಮಕಾಮ್...' 'ಲಯದ ವ್ಯಾಪ್ತಿ'ಯೊಳಗೇ ಅದ್ಭುತ ಸ್ವರಲೋಕವೊಂದು ಸೃಷ್ಟಿಯಾಗಿದೆಯಲ್ಲ! ಆಲೋಚಿಸುತ್ತ ಗಕ್ಕನೆ ನಿಂತ ರಾಮನನ್ನು ಉಸ್ತಾದರು ಮತ್ತೆ ಹೊರಡಿಸುತ್ತಾರೆ.

'ಲಂಕಾ ಚಢೋ ರಾಮ...' ಅವರು ಬೆರಳಾಡಿಸುತ್ತ ಸ್ವರಗಳನ್ನು ಚಿತ್ರಿಸುತ್ತಿರುವ ಬಗೆಯಲ್ಲಿಯೇ ರಾಮನಿಗೆ ಲಂಕೆಯ ದಾರಿಯೂ ನಿಚ್ಚಳವಾದಂತಿದೆ.



ಏಕ್ ಕಹಾನಿ ಆಪ್ ಸುನೀ ಹೋಗಿ ರಾಮ್ ರಾಮಾಯಣ್... ಉಸ್ತಾದ್ ನಸೀರುದ್ದೀನ್ ಸಾಮಿ

'ಇದು ಖಯಾಲ್ ಅಂಗ್...' ಉಸ್ತಾದರು ಹಾಡುತ್ತಲೇ ನಡುವೆ ಹೇಳುತ್ತಾರೆ.

ರಾಮನೀಗ ಖಯಾಲ್ ಗುಂಗಿನಲ್ಲಿ ಸಾಗುತ್ತಿದ್ದಾನೆ.

ಉಸ್ತಾದರು ತಮ್ಮ ಮಕ್ಕಳ ಜೊತೆಗೂಡಿ 'ಜಸರಥ ರಾಜಾ ಕೋ ಪುತ್ರ ದಿಯೋ ರಥರಾಮ್...' ಎಂದು ಹಾಡುತ್ತಿದ್ದರೆ ಆಲಿಸುತ್ತ ಸಾಗುತ್ತಿದ್ದ ರಾಮನೂ ಅರೆಕ್ಷಣ ತಂದೆಯ ನೆನಪಿನಲ್ಲಿ ಹನಿಗಣ್ಣಾಗುತ್ತಿದ್ದಾನೆ. ಕಣ್ಣು ಮಂಜಾಗಿ ದಾರಿ ಕಾಣುತ್ತಿಲ್ಲ, ಹೆಜ್ಜೆಗಳು ತಡವರಿಸುತ್ತಿವೆ. ಉಸ್ತಾದರು ಚಪ್ಪಾಳೆ ಹೊಡೆದು ವೀರದನಿಯಲ್ಲಿ, ಏರುಗತಿಯಲ್ಲಿ ಮುಂದಿನ ಚರಣ ಹಾಡುತ್ತಾರೆ...

'ಧೂಮ್ ಮಚೀ ಜಗ್ ಮೇಂ ಬಾಜ್ ಗಯೋ ಢಂಕಾ...' ರಾಮನಿಗೆ ಮತ್ತೆ ಮುಂದಿನ ದಾರಿ ಸ್ಫಟಿಕದಷ್ಟು ಸ್ಪಷ್ಟ. ಬಡೇ ಮತ್ತು ಛೋಟೆ ಉಸ್ತಾದರು ವೀರರಸಭರಿತ ಅಧಾಣ ರಾಗದಲ್ಲಿ ಸಾದ್ರಾ ಹಾಡುತ್ತ ರಾಮನನ್ನು ಹುರಿದುಂಬಿಸಿ ಯುದ್ಧಕ್ಕೆ ಸನ್ನದ್ಧಗೊಳಿಸುತ್ತಿದ್ದಾರೆ.

ಉಸ್ತಾದರ ಸ್ವರಗಳ ಬೆರಳು ಹಿಡಿದು ಲಂಕೆಗೆ ಜಿಗಿದ ಈ ರಾಮ... ಇವನು ಜನಮಾನಸದ ರಾಮ... ನಮ್ಮೆಲ್ಲರ ಬಾಯಲ್ಲಿ ದಿನಕ್ಕೆ ಹತ್ತಾರು ಸಲ 'ಅಯ್ಯೋ ರಾಮ' ಎಂಬ ಉದ್ಗಾರದಲ್ಲಿ ಹೊರಹೊಮ್ಮುವ ಸಂಕಟಹರ ರಾಮನಿವ. ಈ ರಾಮ ಅಯೋಧ್ಯೆಯಲ್ಲಿ ತುಂಡು ಜಾಗಕ್ಕಾಗಿ ಜಗಳ ಮಾಡುವವನೇ. ಮಂದಿರ-ಮಸೀದಿಯ ಸಿಕ್ಕಿನಲ್ಲಿ ಸಿಕ್ಕಿಬೀಳುವವನೇ. ಇಲ್ಲ, ಇವನು ನಿರಾಕಾರ. ಕಲಾವಿದರ ಕೊರಳಿನಲ್ಲಿ, ಬೆರಳಿನಲ್ಲಿ ಆಕಾರಗೊಳ್ಳುವ ಸ್ವರಾಕಾರ ರಾಮ!


ಈಗಿನ ಕಾಲಘಟ್ಟದಲ್ಲಿದ್ದೂ 'ಉಸ್ ಜಮಾನೇ ಮೇಂ' ಎಂದು ನೆನಪಿಸಿಕೊಂಡು, ಅದೇ ಉಮೇದಿಯಲ್ಲಿ ರಾಗಮಹಲ್ ಕಟ್ಟಬಲ್ಲ ಉಸ್ತಾದ್ ನಸೀರುದ್ದೀನ್ ಸಾಮಿ ಪಾಕಿಸ್ತಾನದ ಶ್ರೇಷ್ಠ ಸಂಗೀತಗಾರರಲ್ಲಿ ಒಬ್ಬರು. 49 ಮೈಕ್ರೋಶ್ರುತಿಗಳನ್ನು ತಮ್ಮ ಕೊರಳಿನಲ್ಲಿ ಜತನವಾಗಿರಿಸಿಕೊಂಡಿರುವ, ನಮ್ಮ ನಡುವೆ ಇರುವ ಏಕೈಕ ಗಾಯಕರು. 'ಲಂಕಾ ಚಢೋ ರಾಮ' ಕೇಳಿದಾಗಿನಿಂದ ಹೇಗಾದರೂ ಸಂದರ್ಶಿಸಲೇಬೇಕೆಂದು ಪ್ರಯತ್ನಿಸಿದೆ. ಸದ್ಯ ಈಗಿನ ತಂತ್ರಜ್ಞಾನಗಳು ಗಡಿಬೇಲಿಯ ಹಂಗಿಲ್ಲದೆ ಹೃದಯಗಳನ್ನು ಹತ್ತಿರ ತರುತ್ತವೆ!

'ನಾನು ನಿಮ್ಮೂರಿಗೂ ಬಂದಿದ್ದೆ, ಹತ್ತುಹನ್ನೆರಡು ದಿನವಿದ್ದೆ. ಬೆಂಗಲೂರ್ ಕೆ ಲೋಗ್ ಬಹುತ್ ನರಮ್ ಹೈ (ಬೆಂಗಳೂರಿನ ಜನರು ತುಂಬ ಮೃದು). 1984ರಿಂದ ಭಾರತಕ್ಕೆ ಆಗೀಗ ಬಂದಿದ್ದೇವೆ. ಈಗ ನಾಕೈದು ವರ್ಷದಿಂದ ಬಂದಿಲ್ಲ ಅಷ್ಟೆ' ಎಂದು ನಸುನಗುತ್ತ ಮಾತು ಆರಂಭಿಸಿದರು.


ನಸೀರುದ್ದೀನ್ ಸಾಮಿಯವರು ಹುಟ್ಟಿದ್ದು ದಿಲ್ಲಿಯಲ್ಲಿ, 1946ರ ಜನವರಿ ಒಂದರಂದು. ಸಂಗೀತಗಾರರ ಮನೆತನ. ಹಲವಾರು ತಲೆಮಾರುಗಳಿಂದ ಸಾಗಿಬಂದ ಸಂಗೀತ ಜ್ಞಾನ. ಖವ್ವಾಲಿಯ ಮೂಲಪುರುಷನೆಂದೇ ಹೆಸರಾದ ಹಜರತ್ ಅಮೀರ್ ಖುಸ್ರೋ ಹನ್ನೆರಡು ಶಿಷ್ಯರನ್ನು ತಯಾರು ಮಾಡಿದರು. ಅವರ ಪ್ರಧಾನ ಶಿಷ್ಯರಲ್ಲಿ ಒಬ್ಬರಾದ ಮಿಯಾ ಸಾಮತ್ ಬಿನ್ ಇಬ್ರಾಹಿಂರ ವಂಶಸ್ಥರು ನಸೀರುದ್ದೀನ್ ಸಾಮಿ.

10ನೇ ಪುಟಕ್ಕೆ...


ಮ್ಯಾಂಗ್ರೋವ್ ಮತ್ತು ಮುಸ್ಸಂಜೆ



ನಡೆದು ನಡೆದೂ ಸುಸ್ತಾದಾಗ ವಿಶ್ರಾಂತಿ ಪಡೆಯಲು ಹೀಗೊಂದು ಕುಟೀರ...



ಕಾಂಡ್ಲಾ ವನವೇ ದ್ವೀಪವಾದಾಗ



ಮರದ ಸೇತುವೆಯ ನಡಿಗೆಯಲ್ಲಿ ಕಾಂಡ್ಲಾ ವನ ಕಂಡಿದ್ದು ಹೀಗೆ

> ಹೊನ್ನಾವರ ಪೇಟೆಯಿಂದ ಮೂರ್ನಾಲ್ಕು ಕಿಲೊ ಮೀಟರ್ ಸಾಗಿ, ಅಲ್ಲಿ ಮರದ ಹಲಗೆಗಳಿಂದ ಮಾಡಿದ ಸೇತುವೆಯಲ್ಲಿ ಹಕ್ಕಿಗಳ ಇಂಚರ ಕೇಳುತ್ತಾ, ಚಿಟ್ಟೆಗಳ ಕಲರವ ನೋಡುತ್ತಾ ಸಾಗಿದರೆ ಕಣ್ಮುಂದೆ ಹೊಸ ಲೋಕವೇ ತೆರೆದುಕೊಳ್ಳುತ್ತದೆ. ಕಾಂಡ್ಲಾ ವನದಿಂದಲೇ ನಿರ್ಮಾಣವಾದ ದ್ವೀಪದೊಳಗೆ ಸಾಗುತ್ತದೆ ನಡಿಗೆ....

ಆದರ್ಶ ಬಿ.ಎಸ್.

ಇನ್‌ಸ್ಟಾಗ್ರಾಂನಲ್ಲಿ ಇತ್ತೀಚೆಗೆ ಹೊನ್ನಾವರ ಹೆಚ್ಚು ಸುದ್ದಿಯಲ್ಲಿತ್ತು. ಏನಕ್ಕೆ ಎಂದು ಕೆದಕಿ ನೋಡಿದಾಗ 'ಕಾಂಡ್ಲಾ ವಾಕ್' ಬಗ್ಗೆ ಕುತೂಹಲ ಮೂಡಿತು. ಹೊನ್ನಾವರದಲ್ಲೇ ಮಾವನ ಮನೆಯಿರುವಾಗ, ಈ ತಾಣಕ್ಕೆ ಹೋಗದೆ ಇರಲಾದೀತೇ? ಹೀಗೆಂದು ನಿರ್ಧರಿಸಿ ಒಂದು ಸಂಜೆಗೆ ಆಟೊ ಹತ್ತಿ ಹೊರಟಿದ್ದಾಯ್ತು.

ಹೊನ್ನಾವರ ಪೇಟೆಯಿಂದ ಮೂರ್ನಾಲ್ಕು ಕಿಲೊ ಮೀಟರ್ ಸಾಗಿದರೆ, ಎಡಕ್ಕೆ ಕಾಂಡ್ಲಾ ವಾಕ್‌ಗೆ ದಾರಿ ಕಾಣಸಿಗುತ್ತದೆ. ಆ ದಿನ ಭಾನುವಾರವಾದ್ದರಿಂದ ಜನಸಂದಣಿ ತುಸು ಹೆಚ್ಚೇ ಇದ್ದಂತೆ ಕಾಣುತ್ತಿತ್ತು. ಮನೆಗೆ ಹತ್ತಿರದ ಸ್ಥಳವಾದ್ದರಿಂದ ಹೆಚ್ಚೇನೂ ತೊಂದರೆ ಇರಲಿಲ್ಲ. ತುಸು ದೂರ ಸಾಗುತ್ತಿದ್ದಂತೆಯೇ 'ಶರಾವತಿ ಕಾಂಡ್ಲಾ ವನ - ಮ್ಯಾಂಗ್ರೋವ್' ಎಂಬ ದೊಡ್ಡದಾದ ಫಲಕ ಕಂಡಿತು. ಆ ಬೋರ್ಡಿನ ಬಳಿಯಂತೂ ಜನ ಕಿಕ್ಕಿರಿದು ಫೋಟೊ ತೆಗೆದುಕೊಳ್ಳುತ್ತಿದ್ದರು. ಇದೇ ಸರಿಯಾದ ಸಂದರ್ಭ ಎಂದು ನಾವು ಕಾಂಡ್ಲಾ ವಾಕ್ ಕಡೆಗೆ ಸಾಗಿದೆವು.

ಮರದ ಹಲಗೆಗಳಿಂದ ಮಾಡಿದ ಬಣ್ಣದ ಹಾದಿ ನಿಸರ್ಗದ ನೋಟಕ್ಕೆ ಹೇಳಿ ಮಾಡಿಸಿದಂತಿದೆ. ದಾರಿಯುದ್ದಕ್ಕೂ ಕಾಣುವ ಮಾಹಿತಿ ಫಲಕಗಳು ಮ್ಯಾಂಗ್ರೋವ್ ಕಾಡುಗಳ ಬಗ್ಗೆ ಸಾಕಷ್ಟು ಜ್ಞಾನ ನೀಡುತ್ತವೆ. ಓದುತ್ತ ಸಾಗಿದರೆ ಅಲ್ಲಲ್ಲಿ ಹಕ್ಕಿಗಳ ಇಂಚರ ಕೇಳಿಸುತ್ತದೆ. ಕಣ್ಣ ಮುಂದೆಯೇ ಒಂದಷ್ಟು ಚಿಟ್ಟೆಗಳು ಹಾರಿ ಹೋಗುತ್ತವೆ. ಇಕ್ಕೆಲಗಳಲ್ಲಿ ಹಬ್ಬಿದ ಮ್ಯಾಂಗ್ರೋವ್ ಕಾಡುಗಳನ್ನು ನೋಡುವುದೇ ಅಚ್ಚರಿಯ ಸಂಗತಿ. ಸ್ಥಳೀಯ ಆಡಳಿತ ಸ್ವಚ್ಛತೆಯ ಬಗ್ಗೆ ಕಾಳಜಿ ವಹಿಸಿದ್ದು, ಪ್ರವಾಸಿಗರಿಗೆ ಸ್ವಚ್ಛತೆಯನ್ನು ಕಾಯ್ದುಕೊಳ್ಳುವಂತೆ ಪ್ರೇರೇಪಿಸುತ್ತದೆ. ತುಸು ದೂರ ಸಾಗಿದ ಮೇಲೆ ಮರದ ಹಾದಿ ಮುಗಿದು ಮಣ್ಣಿನ ಹಾದಿ ಆರಂಭವಾಗುತ್ತದೆ.

ಅತ್ತಿತ್ತ ಕಣ್ಣು ಹಾಯಿಸಿದರೆ ಒಂದು ಪುಟ್ಟ ಮ್ಯಾಂಗ್ರೋವಿನ ದ್ವೀಪ ಕಾಣಸಿಗುತ್ತದೆ. ಒಂದಷ್ಟು ದೋಣಿಗಳು, ನೀರು ಮತ್ತು ಈಜುತ್ತಿರುವ ಬೆಳ್ಳಕ್ಕಿಗಳು- ಒಂದು ಸುಂದರ ನೋಟ ಸೃಷ್ಟಿಯಾಗುತ್ತದೆ. ಹೀಗೆಯೇ ಮುಂದೆ ಸಾಗಿದರೆ ಒಂದು ಪುಟ್ಟ ಸೇತುವೆ. ಸೇತುವೆಯನ್ನು ದಾಟುತ್ತಿದ್ದಂತೆಯೇ ಪುಟ್ಟ ದ್ವೀಪ ಮತ್ತಷ್ಟು ತೆರೆದುಕೊಳ್ಳುತ್ತದೆ. ಇದು ಅಂತಿಂಥ ದ್ವೀಪವಲ್ಲ. ಮ್ಯಾಂಗ್ರೋವ್ ನಿರ್ಮಿಸಿದ ದ್ವೀಪ. ದ್ವೀಪವನ್ನು ಸುತ್ತುವ ಹಾದಿ ಕಡಿದಾಗಿದ್ದು, ತುಸು ಎಚ್ಚರದಿಂದ ಸಾಗದಿದ್ದರೆ ಅಪಾಯ ಸಂಭವಿಸುವ ಸಾಧ್ಯತೆಯೂ ಇದೆ. ದ್ವೀಪವನ್ನೊಮ್ಮೆ ಸುತ್ತಿ ಬಂದಮೇಲೆ ವಿಶ್ರಾಂತಿಗೆಂದು ಗೃಹವೊಂದನ್ನು ನಿರ್ಮಿಸಲಾಗಿದೆ.

ನಿಸರ್ಗದೆಡೆಗೆ ಕುತೂಹಲ ಹೊಂದಿದವರಿಗೆ ಹಾಗೂ ಸುಂದರ ಸಂಜೆಯನ್ನು ಪರಿಸರದೊಂದಿಗೆ ಕಳೆಯಲು ಇಚ್ಛಿಸುವವರಿಗೆ ಇದೊಂದು ಹೇಳಿ ಮಾಡಿಸಿದ ತಾಣವಾಗಿದೆ. ಇಲ್ಲಿಂದ 10 ನಿಮಿಷದ ನಡಿಗೆಯಲ್ಲಿ ಕಾಸರಕೋಡು ಬೀಚ್ ತಲುಪಬಹುದು. ಹಸಿರ ಹಂದರದ ಕಥೆಯನ್ನು ಕಡಲ ಅಲೆಗಳಿಗೆ ಬಣ್ಣಿಸಿ ಹೇಳಬಹುದು. ಸಂಜೆ ಸೂರ್ಯನೂ ಕಥೆ ಕೇಳುತ್ತಲೇ ಮರೆಯಾಗಬಹುದು.



ಪ್ರವಾಸ

ನಿಸರ್ಗದ ಕನ್ನಡಿಯಲ್ಲಿ ಕಾಂಡ್ಲಾ ವನ

ಮ್ಯಾಂಗ್ರೋವ್ ಎಂದರೇನು?

ಕಡಲ ತೀರದ ಕಠಿಣ ಸ್ಥಿತಿಗಳಲ್ಲಿಯೂ ಬದುಕಬಲ್ಲ, ಲವಣದ ಅಂಶ ಹೆಚ್ಚಿದ್ದರೂ ಸಹಿಸಿಕೊಳ್ಳಬಲ್ಲ, ಒತ್ತೊಟ್ಟಾಗಿ ದಟ್ಟವಾಗಿ ಬೆಳೆಯುವ ವಿಶೇಷ ರೀತಿಯ ಕಾಡುಗಳಿಗೆ ಮ್ಯಾಂಗ್ರೋವ್ ಎಂದು ಕರೆಯುತ್ತಾರೆ. 2.50 ಕೋಟಿ ವರ್ಷಗಳ ಹಿಂದೆ ಮ್ಯಾಂಗ್ರೋವ್ ಕಾಡುಗಳ ಮೊದಲ ಪಳೆಯುಳಿಕೆ ಸಿಕ್ಕಿತ್ತು ಎಂದು ದಾಖಲಿಸಲಾಗಿದೆ. ಈ ಮರಗಳು ಸಂಕೀರ್ಣ ಬೇರುಗಳನ್ನು ಹೊಂದಿದ್ದು, ಹೆಚ್ಚಿನ ತೇವಾಂಶದಲ್ಲೂ, ಲವಣದ ಅಂಶವಿರುವ ಮಣ್ಣಿನಲ್ಲೂ ಬದುಕಬಲ್ಲವು. ಮ್ಯಾಂಗ್ರೋವ್ ಕಾಡುಗಳು ಶಾಶ್ವತವಾಗಿ ನೀರಿನಲ್ಲಿ ಮುಳುಗಿರುವುದರಿಂದ, ಅವುಗಳ ಆವಾಸಸ್ಥಾನದಲ್ಲಿ ಆಮ್ಲಜನಕದ ಅಂಶ ಕಡಿಮೆಯಿರುತ್ತದೆ. ಹಾಗಾಗಿ ಹೊರಚಾಚಿದ ಬೇರುಗಳಿಂದಲೇ ಬದುಕಲು ಬೇಕಾಗುವ ಅನಿಲಗಳನ್ನು ಅವು ಹೀರಿಕೊಳ್ಳುತ್ತವೆ. ಆ ಅನಿಲಗಳನ್ನು ಬೇರುಗಳಲ್ಲೇ ಹಿಡಿದಿಟ್ಟುಕೊಳ್ಳುವ ಈ ಮರಗಳು, ಪ್ರವಾಹದ ಸಮಯದಲ್ಲಿ ಮತ್ತೆ ಬಳಸಿಕೊಳ್ಳುತ್ತವೆ. ಎಂಥದ್ದೇ ಸಂಕೀರ್ಣ ಪರಿಸರದಲ್ಲೂ ಬದುಕಲು ಕಲಿಯಬಲ್ಲ ನಿಸರ್ಗದ ಅಚ್ಚರಿಗಳಿಗೆ ಸಾಟಿಯೇನು?

ಒಂದಷ್ಟು ಮಾಹಿತಿ

ಕಾಂಡ್ಲಾ ವಾಕ್ ಹೊನ್ನಾವರ ಪೇಟೆಯಿಂದ 3-4 ಕಿಲೊ ಮೀಟರ್ ದೂರದಲ್ಲಿದೆ. ಸ್ವಂತ ವಾಹನ, ಆಟೊ ಅಥವಾ ಬಸ್ಸಿನ ಮೂಲಕ ಸುಲಭವಾಗಿ ಇಲ್ಲಿಗೆ ತಲುಪಬಹುದು. ಪಾರ್ಕಿಂಗ್ ವ್ಯವಸ್ಥೆ ಸುಸಜ್ಜಿತವಾಗಿದೆ. ಪ್ರವೇಶಿಸುವ ಮುನ್ನ ಹಸಿವು ನೀಗಿಸಲು ಪುಟ್ಟ ಕ್ಯಾಂಟೀನ್ ಒಂದನ್ನು ತೆರೆಯಲಾಗಿದೆ. ಪ್ರವೇಶ ದರ ಒಬ್ಬ ವ್ಯಕ್ತಿಗೆ ಹತ್ತು ರೂಪಾಯಿ. ಕ್ಯಾಮೆರಾ ಬಳಸಲು ನಿರ್ಬಂಧಗಳಿಲ್ಲ. ಉತ್ತರ ಕನ್ನಡ ಜಿಲ್ಲೆಗೆ ಪ್ರವಾಸಕ್ಕೆಂದು ಬರುವವರಿಗೆ ಕಾಂಡ್ಲಾ ವನ ಒಂದು ಸುಂದರ ಸಂಜೆಯನ್ನು ಕಟ್ಟಿಕೊಡಬಲ್ಲದು ಎಂಬುದರಲ್ಲಿ ಅತಿಶಯೋಕ್ತಿಯಿಲ್ಲ.

ಲಂಕೆಗೆ ಹಾರಿದ ರಾಮ



'ಲಂಕಾ ಚಢೋ ರಾಮ.. ಲಂಕಾ ಚಢೋ...' ನಸೀರುದ್ದೀನ್ ಸಾಮಿ ಅವರ ಸಂಗೀತಸುಧೆ

9ನೇ ಪುಟದಿಂದ...

ಎಳವೆಯಿಂದಲೇ ಸಂಗೀತ ಪಾಠ ಶುರುವಾಯಿತು. 1956ರ ಹೊತ್ತಿಗೆ ಮನೆಯ ಒಳಹೊರಗಿನ ಪರಿಸ್ಥಿತಿ ಅನುಕೂಲಕರವಿರಲಿಲ್ಲ, ಹೀಗಾಗಿ ಕರಾಚಿಗೆ ವಲಸೆ ಹೋದರು.

'ನಮ್ಮ ಮನೆ ದಿಲ್ಲಿಯ ಚಾಂದನಿ ಮಹಲ್‌ನಲ್ಲಿತ್ತು. ಇವತ್ತೂ ಚಾಂದನಿ ಮಹಲ್ ರಸ್ತೆ ಅಂತಲೇ ಕರೀತಾರೆ. ಆಗ ನಿಜಾಮುದ್ದೀನ್ ದರ್ಗಾಕ್ಕೆ ಹೆಚ್ಚಾಗಿ ಹೋಗುತ್ತಿದ್ದೆವು. ಕಾಲಕಳೆದಂತೆ ಎಲ್ಲವೂ ಬದಲಾಗುತ್ತವೆ, ನಾವು ಇಲ್ಲಿಗೆ ಬಂದೆವು' ಎನ್ನುತ್ತ ನೆನಪುಗಳ ಕೌದಿಯನ್ನು ಎದೆಗವಚಿಕೊಂಡಂತೆ ಸಾಮಿಯವರು ನುಡಿದರು.

'ನಾನು ಹನ್ನೊಂದು ವರ್ಷದವನಿದ್ದಾಗ ಕಠಿಣವಾದ ತಾಲೀಮ್ ಶುರುವಾಯಿತು. ನನ್ನ ಚಾಚಾ ಮುನ್ಷಿ ರಜಿಯುದ್ದೀನ್ ಅಹ್ಮದ್ ಖಾನ್ ಮಹಾನ್ ಸಂಗೀತಗಾರ, ಅವರೇ ನಮ್ಮ ಉಸ್ತಾದ್. ಅದು ಸಾಧಾರಣ ತಾಲೀಮ್ ಅಲ್ಲ. ಗುರುಗಳು ಮೊದಲೇ ಹೇಳಿದ್ದರು, 'ಸವಾಲ್ ಮತ್ ಕರ್ನಾ... ಏನೂ ಪ್ರಶ್ನಿಸಬೇಡ. ಕೊಟ್ಟಿದ್ದನ್ನು ತೆಗೆದುಕೊಳ್ಳತಾ ಹೋಗು' ಅಂತ. ಆರು ತಿಂಗಳವರೆಗೆ ಬರೀ 'ಸ' ಸ್ವರ ಹಿಡಿಯುವುದು, ಬರೀ 'ಸ'; ರಿಗಮಪ ಎಲ್ಲ ಏನೂ ಇಲ್ಲ. ಗಂಟಲು ಒಣಗಿಹೋಗ್ತಿತ್ತು. ಆರು ತಿಂಗಳಿನ ನಂತರ ಒಂದೊಂದು ವಾರ ಒಂದೊಂದು ಸ್ವರ. ಒಂದು ವಾರ 'ರಿ', ಒಂದು ವಾರ 'ಗ' ಹೀಗೆ ಒಂದೊಂದು ಸ್ವರ ಹಿಡಿಯುವುದು; ಮತ್ತೆ ಮರಳಿ ಸ... ಅಂದರೆ ಮೊದಲು ಆವಾಜ್ ಕೀ ತಾಲೀಮ್' ಸಾಮಿಯವರು ವಿವರಿಸುತ್ತ ಹೋದರು. ಬಹುಶಃ ಈಗ ಇಂಥದೊಂದು ಸುದೀರ್ಘ, ಕಠಿಣವಾದ ತಾಲೀಮನ್ನು ಊಹಿಸುವುದೂ ಕಷ್ಟ.

'ಲಂಕಾ ಚಢೋ ರಾಮ' ಸಾದ್ರಾದ ಹಿನ್ನೆಲೆಯ ಬಗ್ಗೆ ನನಗೆ ತುಂಬ ಕುತೂಹಲವಿತ್ತು. ನಾನು ಸಾಮಿಯವರ ಬೆನ್ನತ್ತಿ ಹೋಗಿದ್ದರ ಮುಖ್ಯ ಕಾರಣವೇ ಇದು. ಸಾಮಿಯವರು ವಿವರಿಸಿದರು.


'ಉಸ್ತಾದ್ ತಾನರಸ್ ಖಾನರ ಕಿರಿಯ ಮಗ ಉಮ್ರಾವ್‌ಖಾನ್ ಒಮ್ಮೆ ಕಲ್ಕತ್ತೆಗೆ ಕಛೇರಿ ಕೊಡಲು ಹೋಗಿದ್ದರು. ರಾವಣ ಮತ್ತು ರಾಮನ ಯುದ್ಧ ಆಯಿತಲ್ಲ? ಆ ಕಥೆಯೇನೋ ಬಹಳ ದೊಡ್ಡದು. ಆದರೆ ಇವರು ಚಿಕ್ಕ ಸಂಗತಿಯಲ್ಲಿ ಅದೆಲ್ಲವನ್ನೂ ಅಡಕಗೊಳಿಸಿದರು. ಹಿಂದೂಸ್ತಾನದಲ್ಲಿ ಒಂದು ದಿನ ಆಚರಿಸ್ತಾರೆ ನೋಡಿ... ನಿಮಗೆ ನೆನಪಿರಬಹುದು' ಎಂದು ನನ್ನನ್ನೇ ಕೇಳಿದರು. 'ಬಂಗಾಳದಲ್ಲಿ ದುರ್ಗಾಷ್ಟಮಿ ಸಮಯದಲ್ಲಿ ರಾವಣದಹನ ಮಾಡುತ್ತಾರಲ್ಲಾ, ಅದಾ?' ಎಂದು ಅನುಮಾನಿಸುತ್ತಲೇ ಕೇಳಿದೆ. ಅವರ ಮಗ ಜೋರಾಗಿ 'ದುರ್ಗಾಷ್ಟಮಿ... ಹ್ಞಾಂ' ಎಂದರು. 'ವೊಹೀ.. ಆಗ್ ಲಗಾತೆ ಹೈನಾ' ಎನ್ನುತ್ತ ಮಾತು ಮುಂದುವರಿಸಿದರು. 'ಆ ದಿನ ಅಲ್ಲಿ ಅದರ ಆಚರಣೆ... ಉಮ್ರಾವ್‌ಖಾನ್ ಸಾಹೇಬ್ ಈ ಸಾದ್ರಾ ರಚಿಸಿ, ಅಡ್ಡಾಣ ರಾಗದಲ್ಲಿ ಹೆಣೆದು, ಅಲ್ಲಿಯೇ ಹಾಡಿದರು. ನಾನಿದನ್ನು 1960-61ರಲ್ಲಿ ಕಲಿತೆ. ಆಗಿನಿಂದ ಹಾಡ್ತಾನೆ ಇದ್ದೀನಿ. ಅಂದಹಾಗೆ, ಉಸ್ತಾದ್ ತಾನರಸ್ ಖಾನರು ತಾನಸೇನನ ವಂಶಸ್ಥರು'.

ತಮ್ಮ ಖಯಾಲ್ ಗಾಯನದ ಮೂಲಕ ಧ್ಯಾನಸ್ಥ ಗಂಧರ್ವಲೋಕಕ್ಕೆ ಕರೆದೊಯ್ಯುವ ಸಾಮಿಯವರು 'ಶುದ್ ಬಾನಿ'ಯ ಪರಂಪರೆಯನ್ನು ಜತನವಾಗಿ ಕಾಯ್ದಿಟ್ಟುಕೊಂಡಿದ್ದಾರೆ. ಸಂಗೀತದ ಕುರಿತಾಗಿ ಆಳವಾಗಿ ಅಧ್ಯಯನ ಮಾಡಿರುವ, ಅಪಾರ ಜ್ಞಾನವಿರುವ ವಿದ್ವಾಂಸರೂ ಹೌದು. ಸಂಗೀತ ಕ್ಷೇತ್ರಕ್ಕೆ ಅವರ ಅನುಪಮ ಕೊಡುಗೆಗಾಗಿ 'ತಮ್ಘಾ-ಎ-ಇಮ್ತಿಯಾಜ್' ಹಾಗೂ 'ಪ್ರೈಡ್ ಆಫ್ ಪರ್ಫಾರ್ಮೆನ್ಸ್' ಪ್ರಶಸ್ತಿಗಳನ್ನು ನೀಡಿ ಪಾಕಿಸ್ತಾನ ಸರ್ಕಾರವು ಅವರನ್ನು ಗೌರವಿಸಿದೆ.

ಉಸ್ತಾದ್ ಸಾಮಿಯವರು ಪ್ರಸಿದ್ಧವಾದ 'ಖವ್ವಾಲ್ ಬಚ್ಚೋಂ ಕಾ' ಘರಾನದವರು, ತಮ್ಮದು 'ಶುದ್ ಬಾನಿ' ಎಂದು ಅಭಿಮಾನದಿಂದ ಹೇಳುತ್ತಾರೆ. ಇದನ್ನು ದಿಲ್ಲಿ ಘರಾಣೆ ಎಂದೂ ಕರೆಯುತ್ತಾರೆ. ಇವರ ನಾಲ್ವರು ಗಂಡುಮಕ್ಕಳ 'ಸಾಮಿ ಬ್ರದರ್ಸ್' ತಂಡವು ಏಳು ದಶಕಗಳಿಂದ ಸಾಗಿಬಂದ ಪರಂಪರಾಗತ ಶೈಲಿಗೆ ಧಕ್ಕೆ ಬಾರದಂತೆ ಖವ್ವಾಲಿಯನ್ನು ದೇಶವಿದೇಶಗಳಲ್ಲಿ ಪ್ರಸ್ತುತಪಡಿಸುತ್ತ ಹೆಸರಾಗಿದೆ.

ಸ್ವಿಸ್ ನಿರ್ದೇಶಕ ಆನೆಟ್ ಬರ್ಗರ್ ಸಾಕ್ಷ್ಯಚಿತ್ರ 'ಕ್ಲೋಸರ್ ಟು ಗಾಡ್' ಉಸ್ತಾದ್ ಸಾಮಿಯವರ ಸಂಗೀತ ಪಯಣದೊಂದಿಗೆ ಬರಿಗಾಲ ದರ್ವೇಶೀ ಸಂತ ಗೋಫಾ ಸೈನ್‌ರ ಆಧ್ಯಾತ್ಮಿಕ ಪಯಣವನ್ನು ಕಟ್ಟಿಕೊಡುತ್ತದೆ. ಗ್ರ್ಯಾಮಿ ಪ್ರಶಸ್ತಿ ವಿಜೇತ ಸಂಗೀತ ನಿರ್ಮಾಪಕ ಇಯಾನ್ ಬ್ರೆನ್ನನ್ ಅವರು ಉಸ್ತಾದ್ ಸಾಮಿಯವರ ಎರಡು ಸಂಗೀತ ಆಲ್ಬಮ್ ಹೊರತಂದಿದ್ದಾರೆ, 'ಗಾಡ್ ಈಸ್ ನಾಟ್ ಎ ಟೆರರಿಸ್ಟ್' ಮತ್ತು 'ಪಾಕಿಸ್ತಾನ್ ಈಸ್ ಫಾರ್ ದಿ ಪೀಸ್‌ಫುಲ್'. ಹೆಸರುಗಳೇ ಒಳಗಿನ ಹೂರಣದ ಆಶಯವನ್ನು ಸೂಚಿಸುವಂತಿವೆ. ಸಾಕ್ಷ್ಯಚಿತ್ರ ಮತ್ತು ಆಲ್ಬಮ್, ಇವೆರಡೂ ಉಸ್ತಾದ್ ಸಾಮಿಯವರ ಸಂಗೀತದ ಕಂಪನ್ನು ವಿದೇಶಗಳಲ್ಲಿ ಇನ್ನಷ್ಟು ವ್ಯಾಪಕವಾಗಿ ಪಸರಿಸಿವೆ.

'ನಮ್ಮ ಕೆಲಸ ಶಾಂತಿಯನ್ನು ಹರಡೋದು. ಶಾಂತಿ ಎಲ್ಲಿರುತ್ತೆ? ಈ ಸ್ವರಗಳಲ್ಲಿರುತ್ತೆ. ಗಲಾಟೆಗಳಾಗುತ್ತಿರುತ್ತವೆ, ಲೇಕಿನ್ ಹಮ್ ಅಮನ್ ಕೀ ಬಾತ್ ಕರೇಂಗೆ. ಇದೆಲ್ಲ ಸರಿಹೋಗುತ್ತೆ, ನಾವು ಮತ್ತೆ ಹಿಂದೂಸ್ತಾನಕ್ಕೆ ಕಛೇರಿ ಕೊಡೋದಕ್ಕೆ ಬರ್ತೀವಿ' ಎನ್ನುತ್ತ ನನ್ನೊಳಗೊಂದು ಆಶಯದ ಕಿಡಿಯನಿಟ್ಟು ಸಾಮಿಯವರು ಮಾತು ಮುಗಿಸಿದರು.



ನಮ್ಮ ಕೆಲಸ ಶಾಂತಿಯನ್ನು ಹರಡೋದು... ಈ ಶಾಂತಿ ಅನ್ನೋದು ಸ್ವರಗಳಲ್ಲಿರುತ್ತೆ

ಮುನ್ನೋಟ 26-09-2021 ರಿಂದ 02-10-2021

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಔಷಧಿ ವ್ಯಾಪಾರಿಗಳಿಗೆ ಉತ್ತಮ ವ್ಯವಹಾರವಿರುತ್ತದೆ. ಹತ್ತಿ ಬಟ್ಟೆಯನ್ನು ತಯಾರಿಸುವವರಿಗೆ ಮಾರುಕಟ್ಟೆ ವಿಸ್ತಾರಗೊಳ್ಳುತ್ತದೆ. ಮಕ್ಕಳ ಆರೋಗ್ಯದ ಕಡೆಗೆ ಹೆಚ್ಚಿನ ಗಮನ ಅಗತ್ಯ. ಜಂಟಿ ವ್ಯವಹಾರಗಳಿಗೆ ಕೈಹಾಕದೆ ಇರುವುದು ಬಹಳ ಉತ್ತಮ. ಹಣದ ಒಳಹರಿವು ಅಗತ್ಯಕ್ಕೆ ತಕ್ಕಷ್ಟು ಇರುತ್ತದೆ. ಕೃಷಿ ಉತ್ಪನ್ನಗಳಿಂದ ಆಹಾರ ವಸ್ತುಗಳನ್ನು ತಯಾರಿಸುವವರಿಗೆ ಬೇಡಿಕೆ ಹೆಚ್ಚುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ತೆರಿಗೆ ತಜ್ಞರಿಗೆ ಸೂಕ್ತ ಪದೋನ್ನತಿ ದೊರೆಯುತ್ತದೆ. ಹೊಸ ವಾಹನದ ಖರೀದಿ ಬಗ್ಗೆ ಸಾಕಷ್ಟು ಚಿಂತನೆ ಮಾಡುವಿರಿ. ಹಣದ ಒಳಹರಿವು ನಿಮ್ಮ ಅಗತ್ಯ ಪೂರೈಸುತ್ತದೆ. ನಿಮ್ಮ ಕೌಟುಂಬಿಕ ಸಮಸ್ಯೆಗಳ ಬಗ್ಗೆ ಹಿರಿಯರು ನೀಡುವ ಸಲಹೆ ಉಪಯೋಗಕ್ಕೆ ಬರಲಿದೆ. ಪೆಟ್ರೋಲಿಯಂ ವಸ್ತುಗಳ ವ್ಯಾಪಾರಿಗಳಿಗೆ ವ್ಯವಹಾರದಲ್ಲಿ ಲಾಭ ಹೆಚ್ಚುತ್ತದೆ. ಮಕ್ಕಳ ನಡುವೆ ಹೊಂದಾಣಿಕೆ ಕಡಿಮೆಯಾಗಿ ನಿಮಗೆ ಬೇಸರವಾಗಲಿದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಆಸ್ತಿ ವಿಚಾರದಲ್ಲಿ ರಾಜಿ ಸಂಧಾನಗಳು ನಡೆದು ವಿಚಾರ ಸುಖಾಂತ್ಯವಾಗುತ್ತದೆ. ವ್ಯವಹಾರದಲ್ಲಿ ಹೊಸ ವ್ಯಕ್ತಿಗಳಿಂದ ಸಹಾಯ, ಸಹಕಾರ ದೊರೆಯುತ್ತದೆ. ಹಣದ ಒಳಹರಿವು ಮಂದಗತಿಯಲ್ಲಿ ಇರುತ್ತದೆ. ಸಂಗೀತ ವಿದ್ವಾಂಸರುಗಳಿಗೆ ಪುರಸ್ಕಾರ ದೊರೆಯುವ ಸಾಧ್ಯತೆಯಿದೆ. ನಿರೀಕ್ಷಿತ ಮೂಲದಿಂದ ಧನಸಹಾಯ ದೊರೆಯದಿದ್ದರೂ ಅನಿರೀಕ್ಷಿತ ಮೂಲದಿಂದ ಸ್ವಲ್ಪ ಸಹಾಯವಾಗುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ನೌಕರಿಯಲ್ಲಿರುವವರಿಗೆ ಸಹೋದ್ಯೋಗಿಗಳಿಂದ ಕಿರಿಕಿರಿ ಉಂಟಾಗುವ ಸಾಧ್ಯತೆಯಿದೆ. ಸಂಗಾತಿಯ ಆದಾಯದಲ್ಲಿ ಏರಿಕೆಯನ್ನು ಕಾಣಬಹುದು. ಮೊದಲೇ ಎಚ್ಚರಿಕೆ ತೆಗೆದುಕೊಂಡು ಮಾಡಿದ ಕೆಲಸಗಳಲ್ಲಿ ಈಗ ಫಲಿತಾಂಶವನ್ನು ಕಾಣಬಹುದು. ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಸರಿಯಾಗಿ ಗಮನಹರಿಸಿರಿ. ಹೊಸ ವಿಚಾರ ಬರಹಗಳಿಂದಾಗಿ ಪತ್ರಿಕಾ ಕ್ಷೇತ್ರದಲ್ಲಿ ಸಾಧನೆಯನ್ನು ಮಾಡುವಿರಿ.

ಸಿಂಹ — ಮುಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಹಿರಿಯರು ಹಾಗೂ ಮಕ್ಕಳೊಂದಿಗೆ ವಾದವಿವಾದ ಮಾಡದಿರುವುದು ಉತ್ತಮ. ಸ್ತ್ರೀಯರೊಂದಿಗೆ ಹಣಕಾಸಿನ ವ್ಯವಹಾರವನ್ನು ಮಾಡುವಾಗ ಅತಿಯಾದ ಎಚ್ಚರಿಕೆ ಇರಲಿ. ಬಂಧುಗಳೊಂದಿಗೆ ಇದ್ದ ಭಿನ್ನಾಭಿಪ್ರಾಯಗಳು ದೂರವಾಗುತ್ತವೆ. ಉದ್ದಿಮೆಯೊಂದರ ಸ್ಥಾಪನೆಗಾಗಿ ಬೇಕಾದ ಆದೇಶದ ಪ್ರತಿಯನ್ನು ಈಗ ಪ್ರಯತ್ನಪಟ್ಟು ಪಡೆಯಬಹುದು.

ಕನ್ಯಾ — ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಉನ್ನತ ಶಿಕ್ಷಣ ಮಾಡಬೇಕೆನ್ನುವವರ ಆಸೆ ಕೈಗೂಡುತ್ತದೆ. ವಾದ-ವಿವಾದಗಳಲ್ಲಿ ನಿಮಗೆ ಯಶಸ್ಸು ದೊರೆಯುತ್ತದೆ. ಯಂತ್ರೋಪಕರಣಗಳ ವ್ಯಾಪಾರ ಮಾಡುವವರಿಗೆ ವ್ಯಾಪಾರ ವೃದ್ಧಿಸುತ್ತದೆ. ಬಂಧುಗಳೊಡನೆ ಉತ್ತಮ ಸಂಬಂಧವನ್ನು ಹೊಂದಲು ಸಾಕಷ್ಟು ಯತ್ನ ಮಾಡುವಿರಿ. ಆಧ್ಯಾತ್ಮಿಕ ಚಿಂತನೆಗಳಿಂದ ಮನಸ್ಸಿನ ದುಗುಡವನ್ನು ದೂರಮಾಡಿಕೊಳ್ಳುವಿರಿ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖೆ 1,2,3
ಕುಟುಂಬದಲ್ಲಿ ವಾದ ವಿವಾದಗಳಿಂದಾಗಿ ಸಾಕಷ್ಟು ಬೇಸರ ಮೂಡಬಹುದು. ಹಿತಶತ್ರುಗಳ ಬಾಧೆ ನಿಮ್ಮನ್ನು ಹೆಚ್ಚಾಗಿ ಬಾಧಿಸುತ್ತದೆ. ನಿಮ್ಮ ಸಂಗಾತಿಯ ವ್ಯತಿರಿಕ್ತ ನಡವಳಿಕೆಗಳು ನಿಮಗೆ ಗಾಬರಿ ತರುತ್ತವೆ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಅಲ್ಪ ಯಶಸ್ಸು ಇರುತ್ತದೆ. ಸಂಪೂರ್ಣವಾಗಿ ತಾವೇ ಕುಟುಂಬವನ್ನು ನಡೆಸುತ್ತಿರುವ ಮಹಿಳೆಯರಿಗೆ ಉತ್ತಮ ಗೌರವ ಸಿಗುತ್ತದೆ.

ವೃಶ್ಚಿಕ — ವಿಶಾಖೆ 4 ಅನೂರಾಧ, ಜ್ಯೇಷ್ಠ
ಮಹಿಳೆಯರಿಗೆ ಉದ್ಯೋಗದಲ್ಲಿ ಉತ್ತಮ ಅವಕಾಶ ತೆರೆದುಕೊಳ್ಳುವ ಸಾಧ್ಯತೆ ಇದೆ. ಕೃಷಿ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಬೇಕಾದ ಸಲಕರಣೆಗಳು ಒದಗಿ ಬರುತ್ತವೆ. ಸಂಗಾತಿಗೆ ನೆರೆಹೊರೆಯವರಿಂದ ವಿರೋಧ ಎದುರಾಗಬಹುದು. ಅಂದುಕೊಂಡ ಕೆಲಸಗಳಲ್ಲಿ ಮಿತ್ರರ ಸಹಕಾರದಿಂದ ಕೆಲವು ಯಶಸ್ವಿಯಾಗಿ ಪೂರ್ಣಗೊಳ್ಳುತ್ತವೆ.


ಧನುಸ್ಸು — ಮೂಲ, ಪೂರ್ವಾಷಾಢ, ಉತ್ತರಾಷಾಢ 1
ವ್ಯವಸಾಯದಲ್ಲಿ ತೊಡಗಿಸಿಕೊಂಡಿರುವವರಿಗೆ ಸಹಾಯಧನ ಹರಿದು ಬರುತ್ತದೆ. ಬಂಧುಗಳ ಮಧ್ಯಪ್ರವೇಶದಿಂದಾಗಿ ಪ್ರೇಮ ಪ್ರಕರಣ ಯಶಸ್ಸನ್ನು ಕಾಣುತ್ತದೆ. ಸರ್ಕಾರಿ ಹುದ್ದೆಯಲ್ಲಿರುವವರು ಭ್ರಷ್ಟಾಚಾರದ ಆರೋಪವನ್ನು ಎದುರಿಸುವ ಸಾಧ್ಯತೆ ಇದೆ. ಈ ಬಗ್ಗೆ ಎಚ್ಚರವಾಗಿರಿ. ಆದರೆ ವಿಚಾರಣಾ ವೇಳೆಯಲ್ಲಿ ಸಂಯಮವನ್ನು ಕಾಪಾಡಿಕೊಂಡಲ್ಲಿ ಸಮಸ್ಯೆ ದೊಡ್ಡದಾಗುವುದಿಲ್ಲ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ವ್ಯವಹಾರಗಳಿಂದ ನಿಮ್ಮ ಸಂಪರ್ಕವನ್ನು ವೃದ್ಧಿ ಮಾಡಿಕೊಳ್ಳುವಿರಿ. ಲೆಕ್ಕಪರಿಶೋಧಕರಿಗೆ ಬಿಡುವಿಲ್ಲದ ಕೆಲಸವಿರುತ್ತದೆ. ತನ್ಮೂಲಕ ಆದಾಯವೂ ಹೆಚ್ಚುತ್ತದೆ. ಒಂದು ಋಣ ಪರಿಹಾರ ಮಾಡಿ ತೃಪ್ತಿಯನ್ನು ಕಾಣುವಿರಿ. ವೈಯಕ್ತಿಕ ವಿವರಗಳನ್ನು ಹೆಚ್ಚು ಬಹಿರಂಗಪಡಿಸುವುದು ಬೇಡವೇ ಬೇಡ. ತಂದೆಯಿಂದ ಸಾಂಪ್ರದಾಯಿಕ ಕೃಷಿಯ ಬಗ್ಗೆ ವಿವರಗಳು ದೊರೆಯುತ್ತವೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಆತ್ಮೀಯ ಸಲಹೆಯಿಂದ ವೃತ್ತಿಯಲ್ಲಿ ಎದುರಾದ ಆಪತ್ತಿನಿಂದ ಪಾರಾಗುವಿರಿ. ಹಣದ ಒಳಹರಿವು ಮಂದಗತಿಯಲ್ಲಿ ಇರುತ್ತದೆ. ಯುವಕರು ಉಡಾಫೆ ಮಾತಿನಿಂದ ಅಧಿಕಾರಿಗಳ ಕೆಂಗಣ್ಣಿಗೆ ಗುರಿಯಾಗಬಹುದು. ಮಿತ್ರರಿಂದ ಸ್ವಲ್ಪ ಮಟ್ಟಿಗೆ ಆರ್ಥಿಕ ಸಹಾಯ ದೊರೆಯುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಪ್ರವಾಸೋದ್ಯಮ ವ್ಯವಹಾರವನ್ನು ಮಾಡುವವರ ವ್ಯವಹಾರ ಸುಧಾರಿಸುತ್ತದೆ. ಹಣಕಾಸಿನ ವಿಷಯದಲ್ಲಿ ಜಾಗರೂಕತೆ ಅತಿ ಮುಖ್ಯ. ಮಕ್ಕಳ ಆರೋಗ್ಯದಲ್ಲಿ ಸಾಕಷ್ಟು ವ್ಯತ್ಯಾಸಗಳನ್ನು ಕಾಣಬಹುದು. ತರಕಾರಿ ವ್ಯಾಪಾರಿಗಳಿಗೆ ವ್ಯಾಪಾರ ಹೆಚ್ಚುತ್ತದೆ. ಆಹಾರ ಪದಾರ್ಥಗಳನ್ನು ಸಂಸ್ಕರಿಸಿ ಮಾರುವವರಿಗೆ ವ್ಯವಹಾರದ ವಿಸ್ತರಣೆ ಇದೆ. ಕ್ರೀಡಾಪಟುಗಳಿಗೆ ಸ್ಪರ್ಧೆಯಲ್ಲಿ ಉತ್ತಮ ಸಾಧನೆಯನ್ನು ತೋರಿಸುವ ಅವಕಾಶ ಒದಗುತ್ತದೆ. ಅನಿರೀಕ್ಷಿತ ಮೂಲದಿಂದ ಆದಾಯ ಬರುತ್ತದೆ.

ಪದಬಂಧ 2706



ಮೇಲಿನಿಂದ ಕೆಳಕ್ಕೆ

1. ಮೀರಳ ಜೊತೆ ಬರುವ ಗಾಳಿರಾಯ 3
2. ಉಪ್ಪುನೀರಿನ ಅಗಾಧ ಸಮೂಹ 3
3. ಕಷ್ಟಕರವಾದ ದಟ್ಟಡವಿ ತದನಂತರ ದಿಬ್ಬ 4
4. ಭೋಗವಿಲಾಸದ ಪ್ರವೃತ್ತಿ 4
5. ಮನಸ್ಸಿಗೆ ಸಂತಸವನ್ನು ಕೊಡು 4
6. ತಾಯಿ ಯಲ್ಲಮ್ಮನನ್ನು ಬುಟ್ಟಿಯಲ್ಲಿ ಹೊತ್ತು ತಿರುಗುವ ಯೋಗಿನಿ 3
7. ತಿಮಿಂಗಲದಂತೆ ಆವರಿಸುವ ಕತ್ತಲು 3
8. ಹಗಲಲ್ಲಿ ಬೆಳಗುವ ಸೂರ್ಯ, ರಾತ್ರಿಯಲ್ಲಿ ಬೆಳಗುವ ಶಶಿ-ಇವರ ಸಂಯೋಗ 4
9. ಮಗುವಿನ ಬಾಯಲ್ಲಿ ತುತ್ತಿಡಲು ಅಮ್ಮ ತೋರಿಸುವ ಆಕಾಶ ಗ್ರಹ 4
10. ಅಂತಿಮ ಶ್ರೇಷ್ಠ ಮಜಲು 5
10. ಪಶ್ಚಿಮ ಕರಾವಳಿಯ ಕಡಲ ದಂಡೆ 6
11. ಚುರುಕು ಹಾಗು ಪ್ರಖರವಾದ ಹೊಸ ಜೀವ ನಮೂನೆ 4
12. ದೀರ್ಘ ವಿಶ್ರಾಂತಿ ಪಡೆದ ಆ ಸೀತಾಪತಿ 3
13. ಸಿಂಹಾಸನದ ಮೇಲೆ ಹೊಳೆದು ಮೆರೆ 4
14. ತ್ರೇತಾಯುಗ ಹಾಗೂ ದ್ವಾಪಾರಗಳಲ್ಲಿ ನಡೆದುದನ್ನು ಸೆರೆಹಿಡಿದ ಬೃಹತ್ ಪುರಾಣಗಳು 9
15. ದೈವೀ ರೂಪದ ಮದನ ಸತಿ 4
16. ರಾಡಿಗೊಳಿಸದೆ ವಿಷಯವನ್ನು ಹೇಳು 3
17. ಪರಿವರ್ತಕನ ಜೊತೆ ಸೇರಿಹೋದ ವ್ಯಾಪಾರಿ 3
17. ಕಂಸ ಚಾಣೂರರನ್ನು ಮರ್ದಿಸಿದ ಭೂಮಿಯೊಡೆಯನ ಮಗ 6
18. ಆರಾಧಿಸುವ ದೈವ ನೆಲಸಿದ ಮನೆ 4
19. ಸುಂದರ ನಗುವಿನ ಚೆಲುವೆ 4
20. ಒಬ್ಬರ ನಂತರ ಒಬ್ಬರು ಅವಕಾಶ ಪಡೆವ ಕ್ರಮ 3
20. ಯಾವದನ್ನೂ ಬಿಡದೆ ಎಲ್ಲಾ ವಿವರಗಳೂ ಸೇರಿದ್ದು 4
21. ನೆತ್ತರಿನ ವಸ್ತ್ರ ಧರಿಸಿರುವವಳು 3
22. ಕೆಸರಿನಲ್ಲಿ ಹುಟ್ಟಿ ಅದರ ಅಂಟನ್ನು ಸೋಕಿಸಿಕೊಳ್ಳದ ದಂಟಿನ ಹೂವು 3
23. ನಾಲಿಗೆಗೆ ಸವಿಯಾದ ಹಾಗೂ ಚುರುಕು ಮುಟ್ಟಿಸುವ ತಿನಿಸುಗಳ ಮಿಶ್ರಣ 4
24. ಗ್ರೀಕ್ ಮಹಿಳೆಯೇ ಇವಳು? 3
25. ಪ್ರತಿನಿತ್ಯ ಖಾಯಿಲೆಯಿಂದ ನರಳುವವ 4

ಎಡದಿಂದ ಬಲಕ್ಕೆ

1. ಮಂಜ ಮಧ್ಯೆ ನಿಂತ ಮೇಲೆ ಮನಸ್ಸಿಗೆ ಸರಿ ಎನಿಸಿತು 4
3. ಆತುರದ ಜೊತೆ ಕಳವಳ ಆತಂಕ 3

ಪದಬಂಧ ಉತ್ತರ -2705

ಮೇಲಿಂದ ಕೆಳಕ್ಕೆ


1. ಜನವರಿ 2.ವರಮಾಲಿಕೆ 3.ಭಾನುಮತಿ 4.ವೈವಸ್ವತ 7.ಕ್ಷಾತ್ರಗುಣ 10.ಕುಲಪುತ್ರ 13.ಪರಿಪಾಕ 15.ಕಾಮದಹನ 17.ನಾಕಾಬಂದಿ 19.ಯಡೆಯೂರು

ಎಡದಿಂದ ಬಲಕ್ಕೆ

1.ಜಯದೇವ 3.ಭಾರತ 4.ವೈಷ್ಣವ 5.ಮಾತೃಪ್ರೇಮ 6.ರಿಕ್ಷಾವಾಲಿ 8.ತಿರುಗು 9.ಕೆದಕು 11.ತಲೆಬಾಗು 12.ಲಕ್ಷದ್ವೀಪ 14.ಣರಕಾ 16.ಗಗನಾ 18.ಮಹಾತ್ರಯ 20.ಕಾವ್ಯಾನಂದ 21.ಡೆವಕ 22.ತ್ರಿಪದಿ 23.ನವಾಬರು

ಕಾಡುವ ಗ್ರಾಮಭಾರತದ ಸಂಕಟ

ಗ್ರಾಮಭಾರತ ಇಂದು ಎದುರಿಸುತ್ತಿರುವ ಬಿಕ್ಕಟ್ಟುಗಳನ್ನು, ಅಲ್ಲಿನ ವಿಕೃತಿಗಳೊಂದಿಗೆ ಸಮಾಜದ ಮುಖಕ್ಕೆ ರಾಚುವಂತೆ ಹಿಡಿದು ತೋರಿಸುವ ಕಥೆಗಳ ಗುಚ್ಛ 'ಅಕಾಲ'. ಪತ್ರಕರ್ತರಾಗಿ ಪ್ರೇಮಕುಮಾರ್ ಹರಿಯಬ್ಬೆಯವರು ಗ್ರಾಮೀಣ ಭಾಗದಲ್ಲಿ ಕಂಡುಂಡ ಅನುಭವಗಳಿಗೆ ಕಲ್ಪನೆಯ ಮೆರುಗು ತುಂಬಿರುವ ಅವರೊಳಗಿನ ಕಥೆಗಾರ ಮಾಡಿದ ರಸಪಾಕ ಇದಾಗಿದೆ. ಹರಿಯಬ್ಬೆಯವರ ಮೊದಲ ಸಂಕಲನ ಪ್ರಕಟವಾಗಿ ನಾಲ್ಕು ದಶಕಗಳ ಬಳಿಕ ಬಂದಿರುವ ಸಂಕಲನ ಇದಾಗಿದ್ದು, ಕಥೆ ಹೇಳಲು ಅವರು ತೋರುವ ಸಾವಧಾನದ ನಡೆಗೆ ದ್ಯೋತಕವಾಗಿದೆ. ಗ್ರಾಮೀಣ ಭಾಗದ ಸಂಕಟಗಳು ಅವರೊಳಗಿನ ಕಥೆಗಾರನನ್ನು ಬಹುವಾಗಿ ಬಾಧಿಸಿದಂತಿದೆ. ಇಲ್ಲಿನ ಕಥೆಗಳಲ್ಲಿ ಹೆಣಗಳು ಮತ್ತೆ ಮತ್ತೆ ಬರುತ್ತವೆ. ಅದು 'ದೇವರ ಕೆರೆ' ಕಥೆ ಆಗಿರಬಹುದು, 'ಗಾಂಧಿ ಮೇಷ್ಟ್ರು' ಕಥೆ ಆಗಿರಬಹುದು, 'ಬಾಬಣ್ಣನೆಂಬ ಅಮಾಯಕ' ಕಥೆ ಆಗಿರಬಹುದು, ಅಷ್ಟೇ ಏಕೆ, ಸಂಕಲನದ ಶೀರ್ಷಿಕೆಯಾದ 'ಅಕಾಲ' ಕಥೆಯೇ ಆಗಿರಬಹುದು, ಹೆಣದ ಸಮ್ಮುಖದಲ್ಲಿಯೇ ಸಾಮಾಜಿಕ ಸಂದರ್ಭದ ವಿಶ್ಲೇಷಣೆ ನಡೆಯುತ್ತದೆ. ಸ್ವಾತಂತ್ರ್ಯಾನಂತರದ ಕಾಲಘಟ್ಟದ ಭಾರತದ ವ್ಯಥೆಯ ಪ್ರತಿಬಿಂಬದಂತೆ ಇಲ್ಲಿನ ಕಥೆಗಳು ಗೋಚರಿಸುತ್ತವೆ. ಗ್ರಾಮಭಾರತದ ಅಸಹಾಯಕ ಬದುಕು ಮನಸ್ಸಿನಲ್ಲಿ ಗಾಢವಾಗಿ ಉಳಿಯುವಷ್ಟು ಅಲ್ಲಿನ ಸಂಕಟಗಳು ಈ ಕಥೆಗಳಲ್ಲಿ ಹರಳುಗಟ್ಟಿವೆ. ತನ್ನ ಸುತ್ತ ಸಮಾಜ ಸೃಷ್ಟಿಸಿಕೊಂಡ ಅಧ್ವಾನಗಳನ್ನು ಎತ್ತಿ ತೋರಿಸಿ, ತಿವಿಯುವುದರಿಂದ 'ಅಕಾಲ'ದ ಈ ಕಥೆಗಳನ್ನು ಸಕಾಲದ ಕಥೆಗಳು ಎನ್ನಬಹುದೇನೋ. ❖



ಪು: 208 ₹200

ಅಕಾಲ
ಲೇ: ಪ್ರೇಮಕುಮಾರ್ ಹರಿಯಬ್ಬೆ
ಪ್ರ: ಕವಿತಾ ಪ್ರಕಾಶನ
ಸಂ: 9880105526

'ಬಾಕಾಹು'ವಿನ ವಿರಾಟರೂಪ

ಮೊದಲ ಓದು

ಬಾಳೆಕಾಯಿ ಹುಡಿ–ಬಾಕಾಹು, ಇದು ಇತ್ತೀಚೆಗೆ ಹುಟ್ಟಿಕೊಂಡ ಉದ್ದಿಮೆ. ಕೃಷಿ ಕ್ಷೇತ್ರದಲ್ಲಿ ಹೊಸ ಸಂಚಲನವನ್ನೇ ಸೃಷ್ಟಿಸಿರುವ ಈ ಮೌಲ್ಯವರ್ಧಿತ ಉತ್ಪನ್ನ, ಅತ್ಯಲ್ಪ ಅವಧಿಯಲ್ಲೇ ಅಭಿಯಾನದ ರೂಪದಲ್ಲಿ ಹಲವು ರಾಜ್ಯಗಳಿಗೆ ಹೆಜ್ಜೆ ಇಟ್ಟಿದೆ. ಸೋತ ರೈತರ ಪಾಲಿಗೆ ಊರುಗೋಲಾಗಿ ಸಿಕ್ಕಿದೆ. ಈ ಅಭಿಯಾನ ಬೆಳೆದು ಬಂದ ಬಗೆಯ ವ್ಯವಸ್ಥಿತ ದಾಖಲೆ ಶ್ರೀ ಪಡ್ರೆ ಅವರ 'ಬಾಳೆಕಾಯಿ ಸೋತಾಗ ಊರುಗೋಲಾದ ಬಾಕಾಹು' ಕೃತಿ.

ಲಾಕ್‌ಡೌನ್ ಅವಧಿಯಲ್ಲಿ ಬಾಳೆಹಣ್ಣಿನ ದರ ಕುಸಿದಾಗ ಬೆಳೆಗಾರರ ಕೈಹಿಡಿದಿದ್ದು ಇದೇ ಬಾಕಾಹು. ಜೊತೆಗೆ ಮಧುಮೇಹ ನಿಯಂತ್ರಿಸಲು ಬಾಕಾಹು ಪ್ರಯೋಜನಕಾರಿ ಎಂಬ ಸುದ್ದಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ ಮೇಲಂತೂ ಇದರ ಬೇಡಿಕೆ ಗಗನಕ್ಕೇರಿದ್ದಂತೂ ನಿಜ. ಈ ಕುರಿತು ಆಹಾರ ತಜ್ಞ ಡಾ.ಕೆ. ಸಿ.ರಘು 'ಬಾಕಾಹು ಬಳಕೆಯಿಂದ ಬಾಳೇ ಬದಲು' ಲೇಖನದಲ್ಲಿ ಸವಿಸ್ತಾರವಾದ ಮಾಹಿತಿ ಒದಗಿಸಿದ್ದಾರೆ. ಬಾಕಾಹು ತಯಾರಿ ವಿಧಾನದ ಬಗ್ಗೆ ಆಲೆಪ್ಪಿ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ ಜೆಸ್ಸಿ ಜಾರ್ಜ್ ಅವರ ವಿವರಣೆ, ಬಾಕಾಹು ತಯಾರಿಸಿದ ಅನುಭವ, ಬಾಕಾಹು ಮಿಶ್ರಿತ ಚಪಾತಿ ತಯಾರಿ, ಉತ್ತರ ಕನ್ನಡ ಜಿಲ್ಲೆಯಲ್ಲಿ ಬಾಕಾಹು ಬೆಳೆದ ಬಗೆ, ಕೃಷಿ ವಿಜ್ಞಾನ ಕೇಂದ್ರಗಳಿಂದ ಪ್ರಚಾರ ಹಾಗೂ ಲಭ್ಯತೆಯ ವಿವರಣೆ ಇದರಲ್ಲಿ ಅಡಕವಾಗಿವೆ. ಜೊತೆಗೆ ಬಾಕಾಹುವಿನಿಂದ ತಯಾರಿಸಬಹುದಾದ ಸುಮಾರು 28 ಬಗೆಯ ಖಾದ್ಯಗಳ ಸವಿವರವೂ ಇಲ್ಲಿದೆ.

ಬಾಕಾಹು ತಯಾರಿ ಕೃಷಿಕರ ನಷ್ಟ ತಡೆಗೆ ಒಂದು ಉತ್ತಮ ಮಾರ್ಗ ಎಂದಿದ್ದಾರೆ ಲೇಖಕರು. ಬಾಕಾಹು ಬೆಳವಣಿಗೆಯಿಂದ ಕಲಿಯಬೇಕಾದ ಪಾಠ ಬಹಳಷ್ಟಿದೆ, ಕೃಷಿ ವಿಜ್ಞಾನ ಕೇಂದ್ರಗಳಲ್ಲಿ ಈ ಉದ್ದಿಮೆಯನ್ನು ಮತ್ತಷ್ಟು ಉತ್ತೇಜಿಸಲು ಆಗಬೇಕಾಗಿರುವ ವ್ಯವಸ್ಥೆಯ ಬಗ್ಗೆಯೂ ಶ್ರೀ ಪಡ್ರೆಯವರು ಗಮನಸೆಳೆದಿದ್ದಾರೆ. ❖



ಪು: 140 ₹150

'ಬಾಳೆಕಾಯಿ ಸೋತಾಗ ಊರುಗೋಲಾದ ಬಾಕಾಹು'
ಲೇ: ಶ್ರೀ ಪಡ್ರೆ
ಪ್ರ: ಕೃಷಿ ಮಾಧ್ಯಮ ಕೇಂದ್ರ ಮತ್ತು ಫಾರ್ಮರ್ ಫಸ್ಟ್ ಟ್ರಸ್ಟ್
ಸಂ: 9886856364

ಒಳಗಣ್ಣಿನ ಭಾವ ಸರೋವರ


ಮುದಿಗೆರೆ ರಮೇಶ್‌ಕುಮಾರ್ ಅವರು ಅಂಧರಾದರೂ ಅವರೊಳಗಿನ ಕವಿಯು ಜಗತ್ತನ್ನು ಎಷ್ಟು ತೀಕ್ಷ್ಣದೃಷ್ಟಿಯಿಂದ ನೋಡಬಲ್ಲ ಎನ್ನುವುದಕ್ಕೆ ಸಾಕ್ಷಿ ಅವರ ಇತ್ತೀಚಿನ ಕಾವ್ಯ ಸಂಕಲನ ಬಟಾಬಯಲು. ಅಂಧರು ಎಂಬ ರಿಯಾಯಿತಿ ತೋರಿಸದೆ ನೋಡಿದಾಗಲೂ ಗಮನ ಸೆಳೆಯುವಂತಹ ಹಲವಾರು ಕವನಗಳು ಈ ಸಂಕಲನದಲ್ಲಿವೆ. 'ಲೆಕ್ಕ ಇಟ್ಟವರಿಲ್ಲ ಕಲ್ಲುಗಳ ಹೊತ್ತವರ/ ಲೆಕ್ಕ ಇಟ್ಟವರಿಲ್ಲ ಗುಡಿ ಕಟ್ಟಿ ಮಣಿದವರ/ ಲೆಕ್ಕಕ್ಕೆ ನನದೊಂದು ನಿನದೊಂದು ಕಲ್ಲು' ಎಂದು ಕಳವಳಿಸುವ ಕವಿಯ ಮನಸ್ಸು, ಮರೆಯಾಗುತ್ತಿರುವ ಮನುಷ್ಯತ್ವದ ಬಗ್ಗೆಯೂ ಮಾತನಾಡುತ್ತದೆ. ಉದಾಹರಣೆ ಬೇಕೇ? 'ಬಿದ್ದುದಷ್ಟೇ ನಾವು ಕೆಳಗೆ/ಬಿದ್ದವರೆಷ್ಟೋ ಒಳಗೊಳಗೆ.' ಕಣ್ಣು ಕಾಣದ ತಮ್ಮಂಥವರು ಬಾಹ್ಯವಾಗಿ ಬಿದ್ದರೂ ಅದರಿಂದ ಯಾವ ಅಪಾಯವೂ ಇಲ್ಲ. ಅದೇ ಕಣ್ಣಿದ್ದೂ ಅಂತಃಸಾಕ್ಷಿಯ ಮುಂದೆ ಬಿದ್ದವರು ತಂದೊಡ್ಡುವ ಅಪಾಯ ದೊಡ್ಡದು ಎಂಬುದನ್ನು ಈ ಕವನ ಸೂಚ್ಯವಾಗಿ ಹೇಳುತ್ತದೆ. ಹಕ್ಕಿಗಳ ಚಿಲಿಪಿಲಿ ನಾದದ ಜತೆಗೆ ದುಃಖಿತರ ಆರ್ತನಾದವೂ ಕವಿಗೆ ಕೇಳಿಸುತ್ತದೆ. ದೇವರು, ಧರ್ಮ, ನಾಡು, ನುಡಿ, ನಿಸರ್ಗ ಹೀಗೆ ಇಲ್ಲಿನ ಕಾವ್ಯಗಳಲ್ಲಿ ಒಳಗಣ್ಣಿನ ದೃಷ್ಟಿ ವ್ಯಾಪಕವಾಗಿ ಹರಡಿದೆ. ❖



ಪು: 96 ₹100

ಬಟಾಬಯಲು
ಲೇ: ಮುದಿಗೆರೆ ರಮೇಶ್‌ಕುಮಾರ್
ಪ್ರ: ಕರ್ನಾಟಕ ಅಂಧರ ವಿಮೋಚನಾ ವೇದಿಕೆ
ಸಂ: 9844769007

ಶ್ರೇಷ್ಠ ಗ್ರಂಥಪಾಲಕನ ಸಂಸ್ಮರಣೆ



ಪು: 296 ₹250

ಗ್ರಂಥಲಕ್ಷ್ಮೀ
ಎಸ್.ಎನ್. ಲಕ್ಷ್ಮೀನಾರಾಯಣ ಅವರ ಸಂಸ್ಮರಣ ಗ್ರಂಥ
ಪ್ರಧಾನ ಸಂಪಾದಕ: ಡಾ. ಸಿ.ಪಿ. ಕೃಷ್ಣಕುಮಾರ್
ಸಂಪಾದಕ: ಡಾ. ಎಸ್.ಟಿ. ರಾಮಚಂದ್ರ
ಪ್ರ: ಮಾನಸ ಪ್ರಕಾಶನ
ಸಂ: 9945988388

ಗ್ರಂಥಪಾಲಕರಾಗಿ, ಗ್ರಂಥಾಲಯ ಅಧಿಕಾರಿಯಾಗಿ 'ನುಡಿ ಸೇವೆ' ಮಾಡಿದ ಎಸ್.ಎನ್. ಲಕ್ಷ್ಮೀನಾರಾಯಣ ಅವರ ಸಂಸ್ಮರಣಾ ಗ್ರಂಥ 'ಗ್ರಂಥಲಕ್ಷ್ಮೀ'. ಅಭಿನಂದನಾ ಗ್ರಂಥವಾಗಿ ರೂಪುಗೊಳ್ಳುತ್ತಿದ್ದ ಈ ಕೃತಿ, ಆ ಹಂತದಲ್ಲಿಯೇ ಲಕ್ಷ್ಮೀನಾರಾಯಣ ಅವರು ಅಗಲಿದ್ದರಿಂದ ಸಂಸ್ಮರಣಾ ಗ್ರಂಥದ ಸ್ವರೂಪ ತಾಳಿ, ಓದುಗರ ಕೈಸೇರಿದೆ. ಗ್ರಂಥಾಲಯ ಅಧಿಕಾರಿಯ ಸಂಸ್ಮರಣೆ ಗ್ರಂಥ ಇದಾಗಿರುವುದರಿಂದ ಸಹಜವಾಗಿಯೇ ಇಲ್ಲಿ ಪುಸ್ತಕ ಪ್ರಪಂಚವೇ ಅನಾವರಣಗೊಂಡಿದೆ. ಲಕ್ಷ್ಮೀನಾರಾಯಣ ಅವರ ಕಾರ್ಯದಕ್ಷತೆಯಿಂದ ಗ್ರಂಥಾಲಯಗಳು ಹೇಗೆ ಓದುಗಸ್ನೇಹಿಯಾಗಿ ಮಾರ್ಪಟ್ಟವು ಎನ್ನುವುದರ ಚಿತ್ರಣವನ್ನು ಇಲ್ಲಿನ ಲೇಖನಗಳು ಸವಿವರವಾಗಿ ಕಟ್ಟಿಕೊಟ್ಟಿವೆ. ವಿದ್ಯಾರ್ಥಿಗಳ ಜ್ಞಾನದ ಹಸಿವು ನೀಗಿಸಲು ಅಧ್ಯಾಪಕರು ಹೇಗೆ ಪರಿಶ್ರಮ ಹಾಕುತ್ತಿದ್ದರು ಎನ್ನುವ ಸಂಗತಿ ಇಲ್ಲಿನ ಪ್ರತೀ ಬರಹದಲ್ಲಿ ದಾಖಲಾಗಿದೆ. ಸ್ವಯಂಬಂಧ, ವ್ಯಕ್ತಿಬಂಧ, ಗ್ರಂಥಬಂಧ ಹಾಗೂ ಸಂಕೀರ್ಣಬಂಧ– ಹೀಗೆ ಈ ಕೃತಿಯ ಲೇಖನಗಳನ್ನು ನಾಲ್ಕು ಸ್ಥೂಲ ಭಾಗಗಳಾಗಿ ವಿಂಗಡಿಸಲಾಗಿದೆ. ಅಗಲಿಕೆಯ ಮುನ್ನ ಲಕ್ಷ್ಮೀನಾರಾಯಣ ಅವರು ಬರೆದ ಅಪರೂಪದ ಸ್ವ–ದರ್ಶನ ಬರಹವನ್ನೂ ಇಲ್ಲಿನ ಲೇಖನ ಮಾಲೆಯಲ್ಲಿ ಪೋಣಿಸಲಾಗಿದೆ. ಗ್ರಂಥಾಲಯ ಸಂಬಂಧವಾದ ಕಾರ್ಯಕಲಾಪದ ಎಷ್ಟೋ ಸಂಗತಿಗಳನ್ನು ವಸ್ತುನಿಷ್ಠವಾಗಿ ಅವರು ಓದುಗರ ಮುಂದಿಟ್ಟಿದ್ದಾರೆ. ಈ ಗ್ರಂಥಾಲಯ ಅಧಿಕಾರಿಯ ಗ್ರಂಥಪ್ರೀತಿ, ಜ್ಞಾನಶೀಲತೆ ಹಾಗೂ ಶಿಸ್ತಿನ ವ್ಯಕ್ತಿತ್ವವನ್ನು ಅವರನ್ನು ಹತ್ತಿರದಿಂದ ಬಲ್ಲವರು ಕಂಡರಿಸಿದ್ದಾರೆ. ಸಂಸ್ಮರಣೆ ನೆಪದಲ್ಲಿ ಗ್ರಂಥಾಲಯದ ನಾನಾ ಮಗ್ಗಲುಗಳ ಕುರಿತು ಚರ್ಚಿಸಿರುವ ಬರಹಗಳು ಇದರಲ್ಲಿದ್ದು, ಕೃತಿಯ ಮೌಲ್ಯವನ್ನು ಹೆಚ್ಚಿಸಿವೆ. ❖

40ರ ನಲಿವಿನಲ್ಲಿ ಹೆಮ್ಮೆಯ ನುಡಿದೇಗುಲ


ಬಿ.ಎಂ.ಶ್ರೀಕಂಠಯ್ಯ

> ಸಾಹಿತ್ಯ ಸಂಸ್ಕೃತಿಗಳಿಗೆ ಮೀಸಲಾದ ನಾಡಿನ ಪ್ರತಿಷ್ಠಿತ ಸಂಸ್ಥೆ 'ಬಿಎಂಶ್ರೀ ಪ್ರತಿಷ್ಠಾನ' ಸ್ಥಾಪನೆಗೊಂಡು ನಾಲ್ಕು ದಶಕಗಳನ್ನು ಪೂರೈಸಿದೆ. ಆ ನೆನಪಿನಲ್ಲಿ ಒಂದು ಮೆಲುಕು...

ಆರ್. ಲಕ್ಷ್ಮೀನಾರಾಯಣ

ಅದು 1980ರ ಮಾರ್ಚ್ ತಿಂಗಳ 10ನೇ ತಾರೀಖು. ತಮ್ಮನ್ನು 'ಕುಟೀಚಕ' ಎಂದು ವರ್ಣಿಸಿಕೊಂಡು ಯಾವುದೇ ಸಭೆ ಸಮಾರಂಭಗಳಿಗೆಂದು ಸಾಮಾನ್ಯವಾಗಿ ಎಂದೂ ಮೈಸೂರು ಬಿಟ್ಟು ಹೊರಗೆ ಹೊರಡದ ಕುವೆಂಪು ಅವರು ಅಂದು ಬಿಎಂಶ್ರೀ ಪ್ರತಿಷ್ಠಾನದ ಉದ್ಘಾಟನೆ ನೆರವೇರಿಸುವ ಸಲುವಾಗಿಯೇ ಬೆಂಗಳೂರಿಗೆ ಬಂದಿದ್ದರು. ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ ಆವರಣದಲ್ಲಿ ಪ್ರತಿಷ್ಠಾನದ ಉದ್ಘಾಟನೆಯನ್ನೂ ವಿಧ್ಯುಕ್ತವಾಗಿ ಮಾಡಿದ್ದರು. ಹಾಗೆ ಕುವೆಂಪು ಅವರನ್ನು ಬೆಂಗಳೂರಿಗೆ ಕಟ್ಟಿಹಾಕಿ ಎಳೆತಂದದ್ದು ಬಿಎಂಶ್ರೀ ಪ್ರತಿಷ್ಠಾನದ ಸಂಸ್ಥಾಪಕ ಎಂ.ವಿ. ಸೀತಾರಾಮಯ್ಯನವರ ಪ್ರೀತಿಪೂರ್ವಕ ಒತ್ತಾಯ ಮತ್ತು ಅವರ ಗುರುಗಳಾದ ಬಿ.ಎಂ.ಶ್ರೀಯವರ ಮೇಲಿನ ಅಪಾರ ಗೌರವ.

'ರೋಗಸಾಗರವನ್ನು ಈಜಿ ದಡ ಸೇರಿದ ಸಾಹಿತಿ' ಎಂದು ಒಂದು ಲೇಖನ ವರ್ಣಿಸುವ ಹಾಗೆ ಅತ್ಯಂತ ನಾಜೂಕಿನ ಆರೋಗ್ಯ ಹೊಂದಿದ್ದ ಎಂ.ವಿ.ಸೀ. ತಮ್ಮ ದೃಢವಾದ ಸಂಕಲ್ಪ ಬಲ ಮತ್ತು ಕರ್ತೃತ್ವ ಶಕ್ತಿಯಿಂದ ಬಿ.ಎಂ.ಶ್ರೀ ಪ್ರತಿಷ್ಠಾನವನ್ನು ಹುಟ್ಟುಹಾಕಿದ್ದು 1979ರ ಮೇ ತಿಂಗಳ 6ರಂದು, ಅದೂ ತಮ್ಮ 70ನೆಯ ವಯಸ್ಸಿನಲ್ಲಿ. ಅದರ ಹಿಂದಿದ್ದ ಕಳಕಳಿ ಕನ್ನಡ ಸಂಶೋಧನೆ ಮತ್ತು ಪಾಂಡಿತ್ಯ ಸಂವರ್ಧನೆಗಾಗಿಯೇ ಮೀಸಲಾದ ಸಂಸ್ಥೆಯೊಂದನ್ನು ಕನ್ನಡ ನವೋದಯದ ಕಾರಣಪುರುಷರೆಂದೇ ಖ್ಯಾತರಾದ ಹಾಗೂ ತಮ್ಮ ಅಕ್ಕರೆಯ ಗುರುಗಳಾದ ಬಿ.ಎಂ.ಶ್ರೀ ಅವರ ಹೆಸರಿನಲ್ಲಿ ಸ್ಥಾಪಿಸಬೇಕೆಂಬುದು.

ಇದೀಗ ಈ ಹೆಮ್ಮೆಯ ಸಾಹಿತ್ಯ ಸಂಸ್ಥೆ ನಾಲ್ಕು ದಶಕಗಳನ್ನು ಪೂರೈಸಿದೆ. 1990ರಲ್ಲಿ ತೀರಿಕೊಳ್ಳುವವರೆಗೂ ಈ ಸಂಸ್ಥೆಯನ್ನು ಬೆನ್ನಿಗೆ ಕಟ್ಟಿಕೊಂಡು ಎಂ.ವಿ.ಸೀ. ಅವರು ದುಡಿದ ರೀತಿ ಅನನ್ಯವಾದದ್ದು. ಎಲ್ಲಿಯೂ ಹೆಚ್ಚು ಓಡಾಡುವ ಸ್ಥಿತಿಯಲ್ಲಿಲ್ಲದಿದ್ದರೂ ಬೆಲ್ಲಕ್ಕೆ ಇರುವೆ ಮುತ್ತುವಂತೆ ಸುತ್ತ ಇರುತ್ತಿದ್ದ ತಮ್ಮ ಅಕ್ಕರೆಯ ಶಿಷ್ಯಂದಿರು ಮತ್ತು ಹಿರಿಯ ಕಿರಿಯ ಮಿತ್ರರ ಬಳಗವನ್ನು ಜೊತೆಗೂಡಿಸಿಕೊಂಡು ತಮ್ಮ ಮನೆಯನ್ನೇ ಕಚೇರಿ ಮಾಡಿಕೊಂಡು ಸ್ವಂತ ಪುಸ್ತಕಭಂಡಾರ ಮತ್ತು ವಿದ್ವನ್ಮಿತ್ರರು ಕೊಡುಗೆಯಾಗಿ ನೀಡಿದ ಪುಸ್ತಕಗಳನ್ನೇ ಪ್ರತಿಷ್ಠಾನದ ಪುಸ್ತಕ ಭಂಡಾರವಾಗಿಸಿ ಅದಕ್ಕೊಂದು ತಾತ್ಕಾಲಿಕ ನೆಲೆ ಕಲ್ಪಿಸಿಬಿಟ್ಟರು.

ಮಾಸ್ತಿಯವರು ಮಹಾಪೋಷಕರಾಗಿ, ಎಂ.ವಿ.ಸೀ. ವ್ಯವಸ್ಥಾಪಕರಾಗಿ, ನಂತರ ಅಧ್ಯಕ್ಷರಾಗಿ ಆರಂಭಗೊಂಡ ಈ ಸಂಸ್ಥೆಗೆ ಕಾರಂತ, ಕಣವಿ, ಜೀವಿ ಮೊದಲಾದ, ನಾಡಿನ ಪ್ರತಿಷ್ಠಿತ ಸಾಹಿತಿಗಳೆಲ್ಲರೂ ಕೈಜೋಡಿಸಿದ್ದಾರೆ. ಅಲ್ಲೇ ಹತ್ತು ವರ್ಷ ಪೂರೈಸಿ, ವಿದ್ವತ್ ಚರ್ಚೆ, ವಿಚಾರಗೋಷ್ಠಿಗಳನ್ನು ನಡೆಸುತ್ತ 1983ರಲ್ಲಿ ಅವರು ಆರಂಭಿಸಿದ ವಿದ್ವತ್ ಪತ್ರಿಕೆ 'ಲೋಚನ' ಈಗ 38 ವರ್ಷಗಳನ್ನು ಪೂರೈಸಿದೆ. ಸರ್ಕಾರದ ಉನ್ನತ ಅಧಿಕಾರಿಗಳಿಂದ ಹಿಡಿದು ಮಂತ್ರಿ ಮಾನ್ಯರವರೆಗೆ ಪತ್ರಗಳ ಮೂಲಕವೇ ವ್ಯವಹರಿಸುತ್ತ ಪ್ರತಿಷ್ಠಾನಕ್ಕೆ ಈಗಿರುವ ನಿವೇಶನವನ್ನು ಗುತ್ತಿಗೆಯ ಆಧಾರದ ಮೇಲೆ ದೊರಕಿಸಿಕೊಂಡರು. ಅನಂತರ ಮಾಸ್ತಿ ಮನೆ, ಗೋಖಲೆ ಸಂಸ್ಥೆಗಳ ಆಶ್ರಯದಲ್ಲಿದ್ದು 2000ದ ಫೆಬ್ರುವರಿಯಿಂದ ಸ್ವಂತ ಕಟ್ಟಡಕ್ಕೆ ವರ್ಗಾವಣೆಗೊಂಡು ಸರ್ಕಾರ, ಸಾರ್ವಜನಿಕರು ಮತ್ತು ಸಾಹಿತ್ಯಾಭಿಮಾನಿಗಳ ಕೊಡುಗೆಯಿಂದ ಇದೀಗ ಮೂರು ಅಂತಸ್ತುಗಳ ಭವ್ಯ ಭವನವಾಗಿ ತಲೆ ಎತ್ತಿ ನಿಂತಿದೆ.



ಬಿ.ಎಂ. ಶ್ರೀ ಪ್ರತಿಷ್ಠಾನದ ಕಟ್ಟಡ

ಇದು ಈ ಸಂಸ್ಥೆಯ ಭೌತಿಕ ನೆಲೆಯ ಕಥೆಯಾದರೆ ಅದರ ಆತ್ಮಿಕ ನೆಲೆಯಾದ ಸಾಹಿತ್ಯಕ ಚಟುವಟಿಕೆಯ ಕಥೆ ನಿಜಕ್ಕೂ ಅಚ್ಚರಿ ಹುಟ್ಟಿಸುವಂಥದ್ದು. ಸಂಸ್ಥೆಯಲ್ಲಿ ಸಂಶೋಧನೆಗೆ ಮೊದಲ ಮಣೆ ಇರಬೇಕೆಂದು ಎಂ.ವಿ.ಸೀ ನಿಶ್ಚಯಿಸಿದರು. ಸ್ವತಃ ಕವಿರಾಜಮಾರ್ಗವನ್ನು ಅತ್ಯಂತ ಶಾಸ್ತ್ರೀಯವಾಗಿ ಸಂಪಾದಿಸಿದ ಅವರಿಗೆ ಗ್ರಂಥ ಸಂಪಾದನೆ ಮತ್ತು ಹಸ್ತಪ್ರತಿಶಾಸ್ತ್ರದ ಮೇಲೆ ಎಲ್ಲಿಲ್ಲದ ಅಕ್ಕರೆ. ಅದಕ್ಕಾಗಿ ಪ್ರತಿಷ್ಠಾನದಲ್ಲಿ ಒಂದು ಹಸ್ತಪ್ರತಿಗಳ ಒಂದು ಭಂಡಾರವನ್ನು ಸಜ್ಜುಗೊಳಿಸಿದರು. ಅವರ ಬಳಿಯಿದ್ದ ಪ್ರಾಚೀನ ಗ್ರಂಥಗಳ ಹಸ್ತಪ್ರತಿಗಳ ಜೊತೆಗೆ ಅವರಿವರು ಕೊಡುಗೆಯಾಗಿ ನೀಡಿದವೂ ಸೇರಿ ಒಂದು ಸಾವಿರ ಹಸ್ತಪ್ರತಿಗಳನ್ನು ಒಳಗೊಂಡಿದ್ದು ಅವುಗಳ ರಕ್ಷಣೆ ಮತ್ತು ಡಿಜಿಟಲೀಕರಣದ ಕಾರ್ಯದಲ್ಲಿ ತೊಡಗಿಸಿಕೊಂಡಿದೆ.

ರಾಷ್ಟ್ರೀಯ ಹಸ್ತಪ್ರತಿ ಮಿಷನ್‌ನಿಂದ ಮಾನ್ಯತೆ ಪಡೆದಿರುವ ಮತ್ತು ನಾಡಿನಾದ್ಯಂತ ಹೆಸರಾಗಿರುವ ಹಸ್ತಪ್ರತಿ ಭಂಡಾರ ಇದಾಗಿದೆ. 1981ರಲ್ಲಿಯೇ ಎಂ.ವಿ.ಸೀ. ನಾಡಿನ ಖ್ಯಾತ ವಿದ್ವಾಂಸರನ್ನೆಲ್ಲ ಆಹ್ವಾನಿಸಿ ಹಸ್ತಪ್ರತಿಶಾಸ್ತ್ರ ಕುರಿತ ಎರಡು ದಿನಗಳ ವಿಚಾರಸಂಕಿರಣವನ್ನು ಪ್ರತಿಷ್ಠಾನದಲ್ಲಿ ಆಯೋಜಿಸಿ ಅದರಲ್ಲಿ ಮಂಡಿತವಾದ ಪ್ರಬಂಧಗಳನ್ನೆಲ್ಲ ಒಳಗೊಂಡ 'ಹಸ್ತಪ್ರತಿಶಾಸ್ತ್ರ' ಎಂಬ ಗ್ರಂಥವನ್ನೂ ಹೊರತಂದರು.

ತನ್ನ ನೈರಂತರ್ಯವನ್ನು ಕಾಪಾಡಿಕೊಂಡು ಬಂದಿರುವ ವಿದ್ವತ್ ಪತ್ರಿಕೆ ಲೋಚನಕ್ಕೆ ನಾಡಿನ ಹೆಮ್ಮೆಯ ಮತ್ತು ವಿಖ್ಯಾತ ವಿದ್ವಾಂಸರೆಲ್ಲರೂ ಲೇಖನಗಳನ್ನು ಬರೆದಿದ್ದಾರೆ. ಜಿ. ವೆಂಕಟಸುಬ್ಬಯ್ಯ, ಶ್ರೀನಿವಾಸರಾವ್ ಕೊರಟಿ, ಟಿ. ಕೇಶವ ಭಟ್ಟ ಮೊದಲಾದ ವಿದ್ವನ್ಮಣಿಗಳು ಇದರ ಸಂಪಾದಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಇದರ ಜೊತೆಗೆ ಪ್ರತಿಷ್ಠಾನದ ಚಟುವಟಿಕೆಗಳಿಗೆ ಮೀಸಲಾದ 'ಹೊಂಗನಸು' ವಾರ್ತಾಪತ್ರ ಕೂಡ ಉಲ್ಲೇಖಾರ್ಹವಾದದ್ದು.

ಸ್ಥಾಪಕ ಅಧ್ಯಕ್ಷರ ಕಾಲದಿಂದಲೇ ಆರಂಭವಾದ ವಿದ್ವತ್ ಗ್ರಂಥಗಳ ಪ್ರಕಟಣೆ ಇದುವರೆಗೂ ಮುಂದುವರಿದಿದೆ. ಇದುವರೆಗೆ 188 ಗ್ರಂಥಗಳನ್ನು ಪ್ರಕಟಿಸಿದೆ. ಹಾಗೆ ಪ್ರಕಟಿಸಿದ ಗ್ರಂಥಗಳಲ್ಲಿ 'ಹಸ್ತಪ್ರತಿಶಾಸ್ತ್ರ', ಫ. ಗು. ಹಳಕಟ್ಟಿಯವರ ಬಗೆಗಿನ ಗೌರವ ಗ್ರಂಥ 'ಮಣಿಹ' ಶಬ್ದಮಣಿ ದರ್ಪಣ ಮತ್ತು ಭಟ್ಟಾಕಳಂಕನ ಶಬ್ದಾನುಶಾಸನ –ಒಂದು ಅಧ್ಯಯನ, ಶ್ರೀನಿಧಿ, ಶ್ರೀಗಂಧ, ಶಂಕರಾಚಾರ್ಯರ ಸೌಂದರ್ಯ ಲಹರಿ, ತಿಮ್ಮಪ್ಪ ದಾಸರ ಕೀರ್ತನೆಗಳು, ಅರ್ಚನ ಮೊದಲಾದವು ಸೇರಿವೆ. ಸಾಹಿತ್ಯ ಉಪನ್ಯಾಸಗಳು ಮತ್ತು ವಿಚಾರ ಸಂಕಿರಣಗಳ ಹೊನಲನ್ನೂ ಹರಿಸುತ್ತಿದೆ.

ಪ್ರತಿಷ್ಠಾನದಲ್ಲಿ ಹಲವು ಉನ್ನತ ಸಾಹಿತ್ಯ ಪ್ರಶಸ್ತಿಗಳಿವೆ. ಬಿ.ಎಂ.ಶ್ರೀಯವರ ಮೊಮ್ಮಗಳೂ ಪ್ರಸಿದ್ಧ ಬರಹಗಾರ ಶಾ. ಬಾಲೂರಾಯರ ಧರ್ಮಪತ್ನಿಯೂ ಆದ ಕಮಲಿನಿ ಅವರು ತಮ್ಮ ತಾತನ ಹೆಸರಿನಲ್ಲಿ, ಕನ್ನಡದಲ್ಲಿ ಮಹತ್ವದ ಸಾಧನೆ ಮಾಡಿದ ಸಾಹಿತಿಗಳಿಗೆ ನೀಡಲು ಸ್ಥಾಪಿಸಿರುವ ಒಂದು ಲಕ್ಷ ರೂಪಾಯಿ ಬಹುಮಾನದ 'ಶ್ರೀಸಾಹಿತ್ಯ ಪ್ರಶಸ್ತಿ' ಸೇರಿದಂತೆ ಪ್ರತಿಷ್ಠಾನ ಕೊಡಮಾಡುವ ಪ್ರಶಸ್ತಿಗಳಿಗೆ ಬೆಲೆಕಟ್ಟಲಾಗದ ಮೌಲ್ಯವಿದೆ.

ಹಂಪಿ ವಿಶ್ವವಿದ್ಯಾಲಯದ ಮಾನ್ಯತೆ ಪಡೆದ ಅಧ್ಯಯನ ಕೇಂದ್ರ ಇದಾಗಿದ್ದು, ಪಿಎಚ್.ಡಿ. ಅಭ್ಯರ್ಥಿಗಳಿಗೆ ಮಾರ್ಗದರ್ಶನದ ಜೊತೆಗೆ ಹಳಗನ್ನಡ ಮತ್ತು ಶಾಸನ ಅಧ್ಯಯನ ತರಗತಿಗಳನ್ನು ನಡೆಸಿಕೊಂಡು ಬರುತ್ತಿದೆ. ಇದುವರೆಗೆ ಪ್ರತಿಷ್ಠಾನದಿಂದ 117 ಜನ ಎಂ.ಫಿಲ್ ಮತ್ತು 18 ಜನ ಪಿಎಚ್.ಡಿ ಪದವಿ ಪಡೆದಿದ್ದಾರೆ. ಕೀರ್ತಿಶೇಷರಾದ ನಿಟ್ಟೂರು ಶ್ರೀನಿವಾಸರಾವ್, ಜಿ. ನಾರಾಯಣ ಅವರು ಗೌರವಾಧ್ಯಕ್ಷರಾಗಿದ್ದ ಈ ಸಂಸ್ಥೆ, ಈಗ ಪ್ರೊ. ಎಂ.ಎಚ್. ಕೃಷ್ಣಯ್ಯನವರ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದೆ.

ಬೆಂಗಳೂರು ಮಹಾನಗರ ಪಾಲಿಕೆ ನಾಮಮಾತ್ರ ಗುತ್ತಿಗೆ ಆಧಾರದ ಮೇಲೆ ನೀಡಿರುವ ನಿವೇಶನದಲ್ಲಿ ನೆಲೆ ನಿಂತು ಇಷ್ಟೆಲ್ಲ ಸಾಹಿತ್ಯ ದಾಸೋಹ ನಡೆಸುತ್ತ ಬಂದಿರುವ ಈ ಹೆಮ್ಮೆಯ ಸಾಹಿತ್ಯ ಸಂಸ್ಥೆಯ ಅಸ್ತಿತ್ವವೇ ಇದೀಗ ಅಲುಗಾಡತೊಡಗಿದೆ. ಕಾರಣ ಗುತ್ತಿಗೆ ಅವಧಿ ಮುಗಿದು ಹತ್ತು ವರ್ಷಗಳೇ ಕಳೆದಿದ್ದು ಗುತ್ತಿಗೆ ನವೀಕರಿಸಬೇಕೆಂದು ಮನವಿ ಮಾಡಿದರೂ ಇನ್ನೂ ನವೀಕರಣ ಆಗಿಲ್ಲ.

ನುಡಿಯಾರಾಧಕರೆಲ್ಲರ ಸಾಹಿತ್ಯ ಪ್ರೀತಿಗೆ ಸಾಕ್ಷಿಪ್ರಜ್ಞೆಯಂತಿರುವ ಈ ಸಂಸ್ಥೆಯನ್ನು ಉಳಿಸಿಕೊಳ್ಳುವ ಹೊಣೆಗಾರಿಕೆ ನಾಡಿನ ನುಡಿಪ್ರೇಮಿಗಳದಾಗಿದೆ. ಸಾಹಿತ್ಯ ಪ್ರೇಮಿಗಳ ಉದಾರ ದೇಣಿಗೆಯಿಂದಲೇ ಅರ್ಧ ಶತಮಾನದತ್ತ ಭರದಿಂದ ಸಾಗಿರುವ ಈ ಸಂಸ್ಥೆ ನಿರಂತರವಾಗಿ ವರ್ಧಿಸುತ್ತ ಸಾಹಿತ್ಯ ಕೈಂಕರ್ಯ ನಡೆಸುತ್ತ ಸಾಗಲೆಂಬುದೇ ಈ ಸಂದರ್ಭದಲ್ಲಿ ಎಲ್ಲ ಕನ್ನಡಿಗರ ಬಯಕೆಯಾಗಿದೆ.

ಶೃಂಗಾರದ ಒಳಬಂಡಾಯ

ವಿಮರ್ಶೆ

ಡಾ. ಎಚ್.ಎಸ್. ಅನುಪಮಾ

ಶೋಭಾ ನಾಯಕ ಅವರ ಮೂರನೇ ಕವನ ಸಂಕಲನ 'ಶಯ್ಯಾಗೃಹದ ಸುದ್ದಿಗಳು'. ಪುಟ ತಿರುವಿದರೆ ಬೆಚ್ಚಿಬೀಳಿಸಿ ಯೋಚನೆಗೆ ಹಚ್ಚುವಂತಹ ಐವತ್ತು ಕವಿತೆಗಳು ಇಲ್ಲಿವೆ. ವಸ್ತು, ಮಂಡನೆ, ಅಲ್ಲಿಲ್ಲಿ ಮಿಂಚುವ ಆಡುಭಾಷೆ, ಹೆಣ್ಣು ಅಭಿವ್ಯಕ್ತಿಯ ಪಾರದರ್ಶಕತೆಗಳ ಕಾರಣದಿಂದ ಈ ಸಂಕಲನ ಮಹಿಳಾ ಕಾವ್ಯಕ್ಕೊಂದು ಗಮನಾರ್ಹ ಸೇರ್ಪಡೆಯಾಗಿದೆ.

ಜೀವಿಗಳಿಗೆ ಕಾಮ ಒಂದು ಗುಂಗು. ಮನುಷ್ಯರಿಗೆ ಶೃಂಗಾರ ಒಂದು ವಿಸ್ಮಯ, ಭಾರತೀಯರಿಗದು ಗುಟ್ಟಿನ ಸುಖ. ಕಾಮದ ಬಗೆಗೆ ಭಾರತೀಯರು ವಿಪುಲವಾಗಿ ಬರೆದಿದ್ದಾರೆ. ಕವಿಗಳೂ, ಸಂತರೂ, ಯತಿವರೇಣ್ಯರೂ ಕುಂಭಕುಚಗಳ ಹೆಣ್ಣಿನ ದೇಹವರ್ಣನೆ ಮಾಡಿದ್ದಾರೆ. ಮಿಥುನ ಶಿಲ್ಪಗಳನ್ನು ಗುಡಿಯಲ್ಲೂ ಕೆತ್ತಿಸಿದ್ದಾರೆ. ಯೋನಿಯನ್ನು ಮನರಂಜನೆಯ ಅಂಗವಾಗಿ ನೋಡಿದಷ್ಟೇ ಫಲವತ್ತತೆಯ ಸಂಕೇತವಾಗಿ ಪೂಜಿಸಿದ್ದಾರೆ.

ಸ್ತ್ರೀಪುರುಷ ಮಿಲನಕ್ಕೆ ಹೊಸ ಅರ್ಥ, ಸಾಧ್ಯತೆಗಳನ್ನು ಅಧ್ಯಾತ್ಮ ಪರಂಪರೆಗಳು ಕೊಟ್ಟಿದ್ದಾವೆ. ಇಲ್ಲೆಲ್ಲ ಗಂಡು ಕಣ್ಣೋಟದಲ್ಲಿ ಹೆಣ್ಣು ದೇಹವನ್ನು, ಕಾಮದನುಭವವನ್ನು ಕಟ್ಟಿಕೊಡಲಾಗಿದೆ. ಹೆಣ್ಣುಗಳಿಗೆ ಅದೊಂದು ಆಡಬಾರದ ಗುಟ್ಟಿನ ಸಂಗತಿಯಾಗಿ ಉಳಿದಿದೆ. ಮಾತನಾಡಿದರೂ ಒಂದೋ ಅನುಭಾವಿ ಹಿನ್ನೆಲೆಯಲ್ಲಿ ಅಥವಾ ಅಭಿಸಾರಿಕಾ ಮನೋವೃತ್ತಿಯಾಗಿ ಅರ್ಥೈಸಲಾಗುತ್ತದೆ.

ಆದರೆ, ಅಕ್ಕಮಹಾದೇವಿಯ ಕನ್ನಡ ನೆಲದ ಹೆಣ್ಣುಗಳು ದೇಹತುಮುಲಗಳನ್ನು ಸಂಕೇತಾರ್ಥದಲ್ಲಿ ಬಿಡಿಸಿಡುತ್ತಲೇ ಇದ್ದಾರೆ. ಎನ್.ವಿ. ಭಾಗ್ಯಲಕ್ಷ್ಮಿ 1970ರ ದಶಕದಲ್ಲಿ 'ಬೆರಳ ಸಂದಿಯ ಬದುಕು' ಸಂಕಲನದಲ್ಲಿ 'ಹುಡುಗಿಯರು ಕಾಮದ ಬಗ್ಗೆ ಪದ್ಯ ಬರೆದರೆ...' ಏನೇನು ಆಗುತ್ತದೆಂದು ಬರೆದರು. ಶೃಂಗಾರ, ಪ್ರೇಮ, ವಿರಹಗಳು ಕನ್ನಡ ಮಹಿಳಾ ಕಾವ್ಯದಲ್ಲಿ ಒಂದೇಸಮ ಕಂಡುಬರುತ್ತಿವೆ. ಈ ನಿಟ್ಟಿನಿಂದ 'ಶಯ್ಯಾಗೃಹದ ಸುದ್ದಿಗಳು' ದಿಟ್ಟವಾದೊಂದು ತಿರುವು ತೆಗೆದುಕೊಂಡಿದೆ. ಹೆಣ್ಣು ಬರೆದಿದ್ದನ್ನೆಲ್ಲ ಆತ್ಮಚರಿತ್ರಾತ್ಮಕವಾಗಿ ನೋಡಿ, ಅಲ್ಲಿರುವ 'ಅವನು' ಯಾರಿರಬಹುದೆಂದು ಭೂತಕನ್ನಡಿಯಲ್ಲಿ ಹುಡುಕುವ ಲೋಕಕ್ಕೆ 'ಬಟ್ಟೆಯನ್ನಷ್ಟೇ ತೊಟ್ಟವರ ಮಾನ ಕಾಯಲು ತಾನು ಬೆತ್ತಲನ್ನುಟ್ಟಿ'ರುವುದಾಗಿ ಕವಿತೆ ಹೇಳುತ್ತದೆ.

ಹೆಣ್ಣಿಗೆ ಲಜ್ಜೆಯೇ ಆಭರಣವೆಂದು ಕಾಮದ ನಿಷ್ಕ್ರಿಯ ಪಾಲುದಾರಳನ್ನಾಗಿಸಿರುವ ಸಮಾಜಕ್ಕೆ, 'ಮುಟ್ಟಿನ ಹೊಲೆಗೆ, ಕಟ್ಟಿನ ಮೊಲೆಗೆ ಹುಟ್ಟಿದವನೇ, ಮುಟ್ಟಿದರೆ ಮುನಿವ ಎಲೆಯಂತೆ ಮುದುರಿಕೊಳ್ಳುವುದನು ಬಯಸಬೇಡ ನನ್ನಿಂದ' ಎಂದು ಕವಿತೆಗಳ ನಾಯಕಿ ತನ್ನನ್ನು ಪರಿಚಯಿಸಿಕೊಳ್ಳುತ್ತಾಳೆ. 'ಬ್ರೈಲ್ ಲಿಪಿಯಲ್ಲಿ ಬರೆದ ಶೃಂಗಾರ ಕಾವ್ಯ ನಾನು. ಆದರೆ ಓದುವ ನೀನು ಕುರುಡನಲ್ಲ' ಎಂದು ಲಿಂಗಸಂಬಂಧದ ತಕರಾರುಗಳನ್ನು ಎತ್ತುತ್ತಾಳೆ. 'ಶಯ್ಯಾಗೃಹದಲ್ಲಿ ಹೆಣ್ಣು ನರಳುವಾಗ ಗಂಡಸಿಗೆ ಸಿಗುವ ಸುಖದ ಹೆಸರು ಅಹಂ' ಎನ್ನುತ್ತ ಪುರುಷ ಲೈಂಗಿಕತೆಯನ್ನು ಕಟುವಿಮರ್ಶೆಗೊಡ್ಡುತ್ತಾಳೆ.


ಬಹುಸಂಗಾತಿ ಸಂಬಂಧವನ್ನು ಗಂಡಸು ಹೆಮ್ಮೆಯಿಂದ ಹೇಳಿಕೊಂಡಂತೆ ಹೆಣ್ಣು ಹೇಳಿಕೊಂಡದ್ದಿಲ್ಲ. ಇಲ್ಲಿನ ಕಾವ್ಯ ನಾಯಕಿಯು ತನ್ನಿನಿಯನಿಗೆ, 'ನಾನು ಒಬ್ಬಳೇ ಅಲ್ಲ. ಕಣ್ಣಲ್ಲಿ ಕಣ್ಣೂರಿದಾಗ ನನ್ನೆಲ್ಲ ಪೂರ್ವಪ್ರೇಮಿಗಳನ್ನು ಭೇಟಿಯಾಗುವುದು, ಅವರೆಲ್ಲರೊಳಗೆ ನೀನೂ ಒಬ್ಬನಾಗುವುದು ಅನಿವಾರ್ಯ'ವೆಂದು ಬಹುಸಂಗಾತಿಗಳ ನಂಟನ್ನು ತೆರೆದಿಡುತ್ತಾಳೆ. ತನ್ನನ್ನು ಕಾಮುಕಿ ಎನ್ನುವ ಮತ್ತೊಬ್ಬನಿಗೆ, 'ನಿನ್ನಂತೆ ನನಗೂ ಸೊಬಗು ಬೇಕು ಮಾರಾಯಾ' ಎಂದುತ್ತರಿಸಿ ದಂಗುಬಡಿಸುತ್ತಾಳೆ. ಕಾಮವಿಲ್ಲದೆ ಬರಿಯ ಪ್ರೇಮಿಗಳಾಗಿರೋಣ ಎನ್ನುವ ಗೆಳೆಯನಿಗೆ, 'ಅದು ಐಷಾರಾಮಿ ಕಲ್ಪನೆ; ತೊಗಲ ಆಯುಧಗಳೇ ವಾಸ್ತವ' ಎನ್ನುತ್ತಾಳೆ. ಮುಟ್ಟು ನಿಂತ ನಂತರವೂ ಮುಟ್ಟುವವನು, ಮುಗಿಲಾಗಬಲ್ಲವನು, ಬೆನ್ನುಹಾಕಿ ಮಲಗದವನು ಇರಬಾರದಿತ್ತೇ ಎಂದು ಕನಲುತ್ತಾಳೆ.

ಶೃಂಗಾರ ಸಂಬಂಧದ ಸಾಂಪ್ರದಾಯಿಕ ಮಡಿವಂತಿಕೆಯ ಚೌಕಟ್ಟನ್ನು ಮುರಿಯಲು ಇಲ್ಲಿನ ಕವಿತೆಗಳು ಯತ್ನಿಸಿವೆ. ಮದುವೆ, ಪಾತಿವ್ರತ್ಯ, ಲಜ್ಜೆ ಮೊದಲಾಗಿ ಏಕಪಕ್ಷೀಯವಾಗಿ ಹೆಣ್ಣಿನ ಮೇಲೆ ಹೇರಲ್ಪಟ್ಟ ಮೌಲ್ಯಗಳನ್ನು ಮಿಕ್ಕು ಮೀರಿ ಒಳಬಂಡಾಯ ಹೂಡಿವೆ. 'ತನ್ನದು ಮಾತ್ರ' ಆದ ಜೀವವೊಂದನ್ನು ಪಡೆಯಲು ಗಂಡುಹೆಣ್ಣುಗಳು ಯತ್ನಿಸುವ ನಾಗರಿಕ ಸಮಾಜದಲ್ಲಿ ದೈಹಿಕ ಸಂಬಂಧ ಕುರಿತ ಈ ಧೋರಣೆಯನ್ನು ಎಲ್ಲರೂ ಒಪ್ಪಬೇಕೆಂದಿಲ್ಲ. ಒಪ್ಪುವುದೂ ಇಲ್ಲ. ನೀತಿ ಅನೀತಿಗಳ ಆಚೆಗೂ ಪ್ರಶ್ನೆಗಳಿಲ್ಲದೇ ಇಲ್ಲ. ಅದೇನೇ ಇರಲಿ, ಒಳ್ಳೆಯತನವೆಂಬ ರಥವನೇರಿರುವ ಹೆಣ್ಣುಗಳು ಇಂಥ ಕವಿತೆ ಬರೆಯುವುದು, ಪ್ರಕಟಿಸುವುದು ಎದೆಗಾರಿಕೆಯ ಮಾತೇ ಆಗಿದೆ. ಕವಿಗೆ ಸಾಧ್ಯವಾದ ಜಿಗಿತವು ಗಂಡು ಠೇಂಕಾರವನ್ನು ಕ್ಷೀಣಗೊಳಿಸಿ ಸಮಾಜವನ್ನು ಆತ್ಮಾವಲೋಕನಕ್ಕೆ ಹಚ್ಚುವಷ್ಟು ಶಕ್ತವಾಗಿದೆ.

ಆದರೆ ದೇಹವನ್ನು ಚಲಾವಣೆಯಲ್ಲಿಡಲು ತಾರುಣ್ಯ, ಸೌಂದರ್ಯಗಳೇ ನಾಣ್ಯವಾದರೆ ಮನುಷ್ಯರಿಗಿಂತ ವಸ್ತುಗಳೇ ಮುಖ್ಯವಾಗುವ ಅಪಾಯವಿದೆ. ಅದರಿಂದ ಪಾರಾಗಬೇಕೆಂದರೆ ದೇಹದ ಮೀರುವಿಕೆಯನ್ನು ಬದುಕಿಗೂ ವಿಸ್ತರಿಸಿಕೊಳ್ಳಬೇಕಾಗುತ್ತದೆ. ಚೆಲುವಿಕೆಯ ವ್ಯಾಖ್ಯಾನಗಳನ್ನೂ ಮನುಷ್ಯಚೇತನ ಮೀರಬೇಕಾಗುತ್ತದೆ. ಯಾಕೆಂದರೆ ಸಮಾಜದ ಚೌಕಟ್ಟುಗಳು ಬರಿಯ ಹೆಣ್ಣನ್ನಷ್ಟೇ ಬಾಧಿಸಿಲ್ಲ.

ಗೌರಿಯರ ದುಃಖ ಒಂದು ತರಹವಾದರೆ ಗಂಡು ದುಃಖದ ಆಳ ಬೇರೆಯದೇ ಆಗಿದೆ. ಗಡಸುದನಿ, ಬಲಿಷ್ಠ ದೇಹ, ಹುಚ್ಚು ಕೆಚ್ಚು ಇಲ್ಲದಿದ್ದಕ್ಕೆ; ಮೀಸೆ ಗಡ್ಡ ಮೂಡದಿದ್ದಕ್ಕೆ; ಬೇಗನೇ ಆರ್ದ್ರಗೊಂಡು ಕಣ್ಣೀರು ಮಿಡಿಯುವುದಕ್ಕೆ; ಅಂಗಾಂಗಗಳ ಉದ್ದಗಲ ಕಡಿಮೆಯಿರುವುದಕ್ಕೆ; ಹೆಣ್ಣಿನ ತನುಮನಧನಗಳ ದಾಹವನ್ನು ತೀರಿಸಲಾಗದ್ದಕ್ಕೆ ಗಂಡಸರೂ ಅವಮಾನ, ಕೀಳರಿಮೆಗಳನ್ನು ಅನುಭವಿಸುತ್ತಿದ್ದಾರೆ. ಹೆಣ್ಣುಗಳು ಹೆಣ್ಣುತನದ ಚೌಕಟ್ಟುಗಳನ್ನು ಕಿತ್ತು ಬಿಸಾಡುವಂತೆಯೇ ತನ್ನ ಜೊತೆಗಾರನ ಗಂಡಸುತನವೆಂಬ ಕಣ್ಕಟ್ಟನ್ನು ಕಿತ್ತು, ಅವರನ್ನೂ ಮುಕ್ತಗೊಳಿಸುವ ಕೆಲಸ ಮಾಡಬೇಕು. ಕರುಣಾ, ಮೈತ್ರಿ ಭಾವವನ್ನು ಬಂಡಾಯ ಗುಣದ ಜೊತೆಗೇ ಮಿಳಿತಗೊಳಿಸಿ ಸ್ತ್ರೀಪುರುಷ ಸಂಬಂಧಗಳು ಕೆಳೆತನದ ಬಯಲನ್ನು ತಲುಪಲು ಸಾಧ್ಯ ಮಾಡಬೇಕು.

ಆಗ ಮೀರುವಿಕೆಯ ಆಯಾಮ ಬೇರೆಯದೇ ಆಗಿರುತ್ತದೆ. ನಾವು ಕನಸುವ ಸಮತೆಯ ಬಯಲಿನೆಡೆಗೆ ಮನುಷ್ಯರನ್ನು ನಡೆಸುತ್ತದೆ. ❖



ಪು: 100 ₹105

ಶಯ್ಯಾಗೃಹದ ಸುದ್ದಿಗಳು
ಲೇ: ಶೋಭಾ ನಾಯಕ
ಪ್ರ: ಮನೋರಮಾ ಬುಕ್ ಹೌಸ್
ಸಂ: 80883 80327


ಬೇಡರ ದೊರೆಗಳ ರೋಚಕ ಇತಿಹಾಸ

ಒಳನೋಟ

ಪಿನಾಕ

ಕಲ್ಯಾಣ ಕರ್ನಾಟಕದಲ್ಲಿ ಆಳ್ವಿಕೆ ನಡೆಸಿದ ಬಹುತೇಕ ಸಂಸ್ಥಾನಗಳ ಚರಿತ್ರೆಯನ್ನು ದಾಖಲಿಸುವಂತಹ ಕೆಲಸವೇ ಆಗಿಲ್ಲ. ಹೀಗಾಗಿ ಚಾರಿತ್ರಿಕವಾದ ಎಷ್ಟೋ ಅಮೂಲ್ಯ ವಿವರಗಳು ಗತಿಸಿದ ರಾಜರುಗಳೊಟ್ಟಿಗೇ ಮಣ್ಣಾಗಿಬಿಟ್ಟಿವೆ. ಸುರಪುರ ಸಂಸ್ಥಾನದ ಅಂತಹ ಐತಿಹಾಸಿಕ ವಿವರಗಳು ಕಾಲದೊಂದಿಗೆ ಹೀಗೆ ಕಳೆದುಹೋಗಬಾರದು ಎಂಬ ಮಹತ್ವಾಕಾಂಕ್ಷೆಯಿಂದ ಫ್ರಾ ಮುರ್ಜ ಜಂಗ್ ಬಹದ್ದೂರ ಅವರು ಸಂಗ್ರಹಿಸಿ ಕೊಟ್ಟ ಚರಿತ್ರೆಯೇ 'ಸುರಪುರ ಒಂದು ಪ್ರಾಚೀನ ಬೇಡರ ರಾಜ್ಯ'. 115 ವರ್ಷಗಳಷ್ಟು ಹಿಂದೆ ಇಂಗ್ಲಿಷ್‌ನಲ್ಲಿ ಪ್ರಕಟವಾದ ಕೃತಿ ಇದೀಗ ರಂಗನಗೌಡ ಎಚ್. ಪಾಟೀಲ ಅವರ ಪ್ರಯತ್ನದಿಂದ ಕನ್ನಡಕ್ಕೆ ಬಂದಿದೆ.

ಫ್ರಾ ಮುರ್ಜ ಜಂಗ್ ಬಹದ್ದೂರ – ಹೆಸರೇ ಸೂಚಿಸುವಂತೆ ಅವರೊಬ್ಬ ಹೈದರಾಬಾದ್ ನಿಜಾಮರ ಪರಿವಾರಕ್ಕೆ ಸೇರಿದ ವ್ಯಕ್ತಿ. ನಿಜಾಮ್ ಪ್ರಾಂತ್ಯಕ್ಕೆ ಸೇರಿದ್ದ ರಾಯಚೂರು ಜಿಲ್ಲೆಯ ಕಲೆಕ್ಟರ್ ಆಗಿ ನೇಮಕಗೊಂಡಿದ್ದ ಅವರು, ಕಾರ್ಯನಿಮಿತ್ತ ಸುರಪುರಕ್ಕೆ ಮೇಲಿಂದ ಮೇಲೆ ಭೇಟಿ ನೀಡುವ ಅವಕಾಶವನ್ನು ಪಡೆದಿದ್ದರು. ಅದೇ ಸುರಪುರದಲ್ಲಿ 12 ವರ್ಷಗಳ ಕಾಲ ರಾಜಪ್ರತಿನಿಧಿಯಾಗಿ ಸೇವೆ ಸಲ್ಲಿಸಿದ ಕರ್ನಲ್ ಫಿಲಿಪ್ ಮೆಡೋಸ್ ಟೇಲರ್ ಅವರು ಬರೆದ 'ದಿ ಸ್ಟೋರಿ ಆಫ್ ಮೈ ಲೈಫ್' ಕೃತಿ ಜಂಗ್ ಅವರ ಮೇಲೆ ಗಾಢ ಪ್ರಭಾವವನ್ನು ಬೀರಿತ್ತು. ಸುರಪುರದ ಭೂಪರಿಸರ, ಇತಿಹಾಸ, ಸಂಸ್ಕೃತಿ, ಜೀವನಶೈಲಿ, ಸಾಮಾಜಿಕ–ಆರ್ಥಿಕ ಸ್ಥಿತಿಗತಿ ಮೊದಲಾದ ವಿವರಗಳನ್ನು ಮೆಡೋಸ್ ಕೃತಿಯಲ್ಲಿ ಓದಿದ್ದ ಅವರು, ಬೇಡ ದೊರೆಗಳ ಇತಿಹಾಸವನ್ನು ದಾಖಲಿಸುವ ಸಾಹಸಕ್ಕೆ ಕೈಹಾಕಿದರು.



ಪು: 172 ₹250

ಸುರಪುರ ಒಂದು ಪ್ರಾಚೀನ ಬೇಡರ ರಾಜ್ಯ
ಮೂಲ: ಫ್ರಾ ಮುರ್ಜ ಜಂಗ್ ಬಹದ್ದೂರ
ಕನ್ನಡಕ್ಕೆ: ರಂಗನಗೌಡ ಎಚ್. ಪಾಟೀಲ
ಪ್ರ: ಸಪ್ತಗಿರಿ ಪ್ರಕಾಶನ, ಗೋಪಾಳಪುರ (ದೇವದುರ್ಗ)
ಸಂ: 98456 94230

ಹಕೀಮ್ ಪಾಪಯ್ಯ ಶಾಸ್ತ್ರಿ ಎಂಬುವವರ ಬಳಿಯಿದ್ದ ತಾಳೆಗರಿಗಳ ದಾಖಲೆಗಳನ್ನು ಅಧ್ಯಯನ ಮಾಡಿ, ಟೇಲರ್ ಅವರ ಮಾಹಿತಿಯನ್ನೂ ಜತೆಗೆ ಸೇರಿಸಿಕೊಂಡು ಅಧಿಕೃತ ವಿವರಗಳನ್ನೇ ಕೊಡಲು ಜಂಗ್ ಯತ್ನಿಸಿರುವುದು ಎದ್ದು ಕಾಣುತ್ತದೆ. ತಮಗೆ ದೊರೆತ ತಾಳೆಗರಿಗಳನ್ನು 'ಬಹು ಮೌಲ್ಯಯುತವಾದ ದಾಖಲೆಗಳು' ಎಂದು ಅವರು ಕೊಂಡಾಡಿದ್ದಾರೆ. ಸುರಪುರ ಪಟ್ಟಣವನ್ನು ಅವರು 'ಸಿಟಿ ಆಫ್ ಗಾಡ್ಸ್' (ದೇವರುಗಳ ನಗರ) ಎಂದು ಕರೆದಿದ್ದಾರೆ. ಸುರಪುರ ರಾಜರ ವಂಶಾವಳಿ, ಬೇಡರ ನಡತೆ ಮತ್ತು ಸಂಪ್ರದಾಯ, ಔರಂಗಜೇಬ್ ಮತ್ತು ಬೇಡರು, ಬ್ರಿಟಿಷ್ ಸರ್ಕಾರದ ವಶದಲ್ಲಿ ಸುರಪುರ, ನಿಜಾಮರ ಅಧೀನದಲ್ಲಿ ಸುರಪುರ... ಹೀಗೆ ವಿವಿಧ ಅಧ್ಯಾಯಗಳಲ್ಲಿ ಅವರು ಕಥೆ ಹೇಳುತ್ತಾ ಹೋದಂತೆ ಬೇಡದೊರೆಗಳ ಚರಿತ್ರೆ ಸುರುಳಿ, ಸುರುಳಿಯಾಗಿ ಬಿಚ್ಚಿಕೊಳ್ಳುತ್ತಾ ಸಾಗುತ್ತದೆ.

ಸುರಪುರ ಆ ದಿನಗಳಲ್ಲಿ ಎದುರಿಸಿದ ಬರದ ಚಿತ್ರಣವನ್ನೂ ಜಂಗ್ ಆರ್ದ್ರವಾಗಿ ಕಟ್ಟಿಕೊಟ್ಟಿದ್ದಾರೆ. 1791ರಿಂದ 1878ರ ಅವಧಿಯಲ್ಲಿ ಸುರಪುರ ಎದುರಿಸಿದ ಬರ ಎದೆ ನಡುಗಿಸುವಂಥದ್ದು. ಬರಗಳಲ್ಲೇ ಅತ್ಯಂತ ಭೀಕರ ಬರ ಎನಿಸಿದ ಡೊಯಿಬರ ಅಥವಾ ಡೋಗಿಬರ (Skull Famine) 1792ರಲ್ಲಿ ಈ ಪ್ರದೇಶವನ್ನು ಆವರಿಸಿತ್ತು. ಎಲ್ಲಲ್ಲಿ ಕಾಲಿಟ್ಟರೆ ಅಲ್ಲಲ್ಲಿ ತಲೆಬುರುಡೆಗಳೇ ಸಿಗುತ್ತಿದ್ದವು. ಸತ್ತವರ ನಿಖರ ಸಂಖ್ಯೆಯೂ ತಿಳಿದಿರಲಿಲ್ಲ. ಜೋಳದ ಬೆಲೆ ವಿಪರೀತ ಹೆಚ್ಚಾಗಿ ಒಂದು ರೂಪಾಯಿಗೆ ಕೇವಲ ಮೂರು ಸೇರು ಸಿಗುವಂತಾಗಿತ್ತು. ಗ್ರಾಮಗಳು ಜನರಿಲ್ಲದೆ ಹಾಳು ಬಿದ್ದಿದ್ದವು... ಇಂತಹ ವಿವರಗಳ ಮೂಲಕ ಬರದ ಜೀವಂತ ಚಿತ್ರಣವನ್ನು ಅವರು ಬಿಡಿಸಿಟ್ಟಿದ್ದಾರೆ.

ಒಂದೊಮ್ಮೆ ಬೇಡರ ಸ್ವತಂತ್ರ ಸಂಸ್ಥಾನವಾಗಿದ್ದ ಸುರಪುರ, 1858ರಲ್ಲಿ ಇಂಗ್ಲಿಷರ ವಶಕ್ಕೂ ಬಳಿಕ ನಿಜಾಮನ ಆಡಳಿತಕ್ಕೂ ಒಳಪಟ್ಟಿತ್ತು. ಆಗಿನ ರಾಜಕೀಯ ಚಿತ್ರಣವನ್ನೂ ಜಂಗ್ ಓದುಗರ ಮುಂದಿಟ್ಟಿದ್ದಾರೆ. ಸುರಪುರ ರಾಜರ ವಂಶಾವಳಿ ಸಂಗ್ರಹಿಸುವಲ್ಲಿ ಅವರು ಅಪಾರ ಶ್ರಮ ಹಾಕಿದ್ದಾರೆ. ಈ ರಾಜಮನೆತನದ ಕೊನೆಯ ದೊರೆ ರಾಜಾ ನಾಲ್ವಡಿ ವೆಂಕಟಪ್ಪನಾಯಕ ಅವರ ಇತಿಹಾಸ ಎಷ್ಟು ರೋಚಕವಾಗಿದೆಯೋ ಅಷ್ಟೇ ದುಃಖಾಂತ್ಯವೂ ಆಗಿದೆ. ಸುರಪುರದ ಮಟ್ಟಿಗೆ ಈ ಅವಧಿಯನ್ನು ಮಹಾಸಂಘರ್ಷದ ಕಾಲ ಎಂದು ಕರೆಯಬಹುದೇನೋ. ಆಗಿನ ಎಲ್ಲ ವಿವರಗಳನ್ನೂ ಜಂಗ್ ಸಂಗ್ರಹಿಸಿ ಕೊಟ್ಟಿದ್ದಾರೆ. ಬೇಡರ ಜನಜೀವನ, ಗುಣ–ಸ್ವಭಾವ, ಉಡುಗೆ, ಹಬ್ಬಗಳ ಆಚರಣೆ, ಬೇಟೆಯ ಕೌಶಲ, ಕ್ರೀಡೆ, ಸಂಸ್ಕೃತಿಗಳ ಕುರಿತೂ ವಿವರ ಒದಗಿಸಿದ್ದಾರೆ. ಅಪರೂಪದ ಚಿತ್ರಗಳ ಸಂಪುಟವನ್ನೂ ಕೊಟ್ಟಿದ್ದಾರೆ.

ಕೃತಿಗೆ ಸುದೀರ್ಘ ಪೀಠಿಕೆ ಬರೆದಿರುವ ಲಕ್ಷ್ಮಣ ತೆಲಗಾವಿಯವರು ಸುರಪುರ ಚರಿತ್ರೆಯ ಲೋಕಕ್ಕೆ ಅಸಾಧಾರಣವಾದ ಪ್ರವೇಶಿಕೆಯನ್ನು ಒದಗಿಸಿದ್ದಾರೆ. ಜಂಗ್ ಅವರು ಬಳಸಿರುವುದು ಶತಮಾನದ ಹಿಂದಿನ ಗೆಜೆಟಿಯರ್ ಭಾಷೆ. ಈ ಚರಿತ್ರೆ ಕಥನ ಸ್ವರೂಪದಲ್ಲಿದ್ದರೆ ಇನ್ನೂ ಸೊಗಸಾಗಿರುತ್ತಿತ್ತು. ರಂಗನಗೌಡರ ಅನುವಾದ ಸರಳ ಹಾಗೂ ಸುಲಭಗ್ರಾಹ್ಯವಾಗಿದೆ. ❖

ಬಟ್ಟೆ ಮೇಲೆ ಭವ್ಯ ಇತಿಹಾಸ

ಗುರು ಪಿ.ಎಸ್.

ಅದೊಂದು ಕಲಾಕೃತಿ. ಅದರಲ್ಲಿ ದೇವರಿದ್ದಾನೆ, ಪುರಾಣವಿದೆ, ಇತಿಹಾಸವಿದೆ, ಜೊತೆಗೊಂದು ಸಂದೇಶ, ಅದರೊಂದಿಗೆ ಮನರಂಜನೆ.

ಬಟ್ಟೆಯ ಮೇಲೆ ಹೀಗೆ 'ಪರಂಪರೆ' ಒಂದನ್ನು ಅನಾವರಣಗೊಳಿಸುವ ಕಲೆಗಾಗಿ ರಾಷ್ಟ್ರಪ್ರಶಸ್ತಿ ಪಡೆದವರು ಕಲ್ಯಾಣ್ ಜೋಶಿ. ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದ 'ದಸ್ತಕಾರ್' ಕಲಾಕೃತಿಗಳ ಮೇಳದಲ್ಲಿ 'ಪ್ರಜಾವಾಣಿ'ಗೆ ಸಿಕ್ಕ ಅವರು, ಫಾಡ್ ಪೇಂಟಿಂಗ್‌ನಂತಹ ಜನಪದ ಕಲೆಯ ಹಿನ್ನೆಲೆ-ಭವಿಷ್ಯದ ಬಗ್ಗೆ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು.


ರಾಜಸ್ಥಾನದ ರಕ್ಷಕರು, ದೇವಮಾನವರು ಎಂದೇ ಕರೆಯಲಾಗುವ ಪಾಬುಜಿ ಮತ್ತು ದೇವನಾರಾಯಣರ ಕಥೆಗಳನ್ನು ಬಟ್ಟೆಗಳ ಮೇಲೆ ಬಿಡಿಸುತ್ತಾರೆ ಜೋಶಿ. ರಾಜಸ್ಥಾನದ ಜನರ ಪಾಲಿಗೆ ಪಾಬುಜಿ ಜನಪದ ದೇವರಾದರೆ, ದೇವನಾರಾಯಣ ವಿಷ್ಣುವಿನ ಅವತಾರ.

700 ವರ್ಷಗಳ ಇತಿಹಾಸ

ಬಟ್ಟೆ ಮೇಲೆ ಹೀಗೆ ಚಿತ್ರಗಳನ್ನು ರಚಿಸುವುದಕ್ಕೆ 'ಫಾಡ್ ಪೇಂಟಿಂಗ್' ಎನ್ನುತ್ತಾರೆ. ಈ ರೀತಿಯ ಕಲಾಕೃತಿ ರಚನೆ ಆರಂಭವಾಗಿದ್ದು ಸುಮಾರು 700 ವರ್ಷಗಳ ಹಿಂದೆ, ರಾಜಸ್ಥಾನದ ಭಿಲ್ವಾರ ಭಾಗದಲ್ಲಿ. ಈ ಕಲಾಕೃತಿಗಳೊಂದಿಗೆ ಹಾಡು-ನೃತ್ಯವೂ ಸೇರಿಕೊಂಡು ಇದೊಂದು ಮನರಂಜನೆಯ ಮತ್ತು ಜನರಿಗೆ ಸಂದೇಶ ನೀಡುವ ಮಾಧ್ಯಮವಾಗಿ ಬೆಳೆಯಿತು.

ರಬರಿ ಬುಡಕಟ್ಟು ಸಮುದಾಯದ 'ಭೋಪ-ಭೋಪಿ' ಎಂದು ಕರೆಯಲಾಗುತ್ತಿದ್ದ ಪುರುಷ ಮತ್ತು ಮಹಿಳೆಯರು, ಗಾಯನ ಮತ್ತು ನೃತ್ಯದ ಮೂಲಕ ಇವುಗಳನ್ನು ಜನರ ಬಳಿ ಒಯ್ಯುತ್ತಿದ್ದರು. ಅಲೆಮಾರಿಗಳಾಗಿದ್ದ ಇವರು ಕುರಿಗಾಹಿಗಳು ಮತ್ತು ಒಂಟೆ ಸಾಕುವವರು. ನಮ್ಮಲ್ಲಿ ಹೆಳವರು ಇದ್ದಂತೆ, ರಾಜಸ್ಥಾನದಲ್ಲಿ ಈ ಸಮುದಾಯದವರು ಇದ್ದಾರೆ. ಹೆಳವರು ಜನರ ವಂಶವೃಕ್ಷವನ್ನು ಹೇಳಿದರೆ, ಈ ಬುಡಕಟ್ಟು ಜನಾಂಗವು, ಪಾಬುಜಿ ಮತ್ತು ದೇವನಾರಾಯಣರ ಕಥೆಗಳನ್ನು ಜನರಿಗೆ ಮುಟ್ಟಿಸುತ್ತದೆ. ಇದಲ್ಲದೆ, ರಾಮಾಯಣ, ಹನುಮಾನ್ ಚಾಲೀಸಾ ಮತ್ತು ಇತರೆ ಪೌರಾಣಿಕ ಕಥೆಗಳನ್ನು ಈ ಕಲೆಯ ಮೂಲಕ ಜನರಿಗೆ ತಲುಪಿಸುತ್ತದೆ.

ಊರಿಂದ ಊರಿಗೆ ಅಲೆಯುತ್ತಿದ್ದ ಈ ಸಮುದಾಯಕ್ಕೆ, ನಿತ್ಯ ದೇಗುಲಗಳಿಗೆ ಹೋಗಲು, ದೇವರಿಗೆ ಪೂಜೆ ಸಲ್ಲಿಸಲು ಆಗುತ್ತಿರಲಿಲ್ಲ. ಹೀಗಾಗಿ, ಬಟ್ಟೆಯ ಮೇಲೆಯೇ 'ದೇಗುಲ-ದೇವಸ್ಥಾನ'ವನ್ನು ರಚಿಸಿ, ಪೂಜಿಸಲು ಪ್ರಾರಂಭಿಸಿದವರು ಇವರು. ನಂತರ, ಇದೇ ಒಂದು ಜನಪದ ಕಲೆಯಾಯಿತು.



ಈ ಕಲೆಯ ವಿಶೇಷ ಏನಪ್ಪ ಅಂದ್ರೆ... ಕಲಾವಿದ ಕಲ್ಯಾಣ್ ಜೋಶಿ ಅವರಿಂದ ವಿವರಣೆ ಚಿತ್ರ: ರಂಜು ಪಿ.

ಜೋಶಿ ಮನೆತನದ ಕಲೆ

ಈ ಪ್ರಾಚೀನ ಕಲೆಯನ್ನು ರಾಜಸ್ಥಾನದಲ್ಲಿ ಜನಜನಿತಗೊಳಿಸಿದ ಶ್ರೇಯ ಜೋಶಿ ಮನೆತನಕ್ಕೆ ಸೇರುತ್ತದೆ. ರಬರಿ ಸಮುದಾಯದ ಭೋಪ-ಭೋಪಿಗಳು ಈ ಕಲಾಕೃತಿ ರಚಿಸುವ ಕಾರ್ಯವನ್ನು 'ಚಿಪ್ಪ' ಸಮುದಾಯಕ್ಕೆ ಜೋಶಿಗಳಿಗೆ ವಹಿಸುತ್ತಾರೆ. ಬದಲಾದ ತಂತ್ರಗಳಿಗೆ ಪೂರಕವಾಗಿ ಈ ಕಲೆಗೆ ಜೀವ ತುಂಬುವ ಕೆಲಸವನ್ನು ಜೋಶಿ ಮನೆತನ ಮಾಡುತ್ತದೆ.

'ಫಾಡ್ ಪೇಂಟಿಂಗ್'ನಲ್ಲಿ ದೊಡ್ಡ ಹೆಸರು ಮಾಡಿದವರು ಕಲ್ಯಾಣ್ ಜೋಶಿಯವರ ತಂದೆ ಶ್ರೀಲಾಲ್ ಜೋಶಿ. ಈ ಕಲೆಯ ಮಹತ್ವವನ್ನು ಅರಿತು, ಮುಂದಿನ ಸಮುದಾಯಕ್ಕೂ ಇದನ್ನು ವಿಸ್ತರಿಸಬೇಕು ಎಂದುಕೊಂಡಿದ್ದ ಶ್ರೀಲಾಲ್, ಫಾಡ್ ಪೇಂಟಿಂಗ್ ಕಲಿಸುವ 'ಜೋಶಿ ಕಲಾ ಕುಂಜ್' ಅನ್ನು 1960ರಲ್ಲಿ ಕಟ್ಟಿದರು. ಈಗ ಇದನ್ನು ಚಿತ್ರಶಾಲಾ ಎಂದು ಕರೆಯಲಾಗುತ್ತಿದೆ.

ರಾಜಸ್ಥಾನದಲ್ಲಿ ಮಾತ್ರವಲ್ಲದೆ, ಹೊರರಾಜ್ಯದ ಕಲಾವಿದರಿಗೂ ಈ ಕಲೆಯನ್ನು ಕಲಿಸಲಾಗುತ್ತಿದೆ. ತಂದೆಯ ಕಲೆಯನ್ನು ಮುಂದಿನ ಪೀಳಿಗೆಗೆ ತಲುಪಿಸುತ್ತಿದ್ದಾರೆ ಕಲ್ಯಾಣ್ ಜೋಶಿ.

ಪರಿಸರ ಸ್ನೇಹಿ

ಯಾವುದೇ ರಾಸಾಯನಿಕ ಬಣ್ಣ, ಅಂಶಗಳನ್ನು ಬಳಸಿಕೊಳ್ಳದೆ, ನೈಸರ್ಗಿಕ ಬಣ್ಣಗಳಿಂದಲೇ ಕಲಾಕೃತಿಗಳನ್ನು ಜೋಶಿ ರಚಿಸುತ್ತಾರೆ.

ಕಲಾಕೃತಿ ರಚನೆಗೆ ಕೈಯಿಂದ ನೇಯ್ದ ಬಿಳಿ ಬಟ್ಟೆಯನ್ನು ಬಳಸುವುದು ಉತ್ತಮ. ಈ ಬಟ್ಟೆಯನ್ನು ರಾತ್ರಿ ಇಡೀ ನೆನೆಸಿಡಬೇಕು. ನಂತರ, ಅದಕ್ಕೆ ಗಂಜಿ ಹಾಕಿಟ್ಟು, ತೊಳೆದ ನಂತರ ಒಣಗಿಸಿ, ಅದು ಹೊಳಪು ಬರುವಂತೆ ಮಾಡಿದ ನಂತರ, ಅದರ ಮೇಲೆ ಚಿತ್ರ ರಚಿಸಲು ಆರಂಭಿಸಬೇಕು. ಕ್ಯಾನ್‌ವಾಸ್ ಅನ್ನು ಮೊದಲು ದಟ್ಟ ಬಣ್ಣಗಳಿಂದ ತುಂಬಿ, ಅದರ ಮೇಲೆ ಪೌರಾಣಿಕ ಪಾತ್ರ, ಕಥೆಯ ಸರಣಿ ರಚಿಸುತ್ತಾ ಹೋಗಬೇಕು ಎಂದು ಸಲಹೆ ನೀಡುತ್ತಾರೆ ಜೋಶಿ.

ಚಿತ್ರದಲ್ಲಿ ಕೈ-ಕಾಲುಗಳನ್ನು ಬಿಡಿಸಲು ಕೇಸರಿ, ಆಭರಣಗಳು ಮತ್ತು ಉಡುಪಿಗೆ ಹಳದಿ, ಪ್ರಕೃತಿಗೆ ಹಸಿರು, ವಾಸ್ತುಶಿಲ್ಪಗಳಿಗೆ ಕಂದು, ವೈಭವೋಪೇತ ಉಡುಪುಗಳನ್ನು ಸಂಕೇತಿಸಲು ಕೆಂಪು ಬಣ್ಣ ಬಳಸಬಹುದು. ಬಹಳ ಮುಖ್ಯ ಅಂಶ ಅಂದರೆ, ಕಲಾಕೃತಿಗೆ ಜೀವಕಳೆ ಬರುವುದೇ ಕಣ್ಣುಗಳಿಂದ. ಇಡೀ ಕಲಾಕೃತಿಯ ಕೇಂದ್ರಬಿಂದುವಿನಂತಿರುವ ಕಣ್ಣುಗಳನ್ನು ಕೊನೆಯಲ್ಲಿ ರಚಿಸಬೇಕು. ಅದು ಇಡೀ ಕಲಾಕೃತಿಯ ಕೇಂದ್ರವಾಗಿರುವಂತೆ ನೋಡಿಕೊಳ್ಳಬೇಕು ಎಂದು ಅವರು ಹೇಳುತ್ತಾರೆ.

'ಸದ್ಯ, ದೇಶದಲ್ಲಿ ಕಡಿಮೆ ಸಂಖ್ಯೆಯ ಕಲಾವಿದರು ಮಾತ್ರ ಈ ಕಲೆಯಲ್ಲಿ ಪೂರ್ಣಾವಧಿಯಾಗಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಬಹುತೇಕರು ಹವ್ಯಾಸಕ್ಕೆ ಮಾತ್ರ ಇದನ್ನು ಸೀಮಿತಗೊಳಿಸಿಕೊಂಡಿದ್ದಾರೆ. ನಮ್ಮ ಪರಂಪರೆಯನ್ನು, ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೂ ಮುಂದುವರಿಸಿಕೊಂಡು ಹೋಗಬೇಕು ಎಂದರೆ ಇಂತಹ ಕಲೆಗಳು ಉಳಿಯಬೇಕು' ಎಂಬ ಅಭಿಪ್ರಾಯ ಕಲ್ಯಾಣ್ ಜೋಶಿಯವರದ್ದು.



ಫಾಡ್ ಕಲೆಯ ದೃಶ್ಯ ವೈಭವ



ತಲೆಯ ಮೇಲೊಂದು ಶಿಖೆ ಹೊತ್ತ ದೇವಲೋಕದ ಸುಂದರ ಪಕ್ಷಿ ಮರ್ರೆ ಈ ಹಟ್ಟಿ ಮುದ್ದ. ಇಂಗ್ಲಿಷ್ ಬಲ್ಲವರು ಇದಕ್ಕೆ ಪ್ಯಾರಡೈಸ್ ಫ್ಲೈಕ್ಯಾಚರ್ ಎಂದು ಹೇಳಿ ನಮ್ಮನ್ನು ತಬ್ಬಿಬ್ಬು ಮಾಡಿದ್ದೂ ಉಂಟು!

ದೇವಲೋಕದ ಸುಂದರ...

ಶ್ರೀಧರ್ ಎಸ್. ಸಿದ್ದಾಪುರ

ಮಾಗಿ ಚಳಿಯ ಸಮಯ, ಸ್ನೇಹಿತ ಕಾಲ್ ಮಾಡಿ 'ನೇರಳ ಕಟ್ಟೆಯಲ್ಲಿ ಹಳೆ ವಸ್ತು ಮಾರಾಟಗಾರನಿದ್ದಾನೆ. ಅವನಲ್ಲಿ ಹೊಸ ಹೊಸ ಹಳೆ ವಸ್ತುಗಳು ಬಂದಿವೆಯಂತೆ ನೋಡಿ, ಕೊಂಡು ಬರೋಣವೇ?' ಎಂದು ಕೇಳಿದ. ಸರಿ ಎಂದು ಹೊರಟೆ. ನೇರಳಕಟ್ಟೆಯಿಂದ ಮುಂದೆ ಗುಲ್ವಾಡಿಯಲ್ಲಿ ಆತನ ಮನೆಯಿತ್ತು.

ಒಂದು ಗೋಣಿಚೀಲದಷ್ಟು ಹಳೆ ವಸ್ತುಗಳನ್ನು ಆ ಮಾರಾಟಗಾರ ನಮ್ಮ ಮುಂದೆ ರಾಶಿ ಹಾಕಿದ. ನಮಗೂ ಅವನಿಗೂ ವ್ಯಾಪಾರ ಕುದುರದೇ ಅಲ್ಲಿಂದ ಹೊರಟೆವು. ಹಾದಿ ನಡುವಿನ ನೇರಳಕಟ್ಟೆಯಲ್ಲಿ ಚಹಾ ಹೀರಲು ನಿಲ್ಲಿಸಿದೆವು. ಮಕ್ಕಳ ಸಾಹಿತಿ ನೆಂಪು ನರಸಿಂಹ ಭಟ್, ಕವಯಿತ್ರಿ ಜ್ಯೋತಿ ನೇರಳಕಟ್ಟೆ, ನಾಟಕಕಾರ ಆನಂದ ತಪ್ಪಲು, ಅಕ್ಷರ ಸಂಚಾರದ ಪುಸ್ತಕಪ್ರೇಮಿ ಭಾಸ್ಕರ ಮುಂತಾದವರು ಇದೇ ಊರಿನವರು.



ಹಟ್ಟಿಮುದ್ದ

ನೇರಳಕಟ್ಟೆಯು ಚಿತ್ರಕಾರನೊಬ್ಬ ಬಿಡಿಸಿದ ಕೊಲಾಜ್‌ನಂತೆ. ಹೆಸರೇ ಎಷ್ಟು ಸುಂದರ. ಕೇರಳದಿಂದ ಬಂದ ಮಾಪಿಳ್ಳೆಗಳು, ಕ್ರಿಶ್ಚಿಯನ್ನರು ಈ ಭಾಗದವರೇ ಆಗಿಹೋಗಿದ್ದಾರೆ. ಬಹುತೇಕರು ಕೃಷಿಕರು. ಕೊಡ್ಲಾಡಿ ಸಮೀಪದ ಪ್ರಸನ್ನ ಅಡಿಗ ತಮ್ಮ ಸಹಜಕೃಷಿಯ ಮೂಲಕ ನೇರಳಕಟ್ಟೆಗೆ ಹೆಸರು ತಂದುಕೊಟ್ಟವರು.

ಕ್ಯಾಮೆರಾಕ್ಕೊಂದು ದೊಡ್ಡ ಲೆನ್ಸ್ ಹಾಕಿ ನೇರಳಕಟ್ಟೆಯ ಬೀದಿಯಲ್ಲಿ ಬಜ್ಜಿ ಅಂಗಡಿ ಎದುರು ನಿಂತೆ. ಶಕುಂತಲೆಯಂತೆ ಶಿಖೆ ಹೊತ್ತ ಬೋಂಡಾ ಮಾರುತ್ತಿದ್ದ ಹೆಂಗಸೊಬ್ಬಳು ಹಿಟ್ಟು ಕಲಸುತ್ತಾ ನನ್ನನ್ನು 'ಏನು?' ಎಂದು ವಿಚಾರಿಸಿಕೊಂಡಳು. 'ಹೀಗೇ ಸುಮ್ನೆ' ಎಂಬ ಜಾರಿಕೆಯ ಉತ್ತರವನ್ನಿತ್ತೆ. ಈ ಬೋಂಡಾ ಅಂಗಡಿ ಎದುರಿಗೇ ಅನೇಕ ವರ್ಷಗಳಿಂದ ನನ್ನನ್ನು ಪೀಡಿಸಿದ, ಕಾಡಿಸಿದ ಹಟ್ಟಿ ಮುದ್ದ ಕುಳಿತಿದ್ದ! ಇವನ ಫೋಟೊಗಾಗಿ ಊರೂರು ಅಲೆದಿದ್ದೆ. ಎಷ್ಟೋ ಕಾಡು ಸುತ್ತಿದ್ದೆ. ಲೀಟರ್‌ಗಟ್ಟಲೆ ಬೆವರು ಹರಿಸಿದ್ದೆ. ಅಚಾನಕ್ ಆಗಿ ಸಿಕ್ಕಿದ್ದನ್ನು ನೋಡಿ ಖುಷಿಯಾಯಿತು.

ತಲೆಯ ಮೇಲೊಂದು ಶಿಖೆ ಹೊತ್ತ ದೇವಲೋಕದ ಸುಂದರ ಪಕ್ಷಿ ಮರ್ರೆ ಈ ಹಟ್ಟಿ ಮುದ್ದ. ನಾನಿಟ್ಟ ಹೆಸರಲ್ಲ ಇದು. ಪರಿಸರದೊಂದಿಗೆ ಹಲವು ಶತಮಾನಗಳಿಂದ ಸಹಜೀವನ ನಡೆಸುತ್ತಾ ಬಂದ ಕುಡುಬಿ ಮತ್ತು ಮರಾಠಿ ಜನಾಂಗದವರಿತ್ತ ಹೆಸರು! ಹಟ್ಟಿ ಎಂದರೆ ನಮ್ಮ ಕಡೆ ದನ, ಎಮ್ಮೆ ಕಟ್ಟುವ ಜಾಗ. ಅಲ್ಲಿರುವ ಕೀಟಗಳನ್ನು ಬೇಟೆಯಾಡಿ ತನ್ನ ಹೊಟ್ಟೆ ಹೊರೆದುಕೊಳ್ಳುವವನೀತ. ಗಂಡುಗಲಿ. ಅಲ್ಲದೆ ಮರಾಠಿಗರ ಹೋಳಿ ಹಬ್ಬದ ಕುಣಿತದಲ್ಲಿ ಧರಿಸುವ ಮುಂಡಾಸು ಅಥವಾ ಕಿರೀಟದ ತುದಿಯಲ್ಲಿ ಇವನ ಚಂದ ಬಾಲವಿದ್ದರೆ ಅದರ ಗತ್ತೇ ಬೇರೆ. ಅವನ ಬಾಲಕ್ಕೆ ಒಳ್ಳೆ ಬೆಲೆ! ಹಾಗೆಂದು ಹಿಡಿಯಲು ಹೋಗಬೇಡಿ. ಫಾರೆಸ್ಟ್ ಡಿಪಾರ್ಟ್‌ಮೆಂಟಿನವರು ಹಿಡಿದಾರು ಜೋಕೆ. ಈಗಾಗಲೇ ಅಳಿವಿನಂಚಿಗೆ ಸರಿದಿದೆ ಸ್ವಾಮಿ.

ಹೇಗಿದ್ದಾನಿವ ಎಂದು ಕೇಳಿದಿರಾ? ತಲೆಯ ಮೇಲೊಂದು ಶಿಖೆ. ಸೀಳಿಕೊಂಡ ಉದ್ದನೆಯ ಬಿಳಿ ಬಾಲ. ಚೂಪು ಕಣ್ಣು, ಎದೆ, ದೇಹವೆಲ್ಲಾ ಕಪ್ಪೆನಿಸುವ ಕಡು ನೀಲಿ. ಅದಕೆ ಮ್ಯಾಚಿಂಗ್ ಆದ ಬಿಳಿ ಪುಕ್ಕ ಮತ್ತು ಅದಕ್ಕೆ ಮ್ಯಾಚಿಂಗ್ ಸುಂದರ ಬಾಲ. ಥೇಟ್ ಸ್ವರ್ಗದಿಂದಿಳಿದು ಬಂದ ದೇವತೆ. ಹಾಗಾಗಿ ಇಂಗ್ಲಿಷ್ ಬಲ್ಲವರು ಪ್ಯಾರಡೈಸ್ ಫ್ಲೈ ಕ್ಯಾಚರ್ ಎಂದು ಹೇಳಿ ನಮ್ಮನ್ನು ತಬ್ಬಿಬ್ಬು ಮಾಡಿದ್ದೂ ಉಂಟು.

ಇರಲಿ, ಇದೊಂದು ಅಗ್ದಿ ನೊಣಹಿಡುಕ. ಹಾಗಾಗಿ ಅಲ್ಲಿಯೇ ಮೀನು ಹೆಂಗಸರ ಬೆನ್ನು ಬಿದ್ದಿದ್ದ. ಹಟ್ಟಿ ಮುದ್ದನ ವಿವಿಧ ಭಂಗಿಯಲ್ಲಿ ಫೋಟೊ ಕ್ಲಿಕ್ಕಿಸಿಕೊಂಡುಬಿಟ್ಟೆ. ನನ್ನ ಕ್ಯಾಮೆರಾ ಇವತ್ತು ತೃಪ್ತಿಯ ತೇಗು ತೇಗಿತ್ತು. ಫೋಟೊ ಕ್ಲಿಕ್ಕಿಸಿಕೊಂಡ ಖುಷಿಯಲ್ಲಿ ಆತನೂ ಬಾಲ ಅಲ್ಲಾಡಿಸುತ್ತಾ ಹಾರಿಹೋದ!

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಗಣಿತದಲ್ಲಿ ಗರ್ದಿ ಗಮ್ಮತ್ತು

ತಿರುಗು ಮುರುಗು ತಮಾಷೆ

ಇಲ್ಲಿರುವ ಸಂಖ್ಯೆಗಳನ್ನು ಕೂಡಿಸಿ ನೋಡಿ. ಉತ್ತರ 5074 ಬರುತ್ತದೆ. ನಂತರ ಸಂಖ್ಯೆಗಳನ್ನು ತಲೆಕೆಳಗೆ ಮಾಡಿ ಕೂಡಿಸಿ ನೋಡಿ. ಆಗಲೂ 5074 ಬರುವುದು. ಏಕೆಂಬುದು ಸ್ವಲ್ಪ ಯೋಚಿಸಿದರೆ ನಿಮಗೇ ತಿಳಿದೀತು.

5074 (ತಲೆಕೆಳಗೆ)

986
818
\+ 969 +
989
696
616

5074



ಅದಲು ಬದಲು ಕಂಚಿ ಕದಲು...

ಇಲ್ಲಿರುವ ಪದಗಳ ಅಕ್ಷರಗಳನ್ನು ಬಳಸಿಕೊಂಡು ಅಷ್ಟೇ ಅಕ್ಷರಗಳ ಬೇರೊಂದು ಪದ ರಚಿಸಬಲ್ಲಿರಾ?

1. ಯಾವ ಮಾತಿಗೆ ಸಿಟ್ಟು = ________
2. ಸರದ ವಾಣಿ = ________
3. ಅರ ಹೊಳೆದ = ________
4. ಕುರ ಮಾಸು = ________

ತಿಳಿ - ಸಾರು!

ಊಟವಾದ ಬಳಿಕ ಸ್ವಲ್ಪ ಬಿಳಿ ಎಳ್ಳನ್ನು ಜಗಿಯುತ್ತಿದ್ದರೆ ಹಲ್ಲಿನ ಅನೇಕ ಸಮಸ್ಯೆಗಳು ನಿವಾರಣೆಯಾಗುತ್ತವೆಯಂತೆ.

ಮಜ ಮಜ ಮಜಕೂರದ ಸೆಪ್ಟೆಂಬರ್ 19ರ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪದ ಹಿಗ್ಗು

ಇಲ್ಲಿ ಕೊಟ್ಟಿರುವ ಮಧ್ಯದ ಅಕ್ಷರಕ್ಕೆ ಮೇಲಿನ ಪಟ್ಟಿಯ ಪದವನ್ನು ಹಿಗ್ಗಿಸಿ ಆಚೀಚೆ ತುಂಬಿದರೆ ಮೂರು ಅಕ್ಷರದ ಪದವಾಗುತ್ತದೆ ಹೊಂದಿಸಿ.

1. ಬಾಲೆ 2. ಸಸ್ಯ 3. ಸಂತ 4. ಮರ 5. ಕರು 6.ಸತಿ 7. ದರ 8. ಸಂತೆ

1.		ಹಿ	
2.		ದ	
3.		ಮ	
4.		ಡಾ	
5.		ಣ	
6.		ಗೀ	
7.		ಮೀ	
8.		ಕ	

ಟ್ವೆಂಟಿ – 20 ಮ್ಯಾಚ್

ನಿಮ್ಮ ಜಿ.ಕೆ ಎಷ್ಟು ಓಕೆ? ಹೊಂದಿಸಿ

1. ನಿದ್ರಿಸುತ್ತಲೇ ಇರುವ ಪಕ್ಷಿ	A. ನಾಕುತಂತಿ
2. ಜಗತ್ತಿನ ಎಲ್ಲಾ ರಾಷ್ಟ್ರಗಳಲ್ಲಿ ಕಂಡು ಬರುವ ಪಕ್ಷಿ	B. ಸಮಗ್ರ ಸಾಹಿತ್ಯ
3. ಪಂಜಾಬಿನ ಕೇಸರಿ	C. ಧಾರವಾಡ
4. ಲೋಕಮಾನ್ಯ	D. ಸತಿಸುಲೋಚನ,
5. ಟೆಲಿಫೋನ್	E. ಹಂಪಿ
6. ಟೆಲಿಸ್ಕೋಪ್	F. ಬಿಸ್ಮಿಲ್ಲಾಖಾನ್
7. ಬಣ್ಣದ ಟಿ.ವಿ ತಯಾರಿಸಿದ ಮೊತ್ತಮೊದಲ ದೇಶ	G. ಅಮರಶಿಲ್ಪಿ ಜಕಣಾಚಾರಿ
8. ಬೇವಿನ ಮರಗಳೇ ಇಲ್ಲದ ದೇಶ	H. ಸಿತಾರ
9. ಭಾರತದಲ್ಲಿ ರಿಸರ್ವ್ ಬ್ಯಾಂಕ್ ಸ್ಥಾಪನೆಯಾದದ್ದು	I. ಕೋಲ್ಕತ್ತ
10. ಭಾರತದಲ್ಲಿ ಜೀವ ವಿಮಾ ನಿಗಮ ಅಸ್ತಿತ್ವಕ್ಕೆ ಬಂದಿದ್ದು	J. 1956
11. ಗ್ರೀನ್ ಪಾರ್ಕ್ ಆಟದ ಮೈದಾನ	K. ಜರ್ಮನಿ
12. ಈಡನ್ ಗಾರ್ಡನ್	L. ಬಾತುಕೋಳಿ
13. ಕನ್ನಡ ವಿಶ್ವವಿದ್ಯಾಲಯ	M. ಫ್ರಾನ್ಸ್
14. ಕರ್ನಾಟಕ ವಿಶ್ವವಿದ್ಯಾಲಯ	N. ಬಾಲಗಂಗಾಧರ ತಿಲಕ್
15. ಕನ್ನಡದ ಮೊದಲ ವರ್ಣಚಿತ್ರ	O. 1935
16. ಕನ್ನಡದ ಮೊದಲ ವಾಕ್‌ಚಿತ್ರ	P. ಗೆಲಿಲಿಯೊ
17. ರವಿಶಂಕರ	Q. ಕೋಳಿ
18. ಶಹನಾಯಿ	R. ಲಾಲಾ ಲಜಪತ್ ರಾಯ್
19. ಯು.ಆರ್.ಅನಂತಮೂರ್ತಿ	S. ಕಾನ್ಪುರ
20. ದ.ರಾ.ಬೇಂದ್ರೆ	T. ಗ್ರಹಾಂಬೆಲ್

ಡಣ್ಣ ಚಕ್ಕು ಕೀಟ್ರಪ್ಪ ಕಥೆಯ: ಕೋಳಿಯ ಕೂಗು ಮತ್ತು ಅಜ್ಜಿಯ ಜಂಭ

• ಕಲೆ-ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ



ಮಲೆನಾಡಿನ ಒಂದು ಪುಟ್ಟ ಹಳ್ಳಿ ಸೋಮನಹಳ್ಳಿ. ಆ ಊರಿನಲ್ಲಿ ಒಬ್ಬ ಅಜ್ಜಿಯೂ ಇದ್ದಳು. ಅವಳ ಬಳಿ ಒಂದು ಕೋಳಿಯೂ ಇತ್ತು. ದಿನಾ ಬೆಳಗಾದರೆ ಅದು ಕೂಗುತ್ತಿತ್ತು



ಪ್ರತಿದಿನ ಸೂರ್ಯೋದಯದ ಬಳಿಕ ಸೋಮನಹಳ್ಳಿ ವಾತಾವರಣ ಎಂದಿನಂತೆಯೇ ಇರುತ್ತಿತ್ತು. ಹೊತ್ತು ಏರಿದಂತೆ ದನಕರುಗಳು ಮೇಯಲು ಅಡವಿಯತ್ತ ಹೋಗುತ್ತಿದ್ದವು



ರೈತರು ತಮ್ಮ ಹೊಲಗಳಿಗೆ ತೆರಳಿ, ಕೃಷಿ ಚಟುವಟಿಕೆಗಳಲ್ಲಿ ತೊಡಗುತ್ತಿದ್ದರು. ವಿರಾಮದ ವೇಳೆಯಲ್ಲಿ ಲೋಕಾಭಿರಾಮವಾಗಿ ಹರಟೆ ಹೊಡೆಯುತ್ತಿದ್ದರು



ಸೋಮನಹಳ್ಳಿ ಅಜ್ಜಿ ತನ್ನ ಕೋಳಿ ಕೂಗಿದ್ದರಿಂದಲೇ ಜಗತ್ತಿಗೆಲ್ಲ ಬೆಳಗಾಗಿದೆ, ಈ ಊರಿನ ಚಟುವಟಿಕೆಗಳೂ ನಡೆಯುತ್ತಿವೆ ಎಂದು ಜಂಭದಿಂದ ಹೇಳುತ್ತಿದ್ದಳು



ಊರಿನ ಇತರ ಕೋಳಿಗಳಂತೆಯೇ ಅಜ್ಜಿಯ ಕೋಳಿಯೂ ಕೂಗುತ್ತಿತ್ತು. ಬೆಳಕು ಹರಿದಿದ್ದರಿಂದ ಕೋಳಿ ಕೂಗಿದೆಯೇ ಹೊರತು ಕೋಳಿ ಕೂಗಿದ್ದರಿಂದ ಬೆಳಕು ಹರಿದಿಲ್ಲ ಎಂಬುದು ಅಜ್ಜಿಗೆ ಹೊಳೆಯಲಿಲ್ಲ



ಅಜ್ಜಿ ಜಂಭ ಹೆಚ್ಚಾದಾಗ ಊರ ಗೌಡ ಅವಳನ್ನು ಕೋಳಿ ಸಹಿತ ಕಾಡಿಗೆ ಕಳುಹಿಸಿದ. ಮಾರನೇ ದಿನ ಅವಳ ಕೋಳಿಯ ಕೂಗಿಲ್ಲದಿದ್ದರೂ ಊರಿನಲ್ಲಿ ಬೆಳಕು ಹರಿದಿದ್ದು ತಿಳಿದು ಅವಳ ಜಂಭ ಇಳಿಯಿತು

ಶಬ್ದಗಳೊಡನೆ ಸರಸ

ಪದ ಸಂಕಲನ

1. ಇಲ್ಲಿ ಆರು ಜನ ಸ್ನೇಹಿತರು ತಮ್ಮ ಹೆಸರನ್ನು ಬರೆದಿದ್ದಾರೆ. ಅವರ ಸವಾಲೆಂದರೆ, ನೀವು ಅವರ ಹೆಸರ ಹಿಂದೆ ಒಂದಕ್ಷರ ತುಂಬಿದ್ದರೆ- ಅವರ ಹೆಸರುಗಳೇ ಮಾಯವಾಗಿ ಪದಗಳಾಗುತ್ತವಂತೆ. ನೀವು ಹಿಂದೆ ಯಾವ ಹೆಸರಿಗೆ ಯಾವ ಅಕ್ಷರ ತುಂಬುತ್ತೀರಿ. ಯೋಚಿಸಿ.

1. __ ಹರಿ
2. __ ರಂಗ
3. __ ಗೋಪಿ
4. __ ರಾಜು
5. __ ಮಾನು
6. __ ಕುಶ



2. ಇದೊಂದು ವಿಶೇಷ ಪದ. ಆರಂಭದ ಅಕ್ಷರ ಸ್ಥಿರವಾಗಿದ್ದುಕೊಂಡು ಅದಕ್ಕೆ ಮುಂದಿನ ಎಲ್ಲ ಅಕ್ಷರ ಜೋಡಿಸುತ್ತಾ ಹೋದರೆ ಎಲ್ಲವೂ ಪದಗಳೇ.

ಹೇ ಳಿ ಮಾ ಡಿ ಸು

ಕಳೆದ ಸಂಚಿಕೆಯ ಸರಿ ಉತ್ತರಗಳು

ಟ್ವೆಂಟಿ-20 ಮ್ಯಾಚ್:
ಅ. ವಿಭಾಗ: 1-D, 2-C, 3-B, 4-E, 5-A
ಬ. ವಿಭಾಗ: 1-D, 2-C, 3-B, 4-E, 5-A
ಕ. ವಿಭಾಗ: 1-D, 2-C, 3-B, 4-E, 5-A
ಡ. ವಿಭಾಗ: 1-C, 2-A, 3-D, 4-E, 5-B

ಪದ ಹಿಗ್ಗು:
1. ಹುರುಳಿ 2. ಬೆಳ್ಳುಳ್ಳಿ 3. ಕಾವೇರಿ 4. ಕೇಸರಿ
5. ಕಹಳೆ 6. ಸಮರ 7. ತುರಿಸು 8. ಹಳದಿ

ಶಬ್ದಗಳೊಡನೆ ಸರಸ:
1 ಲಂಬೋದರ 2. ಗಣಪತಿ 3. ಏಕದಂತ 4. ಕರಿಮುಖ
5. ಗಜಾನನ 6. ವಿಘ್ನೇಶ್ವರ 7. ವಿನಾಯಕ
2. 1. ನಾವಿಕ 2. ನಾಮಿಕ 3. ನಾಸಿಕ
4. ನಾಯಕ 5. ನಾಟಕ 6. ನಾಸ್ತಿಕ

ಅದಲು ಬದಲು ಕಂಚಿ ಕದಲು:
1. ಹರಿದಾಸ 2. ವರದಾನ
3. ಚಿಕ್ಕಮ್ಮನ ಮನೆ 4. ಜನಮಾನಸ

ಸರಿ ಉತ್ತರ ನೀಡಿದ ಆಯ್ದ ಮೂವರು ಪುಟಾಣಿಗಳು



ಪದ್ಮಾವತಿ ಮುತ್ತಿನ ನರಗುಂದ (ಗದಗ)



ಪ್ರತಿಜ್ಞಾ ಎಂ., ಬನವಾಸಿ (ಉತ್ತರ ಕನ್ನಡ)



ಉಜ್ಮಾ ಕೌಸರ್, ಮಧುಗಿರಿ (ತುಮಕೂರು)

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.

ಉತ್ತರ ಕಳುಹಿಸಲು ಇ- ಮೇಲ್ ವಿಳಾಸ:

majakoora@prajavani.co.in



ರಾಯಲ್ ಚಾಲೆಂಜರ್ಸ್ ಬೆಂಗಳೂರು–ಚಾಂಪಿಯನ್ ಮುಂಬೈ ಇಂಡಿಯನ್ಸ್ ಮುಖಾಮುಖಿ

ಇಬ್ಬರು 'ನಾಯಕರ' ಪರೀಕ್ಷೆ

ದುಬೈ (ಪಿಟಿಐ): ಭಾರತ ಟ್ವಿಂಟಿ-20 ಕ್ರಿಕೆಟ್ ತಂಡದ ನಾಯಕತ್ವ ಬಿಡಲಿರುವ ವಿರಾಟ್ ಕೊಹ್ಲಿ ನಂತರ ಆ ಸ್ಥಾನಕ್ಕೆ ಏರಲಿರುವ ರೋಹಿತ್ ಶರ್ಮಾ ಭಾನುವಾರ ಐಪಿಎಲ್ ಅಂಗಳದಲ್ಲಿ ಮುಖಾಮುಖಿಯಾಗಲಿದ್ದಾರೆ.

ವಿರಾಟ್ ನಾಯಕತ್ವದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ರೋಹಿತ್ ಮುನ್ನಡೆಸು-ತ್ತಿರುವ ಮುಂಬೈ ಇಂಡಿಯನ್ಸ್ ತಂಡಗಳಿಗೆ ಈ ಪಂದ್ಯ ಅಗ್ನಿಪರೀಕ್ಷೆಯಾಗಿದೆ. 14ನೇ ಆವೃತ್ತಿಯ ಎರಡನೇ ಹಂತದ ಟೂರ್ನಿಯಲ್ಲಿ ಉಭಯ ತಂಡಗಳು ಗೆಲುವಿನ ಮುಖ ನೋಡಿಲ್ಲ. ಆದರೆ, ಮೊದಲ ಹಂತದ ಸಾಧನೆಯಿಂದಾಗಿ ಆರ್‌ಸಿಬಿ 10 ಪಾಯಿಂಟ್‌ಗಳೊಂದಿಗೆ ಅಗ್ರ ನಾಲ್ಕರಲ್ಲಿದೆ. ಹಾಲಿ ಚಾಂಪಿಯನ್ ಮುಂಬೈ ಎಂಟು ಅಂಕಗಳೊಂದಿಗೆ ಆರನೇ ಸ್ಥಾನದಲ್ಲಿದೆ. ಎರಡೂ ತಂಡಗಳು ತಲಾ ಒಂಬತ್ತು ಪಂದ್ಯಗಳನ್ನು ಆಡಿವೆ.

ಶುಕ್ರವಾರ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಎದುರು ವಿರಾಟ್ ಮತ್ತು ದೇವದತ್ತ ಪಡಿಕ್ಕಲ್ ಶತಕದ ಜೊತೆಯಾಟ (111 ರನ್)ಆಡಿ ಅಮೋಘ ಆರಂಭ ನೀಡಿದ್ದರು. ಆದರೆ, ಅದರ ಮೇಲೆ ಬೃಹತ್ ಮೊತ್ತ ಪೇರಿಸುವಲ್ಲಿ ಮಧ್ಯಮಕ್ರಮಾಂಕದ ಬ್ಯಾಟ್ಸ್‌ಮನ್‌ಗಳು ವಿಫಲರಾ-ಗಿದ್ದರು. ವಿಶೇಷವಾಗಿ ಗ್ಲೆನ್ ಮ್ಯಾಕ್ಸ್‌ವೆಲ್ ಮತ್ತು ಎಬಿ ಡಿವಿಲಿಯರ್ಸ್ ತಮ್ಮ ನೈಜ ಲಯಕ್ಕೆ ಮರಳಿದರೆ ತಂಡದ ಚಿಂತೆ ದೂರವಾಗಬಹುದು.

ಅರ್ಧಶತಕ ಗಳಿಸಿದ ವಿರಾಟ್ ಲಯಕ್ಕೆ ಮರಳಿರುವುದು ಸಮಾಧಾನ ಮೂಡಿಸಿದೆ. ಆದರೆ, ಹರ್ಷಲ್ ಪಟೇಲ್ ಮತ್ತು ಯಜುವೇಂದ್ರ ಚಾಹಲ್ ಅವರಿಗೆ ಉಳಿದ ಬೌಲರ್‌ಗಳ ಬೆಂಬಲವೂ ಸಿಕ್ಕರೆ ಎದುರಾಳಿ ತಂಡವನ್ನು ಕಟ್ಟಿಹಾಕುವುದು ಸುಲಭವಾಗಬಹುದು.

ಮುಂಬೈ ತಂಡದಲ್ಲಿಯೂ ಇಂತಹದೇ ಸಮಸ್ಯೆಗಳಿವೆ. ರೋಹಿತ್, ಕ್ವಿಂಟನ್ ಡಿ ಕಾಕ್ ಉತ್ತಮ ಆರಂಭ ನೀಡಿದರೂ, ಸೂರ್ಯಕುಮಾರ್ ಯಾದವ್ ಅವರ ಸ್ಥಿರತೆ ಚಿಂತೆಗೆ ಕಾರಣ. ಇಶಾನ್ ಕಿಶನ್, ಪೊವೆಲ್, ಕೃಣಾಲ್ ಪಾಂಡ್ಯ ಅವರ ಲಯವೂ ಅಸ್ಥಿರವಾಗಿದೆ. ಇದರಿಂದಾಗಿ ಬೌಲರ್‌ಗಳೇ ಪಂದ್ಯ-ವಿಜಯಿಗಳಾಗುವ ಒತ್ತಡವಿದೆ. ಜಸ್‌ಪ್ರೀತ್ ಬೂಮ್ರಾ, ಆ್ಯಡಂ ಮಿಲ್ನೆ, ಟ್ರೆಂಟ್ ಬೌಲ್ಟ್ ಮತ್ತು ರಾಹುಲ್ ಚಾಹರ್ ಅವರ ಮೇಲೆ ನಿರೀಕ್ಷೆಯ ಭಾರವಿದೆ.




ವಿರಾಟ್ ಕೊಹ್ಲಿ

ಮುಖ್ಯಾಂಶಗಳು

- ಎರಡನೇ ಸುತ್ತಿನಲ್ಲಿ ತಲಾ ಎರಡು ಪಂದ್ಯ ಸೋತಿರುವ ಉಭಯ ತಂಡಗಳು
- ಚೆನ್ನೈ ತಂಡದ ಎದುರು ವಿರಾಟ್–ದೇವದತ್ತ 111 ರನ್‌ಗಳ ಜೊತೆಯಾಟ

ಆರ್‌ಸಿಬಿ–ಮುಂಬೈ



7 ಪಂದ್ಯಗಳು
ಯುಎಇಯಲ್ಲಿ ಆರ್‌ಸಿಬಿ ಸೋತಿರುವ ಒಟ್ಟು ಪಂದ್ಯಗಳು. ಹೋದ ವರ್ಷದ ಆವೃತ್ತಿಯಲ್ಲಿ ಐದು ಮತ್ತು ಈಗ ಎರಡು

2 ವಿಕೆಟ್
ಮೊದಲ ಸುತ್ತಿನಲ್ಲಿ ಆರ್‌ಸಿಬಿಯು ಮುಂಬೈ ಎದುರು ಜಯಿಸಿತ್ತು

ಆರಂಭ: ರಾತ್ರಿ 7.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಮೊದಲು ಬ್ಯಾಟಿಂಗ್ ಮಾಡಿ ಜಯ

ಆರ್‌ಸಿಬಿ	ಮುಂಬೈ
5	10

ಚೇಸಿಂಗ್ ಗೆಲುವು

ಆರ್‌ಸಿಬಿ	ಮುಂಬೈ
6	9




ರೋಹಿತ್ ಶರ್ಮಾ

ತಂಡಗಳು

ರಾಯಲ್ ಚಾಲೆಂಜರ್ಸ್ ಬೆಂಗಳೂರು: ವಿರಾಟ್ ಕೊಹ್ಲಿ (ನಾಯಕ), ದೇವದತ್ತ ಪಡಿಕ್ಕಲ್, ಎಬಿ ಡಿವಿಲಿಯರ್ಸ್, ನವದೀಪ್ ಸೈನಿ, ಗ್ಲೆನ್ ಮ್ಯಾಕ್ಸ್‌ವೆಲ್, ಡ್ಯಾನ್ ಕ್ರಿಸ್ಟಿಯನ್, ರಜತ್ ಪಾಟೀದಾರ್, ದುಷ್ಮಂತಾ ಚಾಮೀರಾ, ಪವನ್ ದೇಶಪಾಂಡೆ, ಮೊಹಮ್ಮದ್ ಸಿರಾಜ್, ಹರ್ಷಲ್ ಪಟೇಲ್, ಮೊಹಮ್ಮದ್ ಅಜರುದ್ದೀನ್, ಸಚಿನ್ ಬೇಬಿ, ವನಿಂದು ಹಸರಂಗ, ಜಾರ್ಜ್ ಗಾರ್ಟನ್, ಯಜುವೇಂದ್ರ ಚಾಹಲ್, ಶಾಬಾಜ್ ಅಹಮದ್, ಕೈಲ್ ಜೆಮಿಸನ್, ಸುಯಶ್ ಪ್ರಭುದೇಸಾಯಿ, ಕೆ.ಎಸ್. ಭರತ್, ಟಿಮ್ ಡೇವಿಡ್, ಆಕಾಶದೀಪ್.

ಮುಂಬೈ ಇಂಡಿಯನ್ಸ್: ರೋಹಿತ್ ಶರ್ಮಾ (ನಾಯಕ), ಕ್ವಿಂಟನ್ ಡಿ ಕಾಕ್, ಇಶಾನ್ ಕಿಶನ್, ಸೂರ್ಯಕುಮಾರ್ ಯಾದವ್, ಆದಿತ್ಯ ತಾರೆ, ಅನ್ಮೋಲ್‌ಪ್ರೀತ್ ಸಿಂಗ್, ಕ್ರಿಸ್ ಲಿನ್, ಸೌರಭ್ ತಿವಾರಿ, ಅನುಕೂಲ್ ರಾಯ್, ಅರ್ಜುನ್ ತೆಂಡೂಲ್ಕರ್, ಹಾರ್ದಿಕ್ ಪಾಂಡ್ಯ, ಕೃಣಾಲ್ ಪಾಂಡ್ಯ, ಜೇಮ್ಸ್ ನಿಶಾಮ್, ಜಯಂತ್ ಯಾದವ್, ಕೀರನ್ ಪೊಲಾರ್ಡ್, ಆ್ಯಡಂ ಮಿಲ್ನೆ, ಜಸ್‌ಪ್ರೀತ್ ಬೂಮ್ರಾ, ನೇಥನ್ ಕೌಲ್ಟರ್ ನೈಲ್, ಪಿಯೂಷ್ ಚಾವ್ಲಾ, ರಾಹುಲ್ ಚಾಹರ್, ಟ್ರೆಂಟ್ ಬೌಲ್ಟ್.



ಶ್ರೇಯಸ್ ಅಯ್ಯರ್ ಅವರ ಬ್ಯಾಟಿಂಗ್ ಶೈಲಿ –ಪಿಟಿಐ ಚಿತ್ರ

ಸಂಜು ಅರ್ಧಶತಕ ವ್ಯರ್ಥ: ಬೌಲರ್‌ಗಳ ಪಾರಮ್ಯ

ಡೆಲ್ಲಿ ಕ್ಯಾಪಿಟಲ್ಸ್‌ಗೆ 'ರಾಯಲ್' ಗೆಲುವು

ಅಬುಧಾಬಿ (ಪಿಟಿಐ): ಸಾಧಾರಣ ಮೊತ್ತ ಕಲೆ ಹಾಕಿದರೂ ಬೌಲಿಂಗ್‌ನಲ್ಲಿ ಎದುರಾಳಿ ತಂಡವನ್ನು ನಿಯಂತ್ರಿಸಿದ ಡೆಲ್ಲಿ ಕ್ಯಾಪಿಟಲ್ಸ್ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಶನಿವಾರ ಅಮೋಘ ಜಯ ಸಾಧಿಸಿತು. ರಾಜಸ್ಥಾನ್ ರಾಯಲ್ಸ್ ತಂಡವನ್ನು 33 ರನ್‌ಗಳಿಂದ ಮಣಿಸಿದ ತಂಡ ಪಾಯಿಂಟ್ ಪಟ್ಟಿಯಲ್ಲಿ ಮತ್ತೆ ಅಗ್ರಸ್ಥಾನಕ್ಕೇರಿತು. ಇದು ತಂಡದ ಸತತ ನಾಲ್ಕನೇ ಜಯವಾಗಿದೆ.

155 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ರಾಜಸ್ಥಾನ್ ಮೊದಲ ಓವರ್‌ನಲ್ಲೇ ವಿಕೆಟ್ ಕಳೆದುಕೊಂಡಿತು. ನಂತರ ತಂಡದ ಬ್ಯಾಟರ್‌ಗಳು ಒಬ್ಬರ ಹಿಂದೆ ಒಬ್ಬರು ಪೆವಿಲಿಯನ್ ಕಡೆಗೆ ಹೆಜ್ಜೆ ಹಾಕಿದರು. ಹೀಗಾಗಿ ಆರು ವಿಕೆಟ್‌ಗಳಿಗೆ 121 ರನ್ ಗಲಿಸಲಷ್ಟೇ ತಂಡ ಸಮರ್ಥವಾಯಿತು.

ಮೂರನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದ ನಾಯಕ ಸಂಜು ಸ್ಯಾಮ್ಸನ್ (70; 53 ಎಸೆತ, 8 ಬೌಂಡರಿ, 1 ಸಿಕ್ಸರ್) ಔಟಾಗದೇ ಉಳಿದರೂ ತಂಡವನ್ನು ಗೆಲುವಿನ ದಡ ಸೇರಿಸಲು ಆಗಲಿಲ್ಲ. ಸಂಜು ಮತ್ತು ಮಹಿಪಾಲ್ ಲೊಮ್ರೊರ್ ಅವರನ್ನು ಬಿಟ್ಟರೆ ಉಳಿದ ಯಾರಿಗೂ ಎರಡಂಕಿ ಮೊತ್ತ ದಾಟಲು ಆಗಲಿಲ್ಲ.

ದಾಳಿ ನಡೆಸಿದ ಎಲ್ಲ ಬೌಲರ್‌ಗಳು ಕೂಡ ವಿಕೆಟ್ ಕಬಳಿಸಿ ಮಿಂಚಿದರು. ವಿಕೆಟ್ ಹಿಂದೆ ಕೈಚಳಕ ತೋರಿದ ರಿಷಭ್ ಪಂತ್ ಎರಡು ಕ್ಯಾಚ್‌ಗಳನ್ನು ಪಡೆದದ್ದಲ್ಲದೆ ಡೇವಿಡ್ ಮಿಲ್ಲರ್ ಅವರನ್ನು ಸ್ಟಂಪ್ ಔಟ್ ಮಾಡಿಯೂ ತಂಡದ ಗೆಲುವಿಗೆ ಪ್ರಮುಖ ಕಾಣಿಕೆ ನೀಡಿದರು.

ಅಯ್ಯರ್–ಪಂತ್ ಜೊತೆಯಾಟದ ಸೊಗಸು: ಟಾಸ್ ಗೆದ್ದ ರಾಜಸ್ಥಾನ್ ರಾಯಲ್ಸ್ ಎದುರಾಳಿ ತಂಡವನ್ನು ಬ್ಯಾಟಿಂಗ್‌ಗೆ ಆಹ್ವಾನಿಸಿತು. ಮುಸ್ತಫಿಜುರ್ ರಹಿಮಾನ್ ಮತ್ತು ಚೇತನ್ ಸಕಾರಿಯ ಅವರ ಪರಿಣಾಮಕಾರಿ ದಾಳಿಯ ನೆರವಿನಿಂದ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು 154 ರನ್‌ಗಳಿಗೆ ನಿಯಂತ್ರಿಸಲು ರಾಯಲ್ಸ್‌ಗೆ ಸಾಧ್ಯವಾಯಿತು.

21 ರನ್ ಗಳಿಸುವಷ್ಟರಲ್ಲಿ ಡೆಲ್ಲಿ ತಂಡ ಆರಂಭಿಕ ಜೋಡಿಯನ್ನು ಕಳೆದುಕೊಂಡಿತ್ತು. ಈ ಹಂತದಲ್ಲಿ ಶ್ರೇಯಸ್ ಅಯ್ಯರ್ ಮತ್ತು ರಿಷಭ್ ಪಂತ್ ಆಸರೆಯಾದರು. ಮೂರನೇ ವಿಕೆಟ್‌ಗೆ 62 ರನ್‌ಗಳ ಜೊತೆಯಾಟವಾಡಿದ ಅವರು ಇನಿಂಗ್ಸ್‌ಗೆ ಚೇತರಿಕೆ ತುಂಬಿದರು. ರಿಷಭ್ ಪಂತ್ ಔಟಾದ ನಂತರ ಶಿಮ್ರಾನ್ ಹೆಟ್ಮೆಯರ್ ಆಕ್ರಮಣಕಾರಿ ಬ್ಯಾಟಿಂಗ್ ಮೂಲಕ ವೇಗವಾಗಿ ರನ್ ಗಳಿಸಿಕೊಟ್ಟರು.

ರಾಜಸ್ಥಾನ್‌ಗೆ ಮೂರು ಬಾರಿ ಚೋಕ್: ಡೆಲ್ಲಿ ಕ್ಯಾಪಿಟಲ್ಸ್ ತಂಡ ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಈ ವರೆಗೆ ಮೂರು ಬಾರಿ 154 ಅಥವಾ ಕಡಿಮೆ ಮೊತ್ತ ಗಳಿಸಿದ್ದರೂ ಜಯ ಗಳಿಸಿದೆ. ಈ ಮೂರು ಗೆಲುವು ಕೂಡ ರಾಜಸ್ಥಾನ್ ರಾಯಲ್ಸ್ ಎದುರು ಆಗಿತ್ತು. ಈಗ ಡೆಲ್ಲಿ ಬಳಿ 16 ಪಾಯಿಂಟ್‌ಗಳು ಇವೆ. ತಂಡ ಪ್ಲೇ ಆಫ್ ಹಂತಕ್ಕೇರಿರುವುದು ಅಧಿಕೃತವಾಗಿ ಘೋಷಣೆಯಾಗಿಲ್ಲ. ಆದರೆ 16 ಪಾಯಿಂಟ್‌ಗಳನ್ನು ಗಳಿಸಿದ ಯಾವ ತಂಡವೂ ಈ ವರೆಗೆ ಪ್ಲೇ ಆಫ್ ಹಂತಕ್ಕೇರದೆ ವಾಪಸಾಗಿಲ್ಲ ಎಂಬುದು ಗಮನಾರ್ಹ.

ಸ್ಕೋರ್ ಕಾರ್ಡ್

ಡೆಲ್ಲಿ ಕ್ಯಾಪಿಟಲ್ಸ್ 6ಕ್ಕೆ 154 (20 ಓವರ್)
ಪೃಥ್ವಿ ಸಿ ಲಿವಿಂಗ್‌ಸ್ಟೋನ್ ಬಿ ಸಕಾರಿಯ 10 (12 ಎ), ಶಿಖರ್ ಬಿ ತ್ಯಾಗಿ 8 (8 ಎ, 4x1), ಶ್ರೇಯಸ್ ಸಿ ಸಂಜು ಬಿ ತೆವಾಟಿಯಾ 43 (32 ಎ, 4x1, 6x2), ರಿಷಭ್ ಬಿ ಮುಸ್ತಫಿಜುರ್ 24 (24 ಎ, 4x2), ಹೆಟ್ಮೆಯರ್ ಸಿ ಸಕರಿಯಾ ಬಿ ಮುಸ್ತಫಿಜುರ್ 28 (16 ಎ, 4x5), ಲಲಿತ್ ಔಟಾಗದೆ 14 (15 ಎ, 4x1), ಅಕ್ಷರ್ ಸಿ ಮಿಲ್ಲರ್ ಬಿ ಸಕಾರಿಯ 12 (7 ಎ, 6x1), ಅಶ್ವಿನ್ ಔಟಾಗದೆ 6 (6 ಎ)
ಇತರೆ (ಬೈ 2, ಲೆಗ್‌ಬೈ 1, ವೈಡ್ 6) 9
ವಿಕೆಟ್ ಪತನ: 1-18 (ಶಿಖರ್ ಧವನ್, 3.1), 2-21 (ಪೃಥ್ವಿ ಶಾ, 4.1), 3-83 (ರಿಷಭ್ ಪಂತ್, 11.4), 4-90 (ಶ್ರೇಯಸ್ ಅಯ್ಯರ್, 13.2), 5-121 (ಶಿಮ್ರಾನ್ ಹೆಟ್ಮೆಯರ್, 16.3), 6-142 (ಅಕ್ಷರ್ ಪಟೇಲ್, 18.2)
ಬೌಲಿಂಗ್: ಮುಸ್ತಫಿಜುರ್ ರಹಿಮಾನ್ 4–0–22–2, ಮಹಿಪಾಲ್ ಲೊಮ್ರೊರ್ 1–0–5–0, ಚೇತನ್ ಸಕಾರಿಯ 4–0–33–2, ಕಾರ್ತಿಕ್ ತ್ಯಾಗಿ 4–0–40–1, ತಬ್ರೇಜ್ ಶಂಸಿ 4–0–34–0, ರಾಹುಲ್ ತೆವಾಟಿಯಾ 3–0–17–1

ರಾಜಸ್ಥಾನ್ ರಾಯಲ್ಸ್ 6ಕ್ಕೆ 121 (20 ಓವರ್)
ಲಿವಿಂಗ್‌ಸ್ಟೋನ್ ಸಿ ಪಂತ್ ಬಿ ಆವೇಶ್ 1 (3 ಎ), ಜೈಸ್ವಾಲ್ ಸಿ ಪಂತ್ ಬಿ ನಾರ್ಕಿಯ 5 (4 ಎ), ಸಂಜು ಔಟಾಗದೆ 70 (53 ಎ, 4x8, 6x1), ಮಿಲ್ಲರ್ ಸ್ಟಂಪ್ಡ್ ಪಂತ್ ಬಿ ಅಶ್ವಿನ್ 7 (10 ಎ), ಲೊಮ್ರೊರ್ ಸಿ ಆವೇಶ್ ಬಿ ರಬಾಡ 19 (24 ಎ, 6x1), ಪರಾಗ್ ಬಿ ಅಕ್ಷರ್ 2 (7 ಎ), ತೆವಾಟಿಯಾ ಸಿ ಹೆಟ್ಮೆಯರ್ ಬಿ ನಾರ್ಕಿಯ 9 (15 ಎ), ಸಂಶಿ ಔಟಾಗದೆ 2 (4 ಎ)
ಇತರೆ (ಲೆಗ್ ಬೈ 1, ವೈಡ್ 5) 6
ವಿಕೆಟ್ ಪತನ: 1-6 (ಲಿಯಾಮ್ ಲಿವಿಂಗ್‌ಸ್ಟೋನ್, 0.6), 2-6 (ಯಶಸ್ವಿ ಜೈಸ್ವಾಲ್, 1.1), 3-17 (ಡೇವಿಡ್ ಮಿಲ್ಲರ್, 4.2), 4-48 (ಮಹಿಪಾಲ್ ಲೊಮ್ರೊರ್, 10.2), 5-55 (ರಿಯಾನ್ ಪರಾಗ್, 11.5), 6-99 (ರಾಹುಲ್ ತೇವಟಿಯಾ, 17.2)
ಬೌಲಿಂಗ್: ಆವೇಶ್ ಖಾನ್ 4–0–29–1, ಆ್ಯನ್ರಿಚ್ ನಾರ್ಕಿಯ 4–0–18–2, ರವಿಚಂದ್ರನ್ ಅಶ್ವಿನ್ 4–0–20–1, ಕಗಿಸೊ ರಬಾಡ 4–0–26–1, ಅಕ್ಷರ್ ಪಟೇಲ್ 4–0–27–1

ಫಲಿತಾಂಶ: ಡೆಲ್ಲಿ ಕ್ಯಾಪಿಟಲ್ಸ್‌ಗೆ 33 ರನ್‌ಗಳ ಗೆಲುವು

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಶಿಖರ್ ಧವನ್	ಡೆಲ್ಲಿ	430
ಕೆ.ಎಲ್.ರಾಹುಲ್	ಪಂಜಾಬ್	401
ಡುಪ್ಲೆಸಿ	ಚೆನ್ನೈ	351

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಹರ್ಷಲ್	ಆರ್‌ಸಿಬಿ	19
ಆವೇಶ್ ಖಾನ್	ಡೆಲ್ಲಿ	15
ಕ್ರಿಸ್ ಮೊರಿಸ್	ರಾಜಸ್ತಾನ್	14

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ
ಡೆಲ್ಲಿ ಕ್ಯಾಪಿಟಲ್ಸ್	10	8	2	00	00	16
ಚೆನ್ನೈ ಸೂಪರ್ ಕಿಂಗ್ಸ್	9	7	2	00	00	14
ಬೆಂಗಳೂರು	9	5	4	00	00	10
ಕೋಲ್ಕತ್ತ ನೈಟ್ ರೈಡರ್ಸ್	9	4	5	00	00	8
ಪಂಜಾಬ್	10	4	6	00	00	8
ಮುಂಬೈ ಇಂಡಿಯನ್ಸ್	9	4	5	00	00	8
ರಾಜಸ್ತಾನ	9	4	5	00	00	8
ಹೈದರಾಬಾದ್	9	1	8	00	00	2

* ಶನಿವಾರದ ಪಂದ್ಯಗಳ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ
https://www.prajavani.net/cricket

ಸಿಎಸ್‌ಕೆಗೆ ಚೆನ್ನೈ ಹುಡುಗನ ಸವಾಲು

ಆರಂಭ: ಮಧ್ಯಾಹ್ನ 3.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಅಬು ಧಾಬಿ (ಪಿಟಿಐ): ಚೆನ್ನೈ ಹುಡುಗ ವರುಣ್ ಚಕ್ರವರ್ತಿ ಅವರ ತಿರುವು ಪಡೆಯುವ ಎಸೆತಗಳು ಮತ್ತು ಎಕ್ಸ್‌ಟ್ರಾ ಬೌನ್ಸ್ ಒಳಗೊಂಡ ದಾಳಿಯನ್ನು ಮೆಟ್ಟಿನಿಲ್ಲುವ ಸವಾಲು ಚೆನ್ನೈ ಸೂಪರ್ ಕಿಂಗ್ಸ್‌ಗೆ ಎದುರಾಗಿದೆ. ಭಾನುವಾರ ನಡೆಯಲಿರುವ ಪಂದ್ಯದಲ್ಲಿ ಮಹೇಂದ್ರ ಸಿಂಗ್ ಧೋನಿ ನಾಯಕತ್ವದ ಚೆನ್ನೈ ತಂಡ ಕೋಲ್ಕತ್ತ ನೈಟ್ ರೈಡರ್ಸ್ ವಿರುದ್ಧ ಸೆಣಸಲಿದೆ. ಕೋಲ್ಕತ್ತ ತಂಡ ವರುಣ್ ಚಕ್ರವರ್ತಿ ಮೇಲೆ ಭರವಸೆ ಇರಿಸಿಕೊಂಡಿದೆ.


ಐಪಿಎಲ್ ಟೂರ್ನಿಯ ಎರಡನೇ ಹಂತದಲ್ಲಿ ಚೆನ್ನೈ ಮತ್ತು ಕೋಲ್ಕತ್ತ ತಂಡಗಳು ಗೆಲುವಿನ ಹಾದಿಯಲ್ಲಿ ಹೆಜ್ಜೆ ಇರಿಸಿದ್ದು ಆಡಿರುವ ಎರಡೂ ಪಂದ್ಯಗಳನ್ನು ಗೆದ್ದುಕೊಂಡಿವೆ. ಎರಡೂ ತಂಡಗಳು ಹ್ಯಾಟ್ರಿಕ್ ಗೆಲುವಿನ ನಿರೀಕ್ಷೆಯಲ್ಲಿವೆ. ಹೀಗಾಗಿ ಈ ತಂಡಗಳ ನಡುವಿನ ಮುಖಾಮುಖಿ ಹೆಚ್ಚು ಕುತೂಹಲ ಕೆರಳಿಸಿದೆ.



ವರುಣ್ ಚಕ್ರವರ್ತಿ

ಕಳೆದ ಬಾರಿ ಸಿಎಸ್‌ಕೆ ಬ್ಯಾಟರ್‌ಗಳಿಗೆ ವರುಣ್ ಚಕ್ರವರ್ತಿ ಬಹುತೇಕ ಎಲ್ಲ ಪಂದ್ಯಗಳಲ್ಲೂ ತೊಡಕಾಗಿದ್ದರು. ಅವರ ದಾಳಿಯನ್ನು ಎದುರಿಸಲು ಋತುರಾಜ್ ಗಾಯಕವಾಡ್, ಫಫ್ ಡು ಪ್ಲೆಸಿ, ಅಂಬಟಿ ರಾಯುಡು ಮತ್ತು ಧೋನಿ ಪರದಾಡಿದ್ದರು. ಈ ಬಾರಿ ಅವರಿಗೆ ಚೆನ್ನೈ ಆಟಗಾರರು ಯಾವ ರೀತಿ ಉತ್ತರ ನೀಡುತ್ತಾರೆ ಎಂಬುದನ್ನು ಕಾದುನೋಡಬೇಕಿದೆ.

ಚೆನ್ನೈ–ಕೋಲ್ಕತ್ತ



ಮುಖಾಮುಖಿಯಲ್ಲಿ ಗರಿಷ್ಠ ಮೊತ್ತ

ತಂಡ	ಮೊತ್ತ
ಚೆನ್ನೈ	220
ಕೋಲ್ಕತ್ತ	202

ಕನಿಷ್ಠ ಮೊತ್ತ

ತಂಡ	ಮೊತ್ತ
ಚೆನ್ನೈ	114
ಕೋಲ್ಕತ್ತ	108

ಪಂಜಾಬ್ ಕಿಂಗ್ಸ್ ಜಯಭೇರಿ

ಶಾರ್ಜಾ (ಪಿಟಿಐ): ಕಡಿಮೆ ಮೊತ್ತ ಕಲೆ ಹಾಕಿದ್ದರೂ ಪಂಜಾಬ್ ಕಿಂಗ್ಸ್ ಭರವಸೆ ಕೈಬಿಡಲಿಲ್ಲ. ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ಶನಿವಾರ ರಾತ್ರಿ ನಡೆದ ಪಂದ್ಯದಲ್ಲಿ ಐದು ರನ್‌ಗಳಿಂದ ಕಿಂಗ್ಸ್ ಜಯ ಗಳಿಸಿತು. ಸೋಲಿನ ಸರಪಳಿ ಕಳಚಲು ಪ್ರಯತ್ನಿಸಿದ ಕೇನ್ ವಿಲಿಯಮ್ಸನ್ ಬಳಗ ಮತ್ತೊಮ್ಮೆ ನಿರಾಸೆಗೆ ಒಳಗಾಯಿತು. ಒಂಬತ್ತು ಪಂದ್ಯಗಳ ಪೈಕಿ ಎಂಟರಲ್ಲಿ ಸೋತು ಪಾಯಿಂಟ್ ಪಟ್ಟಿಯ ಕೊನೆಯಲ್ಲೇ ಉಳಿಯಿತು.

126 ರನ್‌ಗಳ ಜಯದ ಗುರಿ ಬೆನ್ನತ್ತಿದ ಸನ್‌ರೈಸರ್ಸ್ ಆರಂಭದಲ್ಲೇ ವಿಕೆಟ್‌ಗಳನ್ನು ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತ್ತು. 60 ರನ್ ಗಳಿಸುವಷ್ಟರಲ್ಲಿ ತಂಡದ ಐದು ವಿಕೆಟ್‌ಗಳು ಉರುಳಿದ್ದವು. ಈ ಸಂದರ್ಭದಲ್ಲಿ ಜೇಸನ್ ಹೋಲ್ಡರ್ ಮತ್ತು ವೃದ್ಧಿಮಾನ್ ಸಹಾ ಉತ್ತಮ ಜೊತೆಯಾಟದ ಮೂಲಕ ನಿರೀಕ್ಷೆ ಮೂಡಿಸಿದರು. ಆದರೆ ನಿರ್ಣಾಯಕ ಹಂತದಲ್ಲಿ ಸಹಾ ರನೌಟಾದರು. ಐದು ಸಿಕ್ಸರ್‌ಗಳ ಮೂಲಕ ಮಿಂಚಿದ ಹೋಲ್ಡರ್ ಕೊನೆಯ ಎಸೆತದ ವರೆಗೂ ಪ್ರಯತ್ನ ಕೈಬಿಡಲಿಲ್ಲ. ಆದರೆ ತಂಡದ ಕನಸು ನನಸಾಗಲಿಲ್ಲ. ಟಾಸ್ ಸೋತು ಬ್ಯಾಟಿಂಗ್ ಮಾಡಿದ ಪಂಜಾಬ್ ಕಿಂಗ್ಸ್ ತಂಡ ಜೇಸನ್ ಹೋಲ್ಡರ್ ಅವರ ದಾಳಿಗೆ ನಲುಗಿದ ಏಳು ವಿಕೆಟ್‌ಗಳಿಗೆ 125 ರನ್ ಗಳಿಸಿತು. ಆರಂಭಿಕ ಜೋಡಿ ಕೆ.ಎಲ್.ರಾಹುಲ್ ಮತ್ತು ಮಯಂಕ್ ಅಗರವಾಲ್ ಅವರನ್ನು ವಾಪಸ್ ಕಳುಹಿಸಿದ ಹೋಲ್ಡರ್ ಆರಂಭದಲ್ಲೇ ಪೆಟ್ಟುಕೊಟ್ಟರು. ಸ್ಫೋಟಕ ಬ್ಯಾಟರ್ ದೀಪಕ್ ಹೂಡ ಕೂಡ ಹೋಲ್ಡರ್‌ಗೆ ಬಲಿಯಾದರು. ಮಯಂಕ್ ಜೊತೆ 26 ರನ್ ಸೇರಿಸಿದ ನಾಯಕ ರಾಹುಲ್ 21 ರನ್ ಗಳಿಸಿ ಔಟಾದರು. ನಂತರ ಒಂದು ರನ್ ಸೇರಿಸುವಷ್ಟರಲ್ಲಿ ಮಯಂಕ್ ಕೂಡ ವಾಪಸಾದರು.

ಕ್ರಿಸ್ ಗೇಲ್ ಅವರು ದಕ್ಷಿಣ ಆಫ್ರಿಕಾದ ಏಡನ್ ಮರ್ಕರಮ್ ಜೊತೆಗೂಡಿ 30 ರನ್‌ಗಳನ್ನು ಸೇರಿಸಿ ಭರವಸೆ ಮೂಡಿಸಿದರು. ಆದರೆ 14 ರನ್ ಗಳಿಸುವಷ್ಟರಲ್ಲಿ ಅವರ ಇನಿಂಗ್ಸ್‌ಗೆ ರಶೀದ್ ಖಾನ್ ಕೊನೆ ಹಾಡಿದರು.

ಮರ್ಕರಮ್ 27 ರನ್ ಗಳಿಸಿದರು. ಕೋಲಸ್ ಪೂರನ್ ನಿರೀಕ್ಷೆ ಹುಸಿ ಮಾಡಿದರು. ಈ ಹಂತದಲ್ಲಿ ಸನ್‌ರೈಸರ್ಸ್ ತಂಡ ಬೌಲಿಂಗ್ ಬಿಗಿಗೊಳಿಸಿ ಎದುರಾಳಿ ತಂಡದ ರನ್ ಗಳಿಕೆಗೆ ಕಡಿವಾಣ ಹಾಕಿದರು.



ಜೇಸನ್ ಹೋಲ್ಡರ್



ರವಿ ಬಿಷ್ಣೋಯ್ ಅವರನ್ನು ಅಭಿನಂದಿಸಿದ ಸಹ ಆಟಗಾರರು –ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಪಂಜಾಬ್ ಕಿಂಗ್ಸ್ 7ಕ್ಕೆ 125 (20 ಓವರ್)
ರಾಹುಲ್ ಸಿ ಸುಚಿತ್ (ಬದಲಿ) ಬಿ ಹೋಲ್ಡರ್ 21 (21 ಎ, 4x3), ಮಯಂಕ್ ಸಿ ವಿಲಿಯಮ್ಸನ್ ಬಿ ಹೋಲ್ಡರ್ 5 (6 ಎ), ಗೇಲ್ ಎಲ್‌ಬಿಡಬ್ಲ್ಯು ಬಿ ರಶೀದ್ ಖಾನ್ 14 (17 ಎ, 4x1), ಮರ್ಕರಮ್ ಸಿ ಪಾಂಡೆ ಬಿ ಸಮದ್ 27 (32 ಎ, 4x2), ಪೂರನ್ ಸಿ ಮತ್ತು ಬಿ ಸಂದೀಪ್ ಶರ್ಮಾ 8 (4 ಎ, 6x1), ಹೂಡಾ ಸಿ ಸುಚಿತ್ (ಬದಲಿ) ಬಿ ಹೋಲ್ಡರ್ 13 (10 ಎ, 4x1), ಬ್ರಾರ್ ಔಟಾಗದೆ 18 (18 ಎ, 4x1), ಎಲಿಸ್ ಸಿ ಪಾಂಡೆ ಬಿ ಭುವನೇಶ್ವರ್ 12 (12 ಎ, 6x1), ಶಮಿ ಔಟಾಗದೆ 0 (0 ಎ)
ಇತರೆ (ಬೈ 1, ಲೆಗ್‌ಬೈ 3, ವೈಡ್ 3) 7
ವಿಕೆಟ್ ಪತನ: 1-26 (ಕೆ.ಎಲ್. ರಾಹುಲ್, 4.1), 2-27 (ಮಯಂಕ್ ಅಗರವಾಲ್, 4.5), 3-57 (ಕ್ರಿಸ್ ಗೇಲ್, 10.4), 4-66 (ನಿಕೋಲಸ್ ಪೂರನ್, 11.4), 5-88 (ಏಡನ್ ಮರ್ಕರಮ್, 14.4), 6-96 (ದೀಪಕ್ ಹೂಡಾ, 15.4), 7-118 (ನೇಥನ್ ಲಯನ್, 19.3)
ಬೌಲಿಂಗ್: ಸಂದೀಪ್ ಶರ್ಮಾ 4–0–20–1, ಭುವನೇಶ್ವರ್ ಕುಮಾರ್ 4–0–34–1, ಜೇಸನ್ ಹೋಲ್ಡರ್ 4–0–19–3, ಖಲೀಲ್ ಅಹಮ್ಮದ್ 3–0–22–0, ರಶೀದ್ ಖಾನ್ 4–0–17–1, 1–0–9–1

ಸನ್‌ರೈಸರ್ಸ್ ಹೈದರಾಬಾದ್ 7ಕ್ಕೆ 120 (20 ಓವರ್)
ವಾರ್ನರ್ ಸಿ ರಾಹುಲ್ ಬಿ ಶಮಿ 2 (3ಎ), ವೃದ್ಧಿಮಾನ್ ರನೌಟ್ (ಅರ್ಷದೀಪ್ ಬಿಷ್ಣೋಯಿ) 31 (37ಎ, 4X1), ವಿಲಿಯಮ್ಸನ್ ಬಿ ಶಮಿ 1 (6ಎ), ಮನೀಷ್ ಬಿ ಬಿಷ್ಣೋಯಿ 13 (23ಎ, 4X1), ಕೇದಾರ್ ಬಿ ಬಿಷ್ಣೋಯಿ 12 (12ಎ), ಸಮದ್ ಸಿ ಗೇಲ್ ಬಿ ಬಿಷ್ಣೋಯಿ 1 (2ಎ), ಹೋಲ್ಡರ್ ಔಟಾಗದೆ 47 (29ಎ, 6X1), ರಶೀದ್ ಸಿ ಮತ್ತು ಬಿ ಅರ್ಷದೀಪ್ 3 (4ಎ), ಭುವನೇಶ್ವರ್ ಔಟಾಗದೆ 3 (4ಎ)
ಇತರೆ (ಬೈ 1, ಲೆಗ್‌ಬೈ 2, ವೈಡ್ 4) 7
ವಿಕೆಟ್ ಪತನ: 1-2 (ಡೇವಿಡ್ ವಾರ್ನರ್, 0.3), 2–10 (ಕೇನ್ ವಿಲಿಯಮ್ಸನ್, 2.2), 3–22 (ಮನೀಷ್ ಪಾಂಡೆ, 7.6), 4–56 (ಕೇದಾರ್ ಜಾಧವ್, 12.2), 5–60 (ಅಬ್ದುಲ್ ಸಮದ್, 12.6), 6–92 (ವೃದ್ಧಿಮಾನ್ ಸಹಾ, 16.1), 7–105 (ರಶೀದ್ ಖಾನ್, 18.1)
ಬೌಲಿಂಗ್: ಮೊಹಮ್ಮದ್ ಶಮಿ 4–1–14–2, ಅರ್ಷದೀಪ್ ಸಿಂಗ್ 4–0–22–1, ನೇಥನ್ ಎಲ್ಲಿಸ್ 4–0–32–0, ಹರ್‌ಪ್ರೀತ್ ಬ್ರಾರ್ 4–0–25–0, ರವಿ ಬಿಷ್ಣೋಯಿ 4–0–24–3

ಫಲಿತಾಂಶ: ಪಂಜಾಬ್ ಕಿಂಗ್ಸ್‌ಗೆ 5 ರನ್‌ಗಳ ಗೆಲುವು

ವಿಶ್ವ ಆರ್ಚರಿ: ಭಾರತಕ್ಕೆ ಬೆಳ್ಳಿ 'ಡಬಲ್'

ಯಾಂಕ್ಟನ್, ಅಮೆರಿಕ (ಪಿಟಿಐ): ಕೂದಲೆಳೆ ಅಂತರದಿಂದ ಚಿನ್ನದ ಪದಕ ತಪ್ಪಿಸಿಕೊಂಡ ಭಾರತದ ಮಹಿಳಾ ಮತ್ತು ಮಿಶ್ರ ಕಂಪೌಂಡ್ ತಂಡಗಳು ವಿಶ್ವ ಆರ್ಚರಿ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕಗಳನ್ನು ತಮ್ಮದಾಗಿಸಿ-ಕೊಂಡವು.

ಇಲ್ಲಿ ಗೆದ್ದಿದ್ದರೆ ಭಾರತ ವಿಶ್ವ ಟೂರ್ನಿಯಲ್ಲಿ ಮೊದಲ ಬಾರಿ ಚಿನ್ನ ಗಳಿಸಿದಂತಾಗುತ್ತಿತ್ತು. 10 ಟೂರ್ನಿಗಳ ಪೈಕಿ ಎಂಟರಲ್ಲಿ ಫೈನಲ್ ತಲುಪಿದ್ದ ಭಾರತ ಎಂಟರಲ್ಲಿಯೂ ಎರಡನೇ ಸ್ಥಾನಕ್ಕೆ ಸಮಾಧಾನಪಟ್ಟು-ಕೊಂಡಿದೆ.

ಮಿಶ್ರ ತಂಡ ವಿಭಾಗದಲ್ಲಿ ಸ್ಪರ್ಧಿಸಿದ್ದ ಅಭಿಷೇಕ್ ವರ್ಮಾ ಹಾಗೂ ಜ್ಯೋತಿ ಸುರೇಖಾ ವೆನ್ನನ್ ಫೈನಲ್‌ನಲ್ಲಿ 150–154ರಿಂದ ಕೊಲಂಬಿಯಾದ ಡೇನಿಯಲ್ ಮುನೋಜ್ ಮತ್ತು ಸಾರಾ ಅಲೆಜಾಂಡ್ರೊ ಎದುರು ಎಡವಿದರು. ರ್‍ಯಾಂಕಿಂಗ್ ಸುತ್ತಿನಲ್ಲಿ ಭಾರತದ ಜೋಡಿ ನಾಲ್ಕನೇ ಸ್ಥಾನ ಗಳಿಸಿತ್ತು.

16 ಸುತ್ತುಗಳ ಪೈಕಿ ಕೊಲಂಬಿಯಾ ಜೋಡಿ 10 ಬಾರಿ 'ಪರ್ಫೆಕ್ಟ್ 10'ಗೆ ಗುರಿಯಿಟ್ಟಿತು. ಮಹಿಳಾ ಡಬಲ್ಸ್‌ನಲ್ಲಿ ಏಳನೇ ಶ್ರೇಯಾಂಕ ಪಡೆದಿದ್ದ ಜ್ಯೋತಿ, ಮುಸ್ಕಾನ್ ಕಿರಾರ್ ಮತ್ತು ಪ್ರಿಯಾ ಗುರ್ಜರ್ ಅವರಿದ್ದ ಭಾರತ ತಂಡವು 224–229 ಪಾಯಿಂಟ್ಸ್ ಅಂತರದಿಂದ ಕೊಲಂಬಿಯಾದ ಸಾರಾ ಲೋಪೆಜ್, ಅಲೆಜಾಂಡ್ರೊ ಯುಸ್ಕಿಯಾನೊ ಮತ್ತು ನೊರಾ ವಾಲ್ಡೆಜ್ ಎದುರು ಮಣಿಯಿತು.

ಆಸ್ಟ್ರೇಲಿಯಾ ಎದುರು ಮಿಥಾಲಿ ಬಳಗದ ಪಂದ್ಯ

ಒತ್ತಡದಲ್ಲಿ ಭಾರತದ ಬೌಲರ್‌ಗಳು

ಮಕಾಯ, ಆಸ್ಟ್ರೇಲಿಯಾ (ಪಿಟಿಐ): ಮೊದಲ ಎರಡು ಪಂದ್ಯಗಳನ್ನು ಸೋತಿರುವ ಭಾರತ ಮಹಿಳಾ ತಂಡ ಆಸ್ಟ್ರೇಲಿಯಾ ಮಹಿಳೆಯರ ಎದುರಿನ ಮೂರನೇ ಹಾಗೂ ಅಂತಿಮ ಏಕದಿನ ಪಂದ್ಯದಲ್ಲಿ ಭಾನುವಾರ ಸೆಣಸಲಿದೆ. ಎರಡೂ ಪಂದ್ಯಗಳಲ್ಲಿ ಎದುರಾಳಿ ತಂಡದ ಬ್ಯಾಟರ್‌ಗಳು ಪಾರುಪತ್ಯ ಮೆರೆದ ಕಾರಣ ಕೊನೆಯ ಪಂದ್ಯದಲ್ಲಿ ಭಾರತದ ಬೌಲರ್‌ಗಳ ಮೇಲೆ ಒತ್ತಡ ಹೆಚ್ಚಿದೆ. ಇದನ್ನು ಮೀರಿ ನಿಂತು ಜಯ ಗಳಿಸಿ ಸರಣಿ ಕ್ಲೀನ್ ಸ್ವೀಪ್ ತಪ್ಪಿಸಲು ಮಿಥಾಲಿ ರಾಜ್ ಬಳಗ ಪ್ರಯ-ತ್ನಿಸಲಿದೆ.

ಎರಡನೇ ಪಂದ್ಯದಲ್ಲಿ ಭಾರತ ಬ್ಯಾಟಿಂಗ್‌ನಲ್ಲಿ ಲಯ ಕಂಡುಕೊಂಡಿತ್ತು. ಉತ್ತಮ ಮೊತ್ತ ಸೇರಿಸಿದ್ದ ತಂಡ ಎದುರಾಳಿಗಳ ಅಗ್ರ ಕ್ರಮಾಂಕಕ್ಕೆ ಪೆಟ್ಟು ನೀಡಿ ಜಯದತ್ತ ಹೆಜ್ಜೆ ಹಾಕಿತ್ತು.



ಜೂಲನ್ ಗೋಸ್ವಾಮಿ

ಆದರೆ ಆರಂಭಿಕ ಬ್ಯಾಟರ್ ಬೇತ್ ಮೂನಿ, ಮಧ್ಯಮ ಕ್ರಮಾಂಕದ ತಹಲಿಯಾ ಮೆಗ್ರಾ ಮತ್ತು ನಿಕೋಲಾ ಕ್ಯಾರಿ ಅವರು ಭಾರತದ ಆಸೆಗೆ ತಣ್ಣೀರು ಹಾಕಿದ್ದರು. ಈ ಮೂಲಕ ಆತಿಥೇಯರು ಸತತ 27ನೇ ಜಯ ಸಾಧಿಸಿದ್ದರು.

2021ರಲ್ಲಿ ಭಾರತ ಮಹಿಳಾ ತಂಡದ ಬೌಲರ್‌ಗಳು ಗಮನಾರ್ಹ ಸಾಧನೆಯನ್ನೇನೂ ಮಾಡಲಿಲ್ಲ. ಜೂಲನ್ ಅವರೊಂದಿಗೆ ಹೊಸ ಚೆಂಡನ್ನು ಸಮರ್ಥವಾಗಿ ಹಂಚಿಕೊಳ್ಳುವ ಬೌಲರ್ ಒಬ್ಬರನ್ನು ಕಂಡುಕೊಳ್ಳಲು ತಂಡಕ್ಕೆ ಸಾಧ್ಯವಾಗಲಿ-ಲ್ಲ. ಶಿಖಾ ಪಾಂಡೆ, ಮಾನಸಿ ಜೋಶಿ, ಪೂಜಾ ವಸ್ತ್ರಕಾರ್, ಮೋನಿಕಾ ಪಟೇಲ್ ಮುಂತಾದವರು ನಿರೀಕ್ಷಿತ ಮಟ್ಟಕ್ಕೇರ-ಲಿಲ್ಲ. ಸ್ಪಿನ್ ವಿಭಾಗ ತಂಡದ ಶಕ್ತಿಯಾ-ಗಿದ್ದರೂ ಬಲಿಷ್ಠ ತಂಡಗಳ ಎದುರು ಪೂನಂ ಯಾದವ್ ಮತ್ತು ದೀಪ್ತಿ ಶರ್ಮಾ ಅವರಂಥ ಬೌಲರ್‌ಗಳು ಕೂಡ ಪರಿಣಾಮ ಬೀರುತ್ತಿಲ್ಲ.ಬ್ಯಾಟಿಂಗ್‌ನಲ್ಲಿ ಮಿಥಾಲಿ ರಾಜ್ ಲಯ ಉಳಿಸಿಕೊಂ-ಡಿದ್ದಾರೆ. ಸ್ಮೃತಿ ಮಂದಾನ, ರಿಚಾ ಘೋಷ್ ಮತ್ತು ಶಫಾಲಿ ವರ್ಮಾ ಅವರ ಮೇಲೆ ಇರೀಕ್ಷೆ ಇದೆ. ಹೆಬ್ಬೆರಳಿಗೆ ಗಾಯವಾಗಿರುವ ಹರ್ಮನ್‌ಪ್ರೀತ್ ಕೌರ್ ಭಾನುವಾರದ ಪಂದ್ಯಕ್ಕೆ ಲಭ್ಯ ಇರುವ ಬಗ್ಗೆ ಮಾಹಿತಿ ಇಲ್ಲ. ಆಟಕ್ಕೆ ಲಭ್ಯ ಇದ್ದರೂ ಅವರು ಫಾರ್ಮ್‌ನಲ್ಲಿ ಇಲ್ಲದೇ ಇರುವುದು ಆತಂಕಕ್ಕೆ ಕಾರಣವಾಗಿದೆ.

ಆರಂಭ: ಬೆಳಿಗ್ಗೆ 5.55 (ಭಾರತೀಯ ಕಾಲಮಾನ)
ನೇರ ಪ್ರಸಾರ: ಸೋನಿ ಸಿಕ್ಸ್

ಅ. 3ರಂದು ಜಿಲ್ಲಾ ರೋಡ್ ಸೈಕ್ಲಿಂಗ್

ಬೆಂಗಳೂರು: ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜು ಆಶ್ರಯದಲ್ಲಿ ಬೆಂಗಳೂರು ಜಿಲ್ಲಾ ಅಮೆಚೂರ್ ಸೈಕ್ಲಿಂಗ್ ಸಂಸ್ಥೆ ಆಯೋಜಿಸಿರುವ ಜಿಲ್ಲಾ ಮಟ್ಟದ ರೋಡ್ ಸೈಕ್ಲಿಂಗ್ ಚಾಂಪಿಯನ್‌ಷಿಪ್ ಅಕ್ಟೋಬರ್ ಮೂರರಂದು ನಡೆಯಲಿದೆ.

14, 16 ಮತ್ತು 18 ವರ್ಷದೊಳಗಿನ ಬಾಲಕ-ಬಾಲಕಿಯ-ರಿಗೆ, 23 ವರ್ಷದೊಳಗಿನ ಪುರುಷರಿಗೆ ಮತ್ತು ಮುಕ್ತ ವಿಭಾಗದಲ್ಲಿ ಪುರುಷ ಮಹಿಳೆಯರಿಗಾಗಿ ಪ್ರತ್ಯೇಕ ಸ್ಪರ್ಧೆಗಳು ನಡೆಯಲಿವೆ. ಪ್ರತಿ ವಿಭಾಗಕ್ಕೂ ಟೈಂ ಟ್ರಯಲ್ ಸ್ಪರ್ಧೆ ನಿಗದಿ ಮಾಡಲಾಗಿದೆ.

ಮಾಹಿತಿಗೆ ಸಂಸ್ಥೆಯ ಗೌರವ ಕಾರ್ಯದರ್ಶಿ ಚಿಕ್ಕರಂಗಸ್ವಾಮಿ (9844385510/9632830273) ಅವರನ್ನು ಸಂಪರ್ಕಿಸಬಹುದು ಎಂದು ತಿಳಿಸಲಾಗಿದೆ.

ಹೈದರಾಬಾದ್ ರೇಸ್

ಫ್ರಾನ್ಸಿಸ್ ಬೇಕನ್ ಗೆಲ್ಲುವ ನಿರೀಕ್ಷೆ

ಮೇಜರ್ ಮೀರ್ ಮುಜ್ತಾಬ ಹುಸೈನ್ ಮೆಮೋರಿಯಲ್ ಕಪ್ ಭಾನುವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಫ್ರಾನ್ಸಿಸ್ ಬೇಕನ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.00ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಬ್ಲೂ ಆರಿಜಾನ್ 2, ಸ್ಪೆಷಲ್ ಎಫರ್ಟ್ 8, ಡ್ರೀಮ್ ಸ್ಟೇಷನ್ 4
2ನೇ ರೇಸ್: ಸೀ ವೂಲ್ಫ್ 4, ಸ್ಟಾರ್ಕ್ 2, ಆರ್ಕೇಡಿಯನ್ ಏಂಜೆಲ್ 7
3ನೇ ರೇಸ್: ಎನ್.ಆರ್.ಐ ಸ್ಪೋರ್ಟ್ 6, ಮಿರೆಯಾ 10, ಕ್ಯಾಷ್ ರಿಜಿಸ್ಟರ್ 2
4ನೇ ರೇಸ್: ಡ್ಯೂ ಡಿಲಿಜೆನ್ಸ್ 1, ಮೂನ್‌ಲೈಟ್ ರೂಬಿ 3, ಸ್ವೀಟ್ ಮೆಲೋಡಿ 6
5ನೇ ರೇಸ್: ಕಿಂಗ್‌ಸ್ಟನ್ 1, ಅಶ್ವ ಜೌಹರ್ 4, ಜೀನ್ ಲೆಫೆಟ್ಟೆ 1
6ನೇ ರೇಸ್: ಕ್ಯಾಸ್ಟೆಲ್ಲೊ 2, ಸ್ಟಾರ್ವಾಲ್ಟ್ 7, ಎಬವ್ ಲೌವ್ 8
7ನೇ ರೇಸ್: ಫ್ರಾನ್ಸಿಸ್ ಬೇಕನ್ 8, ಡ್ಯಾಂಡಿ ಮ್ಯಾನ್ 2, ಸಿಟಿ ಆಫ್ ವಿಸ್ಡಂ 6
8ನೇ ರೇಸ್: ಬರ್ಕ್‌ಲಿ 1, ಬಿಗ್ ಡೇ 8, ಹ್ಯಾಷ್‌ಟ್ಯಾಗ್ 4

ಉತ್ತಮ ಬೆಟ್: ಕಿಂಗ್‌ಸ್ಟನ್

ಜಾಕ್‌ಪಾಟ್	1ನೇ ಮಿನಿ ಜಾಕ್‌ಪಾಟ್	2ನೇ ಮಿನಿ ಜಾಕ್‌ಪಾಟ್
4,5,6,7,8	2,3,4,5	5,6,7,8
1ನೇ ಟ್ರಿಬಲ್	**2ನೇ ಟ್ರಿಬಲ್**	**3ನೇ ಟ್ರಿಬಲ್**
1,2,3	3,4,5	6,7,8

ರಾಜ್ಯ ಈಜು ಚಾಂಪಿಯನ್‌ಷಿಪ್: ಮೂರನೇ ದಿನ ಬಸವನಗುಡಿ ಈಜು ಕೇಂದ್ರದ ಪಾರಮ್ಯ

ಅನೀಶ್ ಗೌಡಗೆ ಎರಡು ಕೂಟ ದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸವನಗುಡಿ ಈಜು ಕೇಂದ್ರದ ಅನೀಶ್ ಎಸ್. ಗೌಡ ಅವರು ರಾಜ್ಯ ಈಜು ಸಂಸ್ಥೆ ಆಶ್ರಯದ ಈಜು ಚಾಂಪಿಯನ್‌ಷಿಪ್‌ನ ಮೂರನೇ ದಿನವಾದ ಶನಿವಾರ ಎರಡು ಕೂಟ ದಾಖಲೆ ಬರೆದರು.

ಬಸವನಗುಡಿ ಈಜುಕೇಂದ್ರದಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನಲ್ಲಿ ಬಾಲಕರ ಗುಂಪು ಒಂದರ 1500 ಮೀಟರ್ಸ್ ಫ್ರೀಸ್ಟೈಲ್ (16 ನಿಮಿಷ, 8.68 ಸೆ) ಹಾಗೂ 400 ಮೀ. ಫ್ರೀಸ್ಟೈಲ್ (4 ನಿ. 4.76 ಸೆ.) ಸ್ಪರ್ಧೆಗಳಲ್ಲಿ ಅವರು ದಾಖಲೆಯೊಂದಿಗೆ ಚಿನ್ನದ ಪದಕ ಗಳಿಸಿದರು.

ಗುಂಪು ಒಂದರ 100 ಮೀ. ಬ್ರೆಸ್ಟ್‌ಸ್ಟ್ರೋಕ್‌ನಲ್ಲಿ ಡಾಲ್ಫಿನ್‌ನ ವಿದಿತ್ ಶಂಕರ್ (1 ನಿ. 5.5 ಸೆ.) ಕೂಡ ಕೂಟ ದಾಖಲೆ ಬರೆದರು.

ಬಾಲಕಿಯರ ಗುಂಪು 2ರ 1500 ಮೀ. ಫ್ರೀಸ್ಟೈಲ್‌ನಲ್ಲಿ ಬಸವನಗುಡಿ ಈಜು ಕೇಂದ್ರದ ಶಿರಿನ್ ಕೂಡ ಕೂಟ ದಾಖಲೆ ಬರೆದರು. ಅವರು 18 ನಿ. 34.24 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಬಾಲಕಿಯರ ಗುಂಪು 2ರ 400 ಮೀ. ಫ್ರೀಸ್ಟೈಲ್‌ನಲ್ಲಿ ಡಾಲ್ಫಿನ್ ಅಕ್ವಾಟಿಕ್ಸ್‌ನ ಹರ್ಷಿಕಾ ರಾಮಚಂದ್ರ 4ನಿಮಿಷ 38.66 ಸೆಕೆಂಡುಗಳೊಂದಿಗೆ ಗುರಿ ಮುಟ್ಟಿ ಕೂಟ ದಾಖಲೆಯೊಂದಿಗೆ ಚಿನ್ನ ಗೆದ್ದರು.

ಮೂರನೇ ದಿನದ ಫಲಿತಾಂಶಗಳು: ಬಾಲಕರು: 1500 ಮೀ. ಫ್ರೀಸ್ಟೈಲ್: ಗುಂಪು 1: ಅನೀಶ್ ಎಸ್. ಗೌಡ (ಬಸವನಗುಡಿ ಈಜು ಕೇಂದ್ರ)–1, ಕಾಲ: 16:08.68 ನಿ. (ಕೂಟ ದಾಖಲೆ), ಧ್ಯಾನ್ ಬಾಲಕೃಷ್ಣ (ಜಿಎಫ್‌ಆರ್‌ಎವೈ)–2, ಶಿವಾಂಕ್ ವಿಶ್ವನಾಥ್ (ಜಿಎಫ್‌ಆರ್‌ಎವೈ)–3. ಗುಂಪು 2: ಪವನ್ ಧನಂಜಯ (ಬಿಎಸಿ)–1 ಕಾಲ: 17:20.93, ಅಲೆಸ್ಟರ್ ಸ್ಯಾಮುಯೆಲ್ ರೆಗೊ–2, ಕ್ರಿಶ್ ಸುಕುಮಾರ್–3 (ಇಬ್ಬರೂ ಡಾಲ್ಫಿನ್ಸ್). ಪುರುಷರು: ಕೌಸ್ತುಭ್ ಅಗರವಾಲ್ (ಬಿಎಸಿ)–1, ಕಾಲ: 17:16.02, ಮನೀಷ್ ನಾಯ್ಡು (ಜಿಎಫ್‌ಆರ್‌ಎವೈ)–2, ಯತೀಶ್ ಗೌಡ (ಬಿಎಸಿ)–3. 400 ಮೀ. ಫ್ರೀಸ್ಟೈಲ್: ಬಾಲಕರ ಗುಂಪು 3: ದ್ರುಪದ್ ರಾಮಕೃಷ್ಣ (ಬಿಎಸಿ)–1, ಕಾಲ: 5:07.30, ರಕ್ಷಣ್ ಪಿ. (ಡಾಲ್ಫಿನ್ಸ್)–2, ರಿಷಿತ್ ರಂಗನ್ (ಬಿಎಸಿ)–3. ಗುಂಪು 1: ಅನೀಶ್ ಎಸ್. ಗೌಡ (ಬಿಎಸಿ)–1, ಕಾಲ: 4:04.76 (ಕೂಟ ದಾಖಲೆ), ಶೋನ್ ಗಂಗೂಲಿ (ಬಿಎಸಿ)–2, ಧ್ಯಾನ್ ಬಾಲಕೃಷ್ಣ (ಜಿಎಫ್‌ಆರ್‌ಎವೈ)–3. ಗುಂಪು 2: ಪವನ್ ಧನಂಜಯ (ಬಿಎಸಿ)–1, ಕಾಲ:4:26.15, ಅಲೆಸ್ಟರ್ ಸ್ಯಾಮುಯೆಲ್ ರೆಗೊ–2, ಕ್ರಿಶ್ ಸುಕುಮಾರ್–3 (ಇಬ್ಬರೂ ಡಾಲ್ಫಿನ್ಸ್). ಪುರುಷರು: ಕೌಸ್ತುಭ್ ಅಗರವಾಲ್ –1 ಕಾಲ: 4:25.87, ಲಿತೀಶ್ ಜಿ. ಗೌಡ–2, ಮ್ಯಾಥ್ಯೂಸ್ ಕೋಶ್ತಿ–3 (ಎಲ್ಲರೂ ಬಿಎಸಿ). 100 ಮೀ. ಬ್ರೆಸ್ಟ್‌ಸ್ಟ್ರೋಕ್: ಬಾಲಕರ ಗುಂಪು 1: ವಿದಿತ್ ಶಂಕರ್ (ಡಾಲ್ಫಿನ್)–1 ಕಾಲ:1:05.05 (ಕೂಟ ದಾಖಲೆ), ಕಲ್ಪ್ ಎಸ್.ಬೊಹ್ರಾ–2, ಪ್ರಣವ್ ಭಾರತಿ–3 (ಇಬ್ಬರೂ ಬಿಎಸಿ). ಗುಂಪು 2: ಸೂರ್ಯ ಜೋಯಪ್ಪ (ಬಿಎಸಿ)–1 ಕಾಲ: 1:12.69, ಸುಯೋಗ್ ಗೌಡ ಎಲ್. (ನೆಟ್ಟಕಲ್ಲಪ್ಪ ಈಜು ಕೇಂದ್ರ)–2, ನವನೀತ್ ಆರ್. ಗೌಡ (ಡಾಲ್ಫಿನ್)–3. ಪುರುಷರು: ಪೃಥ್ವಿ ಡಿ.ಎಸ್–1, ಕಾಲ: 1:08.88, ಲಿತೀಶ್ ಗೌಡ–2, ಹರ್ಷವರ್ಧನ್ ಎಸ್.ಎನ್.–3 (ಎಲ್ಲರೂ ಬಿಎಸಿ). 200 ಮೀ. ಬಟರ್‌ಫ್ಲೈ: ಬಾಲಕರ ಗುಂಪು 1: ಉತ್ಕರ್ಷ್ ಪಾಟೀಲ್ (ಬಿಎಸಿ)–1, ಕಾಲ: 2:07.54, ನಯನ್ ವಿಘ್ನೇಶ್ (ಎನ್‌ಎಸಿ)–2, ಕಾರ್ತಿಕೇಯನ್ ನಾಯರ್ (ಡಾಲ್ಫಿನ್)–3. ಗುಂಪು 2: ನಿರಂಜನ್ ಕಾರ್ತಿಕ್ ಬಿ.(ಬಿಎಸ್‌ಆರ್‌ಸಿ)–1, ಕಾಲ: 2:21.07, ಸ್ಟೀವ್ ಜೆಫ್ ಲೋಬೊ (ಡಾಲ್ಫಿನ್)–2, ಆರ್ಯನ್ ಪಾಟೀಲ್ (ಸ್ವಿಮರ್ಸ್ ಕ್ಲಬ್ ಬೆಳಗಾವಿ)–3. ಪುರುಷರು: ತನಿಶ್ ಜಾರ್ಜ್–1, ಕಾಲ:2:07.29, ಶ್ರವಂತ್ ಶ್ರೀನಿವಾಸ್ –2 (ಇಬ್ಬರೂ ಬಿಎಸಿ). 100 ಮೀ. ಬ್ಯಾಕ್‌ಸ್ಟ್ರೋಕ್: ಬಾಲಕರ ಗುಂಪು 1: ಉತ್ಕರ್ಷ್ ಪಾಟೀಲ್ (ಬಿಎಸಿ)–1, ಕಾಲ: 58.53, ಅಕ್ಷಯ್ ಆರ್. ಶೇಟ್ (ಬಿಎಸ್‌ಆರ್‌ಸಿ)–2, ವಿಶ್ವನಾಥ್ ಎಸ್. (ಬಿಎಸಿ)–3. ಗುಂಪು 2: ಅನಂತಜೀತ್ ಮುಖರ್ಜಿ (ಬಿಎಸ್‌ಆರ್‌ಸಿ)–1, ಕಾಲ:1:08.86, ಸಾತ್ವಿಕ್ ಪ್ರಸನ್ನ (ಎನ್‌ಎಸಿ)–2, ದಿಗಂತ್ ವಿ.ಎಸ್. (ಡಾಲ್ಫಿನ್) ಮತ್ತು ಆರ್ಯನ್ ಪಾಟೀಲ್ (ಸ್ವಿಮರ್ಸ್ ಕ್ಲಬ್ ಬೆಳಗಾವಿ)–3. ಪುರುಷರು: ಶ್ರೀಹರಿ ನಟರಾಜ್ (ಡಾಲ್ಫಿನ್)–1, ಕಾಲ: 55.91, ಶಿವ ಎಸ್. (ಬಿಎಸಿ)–2, ಭಾವೇಶ್ ಆರ್. (ಬಿಎಸ್‌ಆರ್‌ಸಿ)–3. 4X200 ಮೀ. ಫ್ರೀಸ್ಟೈಲ್: ಬಾಲಕರ ಗುಂಪು 1: ಬಿಎಸಿ ‘ಎ’–1 ಕಾಲ: 8:11.12, ಬಿಎಸಿ ‘ಬಿ’–2, ಡಾಲ್ಫಿನ್–3.


ವಿದಿತ್ ಎಸ್. ಶಂಕರ್ ಈಜಿನ ಭಂಗಿ– ಪ್ರಜಾವಾಣಿ ಚಿತ್ರ

ಬಾಲಕಿಯರು: 1500 ಮೀ. ಫ್ರೀಸ್ಟೈಲ್: ಗುಂಪು 1: ಅಶ್ಮಿತಾ ಚಂದ್ರ (ಜಿಎಫ್‌ಆರ್‌ಎವೈ)–1, ಕಾಲ: 19:02.48, ಅನ್ವಯಿ ಮಸ್ಕೆ (ಡಾಲ್ಫಿನ್)–2, ಸಿಂಥಿಯಾ ಚೌಧರಿ (ಬಿಎಸಿ)–3. ಗುಂಪು 2: ಶಿರಿನ್ (ಬಿಎಸಿ)–1, ಕಾಲ: 18:34.24 (ಕೂಟ ದಾಖಲೆ), ಅಂಬರ್ ಸಿಂಗ್ (ಡಾಲ್ಫಿನ್)–2, ರಿತಿಕಾ ಬಿ.ಎಂ (ಬಿಎಸಿ)–3. ಮಹಿಳೆಯರು: ನಿಖಿತಾ ಎಸ್.ವಿ–1, ಕಾಲ:19:41.63, ಇಂಚರಾ ನಾರಾಯಣ್–2 (ಇಬ್ಬರೂ ಬಿಎಸಿ). 400 ಮೀ. ಫ್ರೀಸ್ಟೈಲ್: ಬಾಲಕಿಯರ ಗುಂಪು 3: ಧಿನಿಧಿ ದೇಸಿಂಗು (ಡಾಲ್ಫಿನ್)–1, ಕಾಲ:4:52.63, ನಯಿಶಾ (ಜೀ ಸ್ವಿಮ್)–2, ಸಂಜನಾ ಪಿ.ವಿ (ಜಿಎಫ್‌ಆರ್‌ಎವೈ)–3. ಗುಂಪು 1: ಅನ್ವಯಿ ಮಸ್ಕೆ (ಡಾಲ್ಫಿನ್)–1, ಕಾಲ: 4:52.21, ಅಸ್ಮಿತಾ ಚಂದ್ರ (ಜಿಎಫ್‌ಆರ್‌ಎವೈ)–2, ಸಿಂಥಿಯಾ ಚೌಧರಿ (ಬಿಎಸಿ)–3. ಗುಂಪು 2: ಹಷಿಕಾ ರಾಮಚಂದ್ರ (ಡಾಲ್ಫಿನ್)–1, ಕಾಲ:4:38.66 (ಕೂಟ ದಾಖಲೆ), ಶಿರಿನ್ (ಬಿಎಸಿ)–2, ಅಂಬರ್ (ಡಾಲ್ಫಿನ್)–3. ಮಹಿಳೆಯರು: ನಿಖಿತಾ ಎಸ್.ವಿ. (ಬಿಎಸಿ)–1, ಕಾಲ:4:58.63, ವಿ.ಪ್ರೀತಾ (ಡಿಕೆವಿ)–2, ಧೃತಿ ಮುರಳೀಧರ್ (ಬಿಎಸಿ)–3. 100 ಮೀ. ಬ್ರೆಸ್ಟ್‌ಸ್ಟ್ರೋಕ್: ಗುಂಪು 1: ಸಾನ್ವಿ ರಾವ್ (ಬಿಎಸ್‌ಆರ್‌ಸಿ)–1, ಕಾಲ:1:17.40, ಲಕ್ಷ್ಯಾ ಎಸ್ (ಬಿಎಸಿ)–2, ಹಿತೈಷಿ ವಿ. (ವಿಜಯನಗರ)–3. ಗುಂಪು 2: ಲಿನೇಶಾ ಎ.ಕೆ. (ಬಿಎಸ್‌ಆರ್‌ಸಿ)–1, ಕಾಲ:1:18.09, ರಿಯಾನ್ನಾ ಧೃತಿ ಫರ್ನಾಂಡಿಸ್–2, ಮಾನವಿ ವರ್ಮಾ–3 (ಇಬ್ಬರೂ ಡಾಲ್ಫಿನ್). ಮಹಿಳೆಯರು: ಇಂಚರಾ ನಾರಾಯಣ್ (ಬಿಎಸಿ)–1, ಕಾಲ:1:32.99, ಸಿರಿ ಪಯನೇನಿ (ಡಿಕೆವಿ)–2. 200 ಮೀ. ಬಟರ್‌ಫ್ಲೈ: ಬಾಲಕಿಯರ ಗುಂಪು 1: ಅನ್ವೇಷಾ ಗಿರೀಶ್ (ಡಾಲ್ಫಿನ್)–1, ಕಾಲ:2:31.45, ಎ.ಜೆದಿದಾ (ಡಿಕೆವಿ)–2, ತಿತೀಕ್ಷಾ ಎಚ್. (ಬಿಎಸ್‌ಆರ್‌ಸಿ)–3. ಗುಂಪು 2: ಹರ್ಷಿಕಾ ರಾಮಚಂದ್ರ (ಡಾಲ್ಫಿನ್)–1, ಕಾಲ:2:27.03, ರಿತಿಕಾ ಬಿ.ಎಂ. (ಬಿಎಸಿ)–2, ಅನ್ಯು ದೇಶಪಾಂಡೆ (ವಿಜಯನಗರ)–3. ಮಹಿಳೆಯರು: ವಿಭಾ ಭೋಸ್ಲೆ –1, ಕಾಲ:2:43.48, ನಿಖಿತಾ ಎಸ್.ವಿ–2 (ಇಬ್ಬರೂ ಬಿಎಸಿ). 100 ಮೀ. ಬ್ಯಾಕ್‌ಸ್ಟ್ರೋಕ್: ಬಾಲಕಿಯರ ಗುಂಪು 1: ನೀನಾ ವೆಂಕಟೇಶ್ (ಡಾಲ್ಫಿನ್)–1, ಕಾಲ: 1:06.25, ರಿತು ಭರಮರೆಡ್ಡಿ (ಬಿಎಸಿ)–2, ಲೇತಿಶಾ ಮಂದಣ್ಣ (ಜಿಎಫ್‌ಆರ್‌ಎವೈ)–3. ಗುಂಪು 2: ರಿಧಿಮಾ ವೀರೇಂದ್ರ ಕುಮಾರ್ (ಬಿಎಸಿ)–1, ಕಾಲ:1:07.10, ಶಾಲಿನಿ. ಆರ್. ದೀಕ್ಷಿತ್ (ಡಾಲ್ಫಿನ್)–2, ಸುನಿಧಿ ಹಲ್ಕೆರೆ (ಸ್ವಿಮರ್ಸ್ ಕ್ಲಬ್, ಬೆಳಗಾವಿ)–3. ಮಹಿಳೆಯರು: ದಾಮಿನಿ ಕೆ. ಗೌಡ (ಬಿಎಸಿ)–1, ಕಾಲ:1:11.02, ಭೂಮಿಕಾ ಕೇಸರಕರ್ (ಬಿಎಸ್‌ಆರ್‌ಸಿ)–2, ಕ್ಷಿತಿಜಾ ಕೆ. (ಬಿಎಸಿ)–3. ಮಹಿಳೆಯರ 4X200 ಮೀ. ಫ್ರೀಸ್ಟೈಲ್: ಡಾಲ್ಫಿನ್ ತಂಡ ‘ಎ’–1, ಕಾಲ: 9:23.00, ಬಿಎಸಿ ತಂಡ ‘ಎ’–2, ಡಾಲ್ಫಿನ್ ತಂಡ ‘ಬಿ’ –3.

ಡೈವಿಂಗ್: ಜಾನ್ಸನ್‌ಗೆ ಚಿನ್ನ

ಡೈವಿಂಗ್‌ನ ಮೂರು ಮೀ. ಸ್ಪ್ರಿಂಗ್‌ಬೋರ್ಡ್ ಸ್ಪರ್ಧೆಯ ಪುರುಷರ ವಿಭಾಗದಲ್ಲಿ ಟಿ. ಜಾನ್ಸನ್ ಮಿಯಟಿ (ಎಂಇಜಿ), ಮಹಿಳೆಯರ ವಿಭಾಗದಲ್ಲಿ ಶಕ್ಯನಾ ಜೆ. ರಾವ್ (ಡಾಲ್ಫಿನ್), ಬಾಲಕರ ಗುಂಪು ಒಂದರಲ್ಲಿ ರೋಹನ್ ಆರಾಧ್ಯ (ಡಾಲ್ಫಿನ್), ಬಾಲಕಿಯರ ಗುಂಪು ಒಂದರಲ್ಲಿ ಶಕ್ಯನಾ ಜೆ. ರಾವ್ ಮತ್ತು ಬಾಲಕರ ಗುಂಪು ಎರಡರಲ್ಲಿ ಆರ್ಯನ್ ಮೋಸೆಸ್ ವ್ಯಾಸ್ (ಡಾಲ್ಫಿನ್) ಚಿನ್ನದ ಪದಕಗಳಿಗೆ ಮುತ್ತಿಟ್ಟರು.

ಪ್ರಣೀತ್, ಶ್ರೀಕಾಂತ್ ಮೇಲೆ ನಿರೀಕ್ಷೆ

ಸುದಿರ್‌ಮನ್ ಕಪ್ ಬ್ಯಾಡ್ಮಿಂಟನ್ ಟೂರ್ನಿ ಇಂದಿನಿಂದ

ವಂಟಾ, ಫಿನ್ಲೆಂಡ್ (ಪಿಟಿಐ): ಅನುಭವಿ ಮತ್ತು ಯುವ ಆಟಗಾರರ ಮಿಶ್ರಣವಾಗಿರುವ ಭಾರತ ತಂಡವು ಸುದಿರ್‌ಮನ್ ಕಪ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾನುವಾರ ಕಣಕ್ಕಿಳಿಯಲಿದೆ. ಇಲ್ಲಿ ನಡೆಯುವ ಟೂರ್ನಿಯ ಮೊದಲ ಪಂದ್ಯದಲ್ಲಿ ತಂಡಕ್ಕೆ ಥಾಯ್ಲೆಂಡ್ ಸವಾಲು ಎದುರಾಗಿದೆ.

ಟೂರ್ನಿಯಲ್ಲಿ ಹಾಲಿ ಚಾಂಪಿಯನ್ ಚೀನಾ, ಮೂರು ಬಾರಿಯ ಸೆಮಿಫೈನಲಿಸ್ಟ್ ಥಾಯ್ಲೆಂಡ್ ಮತ್ತು ಆತಿಥೇಯ ಫಿನ್ಲೆಂಡ್ ಜೊತೆ ಭಾರತವು ‘ಎ’ ಗುಂಪಿನಲ್ಲಿ ಸ್ಥಾನ ಪಡೆದಿದೆ. ಪ್ರತಿ ತಂಡಗಳು ಪರಸ್ಪರರ ವಿರುದ್ಧ ಎರಡು ಸಿಂಗಲ್ಸ್ ಮತ್ತು ಮೂರು ಡಬಲ್ಸ್ ಪಂದ್ಯಗಳನ್ನು ಆಡಲಿವೆ.

ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತ ಮತ್ತು ಹಾಲಿ ವಿಶ್ವ ಚಾಂಪಿಯನ್ ಪಿ.ವಿ.ಸಿಂಧು ಅವರು ಒಲಿಂಪಿಕ್ ಅಭಿಯಾನದ ಬಳಿಕ ವಿಶ್ರಾಂತಿ ಬಯಸಿ ಟೂರ್ನಿಯಿಂದ ಹೊರಗುಳಿದಿದ್ದಾರೆ. ವಿಶ್ವದ ಮಾಜಿ ಅಗ್ರಕ್ರಮಾಂಕದ ಆಟಗಾರ್ತಿ ಸೈನಾ ನೆಹ್ವಾಲ್ ಕೂಡ ಆಡುತ್ತಿಲ್ಲ. ಹೀಗಾಗಿ ಮಹಿಳಾ ಸಿಂಗಲ್ಸ್‌ನಲ್ಲಿ ಮಾಳವಿಕಾ ಬಾನ್ಸೋಡ್ ಮತ್ತು ಅದಿತಿ ಭಟ್ ಕಣಕ್ಕಿಳಿಯಲಿದ್ದಾರೆ.

ಚಿರಾಗ್‌ಶೆಟ್ಟಿ ಮತ್ತು ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಅವರ ಅನುಪಸ್ಥಿತಿಯಲ್ಲಿ ಪುರುಷರ ಡಬಲ್ಸ್ ವಿಭಾಗದ ಹೊಣೆ ಯುವ ಆಟಗಾರರಾದ ಧ್ರುವ ಕಪಿಲ ಮತ್ತು ಎಂ.ಆರ್.ಅರ್ಜುನ್ ಅವರ ಮೇಲಿದೆ.

ಪುರುಷರ ಸಿಂಗಲ್ಸ್‌ನಲ್ಲಿ ಅನುಭವಿಗಳಾದ ಬಿ.ಸಾಯಿ ಪ್ರಣೀತ್,ಕಿದಂಬಿ ಶ್ರೀಕಾಂತ್ ಮತ್ತು ಮಹಿಳಾ ಡಬಲ್ಸ್‌ನಲ್ಲಿ ಕನ್ನಡತಿ ಅಶ್ವಿನಿ ಪೊನ್ನಪ್ಪ - ಎನ್. ಸಿಕ್ಕಿರೆಡ್ಡಿ ತಂಡವನ್ನು ಮುನ್ನಡೆಸಲಿದ್ದಾರೆ. ಥಾಯ್ಲೆಂಡ್ ತಂಡವು 2013, 2017 ಮತ್ತು 2019ರಲ್ಲಿ ಸೆಮಿಫೈನಲ್ ತಲುಪಿತ್ತು. ಸದ್ಯ ಆ ತಂಡದ ಮಹಿಳಾ ಸಿಂಗಲ್ಸ್‌ನಲ್ಲಿ ಪಾರ್ನ್‌ಪವೀ ಚೊಚುವಾಂಗ್, ಬುಸನನ್ ಒಂಗ್‌ಬಮ್ರುಂಗಪನ್ ಆಡಲಿದ್ದರೆ, ಕಾಂತ್‌ಪೊನ್ ವಾಂಗ್ಚರೊಯಿನ್ ಪುರುಷರ ಸಿಂಗಲ್ಸ್ ಪ್ರಮುಖ ಆಟಗಾರ ಆಗಿದ್ದಾರೆ. ಭಾರತವು ಇದೇ 27ರಂದು ಚೀನಾ ಮತ್ತು 29ರಂದು ಫಿನ್ಲೆಂಡ್ ತಂಡಕ್ಕೆ ಮುಖಾಮುಖಿಯಾಗಲಿದೆ.


ಕಿದಂಬಿ ಶ್ರೀಕಾಂತ್– ರಾಯಿಟರ್ಸ್ ಚಿತ್ರ


ಸಾಯಿ ಪ್ರಣೀತ್

‘ಎ’ ಗುಂಪಿನ ತಂಡಗಳು

ಭಾರತ, ಫಿನ್ಲೆಂಡ್, ಚೀನಾ, ಥಾಯ್ಲೆಂಡ್

ಭಾರತ ತಂಡ

ಬಿ ಸಾಯಿ ಪ್ರಣೀತ್, ಕಿದಂಬಿ ಶ್ರೀಕಾಂತ್, ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ, ಚಿರಾಗ್ ಶೆಟ್ಟಿ, ಧ್ರುವ ಕಪಿಲಾ, ಅಶ್ವಿನಿ ಪೊನ್ನಪ್ಪ, ಎನ್.ಸಿಕ್ಕಿ ರೆಡ್ಡಿ, ಮಾಳವಿಕಾ ಬಾನ್ಸೋಡ್, ಅದಿತಿ ಭಟ್, ತನಿಶಾ ಕ್ರಾಸ್ಟೊ, ಋತುಪರ್ಣ ಪಂಡಾ.

ಭಾರತದ ಪಂದ್ಯಗಳು

ಸೆ.26	ಥಾಯ್ಲೆಂಡ್
ಸೆ.27	ಚೀನಾ
ಸೆ.29	ಫಿನ್ಲೆಂಡ್

ಆರಾಧ್ಯ, ಜೈನಾಹ್‌ಗೆ ಪ್ರಶಸ್ತಿ

ಬೆಂಗಳೂರು: ಉತ್ತಮ ಸಾಮರ್ಥ್ಯ ತೋರಿದ ಕರ್ನಾಟಕದ ಜೈನಾಹ್ ಅಂಬರ್ ಸಲಾರ್ ಮತ್ತು ಆರಾಧ್ಯ ದ್ವಿವೇದಿ ಅವರು ಎಐಟಿಎ 14 ವರ್ಷದೊಳಗಿನವರ ಸಿಎಸ್7 ಟೆನಿಸ್ ಟೂರ್ನಿಯ ಕ್ರಮವಾಗಿ ಬಾಲಕಿಯರ ಮತ್ತು ಬಾಲಕರ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದ್ದಾರೆ.

ರಾಜ್ಯ ಲಾನ್ ಟೆನಿಸ್ ಸಂಸ್ಥೆಯ (ಕೆಎಸ್‌ಎಲ್‌ಟಿಎ) ಆಶ್ರಯದಲ್ಲಿ ನಡೆದ ಟೂರ್ನಿಯ ಬಾಲಕಿಯರ ವಿಭಾಗದ ಫೈನಲ್‌ನಲ್ಲಿ ಶುಕ್ರವಾರ ಜೈನಾಹ್ 6-7, 6-1, 7-6ರಿಂದ ತಮಿಳುನಾಡಿನ ದಿಯಾ ರಮೇಶ್ ಅವರನ್ನು ಮಣಿಸಿದರು.

ಎರಡನೇ ಶ್ರೇಯಾಂಕದ ಆರಾಧ್ಯ ಅವರು ಬಾಲಕರ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ 7-6, (4), 6-3ರಿಂದ ಅಗ್ರಶ್ರೇಯಾಂಕದ ಆಟಗಾರ ಮಣಿಪುರದ ಎಸ್. ಅಶ್ವಜೀತ್ ಸವಾಲು ಮೀರಿದರು.

ಬೆಂಗಳೂರು ಮೂನ್ ತಂಡಕ್ಕೆ ಗೆಲುವು

ಬೆಂಗಳೂರು: ಕ್ರೀಡಾ ಶಾಲೆ ಮತ್ತು ಬೆಂಗಳೂರು ಮೂನ್ ತಂಡಗಳು ರಾಜ್ಯ ಫುಟ್‌ಬಾಲ್ ಸಂಸ್ಥೆಯ ಆಶ್ರಯದ ‘ಸಿ’ ಡಿವಿಷನ್‌ನ ಫುಟ್‌ಬಾಲ್ ಲೀಗ್‌ನಲ್ಲಿ ಶನಿವಾರ ಭರ್ಜರಿ ಜಯ ಗಳಿಸಿದವು. ಡ್ರೀಮ್ ಟೀಮ್ ಸ್ಪೋರ್ಟ್ಸ್ ಮತ್ತು ಎಫ್‌ಎಸ್‌ವಿ ಅರೆನಾ ಸಹಯೋಗದಲ್ಲಿ ನಡೆಯುತ್ತಿರುವ ಟೂರ್ನಿಯ ಪಂದ್ಯದಲ್ಲಿ ಕ್ರೀಡಾ ಶಾಲೆ ತಂಡ 4–0ಯಿಂದ ಹೈದ್ರಾ ವಿರುದ್ಧ ಜಯ ಗಳಿಸಿತು. ಕುನಾಲ್ (39 ಮತ್ತು 59ನೇ ನಿ), ನಿರ್ಮಾನ್ಯು ಅತ್ರಿ (50 ಮತ್ತು 58ನೇ ನಿ) ಗೋಲು ಗಳಿಸಿದರು.

ಬೆಂಗಳೂರು ಮೂನ್ 3–1ರಲ್ಲಿ ಪ್ರೀಮಿಯರ್ ಸ್ಕೂಲ್ ಎದುರು ಜಯ ಗಳಿಸಿತು. ಮೂನ್ ಪರವಾಗಿ 12ನೇ ನಿಮಿಷದಲ್ಲಿ ಅಡಾನನ್, 18ನೇ ನಿಮಿಷದಲ್ಲಿ ವಿಮಲ್, 34ನೇ ನಿಮಿಷದಲ್ಲಿ ಶೆರಟಾನ್ ಗೋಲು ಗಳಿಸಿದರು. ಪ್ರೀಮಿಯರ್ ತಂಡದ ಏಕೈಕ ಗೋಲು ಸಮನ್ಯು ಅವರಿಂದ ಮೂಡಿಬಂತು.

ಬಿಟಿಸಿ: ಬೇಸಿಗೆ ರೇಸ್ ಸಭೆ ರದ್ದು

ಬೆಂಗಳೂರು: ಆಡಳಿತಾತ್ಮಕ ಕಾರಣಗಳ ಹಿನ್ನೆಲೆಯಲ್ಲಿ ಬೆಂಗಳೂರಿನ ಬೇಸಿಗೆ ರೇಸ್ ಸಭೆಯನ್ನು ರದ್ದುಗೊಳಿಸಲು ಬೆಂಗಳೂರು ಟರ್ಫ್ ಕ್ಲಬ್‌ನ (ಬಿಟಿಸಿ) ಸ್ಟೀವರ್ಡ್ಸ್‌ಗಳು ನಿರ್ಧರಿಸಿದ್ದಾರೆ.

ಫಿಲ್ಲೀಸ್ ಚಾಂಪಿಯನ್‌ಷಿಪ್ ಸ್ಟೇಕ್ಸ್ (ಗ್ರೇಡ್ 1), ಕೋಲ್ಟ್ಸ್ ಚಾಂಪಿಯನ್‌ಷಿಪ್ ಸ್ಟೇಕ್ಸ್ (ಗ್ರೇಡ್ 1), ಕಿಂಗ್‌ಫಿಶರ್ ಅಲ್ಟ್ರಾ ಡರ್ಬಿ (ಗ್ರೇಡ್ 1) ಮತ್ತು ಬೆಂಗಳೂರು ಸೇಂಟ್ ಲೀಜರ್ (ಗ್ರೇಡ್ 2) ರೇಸ್‌ಗಳಿಗೆ ನೋಂದಾಯಿಸಿದ್ದ ಮಾಲೀಕರಿಗೆ ನೋಂದಣಿ ಶುಲ್ಕವನ್ನು ಮರಳಿಸಲಾಗುವುದು ಎಂದು ಬಿಟಿಸಿ ಹೇಳಿದೆ.

2021–22ನೇ ಸಾಲಿನ ಚಳಿಗಾಲದ ರೇಸ್‌ಗಳ ಆರಂಭದ ತಾತ್ಕಾಲಿಕ ದಿನಾಂಕಗಳನ್ನು ಶೀಘ್ರವೇ ಪ್ರಕಟಿಸಲಾಗುವುದು ಎಂದೂ ಕ್ಲಬ್ ತಿಳಿಸಿದೆ.

ಡುರಾಂಡ್ ಕಪ್: ಸೆಮಿಗೆ ಬೆಂಗಳೂರು ಎಫ್‌ಸಿ

ಕೋಲ್ಕತ್ತ (ಪಿಟಿಐ): ದಿಟ್ಟ ಆಟವಾಡಿದ ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ಆಟಗಾರರು ಡುರಾಂಡ್ ಕಪ್ ಟೂರ್ನಿಯ ಸೆಮಿಫೈನಲ್ ತಲುಪಿದ್ದಾರೆ.

ಶನಿವಾರ ಇಲ್ಲಿ ನಡೆದ ಪಂದ್ಯದಲ್ಲಿ ಬಿಎಫ್‌ಸಿ 3–2ರಿಂದ ಆರ್ಮಿ ಗ್ರೀನ್ ತಂಡವನ್ನು ಪರಾಭವಗೊಳಿಸಿತು. ವಿಜೇತ ತಂಡವು ಬುಧವಾರ ನಡೆಯುವ ನಾಲ್ಕರಘಟ್ಟದ ಪಂದ್ಯದಲ್ಲಿ ಎಫ್‌ಸಿ ಗೋವಾಕ್ಕೆ ಎದುರಾಗಲಿದೆ. ಬೆಂಗಳೂರು ಪರ ವುಂಗ್‌ಯಾಮ್ ಮುರಾಂಗ್ (20ನೇ ನಿಮಿಷ), ಲಿಯೊನ್ ಅಗಸ್ಟಿನ್ (47ನೇ ನಿ.), ನಾಮ್‌ಗ್ಯಾಲ್ ಭುಟಿಯಾ (74ನೇ ನಿ.) ಕಾಲ್ಚಳಕ ತೋರಿದರು. ಆರ್ಮಿ ಗ್ರೀನ್‌ನ ಲಾಲ್‌ವಾಮ್‌ಕಿಮಾ (9ನೇ ನಿ.), ವಿಬಿನ್ ಟಿ.ವಿ. (89ನೇ ನಿ.) ಗೋಲು ದಾಖಲಿಸಿದರು.

ಪಂದ್ಯದ ಆರಂಭದಲ್ಲೇ ಗೋಲು ಗಳಿಸಿದ ಲಾಲ್‌ವಾಮ್‌ಕಿಮಾ, ಬಿಎಫ್‌ಸಿ ಮೇಲೆ ಒತ್ತಡ ಹೇರಿದರು. ಮುರಾಂಗ್ ಮೂಲಕ ಬೆಂಗಳೂರು ಸಮಬಲದ ಗೋಲು ದಾಖಲಿಸಿದರು. ದ್ವಿತೀಯಾರ್ಧದ ಎರಡನೇ ನಿಮಿಷದಲ್ಲೇ ಲಿಯೊನ್ ಗೋಲು ಹೊಡೆದರು. ಬಳಿಕ ನಾಮ್‌ಗ್ಯಾಲ್ ಯಶಸ್ಸು ಸಾಧಿಸಿದಾಗ ಬಿಎಫ್‌ಸಿ 3–1ರ ಮುನ್ನಡೆ ಸಾಧಿಸಿತು. ಕೊನೆಯ ಹಂತದಲ್ಲಿ ವಿಬಿನ್ ಗೋಲು ದಾಖಲಿಸಿ ತಮ್ಮ ತಂಡದ ಹಿನ್ನಡೆ ತಗ್ಗಿಸಿದರು.